"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

9ನೇ ಮಾರ್ಚ್ 2020
ಸೋಮವಾರ

## ವಿಷಯಾನುಕ್ರಮಣಿಕೆ

**01. ವರದಿಯನ್ನೊಪ್ಪಿಸುವುದು**

**02. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ**

– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

**03. ಸಂತಾಪ ಸೂಚನೆ**
**ಕರ್ನಾಟಕದ ಮಾಜಿ ರಾಜ್ಯಪಾಲರು, ಮಾಜಿ ಕೇಂದ್ರ ಸಚಿವರಾಗಿದ್ದ ಹಂಸರಾಜ್ ಭಾರದ್ವಾಜ್ ಹಾಗೂ ಶಿವಸ್ವರೂಪಿಣಿ ಮಾಣಿಕೇಶ್ವರಿ ಅವರುಗಳ ನಿಧನದ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

**04. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ**

– ಡಾ:ವೈ.ಎ.ನಾರಾಯಣ ಸ್ವಾಮಿ
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಐವನ್ ಡಿ'ಸೋಜಾ
– ಶ್ರೀ ಎಂ.ನಾರಾಯಣಸ್ವಾಮಿ
– ಶ್ರೀ ಆರ್.ಪ್ರಸನ್ನಕುಮಾರ್
– ಶ್ರೀ ಹೆಚ್.ಎಂ.ರಮೇಶ್‌ಗೌಡ
– ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು)
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
– ಶ್ರೀ ಕೆ.ಅಬ್ದುಲ್ ಜಬ್ಬಾರ್
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಎಸ್.ಎಲ್.ಭೋಜೇಗೌಡ
– ಶ್ರೀ ಪ್ರಕಾಶ್ ಕೆ.ರಾಥೋಡ್
– ಶ್ರೀ ಶರಣಪ್ಪ ಮಟ್ಟೂರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ಕೆ.ಗೋವಿಂದರಾಜು
– ಶ್ರೀ ಪಿ.ಆರ್.ರಮೇಶ್
– ಶ್ರೀ ಅರವಿಂದ ಕುಮಾರ್ ಅರಳಿ
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಎಸ್.ರವಿ
– ಶ್ರೀಮತಿ ಜಯಮ್ಮ
– ಶ್ರೀ ಬಸವರಾಜ್ ಪಾಟೀಲ್ ಇಟಗಿ

**05. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**589 – ವಿದ್ಯಾರ್ಥಿಗಳ ಕೀಳರಿಮೆ ಬಗ್ಗೆ.**

– ಶ್ರೀಮತಿ ಜಯಮಾಲ
– ಶ್ರೀ ಎಸ್. ಸುರೇಶ್ ಕುಮಾರ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮತ್ತು ಸಕಾಲ ಸಚಿವರು)

**524 – ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಬಗ್ಗೆ**

– ಶ್ರೀ ಮರಿತಿಬ್ಬೇಗೌಡ
– ಡಾ: ಸಿ.ಎನ್.ಅಶ್ವಥ್‌ನಾರಾಯಣ(ಉಪ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು)

**573 – ರಾಜ್ಯದಲ್ಲಿ ಅರಣ್ಯ ಒತ್ತುವರಿಯಾಗಿರುವ ಬಗ್ಗೆ**

– ಶ್ರೀ ಪಿ.ಆರ್.ರಮೇಶ್
– ಶ್ರೀ ಆನಂದ್ ಸಿಂಗ್ (ಅರಣ್ಯ ಮತ್ತು ಜೀವಿಶಾಸ್ತ್ರ ಸಚಿವರು)
(ಪ್ರಶ್ನೆಯನ್ನು ತಡೆಹಿಡಿಯಲಾಯಿತು)

**587 – ಶಾಲಾ ಮಕ್ಕಳಿಗೆ ಆಟದ ಮೈದಾನದ ಅಗತ್ಯತೆ ಬಗ್ಗೆ**

– ಶ್ರೀ ಆರ್.ಧರ್ಮಸೇನ
– ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**537 – ಪ್ರಾಥಮಿಕ ಅನುದಾನಿತ ಶಿಕ್ಷಣ ಸಂಸ್ಥೆಗಳ ಬಗ್ಗೆ**

– ಶ್ರೀ ಐವನ್ ಡಿ'ಸೋಜಾ
– ಶ್ರೀ ಎಸ್. ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**530** – ಬೀದರ್ ಜಿಲ್ಲೆಯಲ್ಲಿ ಬಾಲ ಕಾರ್ಮಿಕ ಪದ್ಧತಿ ಬಗ್ಗೆ

- ಶ್ರೀ ವಿಜಯ ಸಿಂಗ್
- ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್(ಕಾರ್ಮಿಕ ಮತ್ತು ಸಕ್ಕರೆ ಸಚಿವರು)

**571** – ಕಾಡುಪ್ರಾಣಿಗಳ ದಾಳಿಯಿಂದ ಮೃತಪಟ್ಟ ವ್ಯಕ್ತಿಯ ಕುಟುಂಬಕ್ಕೆ ಹಾಗೂ ಜಾನುವಾರು ಕಳೆದುಕೊಂಡ ಕುಟುಂಬಕ್ಕೆ ಪರಿಹಾರ ಮೊತ್ತ ಹೆಚ್ಚಿಸುವ ಬಗ್ಗೆ.

- ಶ್ರೀಮತಿ ಎಸ್.ವೀಣಾ ಅಚ್ಚಯ್ಯ
- ಶ್ರೀ ಆನಂದ್ ಸಿಂಗ್ (ಅರಣ್ಯ ಮತ್ತು ಜೀವಿಶಾಸ್ತ್ರ ಸಚಿವರು)

**516** – ಬೀದರ್ ಜಿಲ್ಲೆ ಐ.ಟಿ.ಪಾರ್ಕ್ ಪ್ರಾರಂಭಿಸುವ ಬಗ್ಗೆ

- ಶ್ರೀ ಅರವಿಂದ ಕುಮಾರ್ ಅರಳಿ
- ಡಾ: ಸಿ.ಎನ್.ಅಶ್ವಥ್‌ನಾರಾಯಣ(ಉಪ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ದಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು)

**569** – ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಎನ್‌ಪಿಎಸ್ ಪಿಂಚಣಿ ಯೋಜನೆ ಜಾರಿ ಮಾಡುವ ಬಗ್ಗೆ.

- ಶ್ರೀ ಎಸ್.ವ್ವಿ.ಸಂಕನೂರ
- ಶ್ರೀ ಸುರೇಶ್ ಕುಮಾರ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮತ್ತು ಸಕಾಲ ಸಚಿವರು)

**540** – ರಾಜ್ಯದಲ್ಲಿ ಇರುವ ಒಟ್ಟು ಸರ್ಕಾರಿ ಆಸ್ಪತ್ರೆ ಮತ್ತು ಸಿಬ್ಬಂದಿಗಳ ಸಂಖ್ಯೆಗಳನ್ನು ಕುರಿತು

- ಶ್ರೀ ಹೆಚ್.ಎಂ. ರಮೇಶಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ)

**558** – ಉತ್ತರ ಕರ್ನಾಟಕ ಮತ್ತು ಹೈದ್ರಾಬಾದ್ ಕರ್ನಾಟಕ ಭಾಗದಿಂದ ನಿಯಮಬಾಹಿರವಾಗಿ ಮಾಡಲಾಗಿರುವ ಕಾಲೇಜು ಶಿಕ್ಷಣ ಇಲಾಖೆಯ ಉಪನ್ಯಾಸಕರ ನಿಯೋಜನೆ ಬಗ್ಗೆ.

- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಡಾ: ಸಿ.ಎನ್.ಅಶ್ವಥ್‌ನಾರಾಯಣ(ಉಪ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು)

**533** – ಭಾಷಾ ಅಲ್ಪಸಂಖ್ಯಾತ ಶಾಲೆಗಳ ರೋಸ್ಟರ್ ವಿನಾಯಿತಿ ಬಗ್ಗೆ

- ಶ್ರೀ ಅರುಣ ಶಹಾಪುರ
- ಶ್ರೀ ಎಸ್. ಸುರೇಶ್ ಕುಮಾರ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮತ್ತು ಸಕಾಲ ಸಚಿವರು)

**688** – ಗೊಲ್ಲ ಜನಾಂಗದ ಅಭಿವೃದ್ಧಿ ನಿಗಮ ಸ್ಥಾಪನೆ

- ಶ್ರೀಮತಿ ಜಯಮ್ಮ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ)

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲ ನೀಡಲಾದ ಉತ್ತರಗಳು

**06.** ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

ಅ) ರಾಜ್ಯದ ನದಿಗಳ ಪಾತ್ರದ ಸ್ಥಳಗಳಲ್ಲಿ ಗಣಿಗಾರಿಕೆ ನಡೆಯುತ್ತಿರುವ ಬಗ್ಗೆ.

- ಡಾ: ವೈ.ಎ.ನಾರಾಯಣಸ್ವಾಮಿ
- ಶ್ರೀ ಸಿ.ಸಿ.ಪಾಟೀಲ್(ಗಣಿ ಮತ್ತು ಭೂವಿಜ್ಞಾನ ಸಚಿವರು)

ಆ) 'ಕಸದ ಹೊರೆಯ ಹಿಂದೆ' ಎಂಬ ಪತ್ರಿಕಾ ವರದಿಯ ಬಗ್ಗೆ.

- ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ
- ಶ್ರೀ ಕೆ.ಸಿ.ನಾರಾಯಣಗೌಡ(ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು)

ಇ) ರಾಜ್ಯದಲ್ಲಿ ರೈತರಿಗೆ ದಿನಕ್ಕೆ 7 ಗಂಟೆಗಳ 3 ಫೇಸ್ ನಿರಂತರ ವಿದ್ಯುತ್ ಪೂರೈಕೆ ಹಾಗೂ ಗ್ರಾಮೀಣ ಭಾಗದಲ್ಲಿ ರಾತ್ರಿ ವೇಳೆ ವಿದ್ಯುತ್ ಕಡಿತವಾಗದಂತೆ ವಿದ್ಯುತ್ ಪೂರೈಸುವ ಬಗ್ಗೆ.

- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ)

~~~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~

(200) 9-3-2020 11.10 ಡಿಎಸ್-ಜಿಆರ್

**ಕರ್ನಾಟಕ ವಿಧಾನ ಪರಿಷತ್ತು**

***ಸೋಮವಾರ, 9ನೇ ಮಾರ್ಚ್ 2020***

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಿಗ್ಗೆ 11 ಗಂಟೆ 14 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಾದರು.**

**1.ವರದಿಯನ್ನೊಪ್ಪಿಸುವುದು**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಮಂಡಲದ 2019-2020ನೇ ಸಾಲಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯೆಯಾದ ನಾನು 36ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಯನ್ನೊಪ್ಪಿಸಲಾಯಿತು.

**2. <u>ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ</u>**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲೆ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿದಂತಹ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಮಾಜಿ ರಾಜ್ಯಪಾಲರಾದ ಮಾನ್ಯ ಹಂಸರಾಜ್ ಭಾರದ್ವಾಜ್‌ರವರು ನಿನ್ನೆ ನಿಧನರಾಗಿದ್ದಾರೆ.

**ಸಭಾಪತಿಯವರು:-** ನಂತರ ಸಂತಾಪ ಸೂಚನೆಯನ್ನು ಮಾಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಬಜೆಟ್ ಮಂಡಿಸುವುದಕ್ಕಿಂತ ಪೂರ್ವದಲ್ಲಿ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡಿದ್ದರೆ ಅದಕ್ಕೆ ಹೆಚ್ಚು ಮಹತ್ವ ಬರುತಿತ್ತು ಎಂದು ನಾನು ಭಾವಿಸಿದ್ದೇನೆ. ಈಗಾಗಲೇ ರಾಜ್ಯಪಾಲರ ಭಾಷಣ ಮುಗಿದಿದೆ. ಆಯವ್ಯಯವನ್ನು ಕೂಡ ಮಂಡಿಸಿ ಆಗಿದೆ. ಆಯವ್ಯಯದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕಿಂತ ಪೂರ್ವದಲ್ಲಿ ಸ್ವಲ್ಪ ಮಾತನಾಡುವುದಕ್ಕೆ ಅವಕಾಶವಿದೆ ಎಂದು ನಾನು ಮಾತನಾಡುವುದಕ್ಕೆ ಬಯಸುತ್ತಿದ್ದೇನೆ. ಈ ಕಡೆ ಆ ಕಡೆ ಬಹುತೇಕ ಸದಸ್ಯರು ಮಾತನಾಡಿದ್ದಾರೆ. ಮಾನ್ಯ ಆಯನೂರು ಮಂಜುನಾಥ್‌ರವರು ಮೊದಲು ಚರ್ಚೆಯನ್ನು ಪ್ರಾರಂಭಿಸಿದರು. ನಮ್ಮ ಕಡೆಯಲ್ಲೂ ಸಾಕಷ್ಟು ಜನರು ಮಾತನಾಡಿದ್ದಾರೆ. ಕಾಂಗ್ರೆಸ್ ಪಕ್ಷದ ಶಾಸಕರು, ಜೆಡಿಎಸ್ ಪಕ್ಷದ ಶಾಸಕರು ಮತ್ತು ಆಡಳಿತ ಪಕ್ಷದ ಸದಸ್ಯರೆಲ್ಲರೂ ಮಾತನಾಡಿದ್ದಾರೆ. ಇನ್ನೇನು ಮಾತನಾಡುವುದಕ್ಕೆ ಉಳಿಸಿಲ್ಲ ಎಂದು ನನಗನಿಸುತ್ತಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾಜಿ ರಾಜ್ಯಪಾಲರದ ಮಾನ್ಯ ಹಂಸರಾಜ್ ಭಾರದ್ವಾಜ್‌ರವರು ನಿನ್ನೆ ನಿಧನರಾಗಿದ್ದಾರೆ. ಅವರಿಗೆ ಸಂತಾಪ ಸೂಚನೆಯನ್ನು ನಂತರವಾದರೂ ಸಲ್ಲಿಸಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

**ಸಭಾಪತಿಯವರು:-** ನಂತರ ಸಂತಾಪ ಸೂಚನೆಯನ್ನು ತೆಗೆದುಕೊಳ್ಳಲಾಗುವುದು.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ಹಂಸರಾಜ್ ಭಾರದ್ವಾಜ್‌ರವರು ನಮ್ಮ ರಾಜ್ಯದ ರಾಜ್ಯಪಾಲರಾಗಿ ಕೆಲಸ ಮಾಡಿರತಕ್ಕಂಥವರು. ಮೊದಲು ಅವರಿಗೆ ಸಂತಾಪ ಸೂಚನೆಯನ್ನು ಸಲ್ಲಿಸಿ ನಂತರ ಅಜೆಂಡಾದ ಪ್ರಕಾರ ಹೋಗಿದ್ದರೆ ಚೆನ್ನಾಗಿರುತ್ತಿತ್ತು ಎಂದು ನನಗನಿಸುತ್ತಿದೆ. ನಾಳೆ ಅವರಿಗೆ ಸಂತಾಪ ಸೂಚನೆಯನ್ನು ಸಲ್ಲಿಸಿದರೆ ಅದಕ್ಕೆ ಅರ್ಥವಿರುವುದಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ರಾಜ್ಯಪಾಲರ ಭಾಷಣದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ನಂತರ ಸಂತಾಪ ಸೂಚನೆಯನ್ನು ತೆಗೆದುಕೊಳ್ಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರೇ, ಈಗ ತಾವು ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣ ಬಹಳ ಚಿಕ್ಕದಾದ ಭಾಷಣ. 20 ಪುಟಗಳು ಹೊಂದಿದಂತಹ ಭಾಷಣ. ಇದಕ್ಕೆ ಮಸಾಲೆ, ಉಪ್ಪು, ಖಾರ, ಒಗ್ಗರಣೆ ಇಲ್ಲ. ಇದು ಬಹಳ ಸಪ್ಪೆ ಭಾಷಣ ಎಂದು ನನಗನಿಸುತ್ತಿದೆ. ಹೊಸದಾಗಿ ಸರ್ಕಾರ ಬಂದ ನಂತರ ಇದು ಮೊದಲನೆಯ ರಾಜ್ಯಪಾಲರ ಭಾಷಣ. ನಮ್ಮ ಸರ್ಕಾರದ ದಿಕ್ಸೂಚಿಗಳೇನು, ಸರ್ಕಾರ ಯಾವುದಕ್ಕೆ ಆದ್ಯತೆ ಕೊಡುತ್ತದೆ, ಯಾವ ರೀತಿ ಮೂರೂವರೆ ವರ್ಷಗಳ ಕಾಲ ಅಧಿಕಾರ ನಡೆಸುತ್ತೇವೆಂದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ತಿಳಿಸಬೇಕಾಗಿತ್ತು. ಆದರೆ ಇದು ಬಹಳ ಸಪ್ಪೆಯಾದಂತಹ ಭಾಷಣ ಎಂದು ನನಗನಿಸುತ್ತಿದೆ. ಇನ್ನೂ ಬಹಳ ಮಹತ್ವವಾದ ವಿಚಾರವೇನೆಂದರೆ, ಈ ಭಾಷಣವನ್ನು ನಾನು ನೋಡಿದ್ದೇನೆ. ಈ ಸರ್ಕಾರದ ಭಾವನೆಗಳೇನು ಎಂಬುದರ ಬಗ್ಗೆ ಹಿಂದಿನ ಸಮ್ಮಿಶ್ರ ಸರ್ಕಾರ, ಅದರ ಹಿಂದಿನ ಶ್ರೀಮಾನ್ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರದ ಸಾಧನೆಗಳನ್ನೇ ಇದರಲ್ಲಿ ಅಳವಡಿಸಿಬಿಟ್ಟಿದ್ದಾರೆ. ಇವರಿಗೆ ಕೆಲಸ ಮಾಡುವುದಕ್ಕೆ ಸಮಯವೂ ಸಿಕ್ಕಿಲ್ಲ. ಏಕೆಂದರೆ ಇವರು magic figure reach ಆದರು. Magic figure reach ಆದ ಕೂಡಲೇ ಶ್ರೀಮಾನ್ ಬಿ.ಎಸ್. ಯಡಿಯೂರಪ್ಪನವರಿಗೆ ಪ್ರತಿಜ್ಞಾ ವಿಧಿ ಸ್ವೀಕಾರ ಮಾಡುವುದಕ್ಕೆ ಬಹಳಷ್ಟು ತಡವಾಯಿತು. ಅಲ್ಲಿಯೂ ಬಹಳ ಸಮಯ ಹೋಯಿತು, ಅವರು ಆತಂಕದ ದಿನಗಳನ್ನು ಕಳೆಯಬೇಕಾಯಿತು. ಖಡಾ ಖಂಡಿತವಾಗಿಯೂ ಒಂದು ಮೂಲದಿಂದ ಬೇಗನೇ ಅಧಿಕಾರ ಪ್ರತಿಜ್ಞಾ ವಿಧಿ ಸ್ವೀಕಾರ ಮಾಡುವುದಕ್ಕೆ ಅವಕಾಶ ಕೊಡುತ್ತೀರೋ ಇಲ್ಲವೋ ಅಥವಾ ಹಿಂದೊಮ್ಮೆ ಮಾಡಿದಂತೆ ನಿರ್ಣಯ ತೆಗೆದುಕೊಳ್ಳುವ ಮಟ್ಟಕ್ಕೆ ಹೋದಾಗ ಅವರಿಗೆ ಮುಖ್ಯಮಂತ್ರಿ ಪದವಿ ಸಿಕ್ಕಿತ್ತು. ತದನಂತರ ಮೂಲ ಬಿಜೆಪಿಯಲ್ಲಿರತಕ್ಕಂಥವರು ಮಂತ್ರಿಮಂಡಲ ರಚನೆ ಮಾಡಿ ಅವರನ್ನು ಸಂಪುಟಕ್ಕೆ ತೆಗೆದುಕೊಳ್ಳುವ ವಿಚಾರದಲ್ಲೂ ಕೂಡ ಬಹಳಷ್ಟು ನಿಧಾನವಾಯಿತು. ನನಗೆ ಬಹಳ ಆಶ್ಚರ್ಯ ಅನಿಸುತ್ತಿದೆ, ಮಾನ್ಯ ಆಯನೂರು ಮಂಜುನಾಥ್‌ರವರು ಆಗಸ್ಟ್, ಅಕ್ಟೋಬರ್‌ನಲ್ಲಿ ಮಹಾಪೂರ ಮತ್ತು ಭಾರೀ ಮಳೆಯಿಂದ ರಾಜ್ಯದ 22 ಜಿಲ್ಲೆಗಳ 103 ತಾಲ್ಲೂಕುಗಳಲ್ಲಿ ಜನರು ತತ್ತರಿಸಿ ಹೋಗಿದ್ದರು. ಆಗ ಮುಖ್ಯಮಂತ್ರಿಗಳು ಒಬ್ಬರೇ ಇದ್ದರು, ಸಂಪುಟ ಸಭೆಯ ಸದಸ್ಯರೇ ಇರಲಿಲ್ಲ. ಮುಖ್ಯಮಂತ್ರಿಗಳು ಒಬ್ಬರೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಲಿಗೆ ಚಕ್ರ ಕಟ್ಟಿಕೊಂಡು ಇಡೀ ರಾಜ್ಯದಲ್ಲಿ ಓಡಾಡಿದರು ಎಂದು ಹೇಳಿದರು. ಅವರು ದೈತ್ಯಶಕ್ತಿ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರು ಹೋರಾಟದಿಂದ ಬಂದವರು. ಅವರ ಬಗ್ಗೆ ಬಹಳ ಗೌರವವಿದೆ.

**(201) 9-3-2020/11-20/bkp-md**

**ಶ್ರೀ ಎಸ್.ಆರ್.ಪಾಟೀಲ್(ಮುಂದು. . )**

ಸಂಪುಟದ ಸದಸ್ಯರುಗಳನ್ನು ಬೇಗನೆ ನೇಮಕ ಮಾಡಿಕೊಂಡಿದ್ದರೆ ಸ್ವಲ್ಪಮಟ್ಟಿಗೆ ಕೆಲಸ ಹಗುರವಾಗುತ್ತಿತ್ತು ಮತ್ತು ಕೆಲಸ ಕೂಡ ಕಡಿಮೆ ಆಗುತ್ತಿತ್ತು. ಏಕೆಂದರೆ, 22 ಜಿಲ್ಲೆಗಳಲ್ಲಿ ಮಹಾಪೂರ ಹಾವಳಿ ಆಗಿದೆ. ಮುಖ್ಯಮಂತ್ರಿಗಳು ಒಬ್ಬರೇ ಎಲ್ಲಾ ಕಡೆ ಓಡಾಡಲಿಕ್ಕೆ ಆಗುವುದಿಲ್ಲ. ಆಗ ಜನರು ಅಧಿಕಾರದಲ್ಲಿರುವವರು ನಮ್ಮ ಸಹಾಯಕ್ಕೆ ಬರಬೇಕೆಂದು ಅಪೇಕ್ಷೆ ಪಡುತ್ತಾರೆ. ತದನಂತರ, ಸಂಪುಟ ವಿಸ್ತರಣೆಯಾಯಿತು. ಮತ್ತೆ ನಮ್ಮ ಕಡೆಯಿಂದ 17 ಮಂದಿಯನ್ನು ಹೊತ್ತುಕೊಂಡು ಹೋದರು, ಅಂದರೆ, ನಮ್ಮ ಹಳ್ಳಿ ಭಾಷೆಯಲ್ಲಿ ಓಡಿಸಿಕೊಂಡು ಹೋದರು ಎಂದು ಹೇಳುತ್ತಾರೆ. ಸರ್ಕಾರದ ಕಡೆಯವರು ಇವರನ್ನು ಶತಾಯ ಗತಾಯ ಪ್ರಯತ್ನ ಮಾಡಿ ಅವರನ್ನು ಕರೆದುಕೊಂಡು ಹೋಗಿ, ಮುಂಬೈನಲ್ಲಿಟ್ಟು, . . .

**ಡಾ॥ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದನ್ನು correction ಮಾಡಬೇಕು. ನಾವು ಅವರನ್ನು ಹೊತ್ತಿಕೊಂಡು ಹೋಗಲಿಲ್ಲ, ಅವರು ನಮ್ಮ ಕಡೆ ಕಳುಹಿಸಿಕೊಟ್ಟರು. ಆದ್ದರಿಂದ, ಇದನ್ನು ತಿದ್ದುಪಡಿ ಮಾಡಬೇಕು. ನಮ್ಮ ಬಗ್ಗೆ ಅಪಾದನೆ ಮಾಡುವುದು ಬೇಡ. ಅವರು ಓಡಿಯೂ ಬಂದಿಲ್ಲ, ನಾವು ಹೊತ್ತುಕೊಂಡು ಬಂದೂ ಇಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಬಂದಿದ್ದಾರೆ, ನಮ್ಮದೇನೂ ಇದರಲ್ಲಿ ಪಾತ್ರವಿಲ್ಲವೆಂದು ಹೇಳುತ್ತಾರೆ. ಅವರ ಪಕ್ಷದಲ್ಲಿ ಅವರವರ ಅಂತರಿಕ ಭಿನ್ನಾಭಿಪ್ರಾಯದಲ್ಲಿ ಅವರುಗಳು ಹೊರಗಡೆ ಹೋಗಿದ್ದಾರೆ, ಅವರ ಜೊತೆ ಮಾತನಾಡಿಲ್ಲ, ಅವರುಗಳ ಮುಖ ನೋಡಿಲ್ಲವೆಂದು ಹೇಳುತ್ತಾರೆ. ಹಾಗಾದರೆ, ಅವರುಗಳನ್ನು ಬಾಂಬೆಯಲ್ಲಿ ಏತಕ್ಕೆ ಇಟ್ಟಿದ್ದೀರಿ? ಮಹಾರಾಷ್ಟ್ರದಲ್ಲಿ ನಿಮ್ಮದೇ ಸರ್ಕಾರ, ಅಲ್ಲಿ bouncer ಗಳನ್ನು ಇಟ್ಟು, ಯಾರೂ ಸಹ ಹೋಟೆಲ್ ಒಳಗಡೆ ಹೋಗದಂತೆ ಮಾಡಿದ್ದರು. ಶ್ರೀಮಾನ್ ಡಿ.ಕೆ.ಶಿವಕುಮಾರ್‌ರವರು ಅಲ್ಲಿಗೆ ಹೋಗಿ ಅವರನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭೇಟಿ ಮಾಡಲೆಂದು ಹೋದಾಗ ಹೊರಗಡೆ ಕುಳ್ಳಿರಿಸಿ, ಅಲ್ಲಿಂದ ವಾಪಸ್ಸು ಕಳುಹಿಸುವಲ್ಲಿ ಅಲ್ಲಿಯ ಪೊಲೀಸರು ಇಡೀ ಬಾಂಬೆ ಸುತ್ತಿಸಿ, ಏರ್‌ಪೋರ್ಟ್‌ಗೆ ತಂದು ಬಿಟ್ಟರು. ಅಲ್ಲಿನ ಸರ್ಕಾರ ತನ್ನ ಎಲ್ಲಾ government machinery ಯನ್ನು ಉಪಯೋಗ ಮಾಡಿ ಅವರುಗಳನ್ನು ರಕ್ಷಣೆ ಮಾಡಿದೆ. ಇವರದ್ದು ಏನೂ ಪಾತ್ರವಿಲ್ಲ, ಇದರ ಬಗ್ಗೆ ಏನೇನೂ ಗೊತ್ತಿಲ್ಲ, ಅದು ಕಾಂಗ್ರೆಸ್ ಪಕ್ಷದ ಆಂತರಿಕ ವಿಚಾರ, ಜನತಾದಳ(ಎಸ್) ರವರ ಆಂತರಿಕ ವಿಚಾರವೆಂದು ಇವರು ಹೇಳಿದಾಗ ಇವರು ಎಷ್ಟು ಸಾಚಾ ಇದ್ದಾರೆಂದು ನಾವೆಲ್ಲರೂ ತಿಳಿದುಕೊಂಡಿದ್ದೆವು. ಈಗ ಮೊನ್ನೆ ನೋಡಿದಾಗ ಎಲ್ಲಾ ವಿಷಯವೂ ತಿಳಿದು ಬಂತು. ಇಲ್ಲಿಂದ ಹೋದವರ ಪೈಕಿ 12 ಜನರು ಮರು ಆಯ್ಕೆಯಾದರು. ಹಣದ ಹೊಳೆ, ಹೆಂಡದ ಹೊಳೆ ಹರಿಸುವುದುದರ ಮೂಲಕ ಅವರು ಆಯ್ಕೆಯಾದರು. ಜನಾಭಿಪ್ರಾಯವನ್ನು ನಾವು ಗೌರವದಿಂದ ಸ್ವೀಕಾರ ಮಾಡಬೇಕು. We will bow our head down to the verdict given by the people of Karnataka. ಪ್ರಜಾಪ್ರಭುತ್ವ ಕೊಟ್ಟಂತ ವ್ಯವಸ್ಥೆಯಲ್ಲಿ ಜನರು ಕೊಟ್ಟಂತಹ ನಿರ್ಣಯವನ್ನು ನಾವು ಶಿರಸಾವಹಿಸಿ, ಪಾಲನೆ ಮಾಡಬೇಕು. We should bow our head down to the verdict given by the people of Karnataka. 12 ಜನರು ಚುನಾಯಿತರಾಗಿ ಬಂದಿದ್ದನ್ನು ನಾನು ಒಪ್ಪಿದೆ. ಮರುದಿವಸವೇ ಮಂತ್ರಿಯಾಗುತ್ತೇವೆಂದು ಅವರು ತುದಿಗಾಲಿನಲ್ಲಿದ್ದರು. ಅವರನ್ನೂ ಸಹ ಇವರು ಶತಾಯಿಸಿದರು. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಒಂದು ಹೇಳಿಕೆಯನ್ನು ನೋಡಿದೆ. "ನಾವು ನುಡಿದಂತೆ ನಡೆಯುತ್ತೇವೆ" ಎಂದು ಹೇಳಿದರು. 12ನೇ ಶತಮಾನದಲ್ಲಿ ಬಸವಾದಿ ಶರಣರು, ವಚನಕಾರರು ನಡೆ ನುಡಿ ಒಂದಾಗಿರಬೇಕೆಂದು ಹೇಳಿದ್ದಾರೆ. ಏನು ನುಡಿಯುತ್ತೇವೆ, ಹಾಗೆ ನಡೆಯಬೇಕು, ಹೇಗೆ ನಡೆಯುತ್ತೇವೆ, ಹಾಗೆ ನುಡಿಯಬೇಕೆಂದು ಹೇಳಿ ಸುಮಾರು 900 ವರ್ಷಗಳ ಹಿಂದೆ ವಚನಕಾರರು ಹೇಳಿದ ಮಾತು. ಶ್ರೀಮಾನ್ ಬಿ.ಎಸ್.ಯಡಿಯೂರಪ್ಪನವರು ಬಸವ ಸಂಪ್ರದಾಯದಲ್ಲಿ ಬಂದಂತಹವರಾಗಿದ್ದು, ಅವರಿಗೆ ಈ ವಚನ ನೆನಪಾಯಿತು. ನುಡಿದಂತೆ ನಡೆಯುತ್ತೇವೆಂದರೆ ಇವರುಗಳನ್ನೆಲ್ಲಾ ಮಂತ್ರಿ ಮಾಡುತ್ತೇವೆಂದು ಅವರು ಹೇಳಿದ್ದರು. ಆದರೆ, ಇವರೀಗ ನಾವು ಏನೂ ಹೇಳಿಲ್ಲವೆಂದು ಹೇಳುತ್ತಿದ್ದಾರೆ. ಅವರುಗಳ ಮುಖ ನೋಡಿಲ್ಲ, ಅವರ ಪಕ್ಷದಲ್ಲಿ ಭಿನ್ನಾಭಿಪ್ರಾಯಗಳಿರಬಹುದು, ಅವರು ಪಕ್ಷ ಬಿಟ್ಟು ಹೋಗಿರಬಹುದು, ಇದರಲ್ಲಿ ನಮ್ಮದೇನೂ ಪಾತ್ರವಿಲ್ಲವೆಂದು ಹೇಳುತ್ತಿದ್ದಾರೆ. ಹಾಗಾದರೆ, ಅವರುಗಳಿಗೆ ಏನೂ ಪ್ರಚೋದನೆಯನ್ನು ಇವರು ಮಾಡಿಲ್ಲವೇ? ನುಡಿದಂತೆ ನಡೆಯಬೇಕೆಂದು ಹೇಳಿ, ನಿಮ್ಮೆಲ್ಲರನ್ನೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಂತ್ರಿ ಮಾಡುತ್ತೇವೆಂದು ಹೇಳಿದ್ದರು. is it not provoking? ಅವರನ್ನು provoke ಮಾಡಿದಂತೆ ಅಲ್ಲವೇ? ನಾವು ನಿಮ್ಮನ್ನು ಮಂತ್ರಿ ಮಾಡುತ್ತೇವೆ, ನೀವು ನಿಮ್ಮ ಪಕ್ಷ ಬಿಟ್ಟು ಬನ್ನಿ ಎಂದು ಹೇಳಿದಂತೆ ಅಲ್ಲವೇ?

**ನುಡಿದರೆ ಮುತ್ತಿನ ಹಾರದಂತಿರಬೇಕು!**
**ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು!**
**ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು!**
**ನುಡಿದರೆ ಲಿಂಗ ಮೆಚ್ಚಿ ಅಹುದೆನಬೇಕು!**
**ನುಡಿಯೊಳಗಾಗಿ ನಡೆಯದಿದ್ದರೆ**
**ಕೂಡಲಸಂಗಮದೇವನೆಂತೂಲಿವನಯ್ಯ?**

ಈ ವಚನ ಈ ಸರ್ಕಾರದವರಿಗೆ ನೆನಪಾಯಿತು. ಇವರುಗಳಿಗೆ ಮೊದಲು ಏನೇನು ಆಶ್ವಾಸನೆ ಕೊಟ್ಟಿದ್ದರು, ಚುನಾವಣೆಗೆ ಏನೇನು ಕೊಡುತ್ತೇವೆಂದು ಹೇಳಿದ್ದರು, ಅವೆಲ್ಲವೂ ನೆನಪಾಗಿ ಸರ್ಕಾರದವರು ನುಡಿದಂತೆ ನಡೆದಿದ್ದಾರೆ, 12ನೇ ಶತಮಾನದ ಬಸವಾದಿ ಶರಣರ ಮಾತುಗಳನ್ನು ಅಕ್ಷರಶಃ ಪಾಲನೆಗೆ ತಂದಿದ್ದಾರೆ. ಮೊದಲು ಏತಕ್ಕೆ ಆ ರೀತಿ ಹೇಳಿದ್ದರು ಎಂದು ನನಗೆ ಆಶ್ಚರ್ಯವಾಯಿತು. ಆಗ ನಾವು ಇವರೆಷ್ಟು ಸ್ವಚ್ಚಾರಿತ್ರ್ಯವಂತರು ಎಂದು ನಾವು ಭಾವಿಸಿದ್ದೆವು. ಆದರೆ, ಇವರು ಜಾಣತನವನ್ನು ಉಪಯೋಗ ಮಾಡಲಿಲ್ಲ. ಈ ರೀತಿಯಲ್ಲಿ ಹೇಳಿಯೇ ಬಿಟ್ಟಿದ್ದರು. ಆ ದೃಷ್ಟಿಯಿಂದ ಸರ್ಕಾರದವರಿಗೆ ಏತಕ್ಕೆ ಈ ಮಾತನ್ನು ಹೇಳಲಿಕ್ಕೆ ಹೊರಟಿದ್ದೇನೆಂದರೆ ನಾನು ರಾಜಕಾರಣಕ್ಕಾಗಿ ಈ ಮಾತುಗಳನ್ನು ಹೇಳಲಿಕ್ಕೆ ಹೋಗುವುದಿಲ್ಲ. ಇವರಿಗೆ ಸಮಯವೇ ಸಿಕ್ಕಿರುವುದಿಲ್ಲ. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕಿಂತ ಪೂರ್ವದಲ್ಲಿ ನಿಮ್ಮದೇ ಆದಂತಹ ಕೊಡುಗೆಗಳು, ನಿಮ್ಮದೇ ಆದಂತಹ ಕೆಲಸಕಾರ್ಯಗಳನ್ನು ಮಾಡಲಿಕ್ಕೆ ಸಮಯ ಸಿಕ್ಕಲಿಲ್ಲ. ಅವರ ಪ್ರತಿಜ್ಞಾವಿಧಿ ತಡವಾಯಿತು,

**(ಗೊಂದಲ)**

**ಶ್ರೀ ಎಂ.ಕೆ ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಮಗೆಲ್ಲರಿಗೂ ಆತ್ಮೀಯರಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಎಲ್ಲರ ಜೊತೆಯಲ್ಲಿಯೂ ಆತ್ಮೀಯವಾಗಿದ್ದೇನೆಂದು ಮಾನ್ಯ ಸದಸ್ಯರಾದ ಶ್ರೀ ಪ್ರಾಣೇಶ್ ರವರು ಗಮನಿಸಬೇಕು.

**ಡಾ॥ ತೇಜಸ್ವಿನಿಗೌಡ:-** ನಾವೇನಾದರೂ ಮಾಡಿದ್ದರೆ ಅದನ್ನು ಅವರು ಮಾಡಿದ್ದರಿಂದ ಕಲಿತಿರುವಂಥಾದ್ದು. ಆ credit ವಿರೋಧ ಪಕ್ಷದವರಿಗೆ ಕೊಡುತ್ತೇವೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಶ್ರೀ ಬಿ.ಎಸ್.ಯಡಿಯೂರಪ್ಪನವರು ಈ ರಾಜ್ಯದ ಆರೂವರೆ ಕೋಟಿ ಜನರ ಮುಖ್ಯಮಂತ್ರಿಗಳಿದ್ದಾರೆ. ನಾವುಗಳು ಯಾವುದೇ ಪಕ್ಷದಲ್ಲಿರಲಿ. ಈ ರಾಜ್ಯದ ಆರೂವರೆ ಕೋಟಿ ಜನರಿಗೆಲ್ಲರಿಗೂ ಮುಖ್ಯಮಂತ್ರಿಗಳೇ ಆಗಿರುತ್ತಾರೆಂದು ನಾನು ಗೌರವ ಭಾವನೆಯಿಂದ ಹೇಳುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಎಂ.ಕೆ. ಪ್ರಾಣೇಶ್ ಅವರಿಗೆ ಮಾತ್ರ ಮುಖ್ಯಮಂತ್ರಿಗಳಲ್ಲ, ನಮಗೆಲ್ಲರಿಗೂ ಮುಖ್ಯಮಂತ್ರಿಗಳು. ಶ್ರೀ ಬಿ.ಎಸ್.ಯಡಿಯೂರಪ್ಪನವರು ಹೋರಾಟದಿಂದ ಬಂದಂತಹವರು, ಅತ್ಯಂತ ಹಿರಿಯವರಾಗಿದ್ದಾರೆ. ನನಗೆ ಅವರ ಬಗ್ಗೆ ಗೌರವ ಇದೆ. ನಾನು ಈ ಮಾತನ್ನು ಏತಕ್ಕೆ ಹೇಳಿದೆ ಎಂದರೆ, ಆಗ ಅವರು ಅಂದ ಮಾತಿಗೆ ಮತ್ತು ಈಗಿನ ಮಾತಿಗೆ ಏತಕ್ಕೆ ಬದಲಾವಣೆ ಎನ್ನುವ ಬಗ್ಗೆ ಹೇಳುತ್ತಿದ್ದೇನೆ. ಮತ್ತೆ ಇವರಿಗೆ ಸಮಯ ಸಿಕ್ಕಿರಲಿಲ್ಲ. ಘನ ಕಾರ್ಯಗಳನ್ನು ಮಾಡುವಲ್ಲಿಯೇ ಸಮಯವನ್ನು ವಿನಿಯೋಗ ಮಾಡಿದ್ದಾರೆ. ಅಧಿಕಾರಕ್ಕಾಗಿ ಶತಾಯ ಗತಾಯ ಕೆಲಸ ಮಾಡಿದ್ದಾರೆ. "By hook or by crook" we should catch the power. ಅಧಿಕಾರಕ್ಕೆ ಬರಲೇ ಬೇಕೆಂದು ನೀವು ಏನು ಪ್ರತಿಜ್ಞೆ ಮಾಡಿ, ಏನೇ ಆಗಲಿ, ವಾಮ ಮಾರ್ಗದಿಂದಲಾದರೂ ಆಗಲಿ, ಯಾವುದೇ ಮಾರ್ಗದಿಂದಾಗಲಿ ಅಧಿಕಾರಕ್ಕೆ ಬರಬೇಕೆಂದು ಪ್ರಯತ್ನ ಪಟ್ಟಿದ್ದಾರೆ. ಮಾನ್ಯ ಸದಸ್ಯರಾದ ಡಾ॥ ವೈ.ಎ. ನಾರಾಯಣಸ್ವಾಮಿಯವರು ನಾನು ಹೇಳುವುದನ್ನು ಗಮನಿಸಬೇಕು. ನನ್ನದು ಬಿಳಗಿ ತಾಲ್ಲೂಕು. ಅಲ್ಲಿ ಸ್ವಾತಂತ್ರೋತ್ಸವ ಸಮಾರಂಭ ಇತ್ತು. ಆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದೆ. ಆ ಸಂದರ್ಭದಲ್ಲಿ ರಾಮಕೃಷ್ಣ ಆಶ್ರಮದ ಮುಖ್ಯಸ್ಥರು ಬಂದಿದ್ದರು. ಅವರು ಸಹ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಸ್ವಾಮಿ ವಿವೇಕಾನಂದರವರ ಬಗ್ಗೆ ರಾಮಕೃಷ್ಣ ರವರ ಬಗ್ಗೆ, ಶಾರದ ಮಾತೆಯ ಬಗ್ಗೆ ಬಹಳಷ್ಟು ಗೌರವ ಭಾವನೆಯನ್ನು ಹೊಂದಿದಂತಹ ಅವರು ಖುಷಿಯಾಗಿದ್ದರು. ಅವರು ತಮ್ಮ ಭಾಷಣದಲ್ಲಿ ಮೊದಲಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನು ಹೇಳಿದರು ಎಂದರೆ to reach the goal... ಎಂದು ಹೇಳಿದರು. ನನಗೆ ಬಹಳ ಆಶ್ಚರ್ಯವಾಯಿತು. ಆ ಸಮಯದಲ್ಲಿ ಇಂತಹ ಮಾತನ್ನು ಇವರು ಏತಕ್ಕೆ ಹೇಳಿದರು ಎಂದು ಹೇಳಿ ನಾನು ಬಹಳ ತಲೆ ಕೆಡೆಸಿಕೊಂಡಿದ್ದುಂಟು. ಗುರಿ ಮುಟ್ಟಲಿಕ್ಕೆ ಯಾವುದೇ ಮಾರ್ಗ ಹಿಡಿಯಿರಿ, ಗುರಿ ಮುಟ್ಟಿ. ಗುರಿ ಮುಟ್ಟಿದ ನಂತರ ನಿಮ್ಮ ವಿಚಾರಗಳು ಏನಿವೆ, ಅವುಗಳನ್ನೆಲ್ಲಾ ಜಾರಿಗೆ ತನ್ನಿ ಎಂದು ಹೇಳಲಾಯಿತು. ನೀವು ಗುರಿಯನ್ನೇ ಮುಟ್ಟಲಿಲ್ಲವೆಂದರೆ ಏನೂ ಮಾಡಲಿಕ್ಕೆ ಆಗುವುದಿಲ್ಲ.

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರ ಆಶಯ ಅದೇ ಆಗಿತ್ತು.

**ಶ್ರೀ ಎಸ್.ಆರ್.ಪಾಟೀಲ್:-** ನಮ್ಮ ಆಶಯವೇ?

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಹೌದು, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಬೇಕೆನ್ನುವುದು ಶ್ರೀ ಎಸ್.ಆರ್.ಪಾಟೀಲ್‌ರವರ ಆಶಯವಾಗಿತ್ತು. ಬಿಜೆಪಿ ಸರ್ಕಾರ ಬಂದ ಮೇಲೆ ನಮಗೇನೂ ಖುಷಿಯಾಗಿದೆ ಗೊತ್ತಾ? ಈ ಸದನದಲ್ಲಿ ಶ್ರೀ ಎಸ್.ಆರ್.ಪಾಟೀಲ್‌ರವರು ವಿರೋಧ ಪಕ್ಷದ ನಾಯಕರಾಗಿದ್ದಾರೆ. ಅಲ್ಲಿ ಇದ್ದಂತಹ ಸಂದರ್ಭದಲ್ಲಿ ಮಂತ್ರಿಯಾಗಲಿಲ್ಲ, ಸಭಾಪತಿಯಾಗಲಿಲ್ಲ. ಕೊನೆಪಕ್ಷ ನಾವು ಈ ಕಡೆ ಬಂದಲಾಗಲಾದರೂ ಸಹ ಶ್ರೀ ಎಸ್.ಆರ್.ಪಾಟೀಲ್‌ರವರು ವಿರೋಧ ಪಕ್ಷದ ನಾಯಕರಾಗಿದ್ದಾರೆ.

**(ಗೊಂದಲ)**

**ಡಾ॥ ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ವಾಮ ಮಾರ್ಗದಿಂದಲೇ ಮೈತ್ರಿ ಸರ್ಕಾರ ಬಿದ್ದು ಹೋಯಿತು. ರಾಮ ಮಾರ್ಗದಿಂದಾಗಿ ಬಿ.ಜೆ.ಪಿ. ಸರ್ಕಾರ ರಚನೆಯಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ನನ್ನ ಸ್ನೇಹಿತರಾದ ಡಾ॥ ವೈ.ಎ.ನಾರಾಯಣಸ್ವಾಮಿ ಯವರು ಒಂದು ವಿಚಾರವನ್ನು ಹೇಳಿದ್ದಾರೆ. ನಾನು ಈ ಹಿಂದೆ 3 ವರ್ಷ 2 ತಿಂಗಳು ಕೆಲಸ ಮಾಡಿದ್ದೇನೆ. IT, BT, Science and Technology and Planning Minister ಆಗಿ ಕೆಲಸ ಮಾಡಿದ್ದೇನೆ. ಮೂರು ವರ್ಷ ಎರಡು ತಿಂಗಳಾದ ಮೇಲೆ ನಾನು drop ಆದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ|| ವೈ.ಎ. ನಾರಾಯಣಸ್ವಾಮಿ:–** ಏತಕ್ಕಾಗಿ ಆ ರೀತಿ ಮಾಡಲಾಯಿತು ಎಂದು ಹೇಳಿ ಮಾನ್ಯ ವಿರೋಧ ಪಕ್ಷದ ನಾಯಕರು ಆತ್ಮಸಾಕ್ಷಿಯಿಂದ ಹೇಳಬೇಕು. ಸಜ್ಜನರಾದ ಅವರ ಬಗ್ಗೆ ನಮಗೆ ಅಪಾರ ಗೌರವ ಇದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, TV-9 Anchor ರವರು ನನಗೆ ಸಂಪರ್ಕ ಮಾಡಿದರು. ಅವರನ್ನು ನಾನು ನೋಡಿದ್ದಿಲ್ಲ. ನಾನು ಟಿ.ವಿ. ಮುಂದೆ ಕುಳಿತಿದ್ದೆ. 12 ಮಂದಿ drop ಏನು ಆಗಿದ್ದರು, ಅದರ ಬಗ್ಗೆ ಆ ಆಂಕರ್‌ರವರು "ಪಾಟೀಲ್" ರವರೇ, ನಿಮ್ಮ ಹೆಸರು ಸಹ ಇದೆ ಎಂದು ಹೇಳಿದರು. ಆಗ ನೋಡಿ ನಾನು ಹೌದು, ನನ್ನ ಹೆಸರು ಇದೆ ಎಂದವರಿಗೆ ಬಹಳ ಖುಷಿಯಿಂದ ಹೇಳಿದೆ. ಆಗ ಅವರು "ಎಷ್ಟೊಂದು ಖುಷಿಯಿಂದ ಹೇಳುತ್ತಿದ್ದೀರಿ" ಎಂದವರು ನನಗೆ ಹೇಳಿದರು. ಆಗ ನಾನು ಏನು ಹೇಳಿದೆ ಎಂದರೆ . . .

**ಶ್ರೀ ಎಂ.ಕೆ.ಪ್ರಾಣೇಶ್:–** ಆ ಕಡೆ ಒಳ್ಳೆಯವರಿಗೆ ಅವಕಾಶವಿಲ್ಲ. ಒಳ್ಳೆಯವರಿಗೆ ಅವಕಾಶವಿಲ್ಲವೆಂದು ಅವರು ಈ ಕಡೆಗೆ ನಮ್ಮ ಜೊತೆಗೆ ಬಂದರು. ಹಾಗಾಗಿ ಅವರಿಗೆ ಅವಕಾಶವನ್ನು ಕೊಟ್ಟಿದ್ದೇವೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಆದರೆ, ಹೊಸದಾಗಿ ಬಂದಿರುವ ಮಂತ್ರಿಗಳ ಪೈಕಿ ಒಬ್ಬರಿಗೂ ಸಹ ಹುರುಪಿಲ್ಲ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಇಲ್ಲಿ ಕಷ್ಟ ಏನೆಂದರೆ, ಅವರ ಕಡೆ ಹೋದವರೆಲ್ಲರೂ ತುಂಬಾ ಒಳ್ಳೆಯವರಾಗಿದ್ದಾರೆ.

**(ಗೊಂದಲ)**

**ಡಾ|| ಜಯಮಾಲ:–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಲ್ಲಿ ಗೆದ್ದಂತಹ 224 ಜನ ಶಾಸಕರಿಗೆಲ್ಲರಿಗೂ ಮಂತ್ರಿ ಸ್ಥಾನವನ್ನು ಕೊಟ್ಟರೆ ಈ ತಾಪತ್ರಾಯವೇ ಇರುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇವರೇನೂ ಹೊಸದಾಗಿ ಚುನಾಯಿತರಾದ 10 ಮಂದಿಗೆ ಮಂತ್ರಿಸ್ಥಾನವನ್ನು ಕೊಟ್ಟಿದ್ದಾರೆ. ಆದರೆ, ಹುರುಪಿನಿಂದ ಮಂತ್ರಿಗಳಾಗಿ ಬಂದಂತಹವರು ಏನು ಕನಸ್ಸನ್ನು ಕಟ್ಟಿಕೊಂಡು ಬಂದಿದ್ದರೋ ಆ ಒಂದು ಹುರುಪು ಈಗ ಕಾಣುತ್ತಿಲ್ಲ. ನಾನು ಈ ಬಗ್ಗೆ ಪ್ರತಿದಿನವೂ ನೋಡುತ್ತಿದ್ದೇನೆ. ಬಹಳ ಹುರುಪು ಇವರಲ್ಲಿ ಇರಬಹುದಲ್ಲ, "Long

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

cherished dream came to true” ಎಂದು ಹೇಳಿ ಬಹಳ ದಿನಗಳ ಕನಸು ನೆನಸಾಯಿತು ಎಂದರೆ ಅವರಲ್ಲಿ ಹುರುಪು ಇರಬೇಕಲ್ಲವೇ? ನೋಡಿ, ಸಚಿವರಾದ ಶ್ರೀ ಸಿ.ಸಿ.ಪಾಟೀಲ್‌ರವರಿಗೆ ಹುರುಪು ಇದೆ, ಅದು ನನಗೆ ಗೊತ್ತಾಗುತ್ತದೆ. “Face is the index of mind” ಎನ್ನುತ್ತಾರೆ. ಮುಖ ನೋಡಿದರೆ ಗೊತ್ತಾಗುತ್ತದೆ. ಏನಾದರೂ ತೊಂದರೆಯಾಗಿದೆಯೇ, ಏನಾದರೂ ಹೆಂಡತಿ ಜೊತೆ ಬಡಿದಾಡಿಕೊಂಡು ಬಂದಿದ್ದಾರೆಯೇ, ಮನೆಯಲ್ಲಿ ಏನಾದರೂ ಅಹಿತಕರವಾದ ಘಟನೆ ನಡೆದಿದೆಯೇ ಎನ್ನುವ ರೀತಿಯಲ್ಲಿ ವ್ಯಕ್ತವಾಗುತ್ತಿದೆ. ಆದ್ದರಿಂದ, ಇವರ ವಿಚಾರದಲ್ಲಿ ನನಗೆ ಅರ್ಥವಾಗುತ್ತಿಲ್ಲ. ಇವರುಗಳು ಏನು ಕನಸು ಕಂಡಿದ್ದರೋ ಆ ಕನಸುಗಳು ನೆನಸು ಆಗುವುದರಲ್ಲಿ ಸ್ವಲ್ಪ ಸಂಶಯ ಇದೆಯೋ ಎಂದು ಅರ್ಥವಾಗುತ್ತಿಲ್ಲ. ಇರಲಿ, ಇದರ ಬಗ್ಗೆ ನಾನು ವಿಸ್ತೃತವಾಗಿ ಮಾತನಾಡಲಿಕ್ಕೆ ಹೋಗುವುದಿಲ್ಲ.

TV-9 Anchor ರವರು ಈ ಬಗ್ಗೆ ನನಗೆ ನಿಮ್ಮ ಹೆಸರು ಇದೆ ಎಂದು ಹೇಳಿದಾಗ, ನಾನು ಅವರಿಗೆ ಹೌದು ನನ್ನ ಹೆಸರು ಇದೆ ಎಂದು ಅವರಿಗೆ ಹೇಳಿದೆ. ಮತ್ತೆ ಹೇಗೆ ಪಾಟೀಲ್‌ರವರೇ ಎಂದು ಮರು ಪ್ರಶ್ನೆ ಕೇಳಿದರು. ಮಂತ್ರಿ ಸ್ಥಾನ ಎನ್ನುವುದು ನನ್ನ ancestral property ಯೇ ಎಂದು ಕೇಳಿದೆ. ನನ್ನ ಸ್ವಗ್ರಾಮ ಅಂದರೆ ಬಡಗಾಂಡಿ ಗ್ರಾಮ.

**(202) 09.03.2020 11.30 ಎಸ್‌ವಿ-ಎಂಡಿ**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಅಲ್ಲಿ ನಮ್ಮ ತಂದೆಯವರು ಗಳಿಸಿದಂತಹ ಜಮೀನಿದೆ, ಮನೆಯಿದೆ. ನಮ್ಮ ಊರಿನಲ್ಲಿರುವ ನನ್ನ ಜಮೀನಿಗೆ ಕೈ ಹಾಕಿದರೆ ನನಗೆ ನೋವಾಗಬೇಕು. After all I am holding the ministerial position. ಅದು ಸಾರ್ವಜನಿಕ ಆಸ್ತಿ. It is the prerogative power of the Chief Minister. He can drop or include anybody. ಯಾರದಾದರೂ ಖಾತೆಯನ್ನು ಬದಲಾವಣೆಯನ್ನು ಮಾಡಬಹುದು. ಯಾವುದಾದರೂ ಖಾತೆಯನ್ನು ಕೊಡಬಹುದು. ಸಂವಿಧಾನದತ್ತವಾದಂತಹ ಅಧಿಕಾರ ಮುಖ್ಯಮಂತ್ರಿಯವರಿಗೆ ಇದ್ದು, ಅದರ ಪ್ರಕಾರ ನನ್ನನ್ನು ಸಚಿವಸಂಪುಟದಿಂದ ಕೈಬಿಡಲಾಗಿದೆ. I am very happy.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಪಾಟೀಲರೇ, ಅದು ಹಿಂದೆ ಇತ್ತು. ಈಗ ಎಲ್ಲಿದೆ? ಈಗ ಯಾವ ಮುಖ್ಯಮಂತ್ರಿಗೂ ಅದು ಇಲ್ಲ. ಮೇಲಿನಿಂದ ಅಂದರೆ ಶಂಖದಿಂದ ಬಂದರಷ್ಟೇ ಇಲ್ಲಿ ತೀರ್ಥ. ಎಲ್ಲಾ ಪಕ್ಷಗಳ ಹಣೆಯ ಬರಹ ಅಷ್ಟೇ ಆಗಿದೆ. ಸುಮ್ಮನೆ ಇಲ್ಲಿ ಹೇಳಿ ಏನು ಪ್ರಯೋಜನ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದರಿಂದ ನಾನೇನು ಮನಸ್ಸಿಗೆ ನೋವು ಮಾಡಿಕೊಂಡಿರಲಿಲ್ಲ. ಟಿವಿ ನಿರೂಪಕರು ನಿಮ್ಮ ಮೇಲೇನಾದರೂ ಆಪಾದನೆಗಳಿವೆಯೇ ಎಂದು ನನ್ನನ್ನು ಕೇಳಿದರು. ನನಗನ್ನಿಸಿದ ಮಟ್ಟಿಗೆ ನನ್ನ ಮೇಲೆ ಯಾವುದೇ ಆಪಾದನೆಗಳಿರಲಿಲ್ಲ. ನನ್ನನ್ನು ಸಚಿವಸಂಪುಟದಿಂದ ಕೈಬಿಟ್ಟಿರುವಂತಹ ಮುಖ್ಯಮಂತ್ರಿಯವರನ್ನು ಕೇಳಿ ಎಂದು ಅವರಿಗೆ ಹೇಳಿದೆನು. ಆ ರೀತಿಯೇನಾದರೂ ಆಪಾದನೆಗಳಿದ್ದಲ್ಲಿ ಅದನ್ನು ಒಪ್ಪಿಕೊಳ್ಳಲು ಸಿದ್ಧನಿದ್ದೇನೆ ಎಂದು ಕೂಡ ಅವರಿಗೆ ಬಹಳ ಖುಷಿಯಿಂದ ಹೇಳಿದೆನು. ನಂತರ ಎಂಟು-ಹತ್ತು ದಿನಗಳು ಕಳೆದ ಮೇಲೆ ಮುಖ್ಯಮಂತ್ರಿಯವರ ಭೇಟಿಯ ಸಂದರ್ಭದಲ್ಲಿ "ನಾನು ಮೂರು ವರ್ಷಗಳ ಕಾಲ ಮಂತ್ರಿಯಾಗಿದ್ದು, ಮೂರು ಕೋಟಿ ರೂಪಾಯಿಗಳ ಸಾಲವನ್ನು ಮಾಡಿಕೊಂಡಿದ್ದೆನು. ತಾವು ಕಲ್ಯಾಣ ಮಾಡಿ ಇನ್ನೆರಡು ವರ್ಷಕ್ಕೆ ಇನ್ನೆರಡು ಕೋಟಿ ರೂಪಾಯಿಗಳನ್ನು ಉಳಿಸಿದಿರಿ, ನಿಮಗೆ ಧನ್ಯವಾದಗಳು" ಎಂದು ಹೇಳಿದೆನು. ಅದು ಬದಿಗಿರಲಿ, ಈಗ ಅದು ವಿಷಯಕ್ಕೆ ಸಂಬಂಧಿಸಿದ್ದುದಲ್ಲ.

ಈಗ ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಮಾಡಿರುವ ಸಾಧನೆಗಳ ಬಗ್ಗೆ ಹೇಳುವುದಾದರೆ, ಸಾಧನೆಗಳೇನೂ ಇಲ್ಲವೇ ಇಲ್ಲ. ಹಿಂದೆ ಇದ್ದಂತಹ ಮಾನ್ಯ ಕುಮಾರಸ್ವಾಮಿಯವರ ನೇತೃತ್ವದ ಸಮ್ಮಿಶ್ರ ಸರ್ಕಾರದ ಹಾಗೂ ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರವು ಮಾಡಿದಂತಹ ಸಾಧನೆಗಳನ್ನು ಕ್ರೋಢೀಕರಿಸಿ ಅವುಗಳನ್ನು ಘನತೆವೆತ್ತ ರಾಜ್ಯಪಾಲರಿಂದ ಹೇಳಿಸಲಾಗಿದೆ. ಇನ್ನೊಂದು ಅಂಶವೆಂದರೆ, ಘನತೆವೆತ್ತ ರಾಜ್ಯಪಾಲರು ಇವರು ಬರೆದುಕೊಟ್ಟಿದುದನ್ನು ಓದಬೇಕು. ಅದರಲ್ಲಿ ಏನೂ ಬದಲಾವಣೆ ಮಾಡುವ ಹಾಗಿಲ್ಲ. ಅದು ಒಂದು ಸುಳ್ಳಿನ ಕಂತೆ, ಸುಳ್ಳಿನ ಸರಮಾಲೆ. ಸುಳ್ಳುಗಳನ್ನೇ ಬರೆದುಕೊಟ್ಟರೆ ಘನತೆವೆತ್ತ ರಾಜ್ಯಪಾಲರು ಏನು ಮಾಡಬೇಕು? ಸುಳ್ಳು ಹೇಳುವುದಕ್ಕೂ ಒಂದು ಇತಿ-ಮಿತಿ ಇರಬೇಕು. ಸುಳ್ಳು ಹೇಳಿದರೆ, ಸತ್ಯದ ತಲೆಯ ಮೇಲೆ ಹೊಡೆದ ಹಾಗೆ ಸುಳ್ಳು ಹೇಳಬೇಕಂತೆ. ಅಸ್ಖಲಿತವಾಗಿ, ಓತಪ್ರೋತವಾಗಿ ಘನತೆವೆತ್ತ ರಾಜ್ಯಪಾಲರಿಂದ ಸುಳ್ಳು ಹೇಳಿಸಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ:ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಪಾಟೀಲರೇ, ಒಂದು ದಿನ ತರಬೇತಿ ಕಾರ್ಯಾಗಾರವನ್ನು ಮಾಡಿ. ನಾವೆಲ್ಲರೂ ಬರುತ್ತೇವೆ. ಸುಳ್ಳನ್ನು ಸತ್ಯದ ತಲೆಯ ಮೇಲೆ ಹೊಡೆದ ಹಾಗೆ ಯಾವ ರೀತಿಯಲ್ಲಿ ಹೇಳಬೇಕೆನ್ನುವುದರ ಬಗ್ಗೆ ಹೇಳಿ ಕೊಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಅಲ್ಲಿ ಪಾಠವನ್ನು ನೀವು ಮಾಡುತ್ತೀರಾ? ಅವರು ಮಾಡುತ್ತಾರಾ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ನಾರಾಯಣಸ್ವಾಮಿಯವರೇ, ಈ ಸದನದಲ್ಲಿ ನಿಮಗೆ ತರಬೇತಿಯನ್ನು ಕೊಡುವವರು ಯಾರಾದರೂ ಇದ್ದಾರೆಯೇ? ನಿಮ್ಮಂತೆ ತರಬೇತಿಯನ್ನು ಕೊಡುವವರು ಯಾರೂ ಇಲ್ಲ. ಅದು ನೀವೊಬ್ಬರು ಮಾತ್ರ.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಹೊರಟ್ಟಿಯವರೇ, ಸುಳ್ಳನ್ನು ಸತ್ಯದ ತಲೆಯ ಮೇಲೆ ಹೊಡೆದಂತೆ ಹೇಳುವುದು ಗೊತ್ತಿಲ್ಲ. ಅದನ್ನು ಹೇಳಿಕೊಡುವಂತೆ ಕೇಳುತ್ತಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸುಳ್ಳು ಹೇಳುವುದಕ್ಕೆ ಇರುವ ಇತಿ-ಮಿತಿಯು ತಪ್ಪಿ, ಓತಪ್ರೋತವಾಗಿ ಸುಳ್ಳು ಹೇಳಿದ್ದಾರೆ. ವಿಶ್ವದಲ್ಲಿ ಶ್ರೇಷ್ಠವಾದ ನೊಬೆಲ್ ಪಾರಿತೋಷಕ ಸುಳ್ಳು ಹೇಳುವುದಕ್ಕಾಗಿ ನೀಡಿದರೆ, ಅದು ಈ ಸರ್ಕಾರಕ್ಕೆ ಸಿಗಬೇಕು.

**ಡಾ:ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಪಾಟೀಲರೇ, ತಾವು ಬೇಜಾರು ಮಾಡಿಕೊಳ್ಳಬೇಡಿ. ನಮ್ಮ ರಾಜ್ಯದಲ್ಲಿ ಸುಳ್ಳಿನ ಸರದಾರ ಎಂದೇ ಖ್ಯಾತರಾಗಿರುವವರು ಯಾವ ಪಕ್ಷದಲ್ಲಿದ್ದಾರೆ ಎಂಬುದನ್ನು ನೆನಪು ಮಾಡಿಕೊಳ್ಳಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ನೊಬೆಲ್ ಪಾರಿತೋಷಕಕ್ಕೆ ಅರ್ಹತೆ ಹೊಂದಿದವರು ಎಂದು ಹೇಳಿದ್ದೇನೆ. ಇದರ ಮೇಲೆ ಇನ್ನೂ ಯಾರಾದರೂ ಇದ್ದರೆ ಇರಬಹುದು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಅವರು ಸುಮ್ಮನಿದ್ದಾರೆಂದರೆ ಅದು ಸತ್ಯ ಎಂದು ಅರ್ಥ.

**ಶ್ರೀ ಎಸ್.ಆರ್.ಪಾಟೀಲ್:-** 'ಮೌನಂ ಸಮ್ಮತಿ ಲಕ್ಷಣಂ'. ಮಾನ್ಯ ನಾರಾಯಣಸ್ವಾಮಿಯವರು ಮತ್ತು ಮಾನ್ಯ ಪ್ರಾಣೇಶ್ ಅವರು ನಮ್ಮೊಂದಿಗೆ ಬಹಳ friendly ಯಾಗಿ ಇದ್ದಾರೆ. ಅವರು

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮೇಲಿಂದ ಮೇಲೆ interfere ಆಗುತ್ತಿರುತ್ತಾರೆ. ಸಂಸದೀಯ ವ್ಯವಸ್ಥೆಯಲ್ಲಿ ಸ್ವಲ್ಪ ಮಟ್ಟಿಗೆ yield ಆಗಬೇಕಾಗುತ್ತದೆ. ಅದಕ್ಕಾಗಿ yield ಆಗಿದ್ದೇನೆ.

ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ "ಇದರಾಗೇನೂ ದಂ ಇಲ್ಲಪಾ" ಎಂದು ಹೇಳುತ್ತಾರೆ. ಮಾನ್ಯ ಹೊರಟ್ಟಿಯವರಿಗೆ ತಿಳಿದಿದೆ. ಅಂದರೆ ತಾಕತ್ ಇರಲಾರದಂಥದ್ದು. ಅದರಂತೆ ಇದು "ದಂ ಇರದ ಭಾಷಣ" ಆಗಿದೆ. ಹಾವಿನ ಪೊರೆಯ ಹಾಗೆ ಇದೆ.

ಈಗ ಇಲ್ಲಿ ಮಾನ್ಯ ಆಯನೂರು ಮಂಜುನಾಥ್ ಅವರು ಬಂದಿಲ್ಲ. ಅವರು ಮಾನ್ಯ ಯಡಿಯೂರಪ್ಪನವರನ್ನು 'ದೈತ್ಯಶಕ್ತಿ', 'ಹೋರಾಟಗಾರರು' ಎಂದು ಹೇಳಿದರು. ನಾನು ಒಪ್ಪುತ್ತೇನೆ. ಆದರೆ ಮಾನ್ಯ ಯಡಿಯೂರಪ್ಪನವರು ಅತ್ಯಂತ ಹಿರಿಯರು. ಈ ಬಾರಿ ಶತಾಯ-ಗತಾಯ ಮುಖ್ಯಮಂತ್ರಿಯಾಗಲೇ ಬೇಕು ಎಂದು ಪ್ರತಿಜ್ಞೆಯನ್ನು ಮಾಡಿದರು. ನಾನು ಆಗಲೇ ಶ್ರೀ ರಾಮಕೃಷ್ಣ ಆಶ್ರಮದ ಮುಖ್ಯಸ್ಥರು ಹೇಳಿದಂತಹ ಮಾತನ್ನು ಹೇಳಿದೆ. ಗುರಿಯನ್ನು ತಲುಪಿದ ನಂತರ ಒಳ್ಳೆಯ ಕೆಲಸವನ್ನು ಮಾಡಲು ಪ್ರಾರಂಭ ಮಾಡಬೇಕೆಂದು ಹೇಳಿದ್ದರು. ನಮ್ಮ ತತ್ವಗಳು, ಆದರ್ಶಗಳು ಏನಿದ್ದರೂ ಅವುಗಳನ್ನು ಗುರಿ ಮುಟ್ಟಿದ ನಂತರ implement ಮಾಡಲು ಪ್ರಾರಂಭಿಸಬೇಕು. ಅವರು ಹೇಳಿದುದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಈಗ ನೀವು ಗುರಿ ಮುಟ್ಟಿದ್ದೀರಿ. ರಾಜ್ಯಪಾಲರ ಭಾಷಣದಲ್ಲಿ "ನಾವು ಮೂರೂವರೆ ವರ್ಷಗಳ ಕಾಲ ಅಧಿಕಾರದಲ್ಲಿದ್ದು, ಭ್ರಷ್ಟಾಚಾರ ಮುಕ್ತವಾದಂತಹ ಸರ್ಕಾರವನ್ನು ನಡೆಸುತ್ತೇವೆ; ಪಾರದರ್ಶಕವಾದಂತಹ ಸರ್ಕಾರವನ್ನು ನಡೆಸುತ್ತೇವೆ" ಎಂದು ಹೇಳಲಾಗಿದೆ. ರಾಜಕಾರಣ ಇಂದು ಬಹಳ ಕಲುಷಿತ ವಾತಾವರಣದಲ್ಲಿದೆ. ರಾಜಕಾರಣವೆಂದರೆ ಮೂಗು ಮುರಿಯುವಂತಹ ಪರಿಸ್ಥಿತಿ ಇದೆ. ರಾಜಕಾರಣಿಗಳೆಂದರೆ ಕನ್ಯೆಯನ್ನು ಕೊಡುವುದಿಲ್ಲ. ಪ್ರಾಥಮಿಕ ಶಾಲೆಯ ಮಕ್ಕಳ ಬಳಿಗೆ ಹೋಗಿ ರಾಜಕಾರಣಿಗಳು ಹೇಗೆ ಎಂದು ಕೇಳಿದರೆ ಅವರು ಶ್ರೇಷ್ಠರೆಂಬ ಭಾವನೆ ಇದೆಯೇ? ಅದು ಸ್ವಾತಂತ್ರ್ಯಪೂರ್ವದಲ್ಲಿ ಮತ್ತು ಸ್ವಾತಂತ್ರ್ಯಾನಂತರ ಮೂರು ದಶಕಗಳವರೆಗೆ ಇದ್ದಂತಹ ರಾಜಕೀಯ ವ್ಯಕ್ತಿಗಳಿಗೆ ಇತ್ತು. ಅವರಿಗೆ ಸಾಕಷ್ಟು ಗೌರವವಿತ್ತು. ಅವರನ್ನು ಸಾಕ್ಷಾತ್ ಭಗವಂತನೆಂದು ಕಾಣುತ್ತಿದ್ದರು. ಅಂತಹ ಕಾಲವಿತ್ತು.

ಈಗ ನೀವೇನು ಮಾಡಿದ್ದೀರೋ ಅದರ ಬಗ್ಗೆ ನಾನು ಏನೂ ಮಾತನಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಕಡೆ ಬಾರಹ್ ಬಾಂದ್ಗಡಿ ಎಂದು ಹೇಳುತ್ತೇವೆ. ಅದು ಅಸಂಸದೀಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪದವೇನಲ್ಲ. ನೀವೇನು ಮಾಡಿದಿರೋ ಮಾಡಿದಿರಿ. ಒಟ್ಟಿನಲ್ಲಿ ಅಧಿಕಾರಕ್ಕೆ ಬಂದಿದ್ದೀರಿ. ಉತ್ತರ ಕರ್ನಾಟಕ ಭಾಗದ ಹಳ್ಳಿಗಳಲ್ಲಿ 'ಕಳ್ಳರ ಕೈಲಿ ಕೀಲಿ ಕೊಡಬೇಕಂತೆ' ಎಂದು ಮಾತನಾಡುತ್ತಾರೆ. ಕಳ್ಳತನ ನಿಲ್ಲಿಸಬೇಕೆಂದರೆ ಕಳ್ಳರ ಕೈಲಿ ಕೀಲಿ ಕೊಡಬೇಕೆಂದು ಹೇಳುತ್ತಾರೆ. ಈಗ ನಿಮ್ಮ ಕೈಯಲ್ಲಿ ಕೀಲಿ ಕೊಡಲಾಗಿದೆ.

**ಶ್ರೀ ಅರವಿಂದಕುಮಾರ್ ಅರಳಿ:–** ಇಲ್ಲಿ ಉಲ್ಟಾ ಆಗಿದೆ.

**Dr. Y.A.NARAYANASWAMY:-** Mr. Chairman Sir, this is unparliamentary. ಸರ್ಕಾರವನ್ನು ಕಳ್ಳರೆಂದು ಹೇಳುತ್ತಿದ್ದಾರಲ್ಲ.

**ಡಾ: ತೇಜಸ್ವಿನಿ ಗೌಡ:–** ಹಿರಿಯರಾದಂತಹ ಮಾನ್ಯ ಎಸ್.ಆರ್.ಪಾಟೀಲರು ನಮ್ಮನ್ನು ಕಳ್ಳರೆಂದುಬಿಟ್ಟರೆ ನಾವೇನು ಮಾಡುವುದು. ಅವರು ಆಗಲೇ ಬಳಸಿದಂತಹ 'ವಾಮಮಾರ್ಗ' ಎಂಬ ಶಬ್ದವೂ ಅಸಂಸದೀಯ ಪದವೆಂದು ನಾನು ಭಾವಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಿಮಗೆ ಯಾವುದು unparliamentary ಎನಿಸುತ್ತದೆಯೋ ಅದನ್ನು expunge ಮಾಡಿ. I have no objection. ನನ್ನ ಮಾತುಗಳನ್ನು ಪೂರ್ಣವಾಗಿ ಕೇಳಿಸಿಕೊಳ್ಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ವಿರೋಧ ಪಕ್ಷದ ನಾಯಕರೇ, ಅಂಕಿ ಅಂಶಗಳ ಆಧಾರದಲ್ಲಿ ಬಹುಮತವಿರುವ ಪಕ್ಷವು ಸರ್ಕಾರ ರಚನೆ ಮಾಡಿ ಮುನ್ನಡೆಸುವುದು ರೂಢಿ ಮತ್ತು ಸಂಪ್ರದಾಯ. ಈ ಅಂಕಿ ಅಂಶಗಳ ಆಧಾರದಲ್ಲಿಯೇ ನಾವು ಸರ್ಕಾರವನ್ನು ರಚನೆ ಮಾಡಿರುತ್ತೇವೆ. ನೀವು ಕೀಲಿ–ಕಳ್ಳರು ಎಂದು ಯಾರಿಗೆ ಹೇಳುತ್ತಿದ್ದೀರಿ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾನಾಯಕರೇ, ನಿಮ್ಮ ಬಳಿ ಬಹಳ ವ್ಯವಧಾನವಿರಬೇಕು. ನಾನು ಬಹಳ ಶಾಂತರೀತಿಯಲ್ಲಿ ಮಾತನಾಡುತ್ತಿದ್ದೇನೆ. ನೀವು ಹೇಳುತ್ತಿರುವುದನ್ನು ನಾನು ಮೊದಲೇ ಹೇಳಿಬಿಟ್ಟಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನೀವು ಸಭಾನಾಯಕರಿಗೆ ವ್ಯವಧಾನ ಇರಬೇಕು ಎಂದು ಹೇಳಿದುದನ್ನು ನಾನು ಒಪ್ಪುತ್ತೇನೆ. ಆದರೆ ವಿರೋಧ ಪಕ್ಷದ ನಾಯಕರಾದವರಿಗೂ ಜವಾಬ್ದಾರಿ ಇರಬೇಕಲ್ಲವೆ? ಆದ್ದರಿಂದ ಆ ಪದವನ್ನು ಕಡತದಿಂದ ತೆಗೆಯಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ನಮ್ಮ ಗ್ರಾಮೀಣ ಭಾಗಗಳಲ್ಲಿ, ಹಳ್ಳಿಗಾಡಿನಲ್ಲಿ ಕಳ್ಳರ ಕೈಲಿ ಕೀಲಿ ಕೊಟ್ಟರೆ ಕಳ್ಳತನವಾಗುವುದು ನಿಲ್ಲುತ್ತದೆ ಎಂದರ್ಥ. ಈಗ ನೀವು ಅಧಿಕಾರಕ್ಕೆ ಬಂದಿದ್ದೀರಿ. ಒಳ್ಳೆಯ ವಿಚಾರಗಳನ್ನು ಹೇಳಬೇಕಲ್ಲವೆ? ಪಾರದರ್ಶಕವಾದ ಆಡಳಿತವನ್ನು ಕೊಡುತ್ತೇವೆ. ಭ್ರಷ್ಟಾಚಾರ ಮುಕ್ತವಾದಂತಹ ಸರ್ಕಾರವನ್ನು ಕೊಡುತ್ತೇವೆ. ಇಂದಿನ ಕಲುಷಿತ ವಾತಾವರಣದಲ್ಲಿ ರಾಜಕೀಯದ ಬಗ್ಗೆ ಇರುವ ತಪ್ಪು ಅಭಿಪ್ರಾಯವನ್ನು ಹೋಗಲಾಡಿಸಿ ರಾಜಕಾರಣ ಅತ್ಯಂತ ಪವಿತ್ರವಾದ ಕ್ಷೇತ್ರ ಎಂದು ಹೇಳಿ ಸಾಧನೆ ಮಾಡುವಂಥ ವಿಚಾರವನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದರೆ, ನಾನು hats off ಹೇಳುತ್ತಿದ್ದೆ. I would have saluted to you. ಆಗ ನಿಮಗೆ ನಾನು salute ಮಾಡುತ್ತೇನೆ. ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಕುಂಬಳಕಾಯಿ ಕಳ್ಳ ಯಾರು, ಈ ಎಲ್ಲಾ ವಿಚಾರಗಳು ಜನರಿಗೆ ಗೊತ್ತಿದೆ. ನೀವು ಸರ್ಕಾರಕ್ಕೆ ಸಲಹೆಯನ್ನು ಕೊಡಿ. ನೀವು ಸರ್ಕಾರವನ್ನು ಟೀಕೆ ಮಾಡಿ, ಆದರೆ ಈ ರೀತಿಯಾಗಿ ಹೇಳುವುದು ಸರಿಯಲ್ಲ. ವಿರೋಧ ಪಕ್ಷದ ಸ್ಥಾನದಿಂದ ಮಾತನಾಡುವಾಗ ಅವರು ಜವಾಬ್ದಾರಿಯಿಂದ ಮಾತನಾಡಬೇಕಲ್ಲವೇ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಆ ಮಾತಿಗೆ ನೀವೇಕೆ ಗಾಬರಿಯಾಗುತ್ತೀರಿ?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾನಾಯಕರೇ, ನೀವು ಹೆಚ್ಚು ತಾಳ್ಮೆ ಇರುವವರು.

**(203) 11.40 9.3.2020 kg ak**

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಕಾರಣವೆಂದರೆ, ಇಲ್ಲಿ ಈ ರೀತಿಯ ಚರ್ಚೆಗಳು, ಒಬ್ಬರ ಮೇಲೆ ಒಬ್ಬರಿಗೆ ಅಪನಂಬಿಕೆಗಳು, ಅವರು ಅಲ್ಲಿ ಕುಳಿತುಕೊಂಡು ರಾಜ್ಯಕೋಸ್ಕರ ರಾಜಕಾರಣ ಮಾಡುತ್ತಾರೆ. ಸಾರ್ವಜನಿಕರಲ್ಲಿ ಈ ತರಹದ ಅಭಿಪ್ರಾಯಗಳು ಮೂಡುವುದಕ್ಕೆ ಕಾರಣ ಯಾರು? ನಾವು ಇದನ್ನು ಯೋಚನೆ ಮಾಡಬೇಕೆ ವಿನಃ, ಇಲ್ಲಿ ಕುಳಿತುಕೊಂಡು ನೀನು ಕಳ್ಳ, ನೀನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಳ್ಳ ಎಂದು ಹೇಳುವುದು ಎಷ್ಟರ ಮಟ್ಟಿಗೆ ಸರಿ? ಅವರು ಒಂದು ಬಾರಿ ಆಡಳಿತ ಪಕ್ಷದ ಸ್ಥಾನಕ್ಕೆ ಬರುತ್ತಾರೆ. ನಾವು ಒಂದು ಬಾರಿ ವಿರೋಧ ಪಕ್ಷದ ಸ್ಥಾನಕ್ಕೆ ಹೋಗುತ್ತೇವೆ. ಅವರು ಬೆಟ್ಟು ಮಾಡಿ ತೋರಿಸುವಂಥದ್ದು ಸರಿಯೇ?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪ್ರಾಣೇಶ್‌ರವರು ಹೇಳಿರುವಂತಹದ್ದರ ಬಗ್ಗೆ ಚಿಂತನ-ಮಂಥನ ಆಗಬೇಕು. ಆತ್ಮಶೋಧನೆಯಾಗಬೇಕು ಎನ್ನುವಂತಹ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ನಾವು ಸಾರ್ವಜನಿಕರಿಗೆ ಏನು ಕೆಲಸವನ್ನು ಮಾಡುತ್ತೇವೆ, ಈ ರೀತಿಯ ಮಾತುಗಳನ್ನಾಡಿದರೆ ತಪ್ಪು ಅಭಿಪ್ರಾಯ ಬರುತ್ತದೆ ಎನ್ನುವಂತಹ ಮಾತನ್ನು ಉಲ್ಲೇಖ ಮಾಡಬೇಕು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ್ದನ್ನೇ ನಾನು ಇಲ್ಲಿ ಹೇಳಿದ್ದೇನೆ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದು ಸರಿಯಲ್ಲ. ಅದು ಕಡತಕ್ಕೆ ಹೋಗುವುದು ಸರಿಯಲ್ಲ, ಆದ್ದರಿಂದ, ಅದನ್ನು ಕಡತದಿಂದ ತೆಗೆಯಬೇಕು ಎನ್ನುವುದು ನನ್ನ ಅಭಿಪ್ರಾಯ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ರಾಜಕಾರಣ ಒಂದು ಪವಿತ್ರವಾದ ಕ್ಷೇತ್ರ. ರಾಜಕಾರಣಿಗಳು ಅತ್ಯಂತ ಗೌರವಸ್ಥರು. ಇಡೀ ಸಮುದಾಯದಿಂದ ಗೌರವಿಸುವಂತಹ ಒಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವ್ಯವಸ್ಥೆಯನ್ನು ನಿರ್ಮಾಣ ಮಾಡುತ್ತೇವೆ. ಭ್ರಷ್ಟಾಚಾರ ಮುಕ್ತವಾದಂತಹ ಸರ್ಕಾರವನ್ನು ಈ ರಾಜ್ಯಕ್ಕೆ ನೀಡುತ್ತೇವೆ ಮತ್ತು ಪಾರದರ್ಶಕ ಆಡಳಿತ ವ್ಯವಸ್ಥೆಯನ್ನು ಮಾಡುತ್ತೇವೆಂದು ಘನತೆವೆತ್ತ ಮಾನ್ಯ ರಾಜ್ಯಪಾಲರ ಭಾಷಣದ ಮುಖಾಂತರ ಹೇಳಿಸಿದ್ದರೆ, ನಮಗೂ ಸಹ ಬಹಳ ಸಂತೋಷವಾಗುತ್ತಿತ್ತು.

ಮಾನ್ಯ ಸಭಾಪತಿಯವರೇ, ನನಗೂ ಸಹ ಸದನದಲ್ಲಿ ಏನು ಮಾತನಾಡಬೇಕು, ಏನು ಮಾತನಾಡಬಾರದೆಂದು ವಿರೋಧ ಪಕ್ಷದಲ್ಲಿಯೂ ಕುಳಿತುಕೊಂಡು ಮಾಡಿದ್ದೇನೆ ಮತ್ತು ಸಭಾನಾಯಕರ ಸ್ಥಾನದಲ್ಲಿ ಕುಳಿತುಕೊಂಡು ಮಾಡಿದ್ದೇನೆ. ನಾನು ಪ್ರತಿಪಕ್ಷದ ನಾಯಕನಾಗಿ ರಚನಾತ್ಮಕವಾದಂತಹ ಟೀಕೆಗಳನ್ನು ಮಾಡುತ್ತೇನೆ. My criticism will be constructive criticism, not a destructive criticism. ಅವರು ಯಾವಾಗಲೂ ಟೀಕೆಗಳನ್ನು ಸ್ವೀಕಾರ ಮಾಡಬೇಕು. ನಾವು ಮಾಡಿದಂತಹ ಟೀಕೆಗಳಲ್ಲಿ ಏನಾದರೂ ಲೋಪದೋಶಗಳು ಇದ್ದರೆ, ಅವುಗಳನ್ನು ಸರಿಪಡಿಸಿಕೊಳ್ಳಬೇಕು. ಪ್ರತಿಪಕ್ಷ ಇರುವುದೇ ಇರುವಂತಹ ನ್ಯೂನತೆಗಳನ್ನು ಹೇಳುವುದಕ್ಕೆ. ಈಗ ನಾನು ಹೇಳಿದ್ದೆಲ್ಲವೂ ನ್ಯೂನತೆಗಳೆ. ಇಲ್ಲವೆಂದರೆ, O.K., fine. You carry on. ಅವರಿಗೆ ಅಲ್ಲಿರುವಂತಹ ಮನಸ್ಸು ಇಲ್ಲವೆಂದರೆ O.K. ಈ ಕಡೆಗೆ ಬರುವಂತಹ ಮನಸ್ಸು ಇದ್ದರೆ, ಅದನ್ನು ಮಾಡಲಿ. ಅವರಿಗೆ ಯಾರು ಬೇಡ ಅನ್ನುತ್ತಾರೆ. ಅವರು ಈ ಕಡೆಗೆ ಬರುವಂತಹ ಪ್ರಬಲವಾದಂತಹ ಇಚ್ಛೆ ಇದ್ದರೆ, ಅವರು ನಮ್ಮ ಟೀಕೆಗಳನ್ನು ಗಣನೆಗೆ ತೆಗೆದುಕೊಳ್ಳಬಾರದು. ನಾನು ಆ ವಿಚಾರಕ್ಕೆ ಹೋಗುವುದಿಲ್ಲ. ಅವರು ಮಾನ್ಯ ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಅದನ್ನು mention ಮಾಡಿಲ್ಲ. Mention ಮಾಡಿದ್ದರೆ ಬಹಳ ಒಳ್ಳೆಯದಾಗುತ್ತಿತ್ತು ಎಂದು ನಾನು ಸಲಹೆಯನ್ನು ಕೊಟ್ಟೆ. ಆ ಸಲಹೆಯನ್ನು ಅವರ ಅವಗಾಹನೆಗೆ ಬಿಟ್ಟಿದ್ದೇನೆ. ಮಾನ್ಯ ಮುಖ್ಯ ಮಂತ್ರಿಯವರು ಬಂದು ಉತ್ತರವನ್ನು ಸಹ ಕೊಡುತ್ತಾರೆ. ಈ ವಿಚಾರಗಳನ್ನು ಸಭಾನಾಯಕರು ಮಾನ್ಯ ಮುಖ್ಯ ಮಂತ್ರಿಯವರಿಗೆ brief ಆಗಿ ಹೇಳಬೇಕು. ಪ್ರತಿಪಕ್ಷದ ನಾಯಕರು ಹೇಳುವುದನ್ನು ನೋಟ್ ಸಹ ಮಾಡುವುದಿಲ್ಲವೆಂದರೆ, ಹೇಗೆ? ನಾವು ಎಲ್ಲಿ ಇರುತ್ತೇವೆ ಅಲ್ಲಿ ತೃಪ್ತಿಯಿಂದ ಇರುತ್ತೇವೆ. ಅವರು ಇಲ್ಲಿ ಇದ್ದಾಗ ತೃಪ್ತಿಯಿಂದ ಇರಬೇಕಾಗಿತ್ತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಮಗೆ ಈಗ ಏನಾಗಿದೆ?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾಡಬಾರದ್ದನ್ನು ಮಾಡಿ, ಅಲ್ಲಿಗೆ ಹೋದರು. ಇಡೀ ದೇಶ, ಇಡೀ ರಾಜ್ಯ ಏನು ಅಂದಿದ್ದಾರೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿಗೆ ಹೋದರು. ಹೋಗಿ ಏನು ಸಾಧನೆ ಮಾಡಿದ್ದಾರೆ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಮಗೆ ವಿರೋಧ ಪಕ್ಷದ ನಾಯಕರ ಮೇಲೆ ಇರುವಂತಹ ಗೌರವದಿಂದಾಗಿ ಅವರ ಸ್ಥಾನಪಲ್ಲಟ ಮಾಡುವುದಕ್ಕೆ ಆಸೆ ಪಡುವುದಿಲ್ಲ. ಆ ಕಾರಣದಿಂದಾಗಿ ಅವರ ಸ್ಥಾನ ಸುಭದ್ರವಾಗಿರಬೇಕು ಎನ್ನುವುದು ನಮ್ಮ ಆಸೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಸ್ಥಾನದ ಬೆನ್ನತಿ, ಲಾಭಿ, ಲೋಭಿ, ಮಾಡಿದವನಲ್ಲ. ಅದಕ್ಕಾಗಿ ಏನೋನೋ lobby ಮಾಡುತ್ತಾರಲ್ಲ. ಅದೆಲ್ಲ ನನ್ನ ಜೀವನದಲ್ಲಿ ಗೊತ್ತಿಲ್ಲ. ಅಧಿಕಾರ ಬಂದರೆ ಸೇವೆ ಮಾಡುತ್ತೇನೆ. ಇಲ್ಲವೆಂದರೆ, 'O.K., fine, excellent' ಅನ್ನುತ್ತೇನೆ. ಸಂಪುಟದಲ್ಲಿ ತೆಗೆದುಕೊಳ್ಳಲಿಲ್ಲವೆಂದರೆ, 50 ಬಸ್‌ಗಳು ಸುಟ್ಟು ಹೋಗುತ್ತವೆ. ಸಂಪುಟದಲ್ಲಿ ಇದ್ದವರನ್ನು ತೆಗೆದು ಹಾಕಿದರೆ 100 ಬಸ್‌ಗಳು ಸುಟ್ಟು ಹೋಗುತ್ತವೆ. ಇದು ಏನು ವ್ಯವಸ್ಥೆ? ಬಸ್‌ಗಳು ಯಾರವು? ಸಾರ್ವಜನಿಕರ ಆಸ್ತಿಯನ್ನು ಹಾಳು ಮಾಡುತ್ತಾರೆ. ಮುಖ್ಯ ಮಂತ್ರಿಯವರು ಮಂತ್ರಿಮಂಡಲದಲ್ಲಿ ಒಬ್ಬರನ್ನು ಮಂತ್ರಿಯನ್ನಾಗಿ ಸ್ವೀಕಾರ ಮಾಡದಿದ್ದರೆ, ಆ ಕ್ಷೇತ್ರದ ಜನ ಮತ್ತು ರಾಜ್ಯದ ಜನ ರೊಚ್ಚಿಗೆಂದು ಸಾರ್ವಜನಿಕರ ಆಸ್ತಿಯನ್ನು ಹಾಳುಮಾಡುತ್ತಾರೆ. ಈ ಹಿಂದೆ ನನ್ನ ಮಂತ್ರಿ ಪದವಿ ಹೋದಾಗ, ನನಗೆ ಬಹಳಷ್ಟು ಜನರು ದೂರವಾಣಿ ಮೂಲಕ ಮಾತನಾಡಿ ಆ ರೀತಿ ಮಾಡುತ್ತೇವೆ, ಈ ರೀತಿ ಮಾಡುತ್ತೇವೆಂದು ಹೇಳಿದರು. ನಾನು ಅವರಿಗೆ ಆ ರೀತಿ ಏನಾದರೂ ಮಾಡಿದರೆ, ನಾನು ಎಂಎಲ್‌ಸಿ ಸ್ಥಾನಕ್ಕೂ ರಾಜಿನಾಮೆ ಕೊಡುತ್ತೇನೆಂದು ಹೇಳಿದೆ. ಆಗ ಯಾರು ಸಹ ಗಲಾಟೆ ಮಾಡಲಿಲ್ಲ. ಆಗ ಅವರಷ್ಟಕ್ಕೆ ಅವರಿದ್ದರು. 100 ಗಾಡಿಗಳನ್ನು ತೆಗೆದುಕೊಂಡು ಗಾಡಿಗಳಿಗೆ ಎಣ್ಣೆ ಹಾಕಿಕೊಂಡು, ನೀವು ಸ್ವಲ್ಪ ಹಾಕಿಕೊಂಡು ಬನ್ನಿ ಎಂದು ಇವರೇ ಅವರ ಬೆನ್ನಲುಬಾಗಿ ಹೇಳುತ್ತಾರೆ. ಮಾನ್ಯ ಸಭಾಪತಿಯವರೇ ಇವತ್ತು ಇಡೀ ವ್ಯವಸ್ಥೆ ಎಲ್ಲಿಗೆ ಬಂತು? ನಾನು ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಇದು ಎಲ್ಲರಿಗೂ ಅನ್ವಯಿಸುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸಾರ್ವಜನಿಕರ ಆಸ್ತಿಯನ್ನೇ ಉಳಿಸುವುದಿಲ್ಲ. ಕೇಂದ್ರ ಸರ್ಕಾರದ ಸ್ವಾಮ್ಯಕ್ಕೆ ಒಳಪಡುವ post office, rail ಮತ್ತು ರಾಜ್ಯ ಸರ್ಕಾರದ ಸ್ವಾಮ್ಯಕ್ಕೆ ಒಳಪಡುವ ಬಸ್‌ಗಳು; ಮಾನ್ಯ ಸಾರಿಗೆ ಮಂತ್ರಿಗಳು ಇವತ್ತು ಸದನದಲ್ಲಿದ್ದಾರೆ. ಮಾನ್ಯ ಸಚಿವರು ಯಾವುದೇ ಮುಷ್ಕರ ಅಥವಾ ಬಂದ್‌ಗಳು ನಡೆದಂತಹ ಸಂದರ್ಭದಲ್ಲಿ ಬಸ್‌ಗಳನ್ನು ರಕ್ಷಣೆ ಮಾಡುವುದು ಬಹಳ ಕಷ್ಟ. ಈ ರೀತಿಯಾದರೆ, ಮೊದಲು ಅವರು protection measures ಕೈಗೆ ಎತ್ತಿಕೊಳ್ಳಬೇಕು. ಮೊದಲು ಅವರ ಇಲಾಖೆಯದ್ದೆ target. ಬೇರೆ ಯಾವುದು target ಇಲ್ಲ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಅದ್ಭುತವಾಗಿ ಮಾತನಾಡಿದರು. ಮಾನ್ಯ ರಾಜ್ಯಪಾಲರ ಭಾಷಣದ ಪ್ಯಾರ 3 ರಲ್ಲಿ "ನನ್ನ ಸರ್ಕಾರವು ತೀವ್ರವಾಗಿ ಹಾನಿಗೊಳಗಾದ ಮನೆಗಳ ಪುನರ್ ನಿರ್ಮಾಣಕ್ಕಾಗಿ ತಲಾ 5 ಲಕ್ಷ ರೂಪಾಯಿಗಳನ್ನು ಹಾಗೂ ದುರಸ್ತಿಗಾಗಿ ತಲಾ 3 ಲಕ್ಷ ರೂಪಾಯಿಗಳನ್ನು ಹಾಗೂ ಭಾಗಶಃ ಹಾನಿಗೊಳಗಾದ ಮನೆಗಳಿಗೆ ತಲಾ 50,000/- ರೂಪಾಯಿಗಳ ಹಣಕಾಸು ನೆರವು ನೀಡಿದೆ" ಎಂದು ಹೇಳಿದೆ. ಇದು ಸುಳ್ಳು ಎನ್ನುತ್ತೀರೋ ಅಥವಾ ಸತ್ಯ ಎನ್ನತ್ತೀರೋ? 5 ಲಕ್ಷ ರೂಪಾಯಿಗಳನ್ನು ಯಾರಿಗೆ ಕೊಟ್ಟಿದ್ದಾರೆ? ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟು ಅಲ್ಲಿಗೆ ಬಿಟ್ಟು ಬಿಟ್ಟಿದ್ದಾರೆ. ನಮ್ಮ ಸ್ನೇಹಿತರು ಈ ಹಿಂದೆ 5 ಲಕ್ಷ ರೂಪಾಯಿಗಳನ್ನು ಯಾವ ಸರ್ಕಾರವು ಕೊಟ್ಟಿಲ್ಲವೆಂದು ಹೇಳಿದ್ದಾರೆ. ಈ ಹಿಂದೆ ನಮ್ಮ ಸಮ್ಮಿಶ್ರ ಸರ್ಕಾರ ಇದ್ದಾಗ, ಕೊಡಗಿನಲ್ಲಿ ಬಾರಿ ಮಳೆಯಾದಾಗ ಒಂದು ಮನೆಗೆ ರೂ.9,85,000/-ಗಳನ್ನು ಕೊಟ್ಟಿದೆ. ಇದಕ್ಕೆ ಸಾಕ್ಷಿಯಾಗಿ ಸದನದಲ್ಲಿ ನಮ್ಮ ಸಹೋದರಿ (ಶ್ರೀಮತಿ ಎಸ್.ವೀಣಾ ಅಚ್ಚಯ್ಯ) ಇದ್ದಾರೆ. Am I right madam? ಆದರೆ, ಅವರು ಇಷ್ಟು ಹಣ ಯಾರು ಕೊಟ್ಟಿಲ್ಲವೆಂದು ಹೇಳಿದ್ದಾರೆ. ಇಲ್ಲಿ ಬಹಳಷ್ಟು ತಾರತಮ್ಯವಾಗಿದೆ. ನಾನು ನಮ್ಮ ಜಿಲ್ಲೆಗೆ ಅಥವಾ ಬೇರೆ ಜಿಲ್ಲೆಗೆ ಹೋದಾಗ ನಮ್ಮ ಮನೆಗಳು 'ಎ' ಮತ್ತು 'ಬಿ' ಕ್ಯಾಟಗರಿಯಲ್ಲಿ ಬರುತ್ತವೆ. ಆದರೆ, ನಮ್ಮ ಮನೆಗಳನ್ನು 'ಸಿ' ಕ್ಯಾಟಗರಿಯಲ್ಲಿ ಹಾಕಿದ್ದಾರೆ. 'ಸಿ' ಕ್ಯಾಟಗರಿಯಲ್ಲಿ ಇದ್ದವರು 'ಎ' ಮತ್ತು 'ಬಿ' ಕ್ಯಾಟಗರಿಗೆ ಬಂದಿದ್ದಾರೆ. 'ಸಿ' ಕ್ಯಾಟಗರಿ ಎಂದರೆ, ಅದಕ್ಕೆ ಹಣ ಕಡಿಮೆ ಇರುತ್ತದೆ. ಈ ತಾರತಮ್ಯ ಏಕೆ? ಇದರಲ್ಲೂ ರಾಜಕಾರಣವೇ? ನಿಜವಾಗಲೂ ಯಾರು ಮನೆಯನ್ನು ಕಳೆದುಕೊಂಡಿರುವವರು ಇದ್ದಾರೆ, ಅವರು ಇನ್ನೂ ರಸ್ತೆಯಲ್ಲಿದ್ದಾರೆ. ಇನ್ನೂ ಶಾಲೆಗಳು ಪ್ರಾರಂಭವಾಗಿಲ್ಲ. ಹಾಗಾಗಿ, ಜನರು ಬಹಳ ಶೋಚನಿಯವಾದಂತಹ ಸ್ಥಿತಿಯಲ್ಲಿದ್ದಾರೆ. 'ಎ' ಕ್ಯಾಟಗರಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದರೆ, ಸಂಪೂರ್ಣವಾಗಿ ನಾಶವಾದ ಮನೆ. 'ಬಿ' ಕ್ಯಾಟಗರಿ ಎಂದರೆ, ಅದಕ್ಕಿಂತ ಸ್ವಲ್ಪ ಕಡಿಮೆ. ಅವರಿಗೆ 5 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ ಎಂದ ತಕ್ಷಣ 'ಸಿ' ಕ್ಯಾಟಗರಿಯಲ್ಲಿದ್ದವರನ್ನು 'ಎ' ಮತ್ತು 'ಬಿ' ಕ್ಯಾಟಗರಿಗೆ ಹಾಕಿದ್ದಾರೆ. ಇವರಿಗೆ ಬೇಕಾದವರು ಯಾರಾದರೂ 'ಸಿ' ಕ್ಯಾಟಗರಿಯಲ್ಲಿದ್ದರೆ, ಅವರನ್ನು 'ಎ' ಮತ್ತು 'ಬಿ' ಕ್ಯಾಟಗರಿಗೆ ಹಾಕಿದ್ದಾರೆ. ನಮ್ಮವರು ಯಾರಾದರೂ 'ಎ' ಮತ್ತು 'ಬಿ' ಕ್ಯಾಟಗರಿಯಲ್ಲಿದ್ದವರನ್ನು 'ಸಿ' ಕ್ಯಾಟಗರಿಗೆ ಹಾಕಿದ್ದಾರೆ. ಇದನ್ನು ದೇವರಾದರೂ ಮೆಚ್ಚಬೇಕು ಅಲ್ಲವೇ, ನಾಳೆ ದಿವಸ ದೇವರಲ್ಲಿಗೆ ಹೋದಾಗ ಏನೇನು ಮಾಡಿ ಬಂದಪ್ಪಾ ಎಂದು ಕೇಳಿದರೆ. 'ಎ' ಕ್ಯಾಟಗರಿ ಹೋಗಿ 'ಸಿ' ಕ್ಯಾಟಗರಿ ಮಾಡಿದೆ, 'ಸಿ' ಕ್ಯಾಟಗರಿ ಹೋಗಿ 'ಎ' ಕ್ಯಾಟಗರಿ ಮಾಡಿದೆ ಎಂದು ಹೇಳಿದರೆ ಯಾವ ರೀತಿ ಆಗುತ್ತದೆ?

ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಸರ್ಕಾರದ ಪ್ರತಿನಿಧಿ, ಅವರು ನಾನು ಹೇಳಿದ್ದನ್ನು ಮಾನ್ಯ ಮುಖ್ಯ ಮಂತ್ರಿಯವರಿಗೆ ತಿಳಿಸಲಿ. ನಾನು ಆಗಲೇ ಒಂದು ಮಾತನ್ನು ಹೇಳಿದ್ದೇನೆ. ನಾನು ಭ್ರಷ್ಟಾಚಾರ ಮುಕ್ತವಾದ ಸರ್ಕಾರ ಎಂಬ ಮಾತನ್ನು ಏಕೆ ಹೇಳಿದ್ದೇನೆಂದರೆ, ಆಮೇಲೆ ಇವೆಲ್ಲದಕ್ಕೂ ಮುಖ್ಯವಾಗಿ ಆರ್.ಡಿ.ಪಿ.ಆರ್ ಇದರ ಬಗ್ಗೆ ಮಾತನಾಡಿದ್ದೇನೆ. ಮತ್ತೊಮ್ಮೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಯಾರ್ಯಾರಿಗೆ ಹಣ ಹೋಗಿದೆ. ಎಲ್ಲಿ flood ನಿಂದ affect ಆಗಿದೆ. ಅಲ್ಲಿ ಇದ್ದವರಿಗೆ ವಿಧಾನಸಭಾ ಮತ್ತು ವಿಧಾನ ಪರಿಷತ್ತು ಕ್ಷೇತ್ರ ಎಂದು locate ಮಾಡಿ ಅವರ ಹೆಸರಿಗೆ ಹಣ ಕೊಡುವಂತಹ ಒಂದು ಪದ್ಧತಿ ಇತ್ತು. ಅದನ್ನು ಬಿಟ್ಟು ಬೇಕಾಬಿಟ್ಟಿಯಾಗಿ ಯಾರಿಗೇ ಬೇಕೋ ಅವರಿಗೆ ಬೇಕಾಬಿಟ್ಟಿಯಾಗಿ ಕೊಟ್ಟಿದ್ದಾರೆ. ನಾನು ಏಕೆ ಈ ಮಾತನ್ನು ಏಕೆ ಹೇಳುತ್ತಿದ್ದೇನೆ. ಹಣ ಸರಿಯಾಗಿ ಸದ್ವಿನಿಯೋಗವಾಗಲಿ. ಆ ಹಣ ಸರಿಯಾಗಿ ಸದ್ವಿನಿಯೋಗವಾಗುವುದಿಲ್ಲ. ನಿನಗೆ 200 ಲಕ್ಷ, ಇನ್ನೊಬ್ಬರಿಗೆ 400 ಲಕ್ಷ, ಮತ್ತೊಬ್ಬರಿಗೆ 500 ಲಕ್ಷ ಎಂದು ಕೊಟ್ಟು ಬಿಡುವುದು, ಅವರು ವಿಧಾನ ಪರಿಷತ್ತಿನ ಸದಸ್ಯರು ಅಲ್ಲ. ವಿಧಾನಸಭೆಯ ಸದಸ್ಯರು ಅಲ್ಲ. ಯಾರ್ಯಾರು ಕೇಳುತ್ತಾರೆ ಅವರಿಗೆ ಕೊಟ್ಟು ಬಿಡುವುದು, ಇದರ ಬಗ್ಗೆ ಈಗಾಗಲೇ ಚರ್ಚೆಯಾಗಿರುವುದರಿಂದ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(204)09-03-2020(11-50)ಎಂವಿ-ಎಕೆ**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ನಾನು ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದಾಗ, ಅವರು 24 ಗಂಟೆಯೊಳಗೆ ನನಗೆ ಉತ್ತರ ನೀಡಿದರು ಮತ್ತು ಆರ್.ಡಿ.ಪಿ.ಆರ್.ನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಆತೀಕ್ ರವರಿಗೆ ಇದರ ಬಗ್ಗೆ ವಿಚಾರಣೆ ಮಾಡುವಂತೆ ತಿಳಿಸಿದರು. ಅವರು ಅದರ ಬಗ್ಗೆ ಏನು ಮಾಡಿದ್ದಾರೆಂದು ಇಲ್ಲಿಯವರೆಗೂ ಸಹ ತಿಳಿಸಿಲ್ಲ. ಆದುದರಿಂದ ಮಾನ್ಯ ಸಭಾನಾಯಕರು, ಇಲ್ಲಿಗೆ ಮಾನ್ಯ ಮುಖ್ಯಮಂತ್ರಿಗಳು ಬಂದಾಗ ನಮಗೆ ಉತ್ತರ ಕೊಡಿಸಬೇಕು. ಭ್ರಷ್ಟಾಚಾರ ಮುಕ್ತ ಆಡಳಿತ ಕೊಡುತ್ತೇವೆಂದು ಏಕೆ ಹೇಳಿದ್ದಾರೆಂದರೆ, ನಮ್ಮಲ್ಲಿ GLBC (Ghataprabha Left Bank Canal) ಸುಮಾರು 70 ಕಿಲೋಮೀಟರ್, ಆಮೇಲೆ Main Canal ಮತ್ತು Branch Canal ಇವುಗಳಿಗೆಲ್ಲಾ ಸುಮಾರು 900 ಕೋಟಿ ರೂಪಾಯಿಗಳಲ್ಲಿ Lining Work ಗಳನ್ನು ತೆಗೆದುಕೊಂಡಿದ್ದಾರೆ. ನಮ್ಮ ಬೀಳಗಿ ತಾಲ್ಲೂಕು ಕೊನೆಯಲ್ಲಿ ಇದೆ. We are tail-enders. ಬೆಳಗಾವಿ ಜಿಲ್ಲೆಯವರು ನೀರು ಬಿಟ್ಟರೆ, ಅದು ನಮಗೆ ಬರಬೇಕು. ಈಗ ಏನು Lining Work ಮಾಡಿದ್ದಾರೆ ಅದಕ್ಕೆ ನೀರು ಬಿಟ್ಟರೆ, ಅಲ್ಲಿನ ಕಾಂಕ್ರೀಟ್ ತಳ್ಳಿಕೊಂಡು ಹೋಗಿದೆ. ಅದಕ್ಕೆ ಒಂದು accountability ಇರಬೇಕಲ್ಲವೆ? ನಾನು ಈ ಮಾತನ್ನು ಏಕೆ ಹೇಳುತ್ತೇನೆಂದರೆ, ಇಲ್ಲಿ ಏನು ಹಣ ವಿನಿಯೋಗವಾಗಿದೆ, ಈಗ ಸಾರ್ವಜನಿಕ ಕಟ್ಟಡಗಳು, ಸಾರ್ವಜನಿಕ ರಸ್ತೆಗಳು, ಸೇತುವೆಗಳು, ಅಂಗನವಾಡಿ ಕೇಂದ್ರಗಳು, ಶಾಲಾ ಕಟ್ಟಡಗಳು ನಾಶವಾಗಿವೆ. ಅವುಗಳಿಗೆ ಬಿಡುಗಡೆ ಮಾಡಿರುವ ಹಣ ಸದ್ವಿನಿಯೋಗವಾಗಬೇಕು. ಈಗ ಅಂದಾಜು ಮಾಡುವಾಗ ನನ್ನ ಸಲಹೆ ಏನೆಂದರೆ, ನಿಮ್ಮ ಸರ್ಕಾರವಿರಲಿ, ನಮ್ಮ ಸರ್ಕಾರವಿರಲಿ ಅಂದಾಜು ಮಾಡುವ ಮುಂಚೆ ಈಗಿನ ಅಂದಾಜಿನ ಜೊತೆಗೆ ಅಧಿಕಾರೇತರರಿಗೆ ಇಷ್ಟು, ಅಧಿಕಾರಿಗಳಿಗೆ ಇಷ್ಟು ಮತ್ತು miscellaneous ಗೆ ಇಷ್ಟು ಎಂದು ಅದರಲ್ಲಿ ಉಲ್ಲೇಖ ಮಾಡಿದರೆ, ಅದು ಮುಗಿದು ಹೋಗುತ್ತದೆ. ನಾನು ಈ ಹಿಂದೆ ಒಂದು ಬಾರಿ ಹೇಳಿರುವಂತೆ, ಈಗ ನಮ್ಮ ಜೊತೆ ಸದಸ್ಯರಾದ ಮಾನ್ಯ ನಿರಾಣಿ ಹಣಮಂತ ರುದ್ರಪ್ಪನವರು ಇಲ್ಲೇ ಇದ್ದಾರೆ. ನಮ್ಮ ಬೀಳಗಿ ತಾಲ್ಲೂಕಿನಲ್ಲಿ ಅನಗಾಡಿ ಮತ್ತು ಕೊರ್ತಿ ಕೊಲ್ಹಾರ್ ಸೇತುವೆಗಳಿವೆ. ಘಟಪ್ರಭ ನದಿ ಒಂದು ಕಡೆ ಮತ್ತು ಕೃಷ್ಣಾ ನದಿ ಮತ್ತೊಂದು ಕಡೆ ಇದೆ. ಘಟಪ್ರಭ ಮತ್ತು ಕೃಷ್ಣಾ ನದಿಗಳ ನಡುವೆ ಇರುವಂತಹ ಪವಿತ್ರವಾದಂತಹ ತಾಲ್ಲೂಕು ನಮ್ಮ ಬೀಳಗಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾಲ್ಲೂಕು. ಆಗ ಅಲ್ಲಿ ನಮ್ಮನ್ನು ಆಳುವಂತಹ ಬ್ರಿಟಿಷರು ಇದ್ದಾಗ. ಆಗ ನಾವು ಗುಲಾಮಗಿರಿ ವ್ಯವಸ್ಥೆಯಲ್ಲಿ ಇದ್ದೆವು. ಈ ಎರಡೂ ಸೇತುವೆಗಳನ್ನು ಅವರು ಕಟ್ಟಿಸಿದ್ದಾರೆ.

ಮಾನ್ಯ ಸಭಾಪತಿಯವರೇ, ತಾವು ಆ ಕಡೆಗೆ ಬಂದಾಗ ಅದನ್ನು ತಮಗೆ ತೋರಿಸುತ್ತೇನೆ. ಆ ಎರಡೂ ಸೇತುವೆಗಳಲ್ಲಿ ಒಂದು ಚಿಪ್‌ಗಲ್ಲು ಕೂಡ ಮುಕ್ಕಾಗಿಲ್ಲ. ಆ ರೀತಿ ಏನಾದರೂ ಆಗಿದೆಯೇ ಎಂದು ಸದಸ್ಯರಾದ ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪನವರು ಹೇಳಲಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಆ ರೀತಿ ಏನೂ ಆಗಿಲ್ಲ. ಆ ಎರಡೂ ಸೇತುವೆಗಳು ಇವತ್ತಿನವರೆಗೂ ಸಹ ಅಚ್ಚುಕಟ್ಟಾಗಿವೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಮತ್ತು ಸದಸ್ಯರಾದ ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪನವರು ಒಂದೇ ತಾಲ್ಲೂಕಿನವರು. ನಮಗೆ ಒಂದು ಕಡೆ ಕೃಷ್ಣಾ ನದಿ ಮತ್ತೊಂದು ಕಡೆ ಘಟಪ್ರಭ ನದಿ ಇದೆ. ಈ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕಿಂತ ಪೂರ್ವದಲ್ಲಿ ಕಟ್ಟಿಸಿದಂತಹ ಸೇತುವೆಗಳಿವು. ಪ್ರವಾಹದ ಸಂದರ್ಭದಲ್ಲಿ forcibly ಆ ಸೇತುವೆಗಳಿಗೆ ನೀರು ಹೊಡೆಯುತ್ತದೆ. ಆ ಎರಡೂ ಸೇತುವೆಗಳು ಮುಳುಗಿ ಅದರ ಮೇಲೆ 50 ರಿಂದ 60 ಅಡಿಗಳಷ್ಟು ನೀರು ನಿಲ್ಲುತ್ತದೆ. ಅದು open ಆದ್ದಾಗ ನಾನು ಮತ್ತು ಮಾನ್ಯ ನಿರಾಣಿಯವರು ಸೇತುವೆಯನ್ನು ತಮಗೆ ತೋರಿಸುತ್ತೇವೆ. ಒಂದು ಚಿಪ್‌ಗಲ್ಲುಗಳಿಗೆ ಅವರು ಗಣಿಕೆ ಗಚ್ಚನೆ ಮಾಡಿದ್ದಾರೆ. ಆ ಗಚ್ಚನೆಯ ಒಂದು ಗಣಿಕೆ ಕೂಡ ಹೋಗಿಲ್ಲ. ಆದರೆ, ಈಗಿನ ಅನಗವಾಡಿ ಮತ್ತು ಕೊರ್ತಿ ಕೊಲ್ಹಾರ್ ಸೇತುವೆ ಮಾಡಿದಾಗ ನಮ್ಮದೇ ಸರ್ಕಾರವಿತ್ತು. ಆಗ ಮಾನ್ಯ ಹೆಚ್.ಕೆ.ಪಾಟೀಲ್‌ರವರು ಜಲಸಂಪನ್ಮೂಲ ಸಚಿವರಾಗಿದ್ದರು. ಉದ್ಘಾಟನಾ ಭಾಷಣದಲ್ಲಿ ಕಳಪೆ ಕಾಮಗಾರಿ ಆಗಿದೆ, ಇದನ್ನು ಸಿ.ಓ.ಡಿ. ತನಿಖೆ ಮಾಡಿ ಎಂದು ಎಂದು ಮಾನ್ಯ ಎಸ್.ಎಂ.ಕೃಷ್ಣರವರು, ಮುಖ್ಯಮಂತ್ರಿಗಳು ಅವರ ಮುಂದೆ ಇದನ್ನು ಹೇಳಿದೆ. ಆಗ ಸಿ.ಓ.ಡಿ. ತನಿಖೆಗೆ ಆದೇಶವಾಯಿತು. ಅದು ಈಗಿನ ಸಚಿವರಾಗಿರುವಂತಹ ಮಾನ್ಯ ಸಿ.ಸಿ.ಪಾಟೀಲ್‌ರವರಿಗೂ ಸಹ ಗೊತ್ತಿದೆ. ಸಿ.ಓ.ಡಿ. ತನಿಖೆಯಾಯಿತು ಆಗ ಸುಮಾರು ಎರಡು ಟ್ರಕ್ ಲೋಡ್‌ಗಳಷ್ಟು ಪೇಪರ್‌ಗಳನ್ನು ತೆಗೆದುಕೊಂಡು ಹೋದರು. ಆ ಸಂದರ್ಭದಲ್ಲಿ ನನ್ನನ್ನು ಸಹ ಕರೆದು, ಅಲ್ಲಿ ಏನು ನಡೆದಿದೆ ಹೇಳಿ ಎಂದು ಕೇಳಿದರು. ಆದರೆ, ಅದು close ಆಗಿದೆ. ಈಗ ಹಾವು ಬಡಿದು ಹದ್ದಿಗೆ ಹಾಕಿದ ಹಾಗೆ ಮಾಡಿದರು. ಈ ವಿಷಯದ ಬಗ್ಗೆ ನಾನು ವಿಸ್ತೃತವಾಗಿ ಹೇಳುವುದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗುವುದಿಲ್ಲ. ಅದರಲ್ಲಿ ಏನೂ ಇಲ್ಲ. Its outcome was a big zero. ಅದಕ್ಕೆ ನಾನು ಆ GLBC ಬಗ್ಗೆ ಹೇಳಿದೆ. ನಮ್ಮ ಸರ್ಕಾರವಿದ್ದಾಗ ಸುಮಾರು 14,800/- ರೂಪಾಯಿಗಳಿಗೆ ಲ್ಯಾಪ್‌ಟಾಪ್ ಅನ್ನು ನೀಡಿದ್ದೆವು. ಆದರೆ, ಈಗ ಸುಮಾರು 28,000/- ರೂಪಾಯಿಗಳಿಗೆ ಲ್ಯಾಪ್‌ಟಾಪ್ ಅನ್ನು ನೀಡಿದ್ದಾರೆ. ಆ ಲ್ಯಾಪ್‌ಟಾಪ್‌ಗಳ configuration, application ಗಳು ಕೆಲಸವನ್ನೇ ಮಾಡುವುದಿಲ್ಲ ಮತ್ತು ಅವುಗಳು ಬಹಳ ನಿಧಾನಗತಿಯಲ್ಲಿವೆ. ಸದಸ್ಯರಾದ ಮಾನ್ಯ ಎಸ್.ಎಲ್.ಭೋಜೇಗೌಡರು ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದರು. ಈ ಹಿಂದೆ 14,800/- ರೂಪಾಯಿಗಳಿಗೆ ಲ್ಯಾಪ್‌ಟಾಪ್ ಎಂದಾಗ ಇದೇ ಸದನದಲ್ಲಿ ಬಹಳ ಸುದೀರ್ಘವಾದ ಚರ್ಚೆಯಾಯಿತು.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಒಂದು ನಿಮಿಷ ಮಾತನಾಡುತ್ತೇನೆ. ಎರಡು ವರ್ಷದ ಹಿಂದೆ ಇದೇ ವಿಚಾರವಾಗಿ ಬೆಳಗಾವಿ ಅಧಿವೇಶನದಲ್ಲಿ ಸದಸ್ಯರಾದ ಸನ್ಮಾನ್ಯ ರಘುನಾಥ ರಾವ್ ಮಲ್ಕಾಪೂರೆ ಸಾಹೇಬರು ಈ ಕಂಪ್ಯೂಟರ್ ವಿಚಾರಕ್ಕೆ ಸಂಬಂಧಪಟ್ಟಂತೆ ದೊಡ್ಡ ಆರೋಪವನ್ನು ಮಾಡಿದ್ದರು. ಆಗ ಒಂದು ಕಂಪ್ಯೂಟರ್ ಅನ್ನು ಸುಮಾರು 14,000/- ರೂಪಾಯಿಗಳಿಗೆ ಖರೀದಿ ಮಾಡುವುದಕ್ಕೆ ಸರ್ಕಾರ ತೀರ್ಮಾನವನ್ನು ತೆಗೆದುಕೊಂಡಿತ್ತು. ಸುಮಾರು 2,227 ಕೋಟಿ ಹಣವನ್ನು ಬಜೆಟ್‌ನಲ್ಲಿ ಹಂಚಿಕೆ ಮಾಡಿ. ಪದವಿ ಮಹಾವಿದ್ಯಾಲಯದ ಎಲ್ಲಾ ವಿದ್ಯಾರ್ಥಿಗಳಿಗೂ ಕಂಪ್ಯೂಟರ್ ಅನ್ನು ಕೊಡಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡು, ಅವುಗಳನ್ನು 14,000/- ರೂಪಾಯಿಗಳಿಗೆ ಎಂದು ತೀರ್ಮಾನ ಮಾಡಿದಾಗ, ಅಂದಿನ ಉನ್ನತ ಶಿಕ್ಷಣ ಸಚಿವರು ಸುಮಾರು 10,000/- ರೂಪಾಯಿಗಳ kickback ತೆಗೆದುಕೊಂಡಿದ್ದಾರೆಂದು ನೇರವಾದ ಆರೋಪವನ್ನು ಮಾಡಿದ್ದರು. ಆ ಸಮಿತಿಯಲ್ಲಿ ಮಾನ್ಯ ಅರುಣ ಶಹಾಪುರ ಸಾಹೇಬರು ಸಹ ಇದ್ದರು. ಆಶ್ಚರ್ಯವೆಂದರೆ ಅದಕ್ಕೆ ಇನ್ನೂ ಟೆಂಡರ್ ಆಗಿರಲಿಲ್ಲ. ಆಯುಕ್ತರು configuration ಬಗ್ಗೆ ಮೀಟಿಂಗ್ ಮಾಡಿ, ಅದರ ಅಂತಿಮ ತೀರ್ಮಾನಕ್ಕೆ ಬಂದಿದ್ದರೇ ವಿನಃ the tender notification had not been issued at all. ಇಂತಹ ಸಂದರ್ಭಗಳಲ್ಲಿ ಆರೋಪಗಳು ಬಂದಿದ್ದವು. ಈಗ ಆಡಳಿತ ಪಕ್ಷದ ಸನ್ಮಾನ್ಯ ಮಿತ್ರರು 1,10,000 ಕಂಪ್ಯೂಟರ್‌ಗಳನ್ನು ಕೊಟ್ಟಿದ್ದಾರೆ. ಒಂದೂವರೆ ವರ್ಷದ ಅವಧಿಯಲ್ಲಿ ಸುಮಾರು 28,000/- ರೂಪಾಯಿಗಳಾಗಿದೆ. ಆವತ್ತಿನ ದಿವಸ 14,000/- ರೂಪಾಯಿಗಳು ಎಂದು ಹೇಳಿದರೆ, ಇವತ್ತು ಸುಮಾರು 28,000/- ರೂಪಾಯಿಗಳಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ಲ್ಯಾಪ್‌ಟಾಪ್‌ನಂತೆ, 1,10,000 ಲ್ಯಾಪ್‌ಟಾಪ್‌ಗಳನ್ನು ಖರೀದಿ ಮಾಡಿ, ಪದವಿ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗೆ ನೀಡಿದ್ದಾರೆ. It's subject to correction. ಮಾನ್ಯ ಅರುಣ ಶಹಾಪುರರವರೇ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ,...

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಅರುಣ ಶಹಾಪುರರವರು ಅದನ್ನು ಉತ್ತರದಲ್ಲಿ clarify ಮಾಡಲಿ. ನಾನು just casual reference ಮಾಡಿದೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಅವರು ಸಾಕಷ್ಟು ಆರಾಮವಾಗಿ ಮಾತನಾಡುತ್ತಿದ್ದಾರೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಬರುವವರೆಗೂ ಮಾತನಾಡಲಿ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ನಾನು ಇದನ್ನು ಆರೋಪ ಮಾಡುತ್ತಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಸಂಪೂರ್ಣವಾದ ವಿಚಾರ ಹಿಂದಿನ ವಾರದ ಪೇಪರ್‌ನಲ್ಲಿ ಬಂದಿದೆ. ಇಲ್ಲಿ ನಾನು ಅವರ ಮೇಲೆ, ಇವರ ಮೇಲೆ ಆರೋಪ ಮಾಡುವುದಿಲ್ಲ. ಒಂದೂವರೆ ವರ್ಷದ ಹಿಂದೆ ಸುಮಾರು 14,000/– ರೂಪಾಯಿ ಇದ್ದದ್ದು, ಈಗ ಸುಮಾರು 28,000/– ರೂಪಾಯಿ ಆಗಿದೆ. ವಿದ್ಯಾರ್ಥಿಗಳಿಗೆ ಏನು configuration ಅನ್ನು ಕೊಡಬೇಕಾಗಿತ್ತು. ಅದನ್ನು ಕೊಡದೇ ಇರುವುದರಿಂದ ಅದು workout ಆಗುತ್ತಿಲ್ಲ. ಈಗ ಕೊಟ್ಟಿರುವುದು ಸಹ ಉಪಯೋಗವಾಗುತ್ತಿಲ್ಲ ಎನ್ನುವಂಥದ್ದು ಪೇಪರ್‌ನಲ್ಲಿ ಬಂದಿದೆ. ಆ ಪೇಪರ್ ಅನ್ನು ಉಲ್ಲೇಖ ಮಾಡಿ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅದು ಕಂಪ್ಯೂಟರ್ ಎಂದು ಆಗಬಾರದು. ಅದು ಲ್ಯಾಪ್‌ಟಾಪ್ ಎಂದು ಆಗಬೇಕು. ಏಕೆಂದರೆ, ಅದು ಕಡಕ್ಕೆ ಹೋಗುತ್ತಿದೆ. ಅದನ್ನು ಲ್ಯಾಪ್‌ಟಾಪ್ ಎಂದು ಮಾಡಲಿ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, it is 'laptop'. I am sorry. I thank the minister for correction. ಮಾನ್ಯ ಸಚಿವರಾದ ಸಿ.ಸಿ.ಪಾಟೀಲ್‌ರವರಿಗೆ ಧನ್ಯವಾದಗಳು. ಅದೇರೀತಿ ಸದಸ್ಯರಾದ ಮಾನ್ಯ ಕೆ.ಟಿ.ಶ್ರೀಕಂಠೇಗೌಡರಿಗೂ ಸಹ ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ವಿರೋಧ ಪಕ್ಷದ ನಾಯಕರು ಡ್ಯಾಮ್‌ನ work ಬಗ್ಗೆ ಹೇಳುವಾಗ, ಸದಸ್ಯರಾದ ಮಾನ್ಯ ಬಸವರಾಜ ಹೊರಟ್ಟಿಯವರು ಒಂದು ಸಲಹೆಯನ್ನು ನೀಡಿದ್ದಾರೆ. ಆಗಿನ ಕಾಲದ ವಿಚಾರಗಳೇ ಬೇರೆಯಿವೆ. ಆಗ ಅವರುಗಳು ಸ್ವಾತಂತ್ರ್ಯ ಹೋರಾಟಗಾರರ ಕೊನೆಯ ಕೊಂಡಿಯಾಗಿ ಬಂದಿರತಕ್ಕಂಥವರು ತಮ್ಮದೇ ಆದಂತಹ ಒಂದು ಕಾಳಜಿ ಇಟ್ಟುಕೊಂಡು, ಆಸ್ತಿಗಳನ್ನು ದಾನ ಮಾಡಿ, ಡ್ಯಾಮ್‌ಗಳನ್ನು ಕಟ್ಟುವುದಕ್ಕೆ ಮತ್ತು ರಸ್ತೆಗಳನ್ನು ಮಾಡುವುದಕ್ಕೆ, ಈ ರಾಷ್ಟ್ರದ ಪ್ರತಿಯೊಂದು ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ಈ ದೇಶಕ್ಕಾಗಿ ದುಡಿಯಬೇಕು, ಇದಕ್ಕೆ ತಮ್ಮ ತನು, ಮನ ಸೇವೆ ಇರಬೇಕು, ಮುಂದಿನ ಜನಾಂಗಕ್ಕೆ ನನ್ನದೇ ದುಡಿಮೆ ಮತ್ತು ಗುರುತು ಇರಬೇಕು ಎನ್ನುವ ಉದ್ದೇಶ ಇಟ್ಟುಕೊಂಡಿದ್ದರು. It's really shameful to talk about these issues. I want to tell you only the truth. ನಾನು ಪ್ರತಿಯೊಂದು ಕಮಿಟಿಯಲ್ಲಿ ನೋಡುತ್ತಿದ್ದೇನೆ, ಭ್ರಷ್ಟಾಚಾರ, ಭ್ರಷ್ಟಾಚಾರ, ಭ್ರಷ್ಟಾಚಾರ. It's not away from any political party right from the Union Government to the State Government. ಈಗ ಯಾವುದೇ ಪಕ್ಷವನ್ನು ತೆಗೆದುಕೊಂಡರೂ, we have all become highly corrupt fellows. At the same time, we have indulged with the officers to make corruption. ಪ್ರತಿಯೊಂದು ಕೆಲಸದಲ್ಲೂ 10, 15 ಮತ್ತು 20 ಪರ್ಸೆಂಟ್ ಕಮಿಷನ್ ರಾಜಕಾರಣಿಗಳಾಗಿದ್ದೇವೆ. ಇದರಿಂದ ನಮಗೆ ನಾಚಿಕೆಯಾಗಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ಇದನ್ನು ಉಲ್ಲೇಖ ಮಾಡಿ ಹೇಳಿದರು. ಇದಕ್ಕೆ ನಾನು ಸಹಮತ ವ್ಯಕ್ತಪಡಿಸುತ್ತೇನೆ. ಇಂತಹ ವಿಚಾರಗಳನ್ನು ಸಾಕಷ್ಟು ಸಲ ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ರಾಜೀವ್ ಗಾಂಧಿ ಮತ್ತು ದಿವಂಗತ ಅಟಲ್ ಬಿಹಾರಿ ವಾಜಪೇಯಿಯವರು ಹೇಳಿದ್ದಾರೆ. ಈಗ ಒಂದು ಕೋಟಿ ರೂಪಾಯಿ ಹಣ ಬಿಡುಗಡೆಯಾದರೆ, ಕೆಳಹಂತಕ್ಕೆ ಕೇವಲ 22 ಸಾವಿರ ರೂಪಾಯಿ ಬಂದು ಮುಟ್ಟುತ್ತಿದೆ ಎಂದರೆ, ನಾಚಿಕೆಯಾಗಬೇಕು. ಅದಕ್ಕೋಸ್ಕರ, ಇದು ಗಮನದಲ್ಲಿ ಇರಲಿ ಎನ್ನುವಂತಹ ಮಾತನ್ನು ಹೇಳುತ್ತೇನೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಈ ಹಿಂದೆ ಲ್ಯಾಪ್‌ಟಾಪ್‌ಗೆ ಸಂಬಂಧಿಸಿದಂತೆ ಸದನ ಸಮಿತಿ ರಚನೆಯಾಗಿದ್ದು, ನಾವು ಸದಸ್ಯರುಗಳೆಲ್ಲರೂ ಸಹ ಅಲ್ಲಿ ಇರುವ ವಿಷಯವನ್ನು ಮಾನ್ಯ ಸದಸ್ಯರು ಸಾಂದರ್ಭಿಕವಾಗಿ ಪ್ರಸ್ತಾಪಿಸಿದ್ದಾರೆ. ತಪ್ಪು ಮಾಹಿತಿ ಹೋಗಬಾರದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುವ ದೃಷ್ಟಿಯಿಂದ ಒಂದು clarify ಮಾಡುವುದಕ್ಕೆ ಇಷ್ಟಪಡುತ್ತೇನೆ. ಆ ಸಂದರ್ಭದಲ್ಲಿ ಕಾಲೇಜು ಶಿಕ್ಷಣ ಇಲಾಖೆಯ, ಆಯುಕ್ತರು, TAP Committee ಯಲ್ಲಿ ಹಲವಾರು ವಿಷಯಗಳು ತೀರ್ಮಾನವಾಗಿವೆ ಎಂದು. ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದಿರುತ್ತಾರೆ. ಇದು 14,000/- ರೂಪಾಯಿಗಳಿಗೆ ಸಿಕ್ಕಿದೆ ಎಂದು ಹೇಳಿದ್ದಾರೆ. ಆದರೆ, ಅಲ್ಲಿ ಟೆಂಡರ್ ಪ್ರಕ್ರಿಯೆ ಆಗಿಲ್ಲ. ಅದಕ್ಕೆ ಎಷ್ಟು ಬೆಲೆ ಎಂಬುದು ಆಗಿಲ್ಲ. ಟೆಕ್ನಿಕಲ್ ಬಿಡ್ ಆಗಿಲ್ಲ. ಆದರೆ, ಇವರು ಹೇಳಿರುವ ರೀತಿಯಲ್ಲಿ 14,000/- ರೂಪಾಯಿ ಎಂಬುದು ಹೊರಗಡೆಗೆ out ಆಗಿತ್ತು.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, 'it was decided' ಎಂದು ಹೇಳಿದೆ ವಿನಃ ಬೇರೆ ಹೇಳಲಿಲ್ಲ. See this is how they are making statement.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಅವರು ಹೇಳಿದ್ದನ್ನು, ನಾನು ಬಹಳ ಸಹನೆಯಿಂದ ಕೇಳಿಸಿಕೊಂಡಿದ್ದೇನೆ. ಅವರೂ ಸಹ ಸಹನೆಯಿಂದ ಕೇಳಿಸಿಕೊಳ್ಳಲಿ. ಏಕೆಂದರೆ, ತಪ್ಪು ಮಾಹಿತಿ ಹೋಗಬಾರದು. ಈ ರೀತಿಯಾಗಿದೆ ಎಂದು TAP Committee ಯಲ್ಲಿ ಏನು specification ಮತ್ತು requirement ಬೇಕು ಎಂದು ನಿರ್ಣಯ ಮಾಡುವಾಗಲೇ ಅವ್ಯವಹಾರವಾಗಿದೆ, ಅದಕ್ಕೆ TAP Committee ಇನ್ನೊಮ್ಮೆ ಆಗಬೇಕೆಂದು ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರು ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದಿರುತ್ತಾರೆ.

**(205) 09.03.2020 12.00 LL-RN**

**ಶ್ರೀ ಅರುಣ ಶಹಾಪುರ(ಮುಂದು)**

ಆ ಹಿನ್ನೆಲೆಯಲ್ಲಿ ಸದನ ಸಮಿತಿ ರಚನೆಯಾಯಿತು. ಪ್ರತಿ ಲ್ಯಾಪ್‌ಟಾಪ್‌ನ ಬೆಲೆ 14 ಸಾವಿರ ಎಂದು ಹೇಳಿದ್ದರು. ಅದು ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗುವುದಕ್ಕೆ ಮೊದಲು ನಿಗದಿಯಾದ ಬೆಲೆಯಾಗಿತ್ತು. ಅದನ್ನು ಮಾನ್ಯ ಶರಣಪ್ಪ ಮಟ್ಟೂರುರವರು ಅಧಿಕೃತವಾಗಿ ಸದನದಲ್ಲಿ ಹೇಳಿದ್ದಾರೆ. ಈ ರೀತಿಯ ಒಂದು ಸಂಶಯದ ನೆರಳು ಅವೊತ್ತಿನ ಟೆಂಡರ್ ಪ್ರಕ್ರಿಯೆ ಮೇಲೆ ಇರುವುದಕ್ಕೆ ಅಧಿಕೃತ ದಾಖಲೆಗಳಿರುವುದರಿಂದಲೇ ಆಗಿನ ಶಿಕ್ಷಣ ಸಚಿವರು ಮನಸ್ಸು ಮಾಡಿ ಈ ಬಗ್ಗೆ ತನಿಖೆ ಆಗಲಿ ಎಂದು ಹೇಳಿದರು. ಆದರೆ, ಮಾನ್ಯ ಸದಸ್ಯರು ಒಂದು ಮಾಹಿತಿ ಹೇಳುವುದನ್ನು ಮರೆತಿದ್ದಾರೆಂದರೆ, ಮತ್ತೊಮ್ಮೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಟ್ಯಾಪ್ ಕಮಿಟಿ ಆಗಬೇಕು ಎಂದು ನಿಲುವು ತೆಗೆದುಕೊಂಡು dissent note ಹಾಕಿದ್ದೆವು. ಆದರೆ, ಬಹುಮತದ ಆಧಾರದ ಮೇರೆಗೆ TAP (Technical Approval Panel) ಕಮಿಟಿ ಅಗತ್ಯವಿಲ್ಲವೆಂಬ ನಿರ್ಧಾರದಿಂದ ಆ ವಿಷಯ ಮುಕ್ತಾಯಗೊಂಡಿರುತ್ತದೆ. ತಪ್ಪು ಮಾಹಿತಿ ಹೋಗಬಾರದೆಂಬ ಉದ್ದೇಶದಿಂದ ನಾನು ಈ ಸ್ಪಷ್ಟೀಕರಣ ನೀಡುತ್ತಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಅರುಣ ಶಹಾಪುರರವರು ಈ ವಿಷಯದ ಬಗ್ಗೆ ಸ್ಪಷ್ಟೀಕರಣ ನೀಡಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಅರುಣ ಶಹಾಪುರ ಅವರು ನಮ್ಮ ಜಿಲ್ಲೆಯವರೇ ಆಗಿದ್ದಾರೆ. ಅವರು ಇಂತಹ ವಿಷಯಗಳಲ್ಲಿ ಭಾಗಿಯಾಗದೇ, ತಪ್ಪು ಮಾಡಿದಂತಹವರು ಅವರ ಪಕ್ಷದಲ್ಲಿದ್ದರೂ ಸಹ ಅವರನ್ನು ಬಿಡಬಾರದು.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಅರುಣ ಶಹಾಪುರರವರು ಪ್ರತಿ ಲ್ಯಾಪ್‌ಟಾಪ್‌ನ ಬೆಲೆ 14 ಸಾವಿರ ರೂಪಾಯಿ ಇತ್ತು ಎಂದು ಹೇಳಿದ್ದಾರೆ. ಅದು ನಂತರ 28 ಸಾವಿರ ರೂಪಾಯಿ ಹೇಗೆ ಆಯಿತು ಎನ್ನುವ ಮಾಹಿತಿ ನೀಡಬೇಕಲ್ಲವೇ?

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಟೆಂಡರ್ ಪ್ರಕ್ರಿಯೆಗೆ ಮೊದಲು ಪ್ರತಿ ಲ್ಯಾಪ್‌ಟಾಪ್‌ನ ಬೆಲೆ 14 ಸಾವಿರ ರೂಪಾಯಿ ಎಂದು ನಿಗದಿ ಮಾಡಲಾಗಿರುತ್ತದೆ. ಪುನಃ ಆ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಆಸಕ್ತರಿದ್ದರೆ, ಟ್ಯಾಪ್ ಕಮಿಟಿಯ ಅಧ್ಯಕ್ಷರಾದ ಶ್ರೀ ಕೆ.ಸಿ. ಕೊಂಡಯ್ಯನವರು ಕೂಡ ಇದೇ ಸದನದಲ್ಲಿ ಹಾಜರಿದ್ದು, ಆ ಕಮಿಟಿ ವರದಿ ಇಟ್ಟುಕೊಂಡು ಅದರ ಮೇಲೆ ಚರ್ಚೆ ಮಾಡಬಹುದಾಗಿರುತ್ತದೆ. ನಾವು ಕೂಡ ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ.

**ಡಾ॥ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಚರ್ಚಿಸಲು ಇಬ್ಬರೂ ಮಾನ್ಯ ಸದಸ್ಯರುಗಳಿಗೆ ಬೇರೆ ಸಮಯವನ್ನು ನಿಗದಿ ಮಾಡಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಘಟಪ್ರಭಾ ಎಡದಂಡೆ ನಾಲೆಗೆ ಆಡಳಿತಾತ್ಮಕ ಅನುಮೋದನೆ ಆಗಿದ್ದು, 573 ಕೋಟಿ ರೂಪಾಯಿ, ಅದನ್ನು 833 ಕೋಟಿ ರೂಪಾಯಿಗೆ ರೀ-ಎಸ್ಟಿಮೇಟ್ ಮಾಡುತ್ತಾರೆ. ಕೊನೆಗೆ, above ಶೇಕಡ 9ರಷ್ಟು ಹಾಕಿ, ಯೋಜನೆ ಕೆಲಸ ನಿರ್ವಹಿಸಲು 903.68 ಲಕ್ಷ ರೂಪಾಯಿಗಳನ್ನು ನಿಗದಿಗೊಳಿಸಿರುತ್ತಾರೆ. 573 ಕೋಟಿ ರೂಪಾಯಿಯಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

903.68 ಲಕ್ಷ ರೂಪಾಯಿಗಳು, ಅಂದರೆ, ಎಸ್ಟಿಮೇಟ್ ಹಣದ ದುಪ್ಪಟ್ಟು ಹಣ ಆಗಿರುತ್ತದೆ. ಆಗಲೇ ನಾನು ಹೇಳಿದಂತೆ, ಹೆಚ್ಚು ಹಣವನ್ನು ಎಸ್ಟಿಮೇಟ್‌ನಲ್ಲಿ ಸೇರಿಸಿಬಿಡುತ್ತಾರೆ. ಈ ಬಗ್ಗೆ ಮಾನ್ಯ ಶರಣಪ್ಪ ಮಟ್ಟೂರುರವರು ‘ಶೇಕಡ 10ರಷ್ಟು, 20ರಷ್ಟು ರಾಜಕಾರಣ ವ್ಯವಸ್ಥೆ’ ಎಂದು ಬಹಳ ಚೆನ್ನಾಗಿ ಹೇಳಿದ್ದಾರೆ. ಇದು ಎಲ್ಲಿಗೆ ಹೋಗಿ ಮುಟ್ಟತ್ತದೆ?

**ಸಭಾಪತಿಯವರು:–** ಇದರಲ್ಲಿ ಗುತ್ತಿಗೆದಾರರ ಕಮಿಷನ್ ಎಷ್ಟು?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಅಧಿಕಾರಿಗಳೇತರರು ಇಷ್ಟು ಕಮಿಷನ್, ಅಧಿಕಾರಿಗಳದ್ದು ಇಷ್ಟು ಕಮೀಷನ್ ಎಂದು ಇರುತ್ತದೆ. ರಾಜ್ಯದಲ್ಲಿ ಬರಗಾಲ ಇದ್ದಾಗ, ನೆರೆ ಹಾವಳಿ ಇದ್ದಾಗ, ಅತಿವೃಷ್ಟಿ–ಅನಾವೃಷ್ಟಿ ಇದ್ದಾಗ ಕೆಲವು ಮಂದಿಗಳಿಗೆ ಸುಗ್ಗಿಯೋ ಸುಗ್ಗಿ. “ಏಯ್, ಒಳ್ಳೆಯದಾಯ್ತು, ಖುಷಿಯಾಯ್ತು” ಎನ್ನುವಂತಹ ಜನ ಇದ್ದಾರೆ. ಇದು ಆಗಿದ್ದು ಒಳ್ಳೆಯದಾಯ್ತು, ದುಡ್ಡು ಹೊಡೆಯುವುದಕ್ಕೆ ಇದು ಒಂದು ದಾರಿ ಎನ್ನುವಷ್ಟರ ಮಟ್ಟಿಗೆ ಜನ ಇದ್ದಾರೆ. 22 ಜಿಲ್ಲೆಯ 134 ತಾಲ್ಲೂಕುಗಳಲ್ಲಿ ಎಂದೂ ಕಂಡರಿಯದಂತಹ, ಕೇಳರಿಯದಂತಹ, ಶತಮಾನಗಳಲ್ಲಿ ಆಗದೇ ಇರುವಂತಹ ದೊಡ್ಡ ಪ್ರಮಾಣದ ಮಹಾಪೂರ ಬಂದಾಗ ಕಾಮಗಾರಿಗೆ ಬಿಡುಗಡೆಯಾದಂತಹ ಹಣವನ್ನು ಈ ರೀತಿಯಾಗಿ ದುರುಪಯೋಗ ಮಾಡುತ್ತಿದ್ದಾರೆ. ನೆರೆ ಹಾವಳಿಯಿಂದ ಸುಮಾರು 38 ಸಾವಿರ ಕೋಟಿ ರೂಪಾಯಿಯಷ್ಟು ಹಾನಿಯಾಗಿದೆಯೆಂದು ಹೇಳಿದಾಗ, ಕೇಂದ್ರ ಸರ್ಕಾರದವರು ನಮಗೆ ಕೇವಲ 1800 ಕೋಟಿ ರೂಪಾಯಿ ಹಣ ಬಿಡುಗಡೆ ಮಾಡಿದ್ದಾರೆ. ಅಲ್ಲದೇ, ನಮ್ಮ ರಾಜ್ಯ ಇಷ್ಟೆಲ್ಲಾ ಆರ್ಥಿಕ ದುಸ್ಥಿತಿಯಲ್ಲಿಯೂ ಕೂಡ ಹಣ ಜೋಡಿಸಿ, ಪರಿಹಾರ ಕೊಡಲಿಕ್ಕೆ ಸಾಕಷ್ಟು ಶ್ರಮ ಪಟ್ಟಿರುತ್ತದೆ. ಆ ಹಣವಾದರೂ ಸದ್ವಿನಿಯೋಗವಾಗಬೇಕಲ್ಲವೇ? ಆದರೆ, ಆ ಹಣದಲ್ಲಿ ಶೇಕಡವಾರು, ಯಾರ್‍ಯಾರು ಕೆಲಸ ಮಾಡುತ್ತಾರೆ ಅವರಿಗೆ ಮುಂಗಡವಾಗಿ ಹಣ ಕೊಟ್ಟು ಕೆಲಸ ತೆಗೆದುಕೊಂಡು ಬರುತ್ತಾರೆ. ಕೆಲವೊಂದು ವಿಷಯಗಳ ಬಗ್ಗೆ ಹೇಳುವುದಕ್ಕೆ ಕಷ್ಟವಾಗುತ್ತದೆ. ಇನ್ನೂ ಬಹಳಷ್ಟು ವಿಚಾರಗಳ ಬಗ್ಗೆ ನಾನು ಹೇಳುತ್ತೇನೆ. ಅದರಲ್ಲಿ, ಲ್ಯಾಪ್‌ಟಾಪ್ ವಿಚಾರವಾಗಿ ಮತ್ತು GLBC (Ghataprabha Left Bank Canal) ಎರಡೂ ಉದಾಹರಣೆಗಳನ್ನು ಮಾತ್ರ ಹೇಳಿದ್ದೇನೆ. ಅಂದರೆ, ನಮ್ಮ ರಾಜ್ಯದಲ್ಲಿ ಭ್ರಷ್ಟಾಚಾರ ಯಾವ ರೀತಿ ನಡೆಯುತ್ತಿದೆ ಮತ್ತು ನೆರೆ ಹಾವಳಿ ಪ್ರದೇಶಗಳಲ್ಲಿ ತೆಗೆದುಕೊಂಡಂತಹ ಕಾಮಗಾರಿಗಳು ಯಾವ ರೀತಿ ನಡೆಯುತ್ತಿವೆ ಹಾಗೂ ಇದರಲ್ಲಿ ಸಾರ್ವಜನಿಕರಿಂದ ಆಗಲಿ ಅಥವಾ ಬೇರೆಯವರಿಂದ ಆಗಲಿ, ಅಲ್ಲಿ ಹಣದ ಅವ್ಯವಹಾರವಾಗಿದೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನೆರೆ ಸಂತ್ರಸ್ತರಿಗೆ 5 ಲಕ್ಷ ರೂಪಾಯಿ ಹಣ ಕೊಡುತ್ತೇವೆಂದು ಹೇಳಿ, 1 ಲಕ್ಷ ರೂಪಾಯಿ ಹಣ ಕೊಟ್ಟಿದ್ದಾರೆ. ಮುಂದಿನ ಬಾಕಿ ಹಣ ಕೂಡ ಇನ್ನೂ ಬಟವಾಡೆ ಆಗಿರುವುದಿಲ್ಲ. ಆ ನಂತರ 'ಎ' ಮತ್ತು 'ಬಿ' ಕೆಟಗರಿಗಳು 'ಸಿ' ಕೆಟಗರಿಗಳಾಗಿವೆ. ಜೊತೆಗೆ, 'ಸಿ' ಕೆಟಗರಿ 'ಎ' ಮತ್ತು 'ಬಿ' ಕೆಟಗರಿಗಳಾಗಿವೆ. ಇದನ್ನು ನಾನು ಪುನರಾವರ್ತನೆ ಮಾಡುವುದಿಲ್ಲ. ಇಂತಹ ಕಳಪೆ ಕಾಮಗಾರಿಗಳ ಬಗ್ಗೆ ಏನಾದರೂ ನಿಗಾ ಇಡಬೇಕಲ್ಲವೇ? ರಾಜ್ಯದಲ್ಲಿ ಇಂತಹ ಅತಿವೃಷ್ಟಿಯಾಗಿ ಮಹಾಪೂರ್ ಬಂದು ಜನ ಗೋಳಾಡುವಂತಹ ಸಂದರ್ಭದಲ್ಲಿ ಭ್ರಷ್ಟಾಚಾರ ಮಾಡಿದರೆ ಹೇಗೆ? 30 ಲಕ್ಷ ಎಕರೆ ಭೂಮಿಯಲ್ಲಿರುವಂತಹ ಪೀಕ್ ಕೊಚ್ಚಿಕೊಂಡು ಹೋಗಿರುತ್ತದೆ. ಕೆಲವು ಕಡೆ ಜಮೀನುಗಳ ಮೇಲ್ಪದರ ಮಣ್ಣು ಕೊಚ್ಚಿಕೊಂಡು ಹೋಗಿರುತ್ತದೆ. ಅದಕ್ಕೆ ಯಾವುದೇ ಪರಿಹಾರ ಹಣ ಬಂದಿರುವುದಿಲ್ಲ. Basically, I am a horticulturist. ತೋಟಗಾರಿಕೆ ಬೆಳೆಗಳು ಏನು ಇವೆ ಅವು ಪೂರ್ತಿಯಾಗಿ ಮುಳುಗಿವೆ. ಸಾಮಾನ್ಯವಾಗಿ ಯಾವುದಾದರೂ ತೋಟಗಾರಿಕೆ ಪ್ಲಾಂಟ್‌ಗೆ 1 ಅಡಿ ಅಥವಾ 2 ಅಡಿ ನೀರು ನಿಂತು ಆ ಪ್ಲಾಂಟ್ ಮುಳುಗದೇ ಇದ್ದರೆ ತೋಟಗಾರಿಕೆ ಬೆಳೆ ಏನು ಆಗುವುದಿಲ್ಲ. ಆದರೆ, ಆ ಇಡೀ ಪ್ಲಾಂಟ್ ಮುಳುಗಿ ಅದರ ಮೇಲೆ 5 ಅಡಿ, 6 ಅಡಿ ಅಥವಾ 10 ಅಡಿ ನೀರು ಬಂದರೆ, ಆ ತೋಟಗಾರಿಕೆ ಬೆಳೆ ಹಾಳಾಗಿ ಹೋಗುತ್ತದೆ. ಅದಕ್ಕೆ ಎಸ್.ಡಿ.ಆರ್.ಎಫ್ ಅಥವಾ ಎನ್.ಡಿ.ಆರ್.ಎಫ್. ನಾರ್ಮ್ಸ್ ಪ್ರಕಾರ ಹಣ ಕೊಟ್ಟರೆ he has to uproot the plants. ತೋಟಗಾರಿಕೆ ಬೆಳೆಗಳಾದ ದಾಳಿಂಬೆ ಇರಬಹುದು, ದ್ರಾಕ್ಷಿ ಇರಬಹುದು ಅಥವಾ ನಿಂಬೆ ಇರಬಹುದು ಈ ರೀತಿ ಯಾವುದೇ ತೋಟಗಾರಿಕೆ ಬೆಳೆಗಳು ಇರಬಹುದು ಅವುಗಳು ಮುಳುಗಿ ಅದರ ಮೇಲೆ 10-15 ಅಡಿಗಳಷ್ಟು ನೀರು ಬಂದಿತ್ತು, ಅದರ ಮೇಲೆ ಅಧಿಕಾರಿಗಳು ಪರಿಹಾರ ತಲುಪಿಸುವ ಸಲುವಾಗಿ ಬೋಟ್‌ನಲ್ಲಿ ಓಡಾಡಿರುತ್ತಾರೆ. ಈ ರೀತಿ ತೋಟಗಾರಿಕೆ ಬೆಳೆಗಳ ಮೇಲೆ ಸುಮಾರು 10-15 ಅಡಿ ನೀರು ನಿಂತುಕೊಂಡು ಅದರ ಮೇಲೆ ಅಧಿಕಾರಿಗಳು ಬೋಟ್‌ನಲ್ಲಿ ಓಡಾಡಿದರೆ ಆ ತೋಟಗಾರಿಕೆ ಬೆಳೆಗಳು ಉಳಿಯುತ್ತವೆಯೇ? ಅದಕ್ಕೆ cost to cost ತೋಟಗಾರಿಕೆ ಬೆಳೆಗಳಿಗೆ ಎಷ್ಟು ಹಾನಿಯಾಗಿದೆ uproot ಮಾಡಿದರೆ ಆ ತೋಟಗಾರಿಕೆ ಬೆಳೆಗಳು 3-4 ವರ್ಷಗಳ ನಂತರ ಫಲ ಕೊಡುವುದಕ್ಕೆ ಶುರು ಮಾಡುತ್ತವೆ. ಆದರೆ, 4 ವರ್ಷಗಳವರೆಗೆ ಏನು ಮಾಡಬೇಕು; ಅಥವಾ ಆ ಬೆಳೆಗಳನ್ನು re-plant ಮಾಡಬೇಕಾದರೆ ಅವರಿಗೆ ಎಷ್ಟು ತೊಂದರೆ ಇದೆ? ಇದು ಪಾರದರ್ಶಕವಾಗಿ ನಡೆದಿಲ್ಲ ಎನ್ನುವುದಕ್ಕೆ ಸಾಕಷ್ಟು ಉದಾಹರಣೆ ನನ್ನ ಬಳಿ ಇವೆ. ಅವುಗಳನ್ನು ಹೇಳುತ್ತಾ ಹೋದರೆ ಸಮಯ ಸಾಕಾಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಬಗ್ಗೆ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು, ಮೊನ್ನೆಯ ದಿವಸ “ನೆರೆ ಪರಿಹಾರ ಸಾಮಗ್ರಿ ಕಂಡವರ ಪಾಲು” ಎಂಬ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದರು. ಅದಕ್ಕೆ ಇನ್ನೂ ಉತ್ತರ ನೀಡಿರುವುದಿಲ್ಲ. ಧಾರವಾಡದಲ್ಲಿ, “ದಾನಿಗಳ ಕೊಟ್ಟಂತಹ ದವಸ-ಧಾನ್ಯಗಳನ್ನು ನೆರೆ ಸಂತ್ರಸ್ತರಿಗೆ ತಲುಪಿಸುವಲ್ಲಿ ಧಾರವಾಡ ಜಿಲ್ಲಾಡಳಿತ ವಿಫಲ”; “ನೆರೆ ಸಂತ್ರಸ್ತರ ಬದಲು ನೌಕರರ ಮನೆಗೆ ಹೋದ ಅಪಾರ ಪ್ರಮಾಣದ ಸಾಮಗ್ರಿ”; “4 ತಿಂಗಳು ಕೂಡಿಟ್ಟ ಅಕ್ಕಿ ಪ್ಯಾಕೇಟ್ ಹಾಸ್ಟೆಲ್‌ಗಳಿಗೆ ವಿತರಣೆ, ಬ್ರಾಂಡೆಡ್ ಅಕ್ಕಿ ಹೊತ್ತೊಯ್ದ ನೌಕರರು ಕಳಪೆ ಅಕ್ಕಿ ಹಾಸ್ಟೆಲ್‌ಗಳಿಗೆ ಪೂರೈಕೆ”. ಈ ರೀತಿಯಾದರೆ ಹೇಗೆ?

“ಇಷ್ಟು ದೊಡ್ಡ ಪ್ರಮಾಣದಲ್ಲಿ ನೆರೆ ಹಾವಳಿಯಾಗಿದೆ, ನಾವು ಗ್ರಾಮೀಣ ಭಾಗದಿಂದ ಆಯ್ಕೆಯಾದಂತಹ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಅಥವಾ ಸದಸ್ಯರುಗಳು ನಮ್ಮ ಗ್ರಾಮಗಳಲ್ಲಿ ಏನಾಗಿದೆ ಎನ್ನುವುದನ್ನು ಅಧಿಕಾರಿಗಳಿಗೆ ನಾವು ಸರಿಯಾಗಿ ಹೇಳುತ್ತೇವೆ. Please take them into confidence. ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ, ಸರ್ಕಾರದಿಂದ ಕೊಡುವಂತಹ ಹಣವನ್ನು ನೆರೆ ಸಂತ್ರಸ್ತರಿಗೆ ಕೊಡಿ, ಆದರೆ, ನಮ್ಮ ಸಹಾಯ ತೆಗೆದುಕೊಳ್ಳಿ ನಾವು ನಿಮಗೆ ಮಾರ್ಗದರ್ಶನ ನೋಡುತ್ತೇವೆಂದು” ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು ಈ ಬಗ್ಗೆ ಸತ್ಯಾಗ್ರಹ ಮಾಡುತ್ತಿದ್ದರು. ಆದರೆ, ಸರ್ಕಾರದವರು ಅವರಿಗೆ ಕ್ಯಾರೆ ಎನ್ನಲಿಲ್ಲ. ಅವರು ಒಂದು ತಿಂಗಳಿನಿಂದ ಸತ್ಯಾಗ್ರಹ ಮಾಡುತ್ತಿದ್ದರು. ಆದರೆ, ನಾನು ಅಲ್ಲಿಗೆ ಹೋಗಿ, “ಇದು ದಪ್ಪ ಚರ್ಮದ ಸರ್ಕಾರ, 1 ತಿಂಗಳಲ್ಲ, 1 ವರ್ಷ ಸತ್ಯಾಗ್ರಹ ಮಾಡಿದರೂ ಇವರು ಹೀಗೆಯೇ ಇರುತ್ತಾರೆ” ಇದಕ್ಕೆ ಪರಿಹಾರ ಕಂಡುಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ, ಸಂಬಂಧಪಟ್ಟವರಿಗೆ ಹೇಳೋಣ” ಎಂದು ಹೇಳಿ ನಾನು ಸತ್ಯಾಗ್ರಹ ಮಾಡುವವರ ಮನವೊಲಿಸಿದ್ದೇನೆ. ಇಡೀ ಧಾರವಾಡ ಜಿಲ್ಲಾ ಪಂಚಾಯತಿಯ ಎಲ್ಲಾ ಸದಸ್ಯರು ಮತ್ತು ಮೊದಲು ಬಿಜೆಪಿ ಪಕ್ಷದ ಸದಸ್ಯರುಗಳು ಕೂಡ ಸತ್ಯಾಗ್ರಹ ಮಾಡುತ್ತಿದ್ದರು. ಆದರೆ, ನಂತರ “ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆಯೆಂದು ಅವರನ್ನು ಕರೆದುಕೊಂಡು ಹೋದರೆಂದು” ಕಾಣುತ್ತದೆ. ಬಿಜೆಪಿ ಪಕ್ಷದವರು ಮೊದಲು ಒಂದೆರಡು ದಿವಸ ಸತ್ಯಾಗ್ರಹದಲ್ಲಿ ಹಾಜರಿದ್ದರು.

**ಶ್ರೀ ಸಿ.ಸಿ. ಪಾಟೀಲ್(ಗಣಿ ಮತ್ತು ಭೂ ವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಒಂದಾದರೂ ಕರೆ ಹೇಳಲಿ. ನಾನು ಕೂಡ ಪ್ರವಾಹದಲ್ಲಿ ಮುಳುಗಿ ತೇಲಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬಂದಿರುತ್ತೇನೆ. ಪ್ರವಾಹದ ಬಗ್ಗೆ ಅವರು ಏನು ಹೇಳುತ್ತಿದ್ದಾರೆ. ಅದು ಸಂಪೂರ್ಣ ಸುಳ್ಳಾಗಿರುತ್ತದೆ. ಈ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ನಾನು ಇಬ್ಬರೂ ಪ್ರಶಂಸೆ ಮಾಡಿರುತ್ತೇವೆ. ಅಲ್ಲದೇ, ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ಊರಾದ ಕೊಣ್ಣೂರನ್ನು ದಾಟಿಯೇ ಅವರ ಊರಿಗೆ ಹೋಗುತ್ತಿದ್ದರು. ನಮ್ಮ ರಾಜ್ಯದ ಇತಿಹಾಸದಲ್ಲಿಯೇ ಪ್ರಥಮ ಬಾರಿಗೆ ನೆರೆ ಸಂತ್ರಸ್ತರಿಗೆ 5 ಲಕ್ಷ, 3 ಲಕ್ಷ ಅಥವಾ 1 ಲಕ್ಷ ರೂಪಾಯಿ ಪರಿಹಾರ ಕೊಟ್ಟಿದ್ದು ನಮ್ಮ ಸರ್ಕಾರ. ಹಿಂದಿನ ಸರ್ಕಾರ ಕೊಡಗು ಜಿಲ್ಲೆಯ ನೆರೆ ಸಂತ್ರಸ್ತರಿಗೆ ಪರಿಹಾರ ಕೊಟ್ಟಿದ್ದಕ್ಕಾಗಿ ನಾನು ಅಭಿನಂದಿಸುತ್ತೇನೆ. ಆದರೆ, ಕೊಡುಗು ಜಿಲ್ಲೆಯಲ್ಲಿ ಬಿದ್ದಂತಹ ಮನೆಗಳ ಸಂಖ್ಯೆ ಎಷ್ಟು ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ಬಿದ್ದಂತಹ ಮನೆಗಳ ಸಂಖ್ಯೆ ಎಷ್ಟು ಎಂಬುದನ್ನು ತುಲನೆ ಮಾಡಬೇಕು.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಬಿಜೆಪಿ ಸರ್ಕಾರ 2008ರಲ್ಲಿ ಅಧಿಕಾರಕ್ಕೆ ಬಂದಾಗ ಮಲಪ್ರಭಾ ನದಿಗೆ ಆಗಲೂ ಮಹಾಪೂರ ಬಂತು. ಈ ಬಾರಿ ಬಿಜೆಪಿ ಸರ್ಕಾರ ಅಧಿಕಾರ ಬಂದು ಈ ಬಾರಿಯೂ ಕೂಡ ಮಹಾಪೂರ ಆಗಿರುತ್ತದೆ, ತಮ್ಮ ಸರ್ಕಾರಕ್ಕೂ ಮಹಾಪೂರಕ್ಕೂ ಏನಾದರೂ ಸಂಬಂಧ ಇದೆಯೇ?

**ಶ್ರೀ ಸಿ.ಸಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಹಿಂದಿನ ಸರ್ಕಾರದ ಅವಧಿಯಲ್ಲಿ ಬರಗಾಲ ಆಗಿ ಮಣ್ಣಿನ ಹಸಿ ತೇವಾಂಶ ತಳಮಟ್ಟಕ್ಕೆ ಹೋಗಿತ್ತು, ಅದನ್ನು ಮೇಲ್ಮಟ್ಟಕ್ಕೆ ತರಬೇಕಾದರೆ ನಮ್ಮ ಸರ್ಕಾರ ಬಂದಿದ್ದರಿಂದ ಮಣ್ಣಿನ ಹಸಿ ತೇವಾಂಶ ಮೇಲ್ಮಟ್ಟಕ್ಕೆ ಬಂದಿರುತ್ತದೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಿದ್ದರಿಂದ ವಾಟರ್ ಲೆವಲ್ ಹೆಚ್ಚಾಗಿದೆ. ಮಂತ್ರಿಗಳ ವಿವರಣೆಯನ್ನು ಮೆಚ್ಚಿಕೊಳ್ಳಲೇಬೇಕು. ಅದಕ್ಕಾಗಿ ಅವರಿಗೆ ಧನ್ಯವಾದಗಳು.

**ಡಾ॥ ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯಕ್ಕೆ ಅತಿವೃಷ್ಟಿ ಕೊಟ್ಟಂತಹ ವರುಣ ದೇವರನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಶ್ನೆ ಮಾಡಬೇಕಾಗುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(206)09.03.2020/12.10/ವೈಎಲ್-ಆರ್‌ಎಸ್**

**ಶ್ರೀ ಎಸ್.ಆರ್.ಪಾಟೀಲ್:-** ನಮ್ಮ ಮೇಲೆ ಪ್ರಕೃತಿಯು ದಬ್ಬಾಳಿಕೆ ಮಾಡುತ್ತದೆ. ಪ್ರಕೃತಿಯು ಮುನಿಸಿಕೊಂಡಾಗ ತನ್ನ ಕೈಚಳಕವನ್ನು ತೋರಿಸುತ್ತದೆ. ಇವೆಲ್ಲಕ್ಕೂ ಕಾರಣವೇನೆಂಬುದರ ಹಿನ್ನೆಲೆಯನ್ನು ಸದನದಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ಕರ್ನಾಟಕ ರಾಜ್ಯವು ಪ್ರಕೃತಿ ವಿಕೋಪದಿಂದಾಗಿ ಸಂಪೂರ್ಣವಾಗಿ ನಲುಗಿ ಹೋಗಿತ್ತು. 2008ನೇ ಸಾಲಿನಲ್ಲಿಯು ಈ ರೀತಿಯ ಸಮಸ್ಯೆಯಾದಾಗ ಅಂದಿನ ಜಗತ್ಪ್ರಸಿದ್ಧ ಆರ್ಥಿಕ ತಜ್ಞರಾದ ನಮ್ಮ ನೆಚ್ಚಿನ ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ಡಾ॥ ಮನಮೋಹನ್ ಸಿಂಗ್‌ರವರು ತಕ್ಷಣ ಕರ್ನಾಟಕಕ್ಕೆ ಬಂದು ಏರಿಯಲ್ ಸರ್ವೇ ಮಾಡಿ, ಹಣವನ್ನು ಘೋಷಣೆ ಮಾಡಿದ್ದರು. ಶ್ರೀಯುತ ಪಂಡಿತ್ ಜವಾಹರ್‌ಲಾಲ್ ನೆಹರುರವರು ಸ್ಥಾಪಿಸಿದಂತಹ ಇಸ್ರೋ ಸಂಸ್ಥೆಯ ವಿಜ್ಞಾನಿಗಳು ಚಂದ್ರಯಾನ-2 ಉಡಾವಣೆ ಮಾಡಿದ ಸಾಧನೆಯ ವೀಕ್ಷಣೆಗೆ ಇಂದಿನ ಗೌರವಾನ್ವಿತ ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರು ಕರ್ನಾಟಕಕ್ಕೆ ಬಂದಿದ್ದರು. ಆದರೆ ಆ ಸಂದರ್ಭದಲ್ಲಿ ಕರ್ನಾಟಕದಲ್ಲಿನ ಅತಿವೃಷ್ಟಿ ಬಗ್ಗೆ ಅವರು ಗಮನಹರಿಸದಿದ್ದದ್ದು ನಮ್ಮ ದುರ್ದೈವ. ನಮಗೂ ಅದರ ನೋವು ಇದೆ. ಮಾನ್ಯ ಪ್ರಧಾನ ಮಂತ್ರಿಗಳು ಸಹ ಆ ಒಂದು ದುಃಖದಿಂದ ಹಾಗೆ ಹೋಗಿದ್ದಾರೆ.

ಎರಡನೇ ಬಾರಿ ತುಮಕೂರಿಗೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ ಎರಡು ಬಾರಿ ಮಾನ್ಯ ಪ್ರಧಾನ ಮಂತ್ರಿಗಳ ಹತ್ತಿರ ಮಾತನಾಡಲು ಪ್ರಯತ್ನ ಪಟ್ಟು, ಅವಕಾಶ ಸಿಗದೇ ಇದ್ದಾಗ ಕೊನೆಯದಾಗಿ ಭಾಷಣದ ಮೂಲಕ ಎಲ್ಲರ ಮುಂದೆಯು ಹೇಳಿದರು. ನಂತರ ಕೇಂದ್ರ ಸರ್ಕಾರದಿಂದ ರೂ.600.00 ಕೋಟಿಗಳನ್ನು ಬಿಡುಗಡೆ ಮಾಡಿದ್ದರು. ಇಷ್ಟು ದೊಡ್ಡ ಪ್ರಮಾಣದಲ್ಲಿ ಅನಾಹುತವಾದ ಸಂದರ್ಭದಲ್ಲಿ ಈ ದೇಶದ ಪ್ರಧಾನ ಮಂತ್ರಿಗಳು; ನಮಗೂ ಸಹ ಈ ದೇಶದ 130 ಕೋಟಿ ಜನರ ಪ್ರಧಾನ ಮಂತ್ರಿಗಳು ಎಂಬ ಗೌರವ ಇದೆ. ನಮಗೂ ಹಾಗೂ ನಿಮಗೂ ಎಲ್ಲರಿಗೂ ಅವರು ಪ್ರಧಾನ ಮಂತ್ರಿಗಳಾಗಿದ್ದಾರೆ. ಈ ರಾಜ್ಯದಲ್ಲಿ ಎಂದೂ ಕಾಣದಂತಹ, ಕೇಳದಂತಹ ಶತಮಾನದಲ್ಲಿಯೇ ಆಗಿರದಂತಹ ಭೀಕರವಾದ ಪ್ರವಾಹಕ್ಕೆ ಸಿಕ್ಕಿ ನಲುಗಿದಂತಹ ಸಂದರ್ಭದಲ್ಲಿ ಕೊನೆ ಪಕ್ಷ ಮಾನ್ಯ ಮುಖ್ಯಮಂತ್ರಿಗಳನ್ನು, ವಿರೋಧ ಪಕ್ಷದ ನಾಯಕರನ್ನು, ಶಾಸಕರುಗಳನ್ನು, ಸಚಿವರುಗಳನ್ನು ಕರೆದುಕೊಂಡು ಹೋಗಿ, ಆ ಜನರ ಜೊತೆ ಚರ್ಚೆ ಮಾಡಿ, ಅವರ ಸ್ಥಿತಿ-ಗತಿ ಏನೆಂಬುದನ್ನು ಕೇಳಲಿಲ್ಲವೆಂದರೆ, ಅವರು ಯಾರ ಹತ್ತಿರ ಸಮಸ್ಯೆಯನ್ನು ಹೇಳಿಕೊಳ್ಳಬೇಕು? ನಮ್ಮ ಸ್ಥಿತಿ ಯಾವ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿಯಾಗಿದೆ ಎಂದರೆ, 'ನಾಯಿ ಬೆಟ್ಟಕ್ಕೆ ಹೋದರೆ, ಕೆಳಗೆ ಬರುವುದಿಲ್ಲ' ಎಂದು ಹೇಳುವ ಹಾಗೆ ಆಗಿದೆ. ಇವತ್ತು ನೂರಾರು ಹಳ್ಳಿಗಳು ಪ್ರವಾಹದಿಂದ ಮುಳುಗಿದ್ದು, once for all shift those villages. ಎತ್ತರವಾದ ಸುರಕ್ಷಿತವಾಗಿರುವ ಸ್ಥಳಕ್ಕೆ ಅವೆಲ್ಲಾ ಗ್ರಾಮಗಳನ್ನು ಸ್ಥಳಾಂತರಿಸಲು ಹೇಳಿದ್ದೆವು. ಮುಂದಿನ ವರ್ಷ ಮಹಾಪೂರ ಸಂಭವಿಸುವುದಿಲ್ಲ ಎಂಬುದು ಅವರ ಭಾವನೆಯೇ? ಮತ್ತೆ ಮುಂದಿನ ವರ್ಷವೂ ಮಹಾಪೂರ ಸಂಭವಿಸಬಹುದು. ಈಗಾಗಲೇ ಒಂದೇ ವರ್ಷದಲ್ಲಿ ಮೂರು ಬಾರಿ ಮಹಾಪೂರ ಸಂಭವಿಸಿದೆ. ಮುಂದಿನ ವರ್ಷವೂ ಮಹಾಪೂರ ಸಂಭವಿಸಿದರೆ ಅದೇ ಹಣೆಬರಹವಾಗುತ್ತದೆ. Remedial measures, ಕೇಂದ್ರ ಸರ್ಕಾರದ ಹತ್ತಿರ ಹಣವನ್ನು ಕೇಳುವುದು, ಇದೆಲ್ಲಾ ಏತಕ್ಕೆ ಬೇಕು. ಒಂದೇ ಸಲ ಎಲ್ಲಾ ಗ್ರಾಮಗಳನ್ನು ಸುರಕ್ಷಿತವಾದ ಸ್ಥಳಕ್ಕೆ ಸ್ಥಳಾಂತರಿಸಿ. ಈಗಾಗಲೇ ಬೆಳೆ ನಾಶಕ್ಕೆ ಸಂಬಂಧಿಸಿದಂತೆ ತೋಟಗಾರಿಕೆಗೆ ಸಂಬಂಧಿಸಿದ ಒಂದು ಉದಾಹರಣೆಯನ್ನು ನೀಡಿದ್ದೆನು. Once for all shift all the villages. ಆ ಹಳ್ಳಿಗಳನ್ನು ಎತ್ತರದ, ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಿ ಅದನ್ನು 'ರಾಷ್ಟ್ರೀಯ ಹೆದ್ದಾರಿ 28' ಎಂದು ಘೋಷಣೆ ಮಾಡುವುದಕ್ಕೆ ಹೇಳಿದ್ದೆವು, ಆ ಕೆಲಸವನ್ನು ಮಾಡಲಿಲ್ಲ. ಆದರೆ, ಮುಂದೆ ಮಹಾಪೂರ ಸಂಭವಿಸಿದರೂ ಆ ಗ್ರಾಮಗಳಿಗೆ ತೊಂದರೆಯಾಗದಂತೆ ಎಲ್ಲಾ ಗ್ರಾಮಗಳನ್ನು ಸುರಕ್ಷಿತವಾದ ಸ್ಥಳಕ್ಕೆ ಸ್ಥಳಾಂತರಗೊಳಿಸಿ, ಆ ಜನರನ್ನು ಮುಂದೆ ಬರುವಂಥ ಕಷ್ಟದಿಂದ ಪಾರು ಮಾಡುವುದಕ್ಕೆ ಹೇಳಿದ್ದೆವು, ಆ ಕೆಲಸವನ್ನು ಸರ್ಕಾರ ಮಾಡಲಿಲ್ಲ. ಯಾವ ಹಳ್ಳಿಗಳಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಮಾದರಿಯಲ್ಲಿ valuation ಮಾಡಿ, ಆ ಜನರಿಗೆ ಹೊಸ ಸ್ಥಳವನ್ನು ಖರೀದಿಸಿ, ಮೂಲಭೂತ ಸೌಲಭ್ಯಗಳಾದ ರಸ್ತೆ, ಕುಡಿಯುವ ನೀರು, ವಿದ್ಯುತ್, ಸಾರ್ವಜನಿಕ ಕಟ್ಟಡಗಳೆಲ್ಲವನ್ನೂ ಒದಗಿಸಿ, ಸುರಕ್ಷಿತವಾದ ಪುನರ್ವಸತಿ ಕೇಂದ್ರವನ್ನು ನಿರ್ಮಿಸಿ, ಆ ಜನರನ್ನು ಸ್ಥಳಾಂತರಿಸಿದರೆ, it will be a permanent remedy. ಈ ನಾಲ್ಕು ಬೇಡಿಕೆಗಳನ್ನು ಈ ಸರ್ಕಾರ ಈಡೇರಿಸಲಿಲ್ಲ. ಎನ್.ಡಿ.ಆರ್.ಎಫ್/ಎಸ್.ಡಿ.ಆರ್.ಎಫ್. ನಮ್ಸ್ ಯೋಜನೆಗಳಿಗಿಂತಲೂ ಎಕ್ಟೇರ್‌ಗೆ ಹೆಚ್ಚಿನ ಹಣವನ್ನು ಸರ್ಕಾರ ಭರಿಸಿದೆ. ಅದಕ್ಕೆ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸರ್ಕಾರದವರು ಕೆಲಸವನ್ನು ಮಾಡಿದ್ದರೂ, ಕೆಲಸವನ್ನು ಮಾಡಿಲ್ಲವೆಂದೇ ಹೇಳುತ್ತೇನೆ. ಆದರೆ, it was in-sufficient. ಈ ತೋಟಗಾರಿಕೆ ಬೆಳೆಗಳು ಮುಳುಗಿ ಹೋದರೆ, ಆ ಬೆಳೆಗಾರನಿಗೆ uproot ಮಾಡಿ, ಹೊಸ ಪ್ಲಾಂಟೇಷನ್ ಮಾಡುವುದಕ್ಕೆ 4 ವರ್ಷಗಳು ಕಾಯಬೇಕಾಗುತ್ತದೆ. 4 ವರ್ಷಗಳು ಕಾಯುತ್ತಾ ಕುಳಿತರೆ ಆ ರೈತನ ಗತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನಾಗಬೇಕು? ಕೇಂದ್ರ ಸರ್ಕಾರವನ್ನು ರೂ.38.00 ಸಾವಿರ ಕೋಟಿ ಕೇಳಿದ್ದಕ್ಕೆ ರೂ.18.65 ಕೋಟಿಗಳನ್ನು ಘೋಷಣೆ ಮಾಡಿದ್ದರು. ಅದರಲ್ಲಿ ರೂ.16.52 ಕೋಟಿಗಳು ಬಂದಿದೆ. 2016ನೇ ಸಾಲಿನಿಂದ 2018ನೇ ಸಾಲಿನವರೆಗೆ ರಾಜ್ಯಪಾಲರ ಭಾಷಣದ ಪುಸ್ತಕದಲ್ಲಿ ನೀರಾವರಿಗೆ ಸಂಬಂಧಿಸಿದಂತಹ ವಿಚಾರ ಇದೆ. ಈ ಪುಸ್ತಕದಲ್ಲಿ ಮಹದಾಯಿ ವಿಚಾರವಾಗಿ ಒಂದು ಪದವಾದರೂ ಬಳಕೆ ಮಾಡಿದ್ದಾರೆಯೇ?

**ಡಾ॥ ವೈ.ಎ.ನಾರಾಯಣಸ್ವಾಮಿ:-** ಬಜೆಟ್ ವಿಚಾರ ಬಂತು.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಬಜೆಟ್ ನಂತರವಾಯಿತು. ಬಜೆಟ್ ಪೂರ್ವದಲ್ಲಿ ಮಾತನಾಡಬೇಕಾಗಿರುವ ವಿಚಾರವನ್ನು ಹೇಳುತ್ತಿದ್ದೇನೆ. ಬಜೆಟ್‌ನಲ್ಲಿ ರೂ.500.00 ಕೋಟಿಗಳನ್ನು ಭರಿಸಲಾಗಿರುವ ವಿಚಾರದ ಬಗ್ಗೆ ನಂತರ ಮಾತನಾಡುತ್ತೇನೆ.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್(ಗಣಿ ಮತ್ತು ಭೂ ವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣವಾಗುವಾಗ ಸುಪ್ರೀಂ ಕೋರ್ಟ್‌ನಲ್ಲಿದ್ದ ಪ್ರಕರಣದ ಬಗ್ಗೆ ಅಂತಿಮ ತೀರ್ಮಾನವಾಗಿರಲಿಲ್ಲ. ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣವು ಅಂತಿಮವಾದ ನಂತರ ಬಜೆಟ್ ಮಂಡನೆ ಮಾಡುವಂಥ ಸಂದರ್ಭದಲ್ಲಿ ನಮ್ಮೆಲ್ಲರ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳು...

**ಶ್ರೀ ಎಸ್.ಆರ್.ಪಾಟೀಲ್:-** ತಾವು ಮಾನ್ಯ ಮುಖ್ಯಮಂತ್ರಿಗಳನ್ನು defend ಮಾಡಿಕೊಳ್ಳಿ ಬೇಡವೆಂದು ಹೇಳುವುದಿಲ್ಲ.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ರೂ.500 ಕೋಟಿಗಳನ್ನು ಸ್ವಾಗತಿಸಿ.

**ಶ್ರೀ ಎಸ್.ಆರ್.ಪಾಟೀಲ್:-** ಈಗಾಗಲೇ ತಾವು ಹೇಳುವುದಕ್ಕೂ ಮೊದಲೇ ರೂ.500.00 ಕೋಟಿಗಳನ್ನು ಬಜೆಟ್‌ನಲ್ಲಿ ನೀಡಿದ್ದಾರೆ ಎಂದು ಹೇಳಿದ್ದೇನೆ.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:-** ಮಾನ್ಯ ಸಭಾಪತಿಯವರೇ, ರೂ.500.00 ಕೋಟಿಗಳನ್ನು ಈಗ ನೀಡಿದ್ದಾರೆ. ಹಿಂದೆ ಇದ್ದಂತಹ ಹಣಕಾಸು ಸಚಿವರು ರೂ.100.00 ಕೋಟಿಗಳನ್ನು ನೀಡಿದ್ದಾರೆ. ಆ ಭೂಮಿ ಪೂಜೆಗೆ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಆಗಮಿಸಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಈ ವಿಚಾರವನ್ನು ತೆಗೆದುಕೊಂಡು, ರಾಜಕಾರಣ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಈ ಸದನದ ಅತ್ಯಂತ ಹಿರಿಯ ಸದಸ್ಯರಾಗಿದ್ದಾರೆ. ಹಾಗಾಗಿ ಸಭೆಗೆ ಆಹ್ವಾನಿಸಿದ್ದಾರೆ, ನನಗೂ ಆಮಂತ್ರಣವನ್ನು ನೀಡಿದ್ದರು. ಆಡಳಿತ ಪಕ್ಷದವರಾದ ಮಾನ್ಯ ಪ್ರಹ್ಲಾದ್ ಜೋಷಿ ಮತ್ತು ಮಾನ್ಯ ಸುರೇಶ್ ಚನ್ನಬಸಪ್ಪ ಅಂಗಡಿಯವರಿಗೆ ಹಾಗೂ ಆ ಜಿಲ್ಲೆಯ ಎಲ್ಲಾ ಶಾಸಕರು, ಪಕ್ಷದವರನ್ನು ಕರೆದಿದ್ದಾರೆ. ಪಕ್ಷಾತೀತವಾಗಿ ಬಗೆಹರಿಸಿಕೊಳ್ಳೋಣ ಎಂದು ಹೇಳಿದಾಗ ನಾವೆಲ್ಲರೂ ಅದಕ್ಕೆ ಒಪ್ಪಿದ್ದೇವೆ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ ಇದು ಹೌದೇ ಅಥವಾ ಇಲ್ಲವೇ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಹೌದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಅವರ ಹಾಗೆ ಎಲ್ಲದರಲ್ಲಿಯು ರಾಜಕಾರಣ ಮಾಡುವುದಕ್ಕೆ ಹೋಗುವುದಿಲ್ಲ. ಮಹದಾಯಿ ಯೋಜನೆ, ಕಳಸಾ-ಬಂಡೂರಿ ನೀರಾವರಿ ಯೋಜನೆ ಫಲಪ್ರದವಾಗಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗಾಗಲೇ ನನಗೆ ಆಮಂತ್ರಣವನ್ನು ಕಳುಹಿಸಿರುವುದಾಗಿ ಹೇಳಿದರು. ಈ ಮೊದಲು ನನಗೆ ತಲೆ ಕೆಟ್ಟಿತ್ತು; ಸುಮ್ಮನೆ ಇದ್ದರೂ, ಈಗ ರಾಜಕಾರಣ ಮಾಡುತ್ತಾರೆ ಎಂದು ಹೇಳುತ್ತಾರೆ.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮಗೆ ಮಾನ್ಯ ಸದಸ್ಯರ ಮೇಲೆ ಅಪಾರ ಗೌರವ ಇದೆ. ಅವರು ಹೇಳಿದ ಹಾಗೆ ಪತ್ರ ಬಂದಿಲ್ಲವೆಂದು ಹೇಳಿದ್ದು, ನಿಜ. ಪತ್ರ ಬರದೇ ಇದ್ದಿದ್ದು ನಿಜ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಸುಮ್ಮನೆ ಗೌಡಕಿ ಮಾಡುತ್ತಾರೆ.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:-** ನಾನು ಗೌಡನಲ್ಲ. ಮಾನ್ಯ ಎಸ್.ಆರ್.ಪಾಟೀಲ್‌ರವರು ಗೌಡರಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಮೊದಲು ಬಹಳ feudalism ಇತ್ತು, ಈಗ ಸ್ವಲ್ಪ ಕಡಿಮೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ತಮಗೆ ಮಾತನಾಡಲು ಇನ್ನೂ ಎಷ್ಟು ಸಮಯಬೇಕು.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪ ಮುಖ್ಯಮಂತ್ರಿಯವರು ಹಾಗೂ ಸಾರಿಗೆ ಸಚಿವರು):–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಇಷ್ಟು ಹೊತ್ತು ಬೇಡಿಕೆಯನ್ನಿಟ್ಟಿದ್ದಾರೆ. ಇನ್ನು ವಿಷಯದ ಮೇಲೆ ಚರ್ಚೆ ಮಾಡುವುದು ಬಾಕಿ ಇದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಮ್ಮ ಉತ್ತರ ಕರ್ನಾಟಕದಲ್ಲಿ ಮಹದಾಯಿ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆ ಬಹಳ ಜ್ವಲಂತ ಸಮಸ್ಯೆಯಾಗಿದೆ. ರಾಜ್ಯಪಾಲರ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ತಿಳಿಸಿದ್ದರೆ ಬಹಳ ಖುಷಿಯಾಗುತ್ತಿತ್ತು. ಕೃಷ್ಣಾ ಮೇಲ್ದಂಡೆ ಯೋಜನೆಯಿಂದ 130 ಟಿ.ಎಂ.ಸಿ. ನೀರು ಹಂಚಿಕೆಯಾಗಿದೆ. 2010ನೇ ಸಾಲಿನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯು ನಿರ್ಣಯವಾಗಿದೆ. ಇನ್ನೂ ಆಗಸ್ಟ್ 2018ನೇ ಸಾಲಿನಲ್ಲಿ ಮಹದಾಯಿ ಯೋಜನೆ ಟ್ರಿಬ್ಯುನಲ್ decision ಆಗಿದೆ. ಗೆಜೆಟ್ ಅಧಿಸೂಚನೆಯನ್ನು ಸಹ ಹೊರಡಿಸಲಾಗಿದೆ. 2010ನೇ ಸಾಲಿನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯು ನಿರ್ಣಯವಾಗಿದ್ದು, ಇದುವರೆಗೂ ಗೆಜೆಟ್ ಅಧಿಸೂಚನೆ ಹೊರಡಿಸಿಲ್ಲ. ಈಗಾಗಲೇ ನಾವು 2020–2021ನೇ ಸಾಲಿನಲ್ಲಿದ್ದೇವೆ, ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ಗೆಜೆಟ್ ನೋಟೀಫಿಕೇಶನ್ ಹೊರಡಿಸಬೇಕು. ಜೊತೆಗೆ ಕೃಷ್ಣಾ ಮೇಲ್ದಂಡೆ ಯೋಜನೆಗೆ ಹಣದ ವ್ಯವಸ್ಥೆಯನ್ನು ಮಾಡಿಲ್ಲ. ತದನಂತರ ಬಹಳ ಇಕ್ಕಟ್ಟಿನ ಪರಿಸ್ಥಿತಿ ಎದುರಿಸುವಂಥ ಪರಿಸ್ಥಿತಿ ಬಂತು. ಸ್ವಪಕ್ಷದವರೇ ಅದಕ್ಕೆ ಕಾರಣವೆಂದು ಹೇಳುತ್ತಾರೆ. ಆ ಮಾತನ್ನು ಅವರು ಒಪ್ಪಿಕೊಳ್ಳಬಹುದು ಅಥವಾ ಬಿಡಬಹುದು. ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ 7 ಜಿಲ್ಲೆಗಳಿಗೆ ಉಪಯೋಗವಾಗುವಂಥ ಯೋಜನೆಯಾಗಿದೆ. ಈಗಾಗಲೇ 130 ಟಿ.ಎಂ.ಸಿ. ನೀರಾವರಿಗಾಗಿ 14 ಲಕ್ಷ 85 ಸಾವಿರ ಎಕರೆ ಜಾಗವನ್ನು ಖರೀದಿಸಲಾಗಿದೆ. ಕೃಷ್ಣಾ ಟ್ರಿಬ್ಯುನಲ್ ಯೋಜನೆಯ ನಿರ್ಣಯದ ಪ್ರಕಾರ 173 ಟಿ.ಎಂ.ಸಿ. ನೀರಾವರಿ ಜಾಗವನ್ನು ನೀಡಿದ್ದು, ಅದಕ್ಕೆ ಸುಮಾರು 15 ಲಕ್ಷ ಎಕರೆ ಜಾಗವನ್ನು ನೀಡಲಾಗಿತ್ತು. ಒಟ್ಟು 33 ಲಕ್ಷ ಎಕರೆ ಜಾಗವನ್ನು ನೀರಾವರಿಗಾಗಿ ನೀಡಲಾಗಿದ್ದು, ಇಡೀ ಏಷ್ಯಾ ಖಂಡದಲ್ಲಿ ಬೃಹತ್ ಯೋಜನೆ ಎಂದರೆ, ಈ ಕೃಷ್ಣಾ ಮೇಲ್ದಂಡೆ ಯೋಜನೆಯಾಗಿದೆ. ಇದರ ಬಗ್ಗೆ ಚಕಾರವೂ ಶಬ್ಧ ಎತ್ತಿಲ್ಲ. ಇವತ್ತು ಹೈದ್ರಾಬಾದ್–ಕರ್ನಾಟಕದ ಕಲಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ ಜಿಲ್ಲೆಗಳಿಗೆ ಮಹಾಪೂರವಾಗಿರುವ ಜೊತೆಗೆ ಬಾಂಬೆ–ಕರ್ನಾಟಕದ ಬಾಗಲಕೋಟೆ, ಬಿಜಾಪುರ, ಗದಗ ಈ 3 ಜಿಲ್ಲೆಗಳಲ್ಲಿಯು ಉಪಯೋಗವಾಗುವಂಥ 15

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯದಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲಕ್ಷ ಎಕರೆಯಷ್ಟು ಭೂಮಿಗೆ ನೀರು ಉಣಿಸುವಂಥ 130 ಟಿ.ಎಂ.ಸಿ. ಕೃಷ್ಣಾ ಟ್ರಿಬ್ಯುನಲ್–2 ಗೆ ಹಣ ಹಂಚಿಕೆಯಾಗಿರುವುದರ ಬಗ್ಗೆ ಯಾವುದೇ ಮಾತಿಲ್ಲ. ಬಜೆಟ್ ಮಂಡನೆಯಲ್ಲಿಯು ಈ ವಿಚಾರವನ್ನು ಬಿಟ್ಟು ಬಿಟ್ಟಿದ್ದರು. ತದನಂತರ ರೂ.10,000–00 ಕೋಟಿಗಳನ್ನು ನೀಡುತ್ತೇವೆ ಎಂದು ಹೇಳಿದ್ದಾರೆ. ಆ ಹಣವನ್ನು ಎಲ್ಲಿಂದ ತಂದಿದ್ದಾರೆಯೋ, ಏನೂ ಮಾಡಿದ್ದಾರೆಯೋ ಗೊತ್ತಿಲ್ಲ, ಬಜೆಟ್ ವಿಚಾರ ಬಂದಾಗ ಆ ಬಗ್ಗೆ ಮಾತನಾಡುತ್ತೇನೆ. ಉತ್ತರ ಕರ್ನಾಟಕಕ್ಕೆ 14 ಲಕ್ಷ 85 ಸಾವಿರ 113 ಎಕರೆ ನೀರಾವರಿಯ ಬೃಹತ್ ಯೋಜನೆ ಬಗ್ಗೆ ಇಷ್ಟು ನಿರ್ಲಕ್ಷ್ಯ ತಾಳಿದರೆ ನಮ್ಮ ಗತಿ ಏನಾಗಬೇಕು.

**(207)09.03.2020 ಎಸ್‌ಕೆ:ವಿಕೆ 12.20**

**ಶ್ರೀ ಎಸ್.ಆರ್. ಪಾಟೀಲ್(ಮುಂದು):–** ಮಾನ್ಯ ಸಭಾಪತಿಯವರೇ, ಅಪ್ಪತ್ತು ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಹಂಚಿಕೆಯಾದಂತಹ ನೀರು ಏನಿದೆ, ಅದನ್ನು ಬಳಕೆ ಮಾಡಲಾಗಿದೆ. ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುವುದೇನೆಂದರೆ, ಉತ್ತರ ಕರ್ನಾಟಕ ಸಂಪೂರ್ಣವಾಗಿ ಅಭಿವೃದ್ಧಿಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಈ ರೀತಿಯಾಗಿ ಅಭಿವೃದ್ಧಿಯಾದಲ್ಲಿ ಅದು ನಮ್ಮ ಭಾರತ ದೇಶದಲ್ಲಿ ಯಾವುದೇ ಅಭಿವೃದ್ಧಿ ಹೊಂದಿದಂತಹ ಪ್ರದೇಶವನ್ನು ಮೆಟ್ಟಿ ನಿಲ್ಲುವಂತಹ ಪ್ರತಿಷ್ಠಿತವಾದಂತಹ ನೀರಾವರಿ ಯೋಜನೆಯಾಗಿದೆ. ಈ ನೀರಾವರಿ ಯೋಜನೆಯಿಂದ ರಾಜ್ಯದ ವರಮಾನವಷ್ಟೇ ಅಲ್ಲದೇ ರಾಷ್ಟ್ರದ ವರಮಾನ ಸಹ ಹೆಚ್ಚಾಗುವುದಕ್ಕೆ ಸಹಕಾರಿಯಾಗುತ್ತದೆ. ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ consider ಮಾಡಿ ಎಂದು ಬಹಳ ಕಡೆ ಇದರ ಬಗ್ಗೆ ಮಾತನಾಡುತ್ತಿದ್ದರು. ಈಗಾಗಲೇ ಒಂದು ಮತ್ತು ಎರಡನೇ ಹಂತದ ಭೂ ಸ್ವಾಧೀನ ಪ್ರಕ್ರಿಯೆ ಮುಗಿದಿದೆ. ಇನ್ನು ಮೂರನೇ ಹಂತ ಉಳಿದಿದೆ. ಒಂದನೇ ಹಂತದಲ್ಲಿ ಸುಮಾರು 2,73,000 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಈಗ ಸುಮಾರು 1,30,000 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದ್ದು, ಈಗಾಗಲೇ ಸುಮಾರು 2,73,000 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಇನ್ನುಳಿದ 1,30,000 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ರಾಷ್ಟ್ರೀಯ ಯೋಜನೆ ಎನ್ನುತ್ತಾರೆ. ಏಕೆಂದರೆ ಕೇಂದ್ರ ಸರ್ಕಾರದ ಹೆಸರನ್ನು ಹೇಳುವುದು. ಕೇಂದ್ರ ಸರ್ಕಾರದವರು ಭೂಮಿಯನ್ನು ತೆಗೆದುಕೊಳ್ಳಲಿಕ್ಕಿಲ್ಲ. ಹಾಗಾಗಿ ಈ ಯೋಜನೆ ನೆನೆಗುದಿಗೆ ಬೀಳಲೂಬಹುದು. ಹಾಗಾದರೆ ಉತ್ತರ ಕರ್ನಾಟಕದವರೇನು ಮಲತಾಯಿ ಮಕ್ಕಳೇ? ಎರಡನೇ ಹಂತದಲ್ಲಿ ಸುಮಾರು 78,854 ಮನೆಗಳನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಈಗಾಗಲೇ ಸುಮಾರು 25,000

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮನೆಗಳು, ಅಂದರೆ ಮೂರನೇ ಒಂದು ಭಾಗ ಮಾತ್ರ ಉಳಿದುಕೊಂಡಿವೆ. ಒಂದು ಮತ್ತು ಎರಡನೇ ಹಂತದಲ್ಲಿ ಸುಮಾರು 176 ಗ್ರಾಮಗಳನ್ನು ಸ್ವಾಧೀನಪಡಿಸಿಕೊಂಡಿರುವುದರಿಂದ ಈಗ ಸುಮಾರು 20 ಗ್ರಾಮಗಳು ಮಾತ್ರ ಉಳಿದುಕೊಂಡಿವೆ. ಹಾಗಿರುವಾಗ ಇದನ್ನು ರಾಷ್ಟ್ರೀಯ ಯೋಜನೆ ಎಂದು ಏತಕ್ಕಾಗಿ ಘೋಷಣೆ ಮಾಡಬೇಕು? ನಮ್ಮ ಪಕ್ಷವಿರಲಿ, ಜನತಾದಳ ಪಕ್ಷ ಅಥವಾ ಬಿ.ಜೆ.ಪಿ ಪಕ್ಷವಿರಲಿ, ಯಾವುದೇ ಪಕ್ಷವಿರಲಿ. ಇದನ್ನು ರಾಷ್ಟ್ರೀಯ ಯೋಜನೆ ಮಾಡಬೇಕೆಂಬ ವಿಚಾರ ಏಕೆ ತಮ್ಮ ತಲೆಗೆ ಬಂತು? ಇದನ್ನು ರಾಷ್ಟ್ರೀಯ ಯೋಜನೆ ಮಾಡಬೇಕು. ಅದನ್ನು ಕೇಂದ್ರ ಸರ್ಕಾರದವರು ಕೈಗೆತ್ತಿಕೊಳ್ಳಬೇಕು, ಇದನ್ನು ಕೈಗೆತ್ತಿಕೊಳ್ಳಲಿಲ್ಲವೆಂದರೆ, ನಾವು ಹೀಗೆಯೇ ಹೋಗಬೇಕು. ಸುಮಾರು 176 ಗ್ರಾಮಗಳನ್ನು ಸ್ವಾಧೀನಪಡಿಸಿಕೊಂಡು, ಸುಮಾರು 136 ಗ್ರಾಮಗಳಿಗೆ ಪುನರ್ವಸತಿ ಕೇಂದ್ರಗಳನ್ನು ಕಲ್ಪಿಸಿದ್ದು, ಈಗಾಗಲೇ ಜನರು ಅಲ್ಲಿ ಹೋಗಿ ವಾಸ ಮಾಡುತ್ತಿದ್ದಾರೆ. ಬರೀ ಇಪ್ಪತ್ತು ಗ್ರಾಮಗಳಿಗೆ ಸುಮಾರು 2,70,000 ಎಕರೆ ಜಾಗವನ್ನು ಒಂದು ಮತ್ತು ಎರಡನೇ ಹಂತದಲ್ಲಿ ಸ್ವಾಧೀನ ಪಡಿಸಿಕೊಂಡಿದ್ದಾರೆ. ಈಗ ಸುಮಾರು 1,30,000 ಎಕರೆ ಜಾಗ ಅಂದರೆ, ಅರ್ಧದಷ್ಟು ಭೂಮಿ. ಆ ಸಂದರ್ಭದಲ್ಲಿ ನಮ್ಮ ಸರ್ಕಾರವಿದ್ದಾಗ ನಮ್ಮ ರಾಜ್ಯದ ಬಜೆಟ್‌ನಲ್ಲಿ ಅದಕ್ಕೆ ಹಣವನ್ನು ಕೊಟ್ಟಿದ್ದೆವು.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ವಿರೋಧ ಪಕ್ಷದ ನಾಯಕರಿಗೆ ಹೇಳಬಯಸುವುದೇನೆಂದರೆ, ಅವರು ಇದನ್ನು ಏತಕ್ಕೆ ಮಾಡುತ್ತಿದ್ದಾರೆಂದರೆ, ಇನ್ನು ಮುಂದೆ ಒಂದು ಎಕರೆ ಜಾಗಕ್ಕೆ ಒಂದು ಕೋಟಿ ರೂಪಾಯಿ ಬೆಲೆ ಆಗುತ್ತದೆಂದು ಅಧಿಕಾರಿಗಳು ಅವರಿಗೆ ತಿಳಿಸಿದ್ದಾರೆ. ಇನ್ನು ಮುಂದೆ invest ಮಾಡುವುದು. ಒಂದು ಎಕರೆ ಜಾಗವನ್ನು ನೀರಾವರಿ ಮಾಡಬೇಕೆಂದರೆ, ಒಂದು ಕೋಟಿ ರೂಪಾಯಿ ಖರ್ಚು ಬೀಳುತ್ತದೆ. ಹಾಗಾಗಿ ಅದನ್ನು ಮಾಡುವುದರಿಂದ ಯಾವುದೇ ಅರ್ಥವಿಲ್ಲ ಎಂದು ಬಜೆಟ್‌ನಲ್ಲಿಯೂ ಇಲ್ಲ ಮತ್ತು ರಾಜ್ಯಪಾಲರ ಭಾಷಣದಲ್ಲಿಯೂ ಇಲ್ಲ ಎಂದು ನಾನು ಹೇಳುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮ್ಮ ಹಿರಿಯರು ಅಖಂಡ ಕರ್ನಾಟಕದ ಕನಸನ್ನು ಕಂಡಿದ್ದಾರೆ. ಅವರು ಸತ್ತು ಸ್ವರ್ಗದಲ್ಲಿದ್ದಾರೆ. ಅಲ್ಲಿರುವ ಜನರಿಗೆ ಯಾವ ಭಾವನೆಗಳು ಬರುತ್ತದೆಂದರೆ, ಈ UKP (Upper Krishna Project) ಬಗ್ಗೆ ಮತ್ತು ಮಹದಾಯಿ ವಿಚಾರವಾಗಿ ಇವತ್ತು ದಿವ್ಯ ನಿರ್ಲಕ್ಷ್ಯ ತಾಳಿದರೆ, ಈ ಮಹದಾಯಿ ಯೋಜನೆಯಿಂದ ಬೆಳಗಾವಿ, ಬಾಗಲಕೋಟೆ, ಧಾರವಾಡ, ಗದಗ್ ಈ ನಾಲ್ಕು ಜಿಲ್ಲೆಗಳಿಗೆ ಉಪಯೋಗವಾಗುತ್ತದೆ. ಅದೇ

ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೀತಿ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಕಲ್ಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಾಗಲಕೋಟೆ, ವಿಜಯಪುರ, ಗದಗ್ ಈ ಏಳು ಜಿಲ್ಲೆಗಳಿಗೆ ಉಪಯೋಗವಾಗುತ್ತದೆ. ಬಹುತೇಕವಾಗಿ ಉತ್ತರ ಕರ್ನಾಟಕ ಫಲಪ್ರದವಾಗಬೇಕು. ಉತ್ತರ ಕರ್ನಾಟಕ ಭಾಗದ ರೈತರು ಸಂಪೂರ್ಣವಾಗಿ ಅಭಿವೃದ್ಧಿಯಾಗಬೇಕೆಂದರೆ ಅದಕ್ಕೆ ಇರುವಂತಹ ಒಂದೇ ಒಂದು ಅವಕಾಶ ಎಂದರೆ ಅತ್ಯಂತ ಪ್ರತಿಷ್ಠಿತವಾದಂತಹ ನೀರಾವರಿ ಯೋಜನೆಯಾದಂತಹ ಕೃಷ್ಣಾ ಮೇಲ್ದಂಡೆ ಯೋಜನೆಗೆ ಕಾಯಕಲ್ಪವನ್ನು ಕಲ್ಪಿಸಬೇಕು. ಆದರೆ ಅದನ್ನು ಕೈ ಬಿಟ್ಟಿದ್ದಾರೆ. ಇನ್ನುಳಿದಂತಹ ಮೂರನೇ ಹಂತದ ಯೋಜನೆ ಏನಿದೆ ಇದನ್ನು ರಾಷ್ಟ್ರೀಯ ಯೋಜನೆ ಎಂದು consider ಮಾಡಿ. ಕೇಂದ್ರ ಸರ್ಕಾರದವರು ಈ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕಂತೆ ಏಕೆ? ಸುಮಾರು 904 ಟಿ.ಎಂ.ಸಿ. ನೀರು ಹಂಚಿಕೆ ಇದೆ. ಆ ನೀರಿನ ಪ್ರತಿ ಹನಿಯೂ ಸದ್ಬಳಿಕೆಯಾದರೆ, ಇವತ್ತು ಉತ್ತರ ಕರ್ನಾಟಕ ಹಿಂದೆ ಉಳಿದಿದೆ ಎಂದು ಭಾಷಣ ಮಾಡುತ್ತಾರಲ್ಲ. ನಾನು ಹೇಳುವುದೇನೆಂದರೆ, ನೂರಕ್ಕೆ ನೂರರಷ್ಟು ದಕ್ಷಿಣ ಕರ್ನಾಟಕಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗುತ್ತದಷ್ಟೇ ಅಲ್ಲ ಭಾರತ ದೇಶದ ಯಾವುದೇ ಮುಂದುವರೆದ ಭಾಗಕ್ಕಿಂತ ಉತ್ತರ ಕರ್ನಾಟಕ ಎಲ್ಲಾ ದೃಷ್ಟಿಯಿಂದ ಮುಂದುವರೆಯುವುದಕ್ಕೆ ಸಾಧ್ಯವಿದೆ. ಅದೊಂದು ಪ್ರತಿಷ್ಠಿತವಾದಂತಹ ನೀರಾವರಿ ಯೋಜನೆ. ಇದಕ್ಕೆ ನಾನು ತಮ್ಮ ಮೂಲಕ ಈ ಸರ್ಕಾರಕ್ಕೆ ಕೈಮುಗಿದು ಕೇಳಿಕೊಳ್ಳುವುದೇನೆಂದರೆ, ಕೇಂದ್ರ ಸರ್ಕಾರದ ಕಡೆ ಕೈ ಮಾಡಬೇಡಿ. ಈ ಸದನಕ್ಕೆ ಮೊದಲ ಬಾರಿಗೆ ಮಾನ್ಯ ಮುಖ್ಯಮಂತ್ರಿಯವರು ಬಂದಾಗ ನಾನು ಹೇಳಿದೆ. ಅವರಿಗೆ ನಾನು ಅಭಿನಂದನೆಯನ್ನು ಸಲ್ಲಿಸಿದ್ದೇನೆ. ಅದು ಅಷ್ಟೇ ಅಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ತಾವು ಕಾಳಜಿ ವಹಿಸಬೇಕು. Beg, Borrow or Steel ಎಂದು ಆ ದಿನ ಹೇಳಿದೆ. You bring the money and complete the UKP ಎಂದು ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿದೆ. ಮಾನ್ಯ ಮುಖ್ಯಮಂತ್ರಿಯವರು ಕೇಂದ್ರ ಸರ್ಕಾರದಿಂದ ಹಣವನ್ನು ತರುತ್ತೇನೆಂದು ಹೇಳಿದರು. ನನಗೆ ಅದು ಸಂಬಂಧಿಸಿರುವುದಿಲ್ಲ. You beg, borrow or steel the money and complete the UKP. ಇಲ್ಲವೆಂದರೆ, ಉತ್ತರ ಕರ್ನಾಟಕದ ಶಾಪ ಸಾಮಾನ್ಯ ಶಾಪವಾಗುವುದಿಲ್ಲ. ಮುಂದಿನ ದಿನಗಳಲ್ಲಿ ಇದರ ಬಗ್ಗೆ ಕಾಳಜಿ ವಹಿಸಲಿಲ್ಲವೆಂದರೆ, ಮಾನ್ಯ ಸಭಾಪತಿಯವರೇ, ನಾನು ಹೇಳುತ್ತೇನೆ. ನಮ್ಮನ್ನು ಬ್ರಿಟೀಷರು ಏನು ಆಳುತ್ತಿದ್ದರು. ಆ ಸಂದರ್ಭದಲ್ಲಿ ಭಾರತ ಮಾತೆ ದಾಸ್ಯ ಸಂಕೋಲೆಗೆ ಸಿಲುಕಿ ಬಳಲುತ್ತಿದ್ದಂತಹ ಸಂದರ್ಭದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಹಿರಿಯತನದಲ್ಲಿ ಸ್ವಾತ್ರಂತ್ರ್ಯ ಸಂಗ್ರಾಮವಾಯಿತು. ಹಾಗೆಯೇ ಇವತ್ತು ಉತ್ತರ ಕರ್ನಾಟಕದವರು ಅದೇ ಮಾದರಿಯಲ್ಲಿ ನಮ್ಮ ಹಕ್ಕುಗಳಿಗಾಗಿ, ಸೌಲಭ್ಯಗಳಿಗಾಗಿ ಮತ್ತೊಮ್ಮೆ ಹೋರಾಟ ಮಾಡುವ ಕಾಲ ಬಂದರೂ ಆಶ್ಚರ್ಯವಾಗುವುದಿಲ್ಲ ಎನ್ನುವ ಮಾತನ್ನು ತಮ್ಮ ಮೂಲಕ ಈ ಸರ್ಕಾರಕ್ಕೆ ಹೇಳಬಯಸುತ್ತೇನೆ. ಇವತ್ತು ಜನರಿಗೆ ಅಷ್ಟೊಂದು ನೋವು ಮತ್ತು ಆಕ್ರೋಶ ಉಂಟಾಗಿ ಅವರು ಬಹಳ ತತ್ತರಿಸಿ ಹೋಗಿದ್ದಾರೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ವಿರೋಧ ಪಕ್ಷದ ನಾಯಕರೇ ನನಗೆ ಒಂದೇ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ. ಮಾನ್ಯ ಸಭಾಪತಿಯವರೇ, ಕಳೆದ ತಿಂಗಳು ಭರವಸೆ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ.ಸಿ. ಕೊಂಡಯ್ಯನವರು ಮತ್ತು ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ನೇತೃತ್ವದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಪ್ರದೇಶಕ್ಕೆ ಭೇಟಿ ಕೊಟ್ಟು ಸುದೀರ್ಘವಾದ ಸಭೆಯನ್ನು ನಡೆಸಿದ್ದೇವೆ. ಮಾನ್ಯ ಸರ್ವೋಚ್ಛ ನ್ಯಾಯಾಲಯವು 519 ರಿಂದ 524 meters ರವರೆಗೆ ಎತ್ತಿರಿಸಿಕೊಳ್ಳುವುದಕ್ಕೆ ನಮಗೆ ಅನುಮತಿಯನ್ನು ಕೊಟ್ಟಿದೆ. ಇದರಿಂದ ಹೆಚ್ಚುವರಿಯಾಗಿ ನಾಲ್ಕು ಲಕ್ಷ ಎಕರೆಗಳಷ್ಟು ಜಮೀನುಗಳಿಗೆ ನೀರು ಉಣಿಸಬಹುದು. ಆದರೆ ಇನ್ನೂ ಎರಡು ಲಕ್ಷ ಎಕರೆಯಷ್ಟು ಜಮೀನುಗಳಿಗೆ ನೀರು ಉಣಿಸುವ ವ್ಯವಸ್ಥೆಯೇ ನಮ್ಮಿಂದಾಗಿಲ್ಲ. ಇನ್ನು ಪುನರ್ ವಸತಿ ಕೆಲಸವೂ ಆಗಿಲ್ಲ ಹಾಗೂ ಮತ್ತೆ ಮುಂದೆ ಹೆಚ್ಚು ಮಾಡಿದ್ದರೆ ಏನು ಮಾಡಬೇಕು, ಅದಕ್ಕೆ ಏನೇನು ಸಿದ್ಧತೆಗಳನ್ನು ಮಾಡಿಕೊಳ್ಳಬೇಕು, ಆ ತಯಾರಿಯೂ ನಡೆದಿಲ್ಲ. ಹಾಗಾಗಿ ಒಟ್ಟು ಹದಿನಾರು ಲಕ್ಷ ಎಕರೆಗಳಿಗೆ ನೀರು ಉಣಿಸುವ ಇದೊಂದು ಬೃಹತ್ ಯೋಜನೆಯಾಗಿದೆ. ಈಗ ಹನ್ನೆರಡು ಎಕರೆಗೆ ಮಾತ್ರ ನೀರಾವರಿ ಕೊಟ್ಟಿರುವಂಥದ್ದು. ಅದಕ್ಕೆ Gazette Notification ಆಗುವಂತಹ ಒತ್ತಾಯವನ್ನು ತರಬೇಕು ಮತ್ತು ಯೋಜನೆಯನ್ನು ಪೂರ್ಣ ಮಾಡುವಂತೆ ಒತ್ತಾಯವನ್ನು ಮಾಡಬೇಕು.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಹೇಳಿದ್ದೇನೆ. ಒಂದು ಮತ್ತು ಎರಡನೇ ಹಂತದಲ್ಲಿ ಅಂದರೆ ಒಂದನೇ ಹಂತವೆಂದರೆ, ನಾರಾಯಣಪುರ ಡ್ಯಾಂ ಎರಡನೇ ಹಂತವೆಂದರೆ, ಆಲಮಟ್ಟಿ ಜಲಾಶಯದ 519.06 ಮೀಟರ್ ಎತ್ತರದವರೆಗೆ ಎತ್ತರಿಸಿದ್ದು. ಮೂರನೇ ಹಂತವೆಂದರೆ, 519.06 ಮೀಟರ್‌ನಿಂದ 524.256 ಮೀಟರ್‌ವರೆಗೆ ಎತ್ತರಿಸುವುದು. ಅಲ್ಲಿ 130 ಟಿ.ಎಂ.ಸಿ. ಅನ್ನು Brijesh Kumar ರವರು ಏನು ವರದಿಯನ್ನು ಕೊಟ್ಟಿದ್ದಾರೋ, 130 ಟಿ.ಎಂ.ಸಿ ಅಲ್ಲಿ ನೀರನ್ನು ಸಂಗ್ರಹ ಮಾಡಿ, 9 lift irrigation scheme ಮುಖಾಂತರ ಏಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಿಲ್ಲೆಗಳಿಗೆ ಸುಮಾರು 14,85,113 ಎಕರೆ ಜಮೀನುಗಳಿಗೆ ನೀರಾವರಿಯಾಗುವಂತಹ ಇದೊಂದು ಬೃಹತ್ ಯೋಜನೆ. Krishna Water Disputes Tribunal decision ಬಂದು ಸುಮಾರು ಹತ್ತು ವರ್ಷಗಳು ಕಳೆದಿದೆ. ದಿನಾಂಕ 30.12.2010ರಲ್ಲಿ ನಿರ್ಣಯ ಬಂದಿದೆ. ಇನ್ನು Gazette Notification ಆಗಿಲ್ಲ. ಏಕ ರೂಪದ ಪರಿಹಾರ ಪ್ರತಿ ಎಕರೆಗೆ ಇಂತಿಷ್ಟು ಕೊಡಬೇಕೆಂಬ ಬಗ್ಗೆ ಚರ್ಚೆಯಾಯಿತು. ಮಾನ್ಯ ಕಾಗೋಡ ತಿಮ್ಮಪ್ಪನವರ ಅಧ್ಯಕ್ಷತೆಯಲ್ಲಿ ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡಿದ್ದರು. ನಮ್ಮ ಜಿಲ್ಲೆಯವರೇ ಆದಂತಹ ಹಾಗೂ ಈ ರಾಜ್ಯದ ಉಪ ಮುಖ್ಯಮಂತ್ರಿಗಳಾದಂತಹ ಮಾನ್ಯ ಗೋವಿಂದ ಎಂ ಕಾರಜೋಳ ನೇತೃತ್ವದಲ್ಲಿ ಕ್ಯಾಬಿನೆಟ್ ಸಬ್ ಕಮಿಟಿಯಾಗಿದೆ. ಕ್ಯಾಬಿನೆಟ್ ಸಬ್ ಕಮಿಟಿ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕು. ಏಕ ರೂಪದ ಬೆಲೆ ಕೊಡುವಂತಹ ಖುಷ್ಕಿ ಜಮೀನುಗಳಿಗೆ ಇಂತಿಷ್ಟು, ನೀರಾವರಿ ಜಮೀನುಗಳಿಗೆ ಇಂತಿಷ್ಟು, ಮತ್ತು ತೋಟಗಾರಿಕೆ ಜಮೀನುಗಳಿಗೆ ಇಂತಿಷ್ಟು ಎಂದು ಘೋಷಣೆ ಮಾಡಬೇಕು. Land acquisition proceedings ಬೇಗನೆ ಪ್ರಾರಂಭ ಮಾಡಬೇಕು. ಹಳೆ ಕಾನೂನಿನ ಪ್ರಕಾರ 4(1) Notification ಇತ್ತು. ಈಗ 11(1) Notification ಇದೆ. ಆ 11(1) Notification ಆಗಿ, ಎಲ್ಲವೂ initiate ಆಗಿ ಹೋಗಿ ಬಿಟ್ಟಿದೆ. Land acquisition proceedings ಹಾಗೇ ನಿಂತು ಬಿಟ್ಟಿದೆ. ಇಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ, ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಅಧಿಕಾರಿಗಳು ಏತಕ್ಕೆ ನಿರ್ಲಕ್ಷ್ಯ ವಹಿಸಿದ್ದಾರೆಂದರೆ, ಈ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಕೆಲಸ ಮಾಡುವಂತಹ ಮಂಜೂರಾಗಿದ್ದ ಸ್ಥಳಗಳು ಎಷ್ಟಿವೆ ಎಂದರೆ, ಸುಮಾರು 855 ಸ್ಥಾನಗಳು. ಮಂಜೂರಾದ ಸ್ಥಾನಗಳಿಗೆ ಆಯುಕ್ತರಿಂದ ಹಿಡಿದುಕೊಂಡು, ಮಹಾ ವ್ಯವಸ್ಥಾಪಕರು, ಉಪ ವ್ಯವಸ್ಥಾಪಕರು ಹಾಗೂ ವಿಶೇಷ ಜಿಲ್ಲಾಧಿಕಾರಿಗಳು ಇಲ್ಲಿ ಯಾರೂ ಇಲ್ಲ. ಮಂಜೂರಾಗಿದ್ದಂತಹ ಒಟ್ಟು 855 ಸ್ಥಾನಗಳ ಪೈಕಿ ಸುಮಾರು 395 ಸ್ಥಾನಗಳು ಭರ್ತಿಯಾಗಿದೆ. ಖಾಲಿಯಾಗಿರುವ ಸುಮಾರು 460 ಸ್ಥಾನಗಳಿಗೆ ಇನ್ನು ಅಧಿಕಾರಿಗಳು ನೇಮಕವಾಗಿಲ್ಲ. ಇಲ್ಲಿಯವರೆಗೆ ಶೇಕಡ 458 ರಷ್ಟು ಅಧಿಕಾರಿಗಳು ನೇಮಕವಾಗಿಲ್ಲ. ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪನವರೇ ಕೇಳಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):**-ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಚೆನ್ನಾಗಿ ಮಾತನಾಡುತ್ತಿದ್ದಾರೆ. ಯಾವ ಸಂದರ್ಭದಲ್ಲಿ ಅದು Notification ಆಯಿತು ಮತ್ತು ಯಾವ ಸಂದರ್ಭದಲ್ಲಿ initiate ಆಯಿತು? ಈ ಹಿಂದೆ ಇದ್ದಂತಹ ಸರ್ಕಾರ ಐದು ವರ್ಷಗಳ ಅವಧಿಯಲ್ಲಿ ಏನು ಕೊಡುತ್ತೇವೆಂಬ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಶ್ವಾಸನೆಯನ್ನು ಕೊಟ್ಟು, ಎಷ್ಟು ಹಣ ಕೊಟ್ಟಿದ್ದಾರೆ. ಐದಾರು ವರ್ಷಗಳ ಅವಧಿಯಲ್ಲಿ ಎಷ್ಟು ಎಕರೆ ಜಮೀನುಗಳಿಗೆ ಪರಿಹಾರವನ್ನು ಒದಗಿಸಲಾಗಿದೆ ಎಂಬುದರ ಬಗ್ಗೆ ಸಮಗ್ರವಾಗಿ ಮಾತನಾಡಿದ್ದಾರೆ. ನಾವೂ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಕೂಡ ಒಂದೇ ತಾಲ್ಲೂಕಿನಿಂದ ಬಂದಂತಹವರಾಗಿದ್ದೇವೆ. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ನಮ್ಮ ಮತ್ತು ಅವರ ಗ್ರಾಮವೂ ಕೂಡ ಮುಳಗಡೆಯಾಗಿದೆ.

**ಶ್ರೀ ಎಸ್.ಆರ್. ಪಾಟೀಲ್:-** ಇದನ್ನು ಮಾಡುವುದು ಬೇಡ ಎಂದು ಹೇಳುತ್ತೀರಾ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ನಾನು ಮಾಡುವುದು ಬೇಡ ಎಂದು ಹೇಳುವುದಿಲ್ಲ.

**<u>(208)9.3.2020/12.30/ಎಂ.ಎಂ-ವಿ.ಕೆ</u>**

**ಶ್ರೀ ಎಸ್.ಆರ್. ಪಾಟೀಲ್:-** ನಿಮ್ಮ ಪಕ್ಷದ ಅತ್ಯಂತ ಹಿರಿಯ ನಾಯಕರು ಇಲ್ಲಿ ಅವರ ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ನಿಮ್ಮ ಪಕ್ಷದವರೇ ನನಗೆ ಹೇಳಿದ್ದಾರೆ. Let us forget about the party and fight unitedly ಎಂದು ಹೇಳಿದರು.

**ಶ್ರೀ ನಿರಾಣಿ ಹನುಮಂತ್ ರುದ್ರಪ್ಪ:-** ಅದೇ ವಿಷಯಕ್ಕೆ ಸಂಬಂಧಪಟ್ಟಂತೆ;

**ಶ್ರೀ ಎಸ್.ಆರ್. ಪಾಟೀಲ್:-** ಅಲ್ಲ, irrespective of party. You might have come from BJP, I might have come from Congress and Mr. Horatti might have come from JDS. ಎಲ್ಲರೂ ಒಂದಾಗಿ ನೀವು ಮಾಡಲಿಲ್ಲ, ನಾವು ಮಾಡಲಿಲ್ಲ ಎನ್ನುವ ಕಾಲ ಈಗ ಮುಗಿದಿದೆ. ಜನರ ತಾಳ್ಮೆ, ಸಹನೆಯ ಕಟ್ಟೆ ಒಡೆದಿದೆ. ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ ಇನ್ನು ಯಾರೂ ಒಂದು ನಿಮಿಷ ಸಹನೆಯಿಂದ ಇರುವುದಕ್ಕೆ ಸಾಧ್ಯವಿಲ್ಲ.

**ಶ್ರೀ ನಿರಾಣಿ ಹನುಮಂತ್ ರುದ್ರಪ್ಪ :-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ನಿಯಮ 330ರಡಿಯಲ್ಲಿ ಸಮಗ್ರ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಆಯಿತು ಮಾಡಿ, ನಾವು ಕೂಡ ನಿಮ್ಮ ಜೊತೆ ಇರುತ್ತೇವೆ.

**ಶ್ರೀ ನಿರಾಣಿ ಹನುಮಂತ್ ರುದ್ರಪ್ಪ:-** ನಾವಿಬ್ಬರೂ ಜೊತೆ ಸೇರಿ ಮಾಡೋಣ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:-** ನಾವು ನಿಮ್ಮ ಜೊತೆ ಕೈ ಜೋಡಿಸುತ್ತೇವೆ. ನಿಮ್ಮ ಧ್ವನಿಗೆ ಧ್ವನಿಗೂಡಿಸುತ್ತೇವೆ, ಹೆಗಲಿಗೆ ಹೆಗಲೇರಿಸುತ್ತೇವೆ, ಕೈಗೆ ಕೈ ಜೋಡಿಸುತ್ತೇವೆ. ಉತ್ತರ ಕರ್ನಾಟಕ ಭಾಗದ ಅನೇಕ ಭಾರತೀಯ ಜನತಾ ಪಕ್ಷದ ನಾಯಕರು ನನಗೆ ಹೇಳಿದ್ದಾರೆ. ಎಲ್ಲರೂ ಒಂದಾಗಿ ಇವತ್ತು ಯಾವುದೇ ಪಕ್ಷದ ಸರ್ಕಾರ ಇರಲಿ, UKP ಸಲುವಾಗಿ let us join our hands and let us fight together.

**ಸಭಾಪತಿಯವರು:-** ಇನ್ನೂ 17 ಜನ ಸದಸ್ಯರು ಮಾತನಾಡುವವರಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಸ್ವಾತಂತ್ರ್ಯ ಸಂಗ್ರಾಮದ ಮಾದರಿಯಲ್ಲಿ ಮತ್ತೊಂದು ಉತ್ತರ ಕರ್ನಾಟಕದ ಹೋರಾಟ ಪ್ರಾರಂಭವಾಗಲಿ ಎಂದು ನಿಮ್ಮ ನಾಯಕರು ನನಗೇನು ಹೇಳಿದ್ದಾರೆ, ಅವರ ಹೆಸರನ್ನು ಹೇಳುವುದಿಲ್ಲ ಅವರನ್ನು ಅಭಿನಂದಿಸುತ್ತೇನೆ.

**ಶ್ರೀ ನಿರಾಣಿ ಹನುಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ನಾವು ಕೂಡ ಕೃಷ್ಣಾ ಮೇಲ್ದಂಡೆ ಯೋಜನೆ ಬೇಗ ಆಗಲಿ ಎಂಬ ವಿಚಾರದಲ್ಲಿ ಮಾತನಾಡುತ್ತಿದ್ದೇವೆ. ಆ ಭಾಗದ ಸಂತ್ರಸ್ತರ ನೋವು ನಮಗೆ ಗೊತ್ತಿದೆ. ನಮ್ಮ ಸರ್ಕಾರ ಒಂದು ಹೆಜ್ಜೆ ಮುಂದೆ ಬಂದು ಮೊನ್ನೆ ಬಜೆಟ್‌ನಲ್ಲಿ ಕೂಡ ಸುಮಾರು 10 ಸಾವಿರ ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿದ್ದಾರೆ. ಎಲ್ಲಾ ಕಾರ್ಯಕ್ರಮಗಳೂ ಕೂಡ ಪ್ರಾರಂಭ ಮಾಡುತ್ತೇವೆ ಎಂಬ ಮಾತನ್ನು ಮುಖ್ಯಮಂತ್ರಿಯವರು ಹೇಳಿದ್ದಾರೆ. 10 ಸಾವಿರ ಕೋಟಿ ರೂಪಾಯಿಗಳನ್ನು ನೀಡಿರುವುದಕ್ಕೆ ಸರ್ಕಾರಕ್ಕೆ ನನ್ನ ಅಭಿನಂದನೆಗಳನ್ನು ಹೇಳಬಯಸುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ನಿರಾಣಿಯವರೇ, . . .

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ನಿರಾಣಿಯವರೇ, ನೀವು ಶೇ.100 ರಷ್ಟು ಬೆಂಬಲ ಕೊಡಬೇಕು. You must support us 100 per cent.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ವಿರೋಧಪಕ್ಷದ ನಾಯಕರೇ, . . .

**ಶ್ರೀ ನಿರಾಣಿ ಹನುಮಂತ್ ರುದ್ರಪ್ಪ:-** ಮಾನ್ಯ ಮುಖ್ಯಮಂತ್ರಿಯವರು ಕೂಡ 10 ಸಾವಿರ ಕೋಟಿ ರೂಪಾಯಿಗಳಷ್ಟು ದೊಡ್ಡ ಮೊತ್ತವನ್ನು . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:-** ನೀವು ನಮಗೆ ಸಂಪೂರ್ಣ ಬೆಂಬಲ ನೀಡುತ್ತೀರೆಂಬ ವಿಶ್ವಾಸ ನಮಗಿದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಪಾಟೀಲರವರೇ, ನಾವು ಚಿಕ್ಕ ಹುಡುಗರಾಗಿದ್ದಾಗಿಂದಲೂ ಯು.ಕೆ.ಪಿ ಬಗ್ಗೆ ಕೇಳುತ್ತಿದ್ದೇವೆ. 1964ನೇ ಇಸವಿಯಲ್ಲಿ ಪ್ರಾರಂಭವಾದದ್ದು . . .

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರವರೇ, . . .

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಈಗ 2020ರಲ್ಲಿದ್ದೇವೆ. ಅಂದರೆ 60 ವರ್ಷವಾಯಿತು ಇನ್ಯಾವಾಗ . . .

**ಸಭಾಪತಿಯವರು:-** ಇನ್ನೂ 17 ಜನ ಸದಸ್ಯರು ಮಾತನಾಡುವವರಿದ್ದಾರೆ. ಮಾತನಾಡಿರುವವರೇ ಪುನಃ ಮಾತನಾಡಿದರೆ ಹೇಗೆ?

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇದು ದೊಡ್ಡ ವಿಚಾರವಾಗಿದೆ.

**ಸಭಾಪತಿಯವರು:-** ಅದು ದೊಡ್ಡ ವಿಚಾರ ಹೌದು, ಅದಕ್ಕೆ ಮೂರು ಮೂರು ಸಲ ಮಾತನಾಡುವುದಲ್ಲ, ಕುಳಿತುಕೊಳ್ಳಿ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಕಂಠೇಗೌಡರು ಹೇಳಿದ ಹಾಗೆ 1964ರಲ್ಲಿ 'ಲಾಲ್ ಬಹದ್ದೂರ್ ಶಾಸ್ತ್ರಿ'ಯವರು ರೈಲ್ವೆ ಸಚಿವರಾಗಿದ್ದರು ಅವರು ಈ ಯೋಜನೆಗೆ ಶಂಕುಸ್ಥಾಪನೆ ಮಾಡಿ ಅಡಿಗಲ್ಲು ಹಾಕಿದರು. ಅದಕ್ಕೆ 'ಲಾಲ್‌ಬಹದ್ದೂರ್ ಶಾಸ್ತ್ರಿ ಜಲಸಾಗರ' ಎಂದು ಹೆಸರಿಟ್ಟಿದ್ದಾರೆ. ನಾರಾಯಣಪುರಕ್ಕೆ 'ಬಸವಸಾಗರ' ಎಂದು ಹೆಸರು ಇಟ್ಟಿದ್ದಾರೆ. ಮಾನ್ಯ ನಿರಾಣಿಯವರು ನಮಗೆ ಆತ್ಮೀಯರು, ಸಹೋದರರು. ಇದು 855 ಹುದ್ದೆಗಳು ಮಂಜೂರಾದಂತಹ ಸ್ಥಾನದಲ್ಲಿ 395 ಜನರು ಕೆಲಸ ಮಾಡುತ್ತಿದ್ದಾರೆ. 460 ಸ್ಥಾನಗಳು ಖಾಲಿ ಇವೆ. ಆ ಸ್ಥಾನಗಳಿಗೆ ಬೇಗನೆ posting ಆಗಬೇಕು. ಹಣ ಕೊಟ್ಟರೆ ಹಣ ಏನು ಕೃಷ್ಣಾರ್ಪಣವೇ? ಹಣ ಕೊಟ್ಟರೆ ಅದು ವಿನಿಯೋಗವಾಗಬೇಕಲ್ಲವೇ. ಎಲ್ಲಾ ಅಧಿಕಾರಿಗಳನ್ನು posting ಮಾಡಬೇಕು. Immediately, forthwith without any further delay of a minute the Government must fill all the vacant positions. I urge from your

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

good self. ಈ ಸರ್ಕಾರ ಒಂದು ನಿಮಿಷವೂ ತಡ ಮಾಡದೇ spot payment ಆಗಬೇಕು. ಅದರ ಜೊತೆಗೆ ಈಗಾಗಲೇ ಹೇಳಿದರು, 10 ಸಾವಿರ ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿದ್ದಾರೆ. ಶ್ರೀಮಾನ್ ಬಸವರಾಜ ಬೊಮ್ಮಾಯಿಯವರು ಜಲಸಂಪನ್ಮೂಲ ಸಚಿವರಾಗಿದ್ದಾಗ 11-12ನೇ ಸಾಲಿನ ದರಪಟ್ಟಿ ಪ್ರಕಾರ 3ನೇ ಹಂತಕ್ಕೆ ಎಷ್ಟು ಬೇಕಾಗುತ್ತದೆ ಎಂದರೆ, ಸುಮಾರು 17,207 ಕೋಟಿ ಹಣ ಬೇಕಾಗುತ್ತದೆ ಎಂದು ಆಗ administrative approval ಆಯಿತು. ತದನಂತರ ಇದು rectification ಆಗಿ ಪರಿಷ್ಕೃತ ಯೋಜನಾ ವರದಿ ಪ್ರಕಾರ ರೂ. 51,148 ಕೋಟಿ ಅಂದರೆ ಈಗ ಅಂದಾಜು 52 ಸಾವಿರ ಕೋಟಿ ಆಗಿದೆ. ಇದು ದಿನಾಂಕ 27-7-2017ರಂದು ಪರಿಷ್ಕೃತ ವರದಿ ರೂ. 51,148.94 ಕೋಟಿ ಎಂದು ಅನುಮೋದನೆಯಾಗಿದೆ. ಇದರಲ್ಲಿ 30 ಸಾವಿರ ಕೋಟಿ ಅಂದರೆ ರೂ. 30,143 ಕೋಟಿ this is only for land acquisition. ಉಳಿದ 9 lift irrigation ಏನಿವೆ ಏಳು ಜಿಲ್ಲೆಗಳ ಭೂಮಿಗೆ ನೀರುಣಿಸುವಂತಹ 9 ಯೋಜನೆಗಳು ಅಲ್ಲಿ main canal ಆಗಿರಬಹುದು distributary ಇಲ್ಲ, sub distributary, field channels ಎಲ್ಲಾ ಆಗಬೇಕಾಗಿದೆ. ಬಹಳಷ್ಟು ಕೆಲಸಗಳು ನನೆಗುದಿಗೆ ಬಿದ್ದಿವೆ. ಈಗ 52 ಸಾವಿರ ಕೋಟಿ ಯೋಜನೆ ಇದು ನಾನು ತಮ್ಮ ಮುಖಾಂತರ ಈ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ, ನಿಮ್ಮನ್ನು ನಾವೇನು disturb ಮಾಡುವುದಿಲ್ಲ ಮೂರು ವರ್ಷಗಳ ಅವಧಿಗೆ ನೀವೇ ಗಟ್ಟಿಯಾಗಿ ಇರಿ ಆದರೆ ನಮ್ಮ ಯು.ಕೆ.ಪಿ ಉಳಿಸಿಕೊಡಿ.

**ಶ್ರೀ ನಿರಾಣಿ ಹನುಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಈ ಕಳಕಳಿ ಮುಂಚೆಯಿಂದ ಇದ್ದರೆ 51 ಸಾವಿರ ಕೋಟಿ ರೂಪಾಯಿಗಳೊಳಗೆ ಮುಗಿದು ಹೋಗುತ್ತಿತ್ತು. ಇದು 5-6 ವರ್ಷ ಗತಿಸಿರುವುದರಿಂದ ಭೂಮಿಯ ಬೆಲೆ ಕೂಡ ತುಂಬಾ . . .

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಪಾಪ ಮಾನ್ಯ ನಿರಾಣಿಯವರು ಅನೇಕ ವರ್ಷ ಇಲ್ಲಿರುವುದಿಲ್ಲ, ಅವರೂ ಕೂಡ ವಕೀಲರು. ಶ್ರೀಮಾನ್ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಇದ್ದಾಗ ನೀರಾವರಿಗೆ we have spent 58,000 crores of money. ನಂತರ ಎರಡನೇ ಹಂತಕ್ಕೆ ಆ ಅವಧಿಯಲ್ಲಿ ಇವತ್ತು ಅದು Gazette Notification ಆಗಿಲ್ಲ. ಆಗ 10 ಸಾವಿರ ಚಿಲ್ಲರೆ ಕೋಟಿ ಹಣವನ್ನು ಖರ್ಚು ಮಾಡಿದ್ದಾರೆ. ಇವತ್ತು ಶ್ರೀಮಾನ್ ಕಾರಜೋಳರವರ

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನೇತೃತ್ವದಲ್ಲಿರುವ ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ನಿರ್ಣಯ ತೆಗೆದುಕೊಳ್ಳಿ ಏಕರೂಪದ ದರ ನಿಗದಿ ಮಾಡಲಿ. ಖುಷ್ಕಿ ಜಮೀನಿಗೆ ಎಕರೆಗೆ ಇಷ್ಟು ಕೊಡುತ್ತೇವೆ, ನೀರಾವರಿ ಜಮೀನಿಗೆ ಇಷ್ಟು ಕೊಡುತ್ತೇವೆ, ತೋಟಗಾರಿಕೆ ಜಮೀನುಗಳಿಗೆ ಎಷ್ಟು ಕೊಡುತ್ತೇವೆ ಎಂಬುದನ್ನು ಘೋಷಣೆ ಮಾಡಲಿ. ಇವತ್ತು 490 ಹುದ್ದೆಗಳು ಏನು ಖಾಲಿ ಇವೆ ಇವುಗಳನ್ನು ತಕ್ಷಣವೇ ಮೀನಾ-ಮೇಷ ಮಾಡದೇ posting ಮಾಡಬೇಕು, ಯಾರು ಹೋಗುವುದಿಲ್ಲ ಎಂದು ಹೇಳುತ್ತಾರೆ, ಅವರನ್ನು ಮನೆಗೆ ಕಳುಹಿಸಬೇಕು ಎಂದು ಹೇಳುತ್ತೇನೆ. ನಿರ್ದಾಕ್ಷಿಣ್ಯವಾದ ಕ್ರಮ ಕೈಗೊಳ್ಳಬೇಕು. ಕಡ್ಡಾಯವಾಗಿ ಅಲ್ಲಿ posting ಮಾಡಿದ ಅಧಿಕಾರಿಗಳನ್ನು ಈ ಯೋಜನೆ ಮುಗಿಯುವವರೆಗೆ ಅಲ್ಲಿಂದ ಸ್ಥಳಾಂತರ ಮಾಡಬಾರದು ಎಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ಶೇ.58 ರಷ್ಟು posting ಖಾಲಿ ಇವೆ, ಇವತ್ತು ಹಣ ಕೊಡುತ್ತೇವೆ ಎಂದು 10 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟರೆ 52 ಸಾವಿರ ಕೋಟಿ ರೂಪಾಯಿಯಲ್ಲ 75 ಸಾವಿರ ಕೋಟಿ ರೂಪಾಯಿ ಕೊಟ್ಟರೂ ಕೂಡ ಕಡಿಮೆ ಎಂದು ಹೇಳುತ್ತೇನೆ. As on today it may incur most minimum, ಅಂದರೆ 75 ಸಾವಿರ ಕೋಟಿ ರೂಪಾಯಿಗಳಂತೂ ಆಗುತ್ತದೆ ಎಂಬುದು ನನ್ನ ಭಾವನೆ. 10 ಸಾವಿರ ಕೋಟಿ ನಾನು ಹೇಳುವುದೇನೆಂದರೆ, 25 ಸಾವಿರ ಕೋಟಿ ಪ್ರತಿ ಬಜೆಟ್‌ನಲ್ಲಿ ಮೂರು ವರ್ಷ ಇಟ್ಟರೆ ಯು.ಕೆ.ಪಿ ಮುಗಿದರೆ ನಿಮ್ಮನ್ನು ಯಾವ ರೀತಿಯಾಗಿ ಎಷ್ಟು ಕೊಂಡಾಡುತ್ತೇವೆ ಎಂದರೆ ನೀವು ಇತಿಹಾಸದ ಪುಟಗಳಲ್ಲಿ ಖಾಯಂ ಆಗಿ ರಾರಾಜಿಸುತ್ತೀರಿ. ಇತಿಹಾಸದ ಪುಟದಲ್ಲಿ ಉಳಿಯುವುದಷ್ಟೇ ಅಲ್ಲದೇ ಉತ್ತರ ಕರ್ನಾಟಕದ ಸಮಸ್ತ ಜನತೆಯ ಹೃದಯದಲ್ಲಿ ನೀವು ಶಾಶ್ವತವಾಗಿ ನೆಲೆಸುತ್ತೀರಿ. ನಿಮಗೆ ಏನು ಕಡಿಮೆ ಮಾಡಿದ್ದಾರೆ? ಉತ್ತರ ಕರ್ನಾಟಕದಲ್ಲಿ ಎಷ್ಟು ಜನರು ಆಯ್ಕೆಯಾಗಿದ್ದಾರೆ ಎಂದರೆ ಪೂರಾ ಎಲ್ಲಾ ಲೋಕಸಭಾ ಸದಸ್ಯರು ನಮ್ಮಲ್ಲಿ ಒಬ್ಬರೂ ಇಲ್ಲ. ನಿಮ್ಮನ್ನೇ ಆರಿಸಿ ಬಿಟ್ಟಿದ್ದಾರೆ. 28ರಲ್ಲಿ 25 ಜನರು ಇನ್ನೊಬ್ಬರು supported by BJP ಮಂಡ್ಯ, total 26 ಜನರು. 28 ರಲ್ಲಿ ನಮ್ಮದೊಂದು ಬಂದಿದೆ ಮತ್ತು ಮಾನ್ಯ ಹೊರಟ್ಟಿಯವರ ಪಕ್ಷದಲ್ಲಿ ಒಂದು ಸ್ಥಾನ ಬಂದಿದೆ. 26 ಜನರು ಆಯ್ಕೆಯಾಗಿದ್ದಾರೆ. 105 ಶಾಸಕರು ಏನೇನೋ ಮ್ಯಾಜಿಕ್ ಮಾಡಿ ಈಗ 117 ಶಾಸಕರಾಗಿದ್ದಾರೆ. 117 ಶಾಸಕರು ಭಾರತೀಯ ಜನತಾ ಪಕ್ಷಕ್ಕೆ ಬೆಂಬಲ ಕೊಟ್ಟವರು. ಅದರಲ್ಲಿ ಉತ್ತರ ಕರ್ನಾಟಕದಲ್ಲಿ 100ಕ್ಕೆ 100 ರಷ್ಟು ಜನರು ನಿಮ್ಮನ್ನು ಆಶೀರ್ವಾದ ಮಾಡಿ ಆಯ್ಕೆ ಮಾಡಿದ್ದಾರೆ. All the Parliament Members from Uttara Karnataka have been elected from the BJP Party. ಜನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಮಗೆ ಏನು ಮಾಡಬೇಕು? ಮಾಡುವುದೇನಾದರೂ ಉಳಿದಿದೆಯೇ? ನೀವು ಇನ್ನೂ ಗೆಲ್ಲಿರಿ. ಮೂರು ವರ್ಷಗಳೂ ನೀವೇ ಇರಿ. ನೀವು ಮಾಡುವ ಕಾರ್ಯವೈಖರಿ ನೋಡಿದರೆ ನನಗೆ ನೀವು ಒಂದು ವರ್ಷವಾದರೂ ಇರುತ್ತೀರೋ ಇಲ್ಲವೋ ಎಂದೆನಿಸುತ್ತಿದೆ. ಶ್ರೀಮಾನ್ ಯಡಿಯೂರಪ್ಪನವರು ಬಂದಾಗ ಅವರನ್ನು ನಾನು ಅಭಿನಂದಿಸಿದ್ದೆ. "ಸಿದ್ದವನಹಳ್ಳಿ ನಿಜಲಿಂಗಪ್ಪನವರ ಹಾಗೆ ನೀವು 4ನೇ ಬಾರಿ ಮುಖ್ಯಮಂತ್ರಿಯಾಗಿದ್ದೀರಿ, ನಿಜಲಿಂಗಪ್ಪನವರ ದಾಖಲೆಯನ್ನು ಸರಿಗಟ್ಟಿದ್ದೀರಿ, ನಿಮಗೆ ಒಳ್ಳೆಯದಾಗಲಿ. ಮೂರೂವರೆ ವರ್ಷಗಳ ಕಾಲ ಭದ್ರವಾಗಿ ನೀವು ಆಡಳಿತ ಮಾಡಿ, ನಾವು ತೊಂದರೆ ಮಾಡುವುದಿಲ್ಲ. ನಿಮಗೆ ತೊಂದರೆ ಮಾಡುವವರು ನಿಮ್ಮ ಎಡಕ್ಕೆ ಬಲಕ್ಕೆ ಇದ್ದಾರೆ" ಎಂದು ಅಂದು ಹೇಳಿದ್ದೆ. ಅವರಿಗೆ ನಾನು ಏನು ಹೇಳಿದೆನೆಂದರೆ, ನಿಮ್ಮ ಎಡಕ್ಕೆ ಬಲಕ್ಕೆ ಕುಳಿತಿರುವವರ ಬಗ್ಗೆ ಹುಷಾರಾಗಿರಿ, ನಿಮ್ಮ ಎದುರಿಗೆ ಕುಳಿತಿರುವವರ ಬಗ್ಗೆ ಹುಷಾರಿರುವ ಅವಶ್ಯಕತೆ ಇಲ್ಲ ಎಂದು ಹೇಳಿದ್ದೆ. ಏಕೆಂದರೆ, ಆಗ ನಾವೇನೂ ಮಾಡಿಯೇ ಇಲ್ಲ. ಏನು ಮಾಡಬೇಕೋ ಎಲ್ಲವನ್ನೂ ಮಾಡೇ ಬಿಟ್ಟರು. ಅವರೇನು ಅವರನ್ನು ಬಿಡಲಿಲ್ಲ, ಅವರು ಪಕ್ಷ ಬಿಟ್ಟು ಬಿ.ಜೆ.ಪಿ ಹೋಗಿ, ಕೆ.ಜೆ.ಪಿ ಆಗಿ, ಆಳುವ ಪಕ್ಷ ಇತ್ತು. ರಾಜ್ಯದಲ್ಲಿ ಇವರ ಪರಿಸ್ಥಿತಿ ಏನಾಗಿತ್ತು ಎಂದರೆ, ಆಳುವ ಪಕ್ಷ ವಿರೋಧಪಕ್ಷ ಕೂಡ ಆಗಲಾರದಷ್ಟು ಹೀನಾಯವಾದಂತಹ ಸೋಲನುಭವಿಸಿದರು. ಈಗಲೂ ಮಾನ್ಯ ಯಡಿಯೂರಪ್ಪನವರ ಮೇಲೆ ಒಂದಿಷ್ಟು ಜನರು ಕಣ್ಣಿಟ್ಟಿರುವ ಹಾಗೆ ಕಾಣುತ್ತದೆ. ನಾನು ಹೇಳುತ್ತೇನೆ "BJP – Yeddurappa is a big zero". Whether I must tell it or not, "BJP – Yeddurappa is a big zero". ನಾನು ಹೇಳುತ್ತೇನೆ, ಇನ್ನೂ ಗಟ್ಟಿಯಾಗಿ ಮೂರು ವರ್ಷ ಇದೆ.

**(209) 09–03–2020/ 12–40/ ಕೆಹೆಚ್–ಬಿಎನ್ಎಸ್**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):–** ತಾವು ಒಂದು ವರ್ಷಕ್ಕೆ 25 ಸಾವಿರ ಕೋಟಿ ರೂಪಾಯಿಗಳಂತೆ ಮೂರು ವರ್ಷಗಳವರೆಗೆ ಬಜೆಟ್‌ನಲ್ಲಿ ಹಣವನ್ನು ಇಡಿ. ತಾವು ಮೊದಲು ಬಜೆಟ್ ಗಾತ್ರವನ್ನು ನೋಡಿ ಶೇಕಡಾ 10 ರಷ್ಟು ಆಗುತ್ತದೆ. ಸುಮಾರು 2,37,893 ರೂಪಾಯಿಗಳಾಗುತ್ತದೆ. ಇದಕ್ಕೆ ಶೇಕಡಾ 10 ರಷ್ಟು ಎಂದರೆ 23 ಸಾವಿರ ಕೋಟಿ ರೂಪಾಯಿಗಳಾಗುತ್ತದೆ. ನಾನು 20 ವರ್ಷದ ಬಜೆಟ್ ಪುಸ್ತಕವನ್ನು ತರಿಸಿಕೊಂಡು ನೋಡಿದ್ದೇನೆ. ಈ ರಾಜ್ಯದ ಬಜೆಟ್ 20 ವರ್ಷಗಳ ಹಿಂದೆ 10 ಸಾವಿರ ಕೋಟಿ ರೂಪಾಯಿಗಳು ಮಾತ್ರ ಇತ್ತು. ಇದು ಅತ್ಯಂತ ಆಶ್ಚರ್ಯಕರವಾದ ಸಂಗತಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಯ್ಯನವರು minus ಕಾಂಗ್ರೆಸ್ ಪಕ್ಷ, zero ಎಂದು ನಾವು ಭಾವಿಸಬಹುದೇ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇಲ್ಲ.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ನಾವು ಒಪ್ಪಿಕೊಳ್ಳುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ತೇಜಸ್ವಿನಿಗೌಡರವರೇ, ಹೋಗಲಿ ಬಿಡಿ. ನಮಗೆ ಏನು ಅನಿಸಿದೆ, ಅದನ್ನು ನಾವು ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರ ಮೇಲೆ . . .

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರೇ, ನಾನು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಇನ್ನು ಅರ್ಧ ಗಂಟೆಯೂ ಆಗಿರುವುದಿಲ್ಲ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಮಾನ್ಯ ಮುಖ್ಯಮಂತ್ರಿಯವರಾದ ಬಿ.ಎಸ್.ಯಡಿಯೂರಪ್ಪನವರು ಬಿಜೆಪಿ ಪಕ್ಷಕ್ಕೆ ಹೀರೊ ಎಂದು ತಾವು ಒಪ್ಪಿಕೊಳ್ಳುತ್ತೀರಾ, ಮಾನ್ಯ ಸಿದ್ದರಾಮಯ್ಯನವರು minus ಕಾಂಗ್ರೆಸ್, what? ಇದರ ಬಗ್ಗೆ ತಾವು ಒಪ್ಪಿಕೊಳ್ಳುತ್ತೀರಾ. ಮಾನ್ಯ ಯಡಿಯೂರಪ್ಪನವರು ಬಿಜೆಪಿ ಪಕ್ಷಕ್ಕೆ ದೊಡ್ಡ ಹೀರೊ ಆಗಿದ್ದಾರೆ.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ನಾಯಕರಂತಹ ಹಿರಿಯರಿದ್ದುಕೊಂಡು ಒಂದು ಸ್ಥಾನವನ್ನು ತುಂಬಿಸಿಕೊಳ್ಳಲು ನಿಮ್ಮಗಳ ಕೈಯಲ್ಲಿ ಆಗುತ್ತಿಲ್ಲ. ಯಾವ ನೈತಿಕತೆಯ ಆಧಾರದ ಮೇಲೆ ಇವರು ಮಾತನಾಡುತ್ತಿದ್ದಾರೆ ಎಂಬುದು ಅರ್ಥವಾಗುತ್ತಿಲ್ಲ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-**ಮಾನ್ಯ ಸಭಾಪತಿಯವರೇ, without ಮಾನ್ಯ ಬಿ.ಎಸ್. ಯಡಿಯೂರಪ್ಪನವರು, ಬಿಜೆಪಿ ಪಕ್ಷ zero ಎಂದು . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಕೆ. ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಇಲ್ಲಿ ಅವರ ಪಕ್ಷದಲ್ಲಿ ರಾಜ್ಯಾಧ್ಯಕ್ಷರು ಇಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಸ್ಥಾನಕ್ಕಾಗಿ ಗೌರವ ಕೊಡಬೇಕು.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರಾದ ಕೋಟ ಶ್ರೀನಿವಾಸ ಪೂಜಾರಿಯವರು ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಇಲ್ಲದ ಬಿಜೆಪಿ ಪಕ್ಷವನ್ನು ಊಹಿಸಲು ಸಾಧ್ಯವಿಲ್ಲವೆಂದು ಬಹಳ ಒಳ್ಳೆಯ ಮಾತನ್ನು ಹೇಳಿದ್ದಾರೆ. ಅದೇ ರೀತಿ, 'without Sri B.S. Yediyurappa BJP is going to become a big zero' ಎಂದು ನಾನು ಹೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಎಂ.ಕೆ. ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಿಮ್ಮಂತಹ ಹಿರಿಯರು ಕುಳಿತುಕೊಂಡು ಯೋಚನೆ ಮಾಡಬೇಕು. ಮಾನ್ಯ ಭೋಜೇಗೌಡರವರು ಜನತಾದಳ ಪಕ್ಷಕ್ಕೆ ಸೇರಿದವರೇ ಅಥವಾ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರೇ ಎಂಬುದೇ ನಮಗೆ ಗೊತ್ತಾಗುತ್ತಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅವರು ಒಪ್ಪಿಕೊಂಡಂತೆ ಆಯಿತು.

**(ಗೊಂದಲ)**

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ಮಾತನಾಡುತ್ತಿರುವವರು ಇಲ್ಲ ಎಂದು ಹೇಳಲಿ. ಇದಕ್ಕೆ ನಮ್ಮ ಅಭ್ಯಂತರ ಏನೂ ಇಲ್ಲ. ನಮಗೆ ಅನಿಸಿದ್ದನ್ನು ಹೇಳಿದ್ದೇವೆ ಅಷ್ಟೇ. ಭಾರತೀಯ ಜನತಾ ಪಕ್ಷದ ಭವಿಷ್ಯದ ಹಿತದೃಷ್ಟಿಯಿಂದ ಮಾನ್ಯ ಬಿ.ಎಸ್.ಯಡಿಯೂರಪ್ಪನವರಿಂದ ಬಿಜೆಪಿ ಪಕ್ಷ ಆಯಿತು. ಅವರು ಇಲ್ಲದೇ ಇದ್ದಿದ್ದರೆ ಈ ಬಿಜೆಪಿ ಪಕ್ಷ ಇರುತ್ತಿರಲಿಲ್ಲ ಎಂದು ಹೇಳಿದೆ.

**ಡಾ॥ ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಬಿಜೆಪಿ ಪಕ್ಷ zero vote . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ಅವರು ಇಲ್ಲ ಎಂದು ಹೇಳಲಿ. ಅವರು ಬಿಜೆಪಿ ಪಕ್ಷವನ್ನು ಡಿಫೆಂಡ್ ಮಾಡುತ್ತಿದ್ದಾರೆ. ಅವರು ಇಲ್ಲ ಎಂದು ಹೇಳಲಿ. ಇದು ಅವರಿಗೆ ಬಿಟ್ಟ ವಿಚಾರ. I am not compelling them to say 'yes' to my words. ತಾವು ಏನು ಹೇಳುತ್ತೀರೋ, ಹೇಳಿ. ಇದಕ್ಕೆ ತಾವು ಇಲ್ಲ ಎಂದು ಹೇಳಿ.

**ಡಾ॥ ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರು ಬಹಳ ಚೆನ್ನಾಗಿ ಹೇಳಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಇವರು ಮಾನ್ಯ ಬಿ.ಎಸ್.ಯಡಿಯೂರಪ್ಪನವರ ಬಗ್ಗೆ ವಿರೋಧ ಪಕ್ಷದ ನಾಯಕರು ಹೇಳಿದ್ದಕ್ಕೆ ಅವರು ಹೌದು ಎಂದು ಹೇಳುತ್ತಾರೋ ಅಥವಾ ಇಲ್ಲ ಎಂದು ಹೇಳುತ್ತಾರೋ ಎಂಬುದನ್ನು ಹೇಳಲಿ. ಉಳಿದ ವಿಷಯಗಳ ಬಗ್ಗೆ ಭಾಷಣ ಮಾಡುವುದು ಬೇಡ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, . . .

**ಡಾ॥ ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಎಸ್. ಯಡಿಯೂರಪ್ಪನವರು ನಮ್ಮ ಪಕ್ಷದ ಅತಿ ದೊಡ್ಡ ದೈತ್ಯ ಶಕ್ತಿ ಎಂದು ನಾವು ಹೆಮ್ಮೆಯಿಂದ ಒಪ್ಪಿಕೊಳ್ಳುತ್ತೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, . . .

**ಡಾ॥ ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರವರೇ, ಒಂದು ನಿಮಿಷ. ನಾನು ಹೇಳುವುದನ್ನು ಕೇಳಿಸಿಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-**ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಇಲ್ಲದ ಬಿಜೆಪಿ ಪಕ್ಷ zero ಎಂದು ತಾವು ಒಪ್ಪುತ್ತೀರೋ, ಇಲ್ಲವೋ

**ಡಾ॥ ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಒಂದಾದರೆ ಬಿಜೆಪಿ ಪಕ್ಷವು ಬಲಗಡೆ ಇರುವಂತಹ ಪಕ್ಷ zero ಆಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–**ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಎಸ್.ಯಡಿಯೂರಪ್ಪ ನವರು ಇಲ್ಲದ ಬಿಜೆಪಿ ಪಕ್ಷ big zero ಎಂದು ನಾನು ಹೇಳುತ್ತೇನೆ. ಅವರು ಅದನ್ನು ಒಪ್ಪುತ್ತೀರೋ ಅಥವಾ ಇಲ್ಲವೋ.

**ಡಾ|| ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಅವರ ಪಕ್ಷವನ್ನು ಹೊಗಳುತ್ತಿದ್ದೇನೆಯೇ ಹೊರತು ತೆಗಳುತ್ತಿಲ್ಲ. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಇಲ್ಲದ ಬಿಜೆಪಿ ಪಕ್ಷವನ್ನು ಊಹಿಸಲು ಸಾಧ್ಯವಿಲ್ಲ ಎಂದು ಮಾನ್ಯ ಸಭಾನಾಯಕರು ಹೇಳಿದ ಹಾಗೆ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಇಲ್ಲದ ಬಿಜೆಪಿ ಪಕ್ಷ big zero ಎಂದು ನಾನು ಹೇಳುತ್ತಿದ್ದೇನೆ. ಇದನ್ನು ಮಾನ್ಯ ಸದಸ್ಯರು ಒಪ್ಪುತ್ತಾರೆಯೇ?

**(ಗೊಂದಲ)**

**ಡಾ|| ತೇಜಸ್ವಿನಿಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಎಸ್.ಯಡಿಯೂರಪ್ಪ ಜೀ ಅವರನ್ನು ಅಧಿಕಾರದಿಂದ ಇಳಿಸುವಾಗ ಈ ಭಾವನೆ ಇರಲಿಲ್ಲ ಅಲ್ಲವೇ, ಮಾನ್ಯ ವಿರೋಧಪಕ್ಷದ ನಾಯಕರಾದ ಎಸ್.ಆರ್.ಪಾಟೀಲ್‌ರವರು ನಮಗೆ ಹಿರಿಯರು. ಸದ್ಭಾವನೆಯಿಂದ ನಾಯಕರು. . .

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಇದನ್ನು ಅವರು ಒಪ್ಪುತ್ತೀರೋ, ಇಲ್ಲವೋ.

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ವಿರೋಧಪಕ್ಷದ ನಾಯಕರೇ ಮಾತನಾಡಿ.

**ಡಾ|| ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಯಾವುದೇ ನಾಯಕರು ಒಂದಾದರೆ, political mathematics ನಲ್ಲಿ ವ್ಯಕ್ತಿಯನ್ನು ಕಡೆಗಣಿಸುವುದಕ್ಕೆ ಸಾಧ್ಯವೇ ಇಲ್ಲ. ಯಾವುದೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾಯಕರು ಒಂದಾದರೆ, ಪಾರ್ಟಿ zero ಎಂದು ಹೇಳಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಬಿಜೆಪಿ ಎಡಗಡೆ ಇರುವ zero ಅಲ್ಲ, ಬಲಗಡೆ ಇರುವ zero. ಅದಕ್ಕೆ ಎಷ್ಟು zero ಗಳನ್ನು ಹಾಕುತ್ತಾ ಹೋಗುತ್ತೀರೋ, ಅದು ಮೌಲ್ಯವರ್ಧಿತ zero ಆಗುತ್ತದೆ. (**ಗೊಂದಲ**) ನಾಯಕರು ಮತ್ತು ಪಾರ್ಟಿ ಸೇರಿದಾಗಲೇ . . . ಅದು ಜೆಡಿ(ಎಸ್) ಗೂ ಅನ್ವಯಿಸುತ್ತದೆ, ಕಾಂಗ್ರೆಸ್‌ಗೂ ಅನ್ವಯಿಸುತ್ತದೆ. ನಾವು ನಾಯಕರನ್ನು ಬಿಟ್ಟು ಕೊಡುವುದಕ್ಕೆ ಸಾಧ್ಯ ಇಲ್ಲ ಅಲ್ಲವೇ, ಮಾನ್ಯ ಸೋನಿಯಾ ಗಾಂಧಿಯವರನ್ನು zero ಎಂದು ಅವರು ಒಪ್ಪಿಕೊಳ್ಳಬಹುದೇ, ಮಾನ್ಯ ಹೆಚ್.ಡಿ.ಕುಮಾರಸ್ವಾಮಿ ಮತ್ತು ಮಾನ್ಯ ಹೆಚ್.ಡಿ.ದೇವೇಗೌಡ ಅವರುಗಳನ್ನು zero ಎಂದು ಅವರು ಒಪ್ಪಿಕೊಳ್ಳಬಹುದೇ, ಇದರ ಬಗ್ಗೆ ತಾವು ಒಪ್ಪಿಕೊಳ್ಳಿ. ಇದ್ದರಿಂದ ಆತ್ಮವಂಚನೆ ಮಾಡಿಕೊಳ್ಳುವುದು ಬೇಡ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ತೇಜಸ್ವಿನಿಗೌಡರವರೆ, ಒಂದು ನಿಮಿಷ. ನಮ್ಮ ವಿಷಯವನ್ನೆಲ್ಲಾ ಬಿಟ್ಟುಬಿಡು. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಇಲ್ಲದ ಬಿಜೆಪಿ ಪಕ್ಷ big zero ಎಂದು ತಾವು ಒಪ್ಪಿಕೊಳ್ಳುತ್ತೀರೋ, ಇಲ್ಲವೋ. ಇದಕ್ಕೆ ತಾವು ನೇರವಾಗಿ ನಮಗೆ ಉತ್ತರವನ್ನು ಕೊಡಿ.

**ಡಾ॥ ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ, ಬಲಗಡೆಗೆ zero ಎಂದು ನಾನು ಹೇಳುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಈಗ ಅದು ಬೇಡ.

**(ಗೊಂದಲ)**

**ಶ್ರೀ ಹೆಚ್.ಎಂ.ರಮೇಶಗೌಡ:-** ಮಾನ್ಯ ಸಭಾಪತಿಯವರೇ, ಅವರು ಒಪ್ಪಿಕೊಂಡ ಮೇಲೆ ಬಿ.ಎಸ್.ಯಡಿಯೂರಪ್ಪನವರೇ ಹೀರೊ.

**ಶ್ರೀ ಎಂ.ಕೆ. ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದಲ್ಲಿ ಎಲ್ಲಾ ಕಾರ್ಯಕರ್ತರು ಸಹ ಹೀರೋಗಳೇ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪ್ರಾಣೇಶ್‌ರವರೇ, . . .

**(ಗೊಂದಲ)**

**ಶ್ರೀ ಎಂ.ಕೆ. ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ನಾವು ಯಾವತ್ತೂ ಸಹ zero ಎಂದು ಹೇಳುವುದಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, 'ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಇಲ್ಲದ ಬಿಜೆಪಿ ಪಕ್ಷ big zero ಅಲ್ಲ' ಎಂದು ತಾವು ಒಪ್ಪುತ್ತೀರೋ?

**ಡಾ॥ ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಎಸ್.ಯಡಿಯೂರಪ್ಪನವರನ್ನು ಅಧಿಕಾರದಿಂದ ಇಳಿಸುವಾಗ ಅವರ ಬಗ್ಗೆ ಈ ಪ್ರೀತಿ-ಗೌರವ ಬರಲಿಲ್ಲ. ಆಗ ಅವರನ್ನು ಮರೆತು ಹೋದರಲ್ಲವೇ?

**ಶ್ರೀ ಎಂ.ಕೆ. ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಆಟಲ್ ಬಿಹಾರಿ ವಾಜಪೇಯಿ ಇರಬೇಕಾದರೆ ಅವರು ನಮಗೆಲ್ಲಾ ಹೀರೋ ಆಗಿದ್ದರು. ಇವತ್ತಿನ ದಿವಸ ಮಾನ್ಯ ನರೇಂದ್ರ ಮೋದಿಯವರು ಸಹ ನಮಗೆಲ್ಲಾ ಹೀರೋ ಆಗಿದ್ದಾರೆ. ಮುಂದೆ ಪ್ರಧಾನ ಮಂತ್ರಿ ಯಾರು ಬರುತ್ತಾರೋ, ಅವರು ಸಹ ನಮಗೆ ಹೀರೋ ಆಗುತ್ತಾರೆ. ಹಾಗಂತ ನಮ್ಮ ಪಕ್ಷದೊಳಗೆ zero ಎನ್ನುವ ಪ್ರಶ್ನೆಯೇ ಇಲ್ಲ. ಡಾ॥ ತೇಜಸ್ವಿನಿಗೌಡರವರು ಹೇಳಿದ ಹಾಗೆ ಆ zero ಮುಂದೆ ಬರುವ zero ಆಗುತ್ತದೆ. ಅದು ಹಿಂದೆ ಬರುವ zero ಅಲ್ಲ. ದಯವಿಟ್ಟು ಇದನ್ನು ತಾವೇ ಹೇಳಬೇಕು. ತಮ್ಮ ಕುಟುಂಬದ ರಾಜಕಾರಣದೊಳಗೆ ನೀವೆಲ್ಲಾ zero. ನಮ್ಮಲ್ಲಿ ಆ ರೀತಿ ಇಲ್ಲ. ನಮ್ಮದು ಕುಟುಂಬ ರಾಜಕಾರಣ ಅಲ್ಲ. ನಮ್ಮ ಪಕ್ಷದಲ್ಲಿ ಯಾರನ್ನು ಬೇಕಾದರೂ ದೇಶದ ಪ್ರಧಾನಿ ಮಾಡಬಹುದಂತಾದ ಸ್ವಾತಂತ್ರ್ಯವಿದೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇವತ್ತಿನ ಸಂದರ್ಭಕ್ಕೆ ಮಾನ್ಯ ಬಿ.ಎಸ್.ಯಡಿಯೂರಪ್ಪನವರಯ ಇಲ್ಲದೇ ಬಿಜೆಪಿ ಪಕ್ಷ zero . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಯ್ಯನವರನ್ನು ಕಡೆಗಾಣಿಸಿದ್ದಕ್ಕೆ ಏನಾಯಿತು?

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದನ್ನು ನಾವು ಒಪ್ಪುತ್ತೇವೆ. ತಾವು ಇದನ್ನು ಒಪ್ಪಿಕೊಳ್ಳಿ.

**ಶ್ರೀ ಎಂ.ಕೆ. ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಹೀರೊ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಣೇಶ್‌ರವರೇ, ತಾವು ಮೇಲೆ ಈ ರೀತಿ ಹೇಳುತ್ತೀರಿ. ಇದರ ಬಗ್ಗೆ ಎಷ್ಟೋ ಮಂದಿಯ ಒಳಗೆ ಇದು ಸರಿಯಿಲ್ಲ. ಕೆಲವು ಮಂದಿಗೆ ಮಾನ್ಯ ಎಸ್.ಆರ್.ಪಾಟೀಲ್‌ರವರು ಹೇಳಿರುವುದು ಸರಿಯಿಲ್ಲವೆಂದು ಅನಿಸುತ್ತದೆ. ಮಾನ್ಯ ತೇಜಸ್ವಿನಿಗೌಡರವರೇ, ತಾವು ಒಬ್ಬರು ಕೇಳುತ್ತೀರಿ. ಮಾನ್ಯ ಲಹರ್ ಸಿಂಗ್‌ರವರು ಇದರ ಬಗ್ಗೆ ಏನು ಹೇಳುತ್ತಾರೋ ಕೇಳೋಣ. ಅವರು ಸುಮ್ಮನೆ ಕುಳಿತಿದ್ದಾರೆ. ಅವರೂ ಬಿಜೆಪಿ ಪಕ್ಷಕ್ಕೆ ಸೇರಿದವರು.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಎಂ.ಕೆ. ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಬಹಳ ಹಿರಿಯರು ಅವರ ಮೇಲೆ ನಮಗೆ ಬಹಳ ಗೌರವ ಇದೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೆಗೌಡ:-** ಮಾನ್ಯ ಸಭಾಪತಿಯವರೇ, ನಮ್ಮ ಸಭಾನಾಯಕರು ಮತ್ತು ಉಪಮುಖ್ಯಮಂತ್ರಿಗಳು 'ಮೌನಂ, ಸಮ್ಮತಿ ಲಕ್ಷ್ಮಣಂ' ಎಂದು ಸುಮ್ಮನೆ ಕುಳಿತಿದ್ದಾರೆ.

**ಶ್ರೀ ಎಂ.ಕೆ. ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಅನಿವಾರ್ಯವಾಗಿ ಅವರು ಡಿಫೆಂಡ್ ಮಾಡುವಂತಹ ಪರಿಸ್ಥಿತಿಗೆ ಬಂದಿದ್ದಾರೆ. ಅವರು ಏನು ಮಾಡುತ್ತಾರೆ, ಅದರ ಬಗ್ಗೆ ಹೇಳಲೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇಕು. ಅವರು ಅಲ್ಲಿ ಕುಳಿತುಕೊಂಡಿದ್ದಾರೆ. ಇಲ್ಲದಿದ್ದರೆ, ಅವರಷ್ಟು senior most ಯಾರಿದ್ದಾರೆ, ಇದರ ಬಗ್ಗೆ ಉಳಿದ ಮಾನ್ಯ ಸದಸ್ಯರು ಹೇಳಲಿ ನೋಡೋಣ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಣೇಶ್‌ರವರೇ, ಇದರ ಬಗ್ಗೆ ಮನಃಸಾಕ್ಷಿಯಿಂದ ಮಾತನಾಡಿ. ತಾವು ಹೇಳುತ್ತಿರುವುದು ಅರ್ಥವೇ ಆಗುತ್ತಿಲ್ಲ. ಬಿಜೆಪಿ ರಾಜಕಾರ್ಣ ಇವತ್ತೇನಾದರೂ ಅತಿ ಹೆಚ್ಚು ಅಂದರೆ, ಬಿಜೆಪಿ ವಿರೋಧ ಪಕ್ಷದಲ್ಲಿಯೇ.

**(ಗೊಂದಲ)**

**ಶ್ರೀ ಎಂ.ಕೆ. ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ತಾವು ಹೇಳಲೇಬೇಕಾಗುತ್ತದೆ. ಆದರೆ ನಿಜವಾಗಿಯೂ ಅವರನ್ನು ಈ ರೀತಿ ಮಾಡಿದ್ದಾರೆ ಎಂದು ನಮಗೆ ಬೇಜಾರಾಗುತ್ತಿದೆ.

**ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ನಾಯಕರಾದ ಎಸ್.ಆರ್.ಪಾಟೀಲ್‌ನವರೇ, ದಯಮಾಡಿ ಮಾತನಾಡಿ.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಕರ್ನಾಟಕದಲ್ಲಿ . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಲಹರ್ ಸಿಂಗ್ ಸಿರೋಯಾರವರೇ, ಮಾತನಾಡುವುದನ್ನು ಬೇಗ ಮುಗಿಸಿ.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಕರ್ನಾಟಕದಲ್ಲಿ ಮಾನ್ಯ ಸಿದ್ದರಾಮಯ್ಯನವರು ಹೀರೊ, ಮಾನ್ಯ ಡಿ.ಕೆ.ಶಿವಕುಮಾರ್‌ರವರು ಸಹ ಹೀರೊ, ಮಾನ್ಯ ಗುಂಡೂರಾವ್‌ರವರು ಸಹ ಹೀರೊ, ಇದರಲ್ಲಿ ಏನಾಗುತ್ತದೆ ಎಂದರೆ, ಕಾಂಗ್ರೆಸ್ ಪಕ್ಷ big zero ಆಗಿದೆ. ಇಲ್ಲಿ ಯಾರೆಲ್ಲಾ zero ಆಗುತ್ತಾರೋ, ಅವರೆಲ್ಲಾ ಹೊರಗಡೆ ಬಂದರೆ ಹೀರೊ ಆಗುತ್ತಾರೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಲಹರ್ ಸಿಂಗ್ ಸಿರೋಯಾರವರೇ, ತಾವು ಬಹಳ ಬೇಗ zero ಆಗುತ್ತೀರಿ. ನಾವು 70 ವರ್ಷಗಳಿಂದ ಮಾಡುತ್ತಿದ್ದೇವೆ. ಇವರು 5 ವರ್ಷ ಮಾಡಿದ್ದಾರೆ. ಇಲ್ಲಿಗೆ ಇವರ ಕಥೆ ಮುಗಿದು ಹೋಗುತ್ತದೆ. ಇದೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊನೆ. ಇವರು ಬಹಳ ಬೇಗ ಹೋಗುತ್ತಾರೆ. ‘ಅಲ್ಪ ಆಯಸ್ಸಿನ ಮಗು’ ಇದು. ನಾನು ಹೇಳುತ್ತಿರುವುದು ಸಂತೋಷಕ್ಕೆ ಅಲ್ಲ. ಮಾನ್ಯ ಪ್ರಾಣೇಶ್‌ರವರೇ, ಪ್ರಾಕ್ಟಿಕಲ್ ಆಗಿ ಹೇಳುತ್ತಿದ್ದೇನೆ, ಅವರ ಪಕ್ಷಕ್ಕೆ ಬಹಳ ಅಲ್ಪ ಆಯಸ್ಸು. ತಾವು ಏನು ಸುಖವನ್ನು ಪಡುತ್ತೀರೋ, ಬಹಳ ಬೇಗ ಸುಖವನ್ನು ಪಡಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಮಾನ್ಯ ಸಭಾಪತಿಯವರೇ, ಎಲ್ಲರಿಗೂ ತಾವು ಎದ್ದು ನಿಂತುಕೊಂಡು ಹೇಳುವುದಕ್ಕೆ ಹೋಗುತ್ತಿದ್ದೀರಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಲಹರ್ ಸಿಂಗ್ ಸಿರೋಯಾರವರು ಕಾಂಗ್ರೆಸ್ ಪಕ್ಷವನ್ನು ಶೂನ್ಯ ಎಂದು ಏನೇನೋ ಮಾತನಾಡಿದರು. ಈ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟವರು, ಈ ದೇಶಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ತಂದವರು, ಈ ದೇಶಕ್ಕೆ ಸಂವಿಧಾನವನ್ನು ತಂದವರು, ಈ ದೇಶ ಅತ್ಯಂತ ಶೋಚನೀಯ ಸ್ಥಿತಿಯಲ್ಲಿದ್ದಾಗ ಇಡೀ ಪ್ರಪಂಚದಲ್ಲಿ ಶಕ್ತಿಶಾಲಿ, ಸಮೃದ್ಧ ಪ್ರಚಂಡ ರಾಷ್ಟ್ರ ಎಂದು ಇವತ್ತಿನ ದಿವಸ ಪ್ರತಿಯೊಬ್ಬ ಭಾರತೀಯನು ಬಹಳ ಹೆಮ್ಮೆ ಮತ್ತು ಗರ್ವದಿಂದ ನಾನು ಒಬ್ಬ ಭಾರತೀಯ ಎಂದು ಹೇಳುವಂತಹ ಶಕ್ತಿಯನ್ನು ಕಾಂಗ್ರೆಸ್ ಪಕ್ಷ ತಂದು ಕೊಟ್ಟಿದೆ. ಈ ಬಿಜೆಪಿ ಪಕ್ಷದವರು ಕಾಂಗ್ರೆಸ್ ಪಕ್ಷವನ್ನು zero ಎಂದಾದರೂ ಹೇಳಲಿ, ಏನಾದರೂ ಹೇಳಲಿ. I don’t care.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷದ ಬಗ್ಗೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈಗ ಕಾಂಗ್ರೆಸ್ ಪಕ್ಷ zero ಆಗಿದೆ ಎಂಬುದನ್ನು ತಾವು ಒಪ್ಪಿಕೊಳ್ಳಬೇಕು.

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಮಗೆ ಗೌರವ ಇದೆ. ಆದರೆ ನಿಮ್ಮ ಕಾಂಗ್ರೆಸ್ . . .

(ಮುಂದು)

**(210) 09/03/2020/12:50/ಎಸ್‌ಪಿಆರ್/ಬಿಎನ್‌ಎಸ್**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ಮಾನ್ಯ ನಾರಾಯಣಸ್ವಾಮಿಯವರು ನಾನು ಮಾತನಾಡಬೇಕಾದರೆ, ಯಾವಾಗಲೂ ಎದ್ದು ನಿಂತುಕೊಳ್ಳುತ್ತಿದ್ದರು. ಈಗ ಅವರು ಸದನದಲ್ಲಿಲ್ಲ; ಹೊರಗಡೆ ಹೋಗಿದ್ದಾರೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಒಂದು ವೇಳೆ ಅವರು ಸದನದಲ್ಲಿದ್ದಿದ್ದರೆ, ನಾನು ಅವರನ್ನು ಕೇಳಬೇಕೆಂದುಕೊಂಡಿದ್ದೆನು. ನಾನು ಮಾತನಾಡಬೇಕಾದರೆ, ಪ್ರತಿ ಐದು ನಿಮಿಷಕ್ಕೊಮ್ಮೆ ಅವರು ಎದ್ದು ನಿಲ್ಲುತ್ತಿದ್ದರು. ಪ್ರಸ್ತುತ ವಿಷಯದ ಚರ್ಚೆಯ ಸಮಯದಲ್ಲಿ ಅವರು ಸದನದಿಂದ ಹೊರಗಡೆ ಹೋಗಿದ್ದಾರೆ. ಅವರ ಅನುಪಸ್ಥಿತಿಯಲ್ಲಿ ನಾವು ಮಾತನಾಡಬಾರದು. ಇದು ಕರ್ನಾಟಕ ರಾಜ್ಯದ ಅತ್ಯಂತ ಪ್ರತಿಷ್ಠಿತ ಹಾಗೂ ಉತ್ತರ ಕರ್ನಾಟಕ ಭಾಗಕ್ಕೆ ದೊಡ್ಡ ಶಕ್ತಿಯನ್ನು ತುಂಬುವ ನೀರಾವರಿ ಯೋಜನೆಯಾಗಿದೆ. ಈ ಯೋಜನೆಯಿಂದಾಗಿ ಉತ್ತರ ಕರ್ನಾಟಕ ಭಾಗದ ದೊಡ್ಡ ಏಳು ಜಿಲ್ಲೆಗಳಿಗೆ ಫಲಪ್ರದವಾಗುವ 130 ಟಿ.ಎಂ.ಸಿ.ಯಷ್ಟು ನೀರನ್ನು ಬಳಕೆ ಮಾಡಿಕೊಂಡು 14,85,000 ಎಕರೆಯಷ್ಟು ನೀರಾವರಿ ಮಾಡುವ ಮೂರನೇ ಹಂತದ ಯೋಜನೆಯನ್ನು ಪೂರ್ತಿ ಮಾಡುವ ನಿಟ್ಟಿನಲ್ಲಿ, ಹಾಲಿ ಖಾಲಿಯಿರುವ ಹುದ್ದೆಗಳನ್ನು ಸರ್ಕಾರವು ಯಾವುದೇ ಮೀನ–ಮೇಷ ಎಣಿಸಲಾರದೇ, ತಕ್ಷಣವೇ ಭರ್ತಿ ಮಾಡಬೇಕು. ಸದರಿ ಹುದ್ದೆಗಳಿಗೆ ಒಳ್ಳೆಯ, ಪ್ರಾಮಾಣಿಕ, ದಕ್ಷ ಮತ್ತು ಸಮರ್ಥ ಅಧಿಕಾರಿಗಳನ್ನು ತುಂಬಬೇಕು. ಖಾಲಿಯಿರುವ 490 ಹುದ್ದೆಗಳನ್ನು ಯಾವುದೇ ವಿಳಂಬ ಮಾಡದೇ ತತ್‌ಕ್ಷಣ ಭರ್ತಿ ಮಾಡಬೇಕು. ಆಯವ್ಯಯದ ಮೇಲೆ ಚರ್ಚೆ ಮಾಡುವ ಸಂದರ್ಭದಲ್ಲಿ ನಾನು ಪುನಃ ಈ ವಿಚಾರವಾಗಿ ಮಾತನಾಡುತ್ತೇನೆ.

ನೆರೆ ಸಂತ್ರಸ್ತರಿಗೆ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಹತ್ತು ಸಾವಿರ ರೂಪಾಯಿಗಳ ಪರಿಹಾರವನ್ನು ಘೋಷಣೆ ಮಾಡಿದ್ದಾರೆ. ಈ ವಿಷಯ ಬೇರೆ. ಕೃಷ್ಣಾ ಮೇಲ್ದಂಡೆ ಯೋಜನೆಯು 75,000 ಕೋಟಿ ರೂಪಾಯಿಗಳಷ್ಟು ಬೃಹತ್ ಯೋಜನೆಯಾಗಿದೆ. ಹಾಲಿ ಸರ್ಕಾರವು ಅಸ್ತಿತ್ವದಲ್ಲಿರುವಾಗಲೇ ಪ್ರತಿ ವರ್ಷವೂ 25,000 ಕೋಟಿ ರೂಪಾಯಿಗಳನ್ನು ಅಂದರೆ ಒಟ್ಟಾರೆ ಆಯವ್ಯಯದ ಶೇಕಡಾ 10 ರಷ್ಟನ್ನು ಈ ಯೋಜನೆಗೋಸ್ಕರವಾಗಿ ಮೀಸಲಿಡಬೇಕೆನ್ನುವುದು ನನ್ನ ಆಶಯವಾಗಿದೆ. Every year 10% of the Budget has to be reserved for UKP (Upper Krishna project). ನಾನು ಕಳೆದ 20 ವರ್ಷಗಳ ಆಯವ್ಯಯದ ಪುಸ್ತಕಗಳನ್ನು ತೆಗೆಸಿ ನೋಡಿದ್ದೇನೆ. ಆಗ ಆಯವ್ಯಯದ ಒಟ್ಟಾರೆ ಗಾತ್ರ ಹತ್ತು ಸಾವಿರ ಕೋಟಿ ರೂಪಾಯಿಗಳಿತ್ತು. ಅಂತಹ ಸಂದರ್ಭದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಅಂದರೆ ಶೇಕಡಾ 10 ರಷ್ಟನ್ನು ಮೀಸಲಿಟ್ಟಿದ್ದರು. ಇವತ್ತಿನ ಆಯವ್ಯಯದ ಒಟ್ಟು ಗಾತ್ರ ಸುಮಾರು ಎರಡೂವರೆ ಲಕ್ಷ ಕೋಟಿ ರೂಪಾಯಿಗಳಾಗಿದ್ದು, ಇದರಲ್ಲಿ ಶೇಕಡಾ 10 ರಷ್ಟು ಎಂದರೆ, ಪ್ರತಿವರ್ಷವೂ 25,000 ಕೋಟಿ ರೂಪಾಯಿಗಳಂತೆ ಮೂರು ವರ್ಷಗಳಿಗೆ ಒಟ್ಟು 75,000

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೋಟಿ ರೂಪಾಯಿಗಳಷ್ಟು ಹಣವು ಯೋಜನೆಗಾಗಿ ಬಟವಾಡೆಯಾಗಬೇಕು. ಈ ನಿಟ್ಟಿನಲ್ಲಿ ಸಚಿವ ಸಂಪುಟದ ಉಪ ಸಮಿತಿಯು ಶೀಘ್ರದಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳಬೇಕು. They should arrive at a conclusion. ಖುಷ್ಕಿ ಮತ್ತು ನೀರಾವರಿ ಜಮೀನಿಗೆ ಪ್ರತಿ ಎಕರೆಗೆ ಎಷ್ಟು ನೀಡಬೇಕು, ತೋಟಗಾರಿಕೆ ಬೆಳೆಗಳಿಗೆ ಎಷ್ಟು ನೀಡಬೇಕು ಎನ್ನುವ ಅಂಶಗಳ ಬಗ್ಗೆ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಆದ್ಯತೆಯ ಮೇಲೆ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ಪ್ರತಿವರ್ಷವೂ, exclusively for UKP ಕನಿಷ್ಠ 25,000 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಮೀಸಲಿಡಬೇಕು. ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಮಹದಾಯಿ ಯೋಜನೆಗೆ ಸಂಬಂಧಪಟ್ಟಂತೆ 500 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. ನನ್ನ ದೃಷ್ಟಿಯಲ್ಲಿ ಈ ಯೋಜನೆಗೆ ಐನೂರು ಕೋಟಿ ರೂಪಾಯಿ ಅಲ್ಲ, ಐದು ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದರೂ ಅದು ತಪ್ಪಾಗುತ್ತಿರಲಿಲ್ಲ. ಈ ಯೋಜನೆಗೆ ಸರ್ಕಾರವು ಇನ್ನೂ ಹೆಚ್ಚಿನ ಹಣವನ್ನು ಮೀಸಲಿಡಬೇಕಾಗಿತ್ತು.

ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎನ್ನುವಂತಹ ಭೇದ-ಭಾವವನ್ನು ಅಳಿಸಿ, ನಮ್ಮ ಪೂರ್ವಜರು ಕಂಡ ಅಖಂಡ ಕರ್ನಾಟಕ ಕನಸಿನಂತೆ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು. ನಮ್ಮ ಪೂರ್ವಿಕರು ಇವತ್ತಿನ ದಿವಸ ಸತ್ತು ಸ್ವರ್ಗದಲ್ಲಿದ್ದಾರೆ. ಅವರುಗಳು ಅಖಂಡ ಕರ್ನಾಟಕದ ಕನಸನ್ನು ಕಂಡಿದ್ದರು. ಇಂತಹ ಕನಸು ನನಸಾಗಬೇಕಾದರೆ, ವಿಭಜನೆಯ ಕೂಗು ಬರದಿರುವಂತೆ ನಾವು ಅಖಂಡ ಕರ್ನಾಟಕದ ಕನಸು ನನಸಾಗುವಂತೆ ಮಾಡಬೇಕು. ನಾನು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎಂದು ಭೇದ ಮಾಡುವುದಿಲ್ಲ. ಉತ್ತರ ಕರ್ನಾಟಕದ ಭಾಗಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು. ಅದರಲ್ಲೂ ವಿಶೇಷವಾಗಿ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಾದ ಅನ್ಯಾಯವನ್ನು ಹಾಲಿ ಅಸ್ತಿತ್ವದಲ್ಲಿರುವ ಸರ್ಕಾರವು ಸರಿಪಡಿಸಬೇಕು. ಮುಂದಿನ ಮೂರು ವರ್ಷಗಳಲ್ಲಿ ಈ ಯೋಜನೆಯನ್ನು ಸಂಪೂರ್ಣಗೊಳಿಸಲು ಸರ್ಕಾರದವರು ಸಿದ್ಧರಾಗಬೇಕು. ಆದ್ದರಂದ ಹಾಲಿ ಅಧಿಕಾರದಲ್ಲಿರುವ ಸರ್ಕಾರವು ಎಲ್ಲಾ ರಂಗಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ವಿಫಲವಾಗಿದೆ ಎಂದು ನಾನು ಹೇಳಲಿಚ್ಛಿಸುತ್ತೇನೆ. ನಿರ್ದಿಷ್ಟ ಕ್ಷೇತ್ರ- ರಂಗವಿಲ್ಲದೇ, ಪ್ರತಿ ಕ್ಷೇತ್ರ-ರಂಗಗಳಲ್ಲಿ ಸರ್ಕಾರವು ಎಡವಿದೆ. ಇಷ್ಟು ದಿವಸ ಈ ಸರ್ಕಾರಕ್ಕೆ ಸಮಯವಿರಲಿಲ್ಲ. ಆದರೆ ಈಗ ಸಚಿವ ಸಂಪುಟವು ಪೂರ್ಣ ಪ್ರಮಾಣದಲ್ಲಿ ರಚನೆಯಾಗಿದೆ. ಮೂಲತಃ ಭಾರತೀಯ ಜನತಾ ಪಕ್ಷದ ಸದಸ್ಯರು ಕಾಯ್ದುಕೊಂಡು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಳಿತಿದ್ದಾರೆ. ಅವರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. After all, it is an internal matter. ಈ ರಾಜ್ಯದಲ್ಲಿನ ಯಾವ ಜಿಲ್ಲೆಗಳಿಗೆ ಇನ್ನೂ ಪ್ರಾತಿನಿಧ್ಯ ದೊರೆತಿಲ್ಲ, regionalism ಪ್ರಕಾರ ಅಂತಹ ಜಿಲ್ಲೆಗಳಿಗೆ ಪ್ರಾತಿನಿಧ್ಯವನ್ನು ಕಲ್ಪಿಸಿಕೊಡಬೇಕು. ಅಂದರೆ ಆಯಾಯ ಭಾಗಗಳಿಗೆ ಪ್ರಾತಿನಿಧ್ಯವನ್ನು ಒದಗಿಸಬೇಕು. ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ಸರ್ಕಾರವು ಶೀಘ್ರದಲ್ಲಿ ಭರ್ತಿ ಮಾಡಬೇಕು. ಮುಂದಿನ ಮೂರು ವರ್ಷಗಳಲ್ಲಿ ಪ್ರತಿವರ್ಷದ ಆಯವ್ಯಯದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ 25 ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಡುವುದರ ಜೊತೆಗೆ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಿ, ಯೋಜನೆಯ ಕೆಲಸಗಳನ್ನು ಪ್ರಾರಂಭ ಮಾಡಬೇಕೆನ್ನುವ ಮಾತನ್ನು ನಾನು ಸರ್ಕಾರಕ್ಕೆ ಹೇಳಬಯಸುತ್ತೇನೆ. ಹಾಲಿ ಅಧಿಕಾರದಲ್ಲಿರುವ ಸರ್ಕಾರವು ಎಲ್ಲಾ ಕ್ಷೇತ್ರಗಳಲ್ಲಿ ನೂರಕ್ಕೆ ನೂರರಷ್ಟು ವಿಫಲವಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಸಂಪ್ರದಾಯದನುಸಾರವಾಗಿ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ನಾವು ಒಪ್ಪಿಗೆಯನ್ನು ಸೂಚಿಸಬೇಕು. ಮನಸಾರೆ ಹಾಗೂ ಹೃದಯಪೂರ್ವಕವಾಗಿ ವಂದನಾ ನಿರ್ಣಯವು ಒಪ್ಪಿಗೆಯಾಗದಿದ್ದರೂ ಸಹ ನಾನು ವಂದನಾ ನಿರ್ಣಯದಲ್ಲಿ ಭಾಗಿಯಾಗಿ, ನನಗೆ ಮಾತನಾಡಲು ಅವಕಾಶ ನೀಡಿದ ತಮಗೆ ವಿಶೇಷವಾದ ಕೃತಜ್ಞತೆ ಹಾಗೂ ಧನ್ಯವಾದಗಳನ್ನು ಅರ್ಪಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

**3. <u>ಸಂತಾಪ ಸೂಚನೆ</u>**

**ವಿಷಯ:- ಕರ್ನಾಟಕದ ಮಾಜಿ ರಾಜ್ಯಪಾಲರು, ಮಾಜಿ ಕೇಂದ್ರ ಸಚಿವರಾಗಿದ್ದ ಹಂಸರಾಜ್ ಭಾರದ್ವಾಜ್ ಹಾಗೂ ಶಿವಸ್ವರೂಪಿಣಿ ಮಾಣಿಕೇಶ್ವರಿ ಅವರುಗಳ ನಿಧನದ ಬಗ್ಗೆ.**

– – –

**(ಪ್ರತಿಯನ್ನು ಲಗತ್ತಿಸಿದೆ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ಮಾಜಿ ರಾಜ್ಯಪಾಲರಾಗಿದ್ದ ಮತ್ತು ಕೇಂದ್ರದ ಮಾಜಿ ಸಚಿವರಾಗಿದ್ದ ಹಿರಿಯ ಚೇತನ ಹಂಸರಾಜ್ ಭಾರದ್ವಾಜ್‌ರವರು ದಿನಾಂಕ 08/03/2020 ರಂದು ನಿಧನ ಹೊಂದಿದ್ದಾರೆ. ಅವರು ವೃತ್ತಿಯಲ್ಲಿ ಬಹಳ ದೊಡ್ಡ ನ್ಯಾಯಾವಾದಿಯಾಗಿ ಎಲ್ಲರ ಗಮನವನ್ನು ಸೆಳೆದಿದ್ದರು. ದಿವಂಗತರು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದೆಹಲಿಯ ಉಚ್ಚ ನ್ಯಾಯಾಲಯದಲ್ಲಿ ಸರ್ಕಾರಿ ಅಭಿಯೋಜಕರಾಗಿ ಕಾರ್ಯನಿರ್ವಹಿಸಿದ್ದರು. ಅವರಿಗೆ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಲು ಐದು ಬಾರಿ ಅವಕಾಶ ದೊರೆಯಿತು. ಶ್ರೀಯುತರು ಅಪಾರವಾದ ಅನುಭವಗಳನ್ನು ಹೊಂದಿದ್ದು, ಕೇಂದ್ರದಲ್ಲಿ ಕಾನೂನು ಮತ್ತು ನ್ಯಾಯ ಸಚಿವರಾಗಿ, ಯೋಜನೆ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವರಾಗಿ ಸೇವೆಯನ್ನು ಸಲ್ಲಿಸಿದ್ದರು. ಅವರು ಐದು ವರ್ಷಗಳ ಕಾಲ ನಮ್ಮ ರಾಜ್ಯದ ರಾಜ್ಯಪಾಲರಾಗಿ ಹಾಗೂ ಕೇರಳ ರಾಜ್ಯದ ಹೆಚ್ಚುವರಿ ಉಸ್ತುವಾರಿ ರಾಜ್ಯಪಾಲರಾಗಿಯೂ ಕಾರ್ಯನಿರ್ವಹಿಸಿದ್ದರು. ಶ್ರೀಯುತರು ನಮ್ಮ ರಾಜ್ಯದ ರಾಜ್ಯಪಾಲರಾಗಿದ್ದ ಸಂದರ್ಭದಲ್ಲಿ ನಮ್ಮ ಪಕ್ಷವು ಅಧಿಕಾರದಲ್ಲಿತ್ತು. ನಾವು ಅವರೊಂದಿಗೆ ಚರ್ಚೆ ಮಾಡಿ, ಅವರ ನಿಲುವನ್ನು ವಿಮರ್ಶೆ ಮಾಡಿ, ಅವರೊಂದಿಗೆ ವಾದ-ಪ್ರತಿವಾದ ಮಾಡಿದ್ದೇವೆ. ಅವರಿಗಿದ್ದ ಅಪಾರ ಜ್ಞಾನ, ಪಾಂಡಿತ್ಯ, ಅನುಭವಗಳು ಅತ್ಯಂತ ಪ್ರಶ್ನಾತೀತವಾಗಿದ್ದವು ಎಂದು ನಮಗೆಲ್ಲರಿಗೂ ಅನ್ನಿಸಿತ್ತು. ಅತ್ಯಂತ ಅನುಭವದ ಗಣಿಯಾಗಿದ್ದ ಶ್ರೀಯುತರ ನಿಧನ ನಿಜಕ್ಕೂ ನಮ್ಮ ಸಮಾಜಕ್ಕೆ ಬಹು ದೊಡ್ಡ ನಷ್ಟವಾಗಿದೆ ಎನ್ನುವುದನ್ನು ನಾವುಗಳು ಯಾರೂ ಸಹ ಮರೆಯುವುದಕ್ಕೆ ಸಾಧ್ಯವಿಲ್ಲ. ಅವರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲಿ ಎಂದು ತಮ್ಮ ಮೂಲಕ ದೇವರನ್ನು ಪ್ರಾರ್ಥಿಸುತ್ತೇನೆ.

ಮಾನ್ಯ ಸಭಾಪತಿಯವರು ಲಿಂಗೈಕ್ಯರಾಗಿರುವ ಮಾತೆ ಮಾಣಿಕೇಶ್ವರಿಯವರಿಗೂ ಸಹ ಸಂತಾಪವನ್ನು ಮಂಡಿಸಿದ್ದಾರೆ. ನಮಗೆಲ್ಲರಿಗೆ ಆಗುವ ಆಶ್ಚರ್ಯವೇನೆಂದರೆ, ಶ್ರೀಯುತರು ತಮ್ಮ 16ನೇ ವಯಸ್ಸಿನಲ್ಲಿ ಸನ್ಯಾಸತ್ವವನ್ನು ಸ್ವೀಕರಿಸುತ್ತಾರೆ. ಭಕ್ತರ ಪಾಲಿಗೆ ಇಷ್ಟಾರ್ಥಗಳನ್ನು ಈಡೇರಿಸುವ ದೇವರು ಎನ್ನುವ ಭಾವನೆಗಳು ಅವರ ಜೊತೆಯಲ್ಲಿ ಇದೆ. ಕುತೂಹಲದ ಸಂಗತಿ ಏನೆಂದರೆ, ಅವರು ಆಹಾರವನ್ನು ಸ್ವೀಕರಿಸದೇ, ನಿರಾಹಾರಿಯಾಗಿದ್ದರು. ಇವರ ವಿಶೇಷತೆ ಏನೆಂದರೆ, ಇವರಿಗೆ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಅಪಾರ ಭಕ್ತವೃಂದ ಇದೆ. ಮಾತೆ ಮಾಣಿಕೇಶ್ವರಿಯವರ ಪಾರ್ಥಿವ ಶರೀರವನ್ನು ಅಂದರೆ ಅವರ ಅಂತಿಮ ದರ್ಶನವನ್ನು ನಿನ್ನೆಯ ಒಂದು ದಿವಸದಲ್ಲಿ ಸುಮಾರು ಒಂದು ಲಕ್ಷಕ್ಕೂ ಮೀರಿದ ಜನರು ಪಡೆದಿದ್ದಾರೆ. ಅವರಲ್ಲಿನ ಮತ್ತೊಂದು ವಿಶೇಷವೆಂದರೆ, ಅವರು ಪ್ರಾಣಿ ಹಿಂಸೆಯನ್ನು ವಿರೋಧಿಸುತ್ತಿದ್ದರು ಹಾಗೂ ಇದರ ಬಗ್ಗೆ ಜನ ಜಾಗೃತಿಯನ್ನು ಮೂಡಿಸುತ್ತಿದ್ದರು. ಎಲ್ಲಿಯಾದರೂ ಸರಿ ಪ್ರಾಣಿಹಿಂಸೆಯನ್ನು ಮಾಡುವಂತಹ ಮಾಹಿತಿಯು ಅವರ ಗಮನಕ್ಕೆ ಬಂದರೆ, ತಕ್ಷಣವೇ ಅವರು ತಮ್ಮ ಶಿಷ್ಯವೃಂದದವರನ್ನು ಕಳುಹಿಸಿ, ಪ್ರಾಣಿಹಿಂಸೆ ಮಾಡುವವರ ಮನವೊಲಿಸಬೇಕು ಎನ್ನುವ ಮಾತುಗಳನ್ನು ಅವರು ಹೇಳುತ್ತಿದ್ದರು. ಇದು ನಮಗೆ ಕಂಡುಬಂದ ಅವರಲ್ಲಿನ ವಿಶೇಷ ಗುಣವಾಗಿದೆ. ಅತ್ಯಂತ ಅದ್ಭುತವೇನೆಂದರೆ, ಅವರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡವಳಿಕೆಗಳು ಮತ್ತು ಆಶೀರ್ವಾದಗಳು ಕೋಟ್ಯಂತರ ಭಕ್ತವೃಂದದಲ್ಲಿ ಆತ್ಮಸ್ಥೈರ್ಯವನ್ನು ಮೂಡಿಸುತ್ತವೆ ಎನ್ನುವ ಭಾವನೆಗಳು ಇವತ್ತಿನ ದಿವಸ ವ್ಯಾಪಕವಾಗಿದೆ. ಅಂತಹ ಶ್ರೀ ಮಾತೆ ಮಾಣಿಕೇಶ್ವರಿಯವರ ನಿಧನದಿಂದಾಗಿ ರಾಜ್ಯಕ್ಕೆ ಅತ್ಯಂತ ಶ್ರೇಷ್ಠ ಸಂತರನ್ನು ಕಳೆದುಕೊಂಡ ಅನುಭವವಾಗಿದೆ ಎಂದು ನಾನು ಹೇಳಬಯಸುತ್ತೇನೆ.

ಪೂಜ್ಯರು ಹಾಗೂ ಹಿರಿಯರಾದ ಶ್ರೀ ಹಂಸರಾಜ್ ಭಾರದ್ವಾಜ್ ಹಾಗೂ ಮಾತೆ ಮಾಣಿಕೇಶ್ವರಿಯವರುಗಳ ಆತ್ಮಕ್ಕೆ ಆ ಭಗವಂತನು ಚಿರಶಾಂತಿಯನ್ನು ಕರುಣಿಸಲಿ ಎಂದು ನಾನು ತಮ್ಮ ಮೂಲಕ ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

**(211)/9-3-2020/1-00/ಎಲ್ಎಂ/ಕೆಎಸ್**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಮಾಜಿ ರಾಜ್ಯಪಾಲರಾದ ಹಂಸರಾಜ್ ಭಾರದ್ವಾಜ್ ಹಾಗೂ ಶಿವಸ್ವರೂಪಿಣಿ ಮಾಣಿಕೇಶ್ವರಿ ಅವರುಗಳ ನಿಧನದ ನಿಮಿತ್ತ ತಂದಿರುವ ಸಂತಾಪ ಸೂಚನೆ ಗೊತ್ತುವಳಿಯನ್ನು ಬೆಂಬಲಿಸುತ್ತಾ, ಮೃತರ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಲು ಬಯಸುತ್ತೇನೆ.

**ಶ್ರೀ ಹಂಸರಾಜ್ ಭಾರದ್ವಾಜ್‌ರವರು** ನಮ್ಮ ರಾಜ್ಯದ ರಾಜ್ಯಪಾಲರಾಗಿ ಹಾಗೂ ಕೇರಳದ ರಾಜ್ಯದ ಹೆಚ್ಚುವರಿ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿದ್ದಾರೆ. ಅನೇಕ ಸಂದರ್ಭಗಳಲ್ಲಿ ನನ್ನ ಸ್ನೇಹಿತರ ಜೊತೆಯಲ್ಲಿ, ನಮ್ಮ ನಾಯಕರ ಜೊತೆಯಲ್ಲಿ ರಾಜಭವನಕ್ಕೆ ಹೋಗಿ ಅವರ ಜೊತೆಯಲ್ಲಿ ಮಾತನಾಡಿರುವಂತಹ ಸನ್ನಿವೇಶಗಳು ಇನ್ನು ಹಚ್ಚಹಸಿರಾಗಿ ಉಳಿದಿವೆ. ಅವರು ಮಹಾನ್ ಕಾನೂನು ಪಂಡಿತಾಗಿದ್ದರು. ಐದು ಬಾರಿ ರಾಜ್ಯಸಭಾ ಸದಸ್ಯರಾಗಿ, ಕೇಂದ್ರದಲ್ಲಿ ಕಾನೂನು ಮತ್ತು ನ್ಯಾಯ ಸಚಿವರಾಗಿ, ಯೋಜನೆ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವರಾಗಿ ಅರ್ಥಪೂರ್ಣವಾದ ಸೇವೆಯನ್ನು ಸಲ್ಲಿಸಿರುತ್ತಾರೆ. He was an eminent jurist, ಮತ್ತು ಸಂವಿಧಾನಾತ್ಮಕ ವಿಚಾರಗಳಲ್ಲಿ ಅವರು ಎತ್ತಿದ ಕೈ. He was a Constitutional expert too. ಅವರು ಎಲ್ಲಾ ಕಾನೂನುಗಳನ್ನು ಅರೆದು ಕುಡಿದು ಬಿಟ್ಟಿದರು. ಅಷ್ಟು ಅಪಾರವಾದ ಕಾನೂನು ಜ್ಞಾನವನ್ನು ಹೊಂದಿದ್ದರು. ಕೇಂದ್ರದಲ್ಲಿ ಕಾನೂನು ಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದಷ್ಟೇ ಅಲ್ಲದೆ, ನಮ್ಮ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗಾಗಿ ಬಹಳಷ್ಟು ಶ್ರಮ ವಹಿಸಿದ್ದರು. ಕರ್ನಾಟಕದ ಜನರು ಅವರನ್ನು ಎಂದೆದಿಗೂ ಮರೆಯಲು ಸಾಧ್ಯವಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯದ ಅಭಿವೃದ್ಧಿ ವಿಚಾರದಲ್ಲಿ ಎಲ್ಲ ರೀತಿಯ ಸಹಾಯ ಸಹಕಾರವನ್ನು ನೀಡುವುದರ ಜೊತೆಗೆ ಕರ್ನಾಟಕ ರಾಜ್ಯವನ್ನು ಪ್ರಗತಿಪಥದತ್ತ ನಡೆಸಿಕೊಂಡು ಹೋಗಲು ಸಂವಿಧಾನದ ಮುಖ್ಯಸ್ತರಾಗಿ ಬಹಳ ಉತ್ತಮವಾದ ಕೆಲಸವನ್ನು ಮಾಡಿದ್ದಾರೆ. ಅವರ ಅಗಲಿಕೆಯಿಂದ ರಾಷ್ಟ್ರ ಒಬ್ಬ ಶ್ರೇಷ್ಠ ನ್ಯಾಯವಾದಿ, ಕಾನೂನು ತಜ್ಞ ಹಾಗೂ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡ ನಮಗೆ ಬಹಳ ನೋವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶಿವಸ್ವರೂಪಿಣಿ, ಮಾತಾಜಿ ಎಂದೇ ಹೆಸರಾಗಿರುವ **ಮಾತೆ ಮಾಣಿಕೇಶ್ವರಿಯವರು** ಕಲ್ಯಾಣ ಕರ್ನಾಟಕದಲ್ಲಿ ನಡೆದಾಡುವ ದೇವರು ಎಂದೇ ಖ್ಯಾತರಾದವರು. ಅವರ ಬಗ್ಗೆ ನಾನು ಮೊದಲಿನಿಂದ ಬಹಳ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ಇವರ ದರ್ಶನಕ್ಕೆ ಪ್ರತಿನಿತ್ಯ ಅಸಂಖ್ಯಾತ ಜನರು ಹೋಗುತ್ತಿದರು. ಮಾತಾಜಿಯವರು ಗುಹೆಯಲ್ಲಿ ಕುಳಿತುಕೊಂಡಿರುತ್ತಿದ್ದರು. ಅವರು ಆಹಾರವನ್ನು ಸೇವನೆ ಮಾಡುತ್ತಿರಲಿಲ್ಲ, ಗಾಳಿಯೇ ಅವರ ಆಹಾರವಾಗಿತ್ತು ಎನ್ನುವುದನ್ನು ನಾನು ಕೇಳಿದ್ದೇನೆ. ಇವರು ಆಧ್ಯಾತ್ಮಿಕ ಶ್ರೇಷ್ಠ ಸಂತರು ಎಂದು ಹೇಳಬಯಸುತ್ತೇನೆ. ಇವರ ದರ್ಶನಕ್ಕಾಗಿ ಭಕ್ತರು ಕಲ್ಯಾಣ ಕರ್ನಾಟಕದವರು ಮಾತ್ರವಲ್ಲ, ಮಹಾರಾಷ್ಟ್ರ, ಆಂಧ್ರ, ತೆಲಂಗಾಣ ರಾಜ್ಯಗಳಿಂದ ಬರುತ್ತಿದ್ದರು. ಇವರ ದರ್ಶನಕ್ಕಾಗಿ ವಿಶೇಷ ಬಸ್‌ಗಳನ್ನು ವ್ಯವಸ್ಥೆ ಮಾಡಿರುವುದು ನನ್ನ ಗಮನಕ್ಕೆ ಇದೆ. ಪ್ರತಿನಿತ್ಯ ಅಸಂಖ್ಯಾತ ಭಕ್ತರು ಬಂದು ಅವರ ದರ್ಶನವನ್ನು ಪಡೆದು ನಮ್ಮ ಬದುಕು ಸಾರ್ಥಕವಾಯಿತು ಎಂದು ಮಾತನಾಡುತ್ತಾ ಹೊರಗೆ ಬರುತ್ತಿರುವ ವಿಚಾರವನ್ನು ನಾನು ಕೇಳಿ ತಿಳಿದುಕೊಂಡಿದ್ದೇನೆ. ಆದರೆ ನಾನು ಒಂದು ಸಾರಿಯು ಅವರ ದರ್ಶನ ಪಡೆಯಲಿಲ್ಲ. ಮಾತೆಯವರ ನಿಧನದಿಂದ ರಾಜ್ಯ ಶ್ರೇಷ್ಠ ಸಂತರನ್ನು ಕಳೆದುಕೊಂಡಿದೆ. ಅಷ್ಟೆ ಅಲ್ಲ, ಆಧ್ಯಾತ್ಮಿಕ ಲೋಕದ ಧ್ರುವತಾರೆ, ಶ್ರೇಷ್ಠ ಸಂತರು ನಮ್ಮಿಂದ ಕಣ್ಮರೆಯಾಗಿದ್ದಾರೆ ಎನ್ನುವ ನನ್ನ ಭಾವನೆಯನ್ನು ವ್ಯಕ್ತಪಡಿಸುತ್ತಾ, ಮೃತರಾದ ಕರ್ನಾಟಕ ರಾಜ್ಯದ ರಾಜ್ಯಪಾಲರಾಗಿದ್ದಂತಹ ಶ್ರೀ ಹಂಸರಾಜ್ ಭಾರದ್ವಾಜ್‌ರವರ ಆತ್ಮಕ್ಕೆ ಶಾಂತಿಯನ್ನು ಕೋರುವುದರ ಜೊತೆಗೆ ಅವರ ಕಟುಂಬ ವರ್ಗದವರಿಗೆ ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಆ ಭಗವಂತ ಕಲ್ಪಿಸಲಿ ಎಂದು ಹೇಳಬಯಸುತ್ತೇನೆ. ಹಾಗೆಯೇ ಶಿವಸ್ವರೂಪಿಣಿ, ನಡೆದಾಡು ದೇವರು ಎಂದೇ ಖ್ಯಾತರಾದ ಮಾತೆ ಮಾಣಿಕೇಶ್ವರಿಯವರ ಆತ್ಮವು ಸದ್ಗತಿಯನ್ನು ಹೊಂದಲಿ, ಅವರ ಅಸಂಖ್ಯಾತ ಭಕ್ತರಿಗೆ ಉಂಟಾಗಿರುವ ನೋವನ್ನು ಸಹಿಸಿಕೊಳ್ಳುವಂತಹ ಶಕ್ತಿಯನ್ನು ದೇವರು ದಯಪಾಲಿಸಲ್ಲಿ ಎಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮೃತರುಗಳ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಹಾಗೂ ಮಾತೆಯವರ ಅಪಾರ ಭಕ್ತ ವೃಂದಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಮೃತರುಗಳ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಈ ಹಂತದಲ್ಲಿ ಸದನದಲ್ಲಿ ಎಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಲಾಯಿತು)**

**ಸಭಾಪತಿಯವರು:–**ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯನ್ನು ಮೃತಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

## 4. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ

**ಡಾ: ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಸಂವಿಧಾನದ 176ನೇ ಅನುಚ್ಛೇದದ ಅಡಿಯಲ್ಲಿ ಗೌರವಾನ್ವಿತ ರಾಜ್ಯಪಾಲರು ದಯಪಾಲಿಸಿರುವ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಅನುಮೋದಿಸಲು ಅವಕಾಶ ಮಾಡಿಕೊಟ್ಟ ತಮಗೆ ವಿನ್ರಮವಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಈ ಸದನದಲ್ಲಿ ಸತ್ಸಂಪ್ರದಾಯದಂತೆ ಸ್ವಾತಂತ್ರ್ಯ ಬಂದು ಸಂವಿಧಾನ ಅನುಷ್ಠಾನಕ್ಕೆ ಬಂದ ನಂತರ, ಪ್ರತಿ ವರ್ಷ ರಾಜ್ಯಪಾಲರು ಎರಡೂ ಮನೆಗಳನ್ನು ಉದ್ದೇಶಿಸಿ ಸರ್ಕಾರದ ಆಶಯವನ್ನು ಅವರ ಭಾಷಣದ ಮುಖಾಂತರ ಎರಡು ಮನೆಯ ಸದಸ್ಯರಿಗೆ, ಈ ರಾಜ್ಯದ ಜನತೆಗೆ ತಿಳಿಸುವ ಸಂಪ್ರದಾಯಕ್ಕೆ ನಾವೆಲ್ಲರೂ ಬದ್ಧರಾಗಿ ಇವತ್ತು ಅದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ದೇಶಕ್ಕೆ ಸ್ವಾತಂತ್ರ ಬಂದು 70 ವರ್ಷಗಳಾದರೂ ಕೇಂದ್ರ ಸರ್ಕಾರದಲ್ಲಿ ರಾಜ್ಯಸಭೆ ಮತ್ತು ಲೋಕಸಭೆಗಳೆರಡು ಜಂಟಿ ಸದನಗಳನ್ನು ಉದ್ದೇಶಿಸಿ ದೇಶದ ರಾಷ್ಟ್ರಪತಿಗಳು ಸೆಂಟ್ರಲ್ ಹಾಲ್‌ನಲ್ಲಿ ಭಾಷಣ ಮಾಡುತ್ತಾರೆ. ರಾಜ್ಯಪಾಲರು ಸಂವಿಧಾನದ ಹೆಡ್. ಅವರು ಮಾಡಿದ ಭಾಷಣದ ಬಗ್ಗೆ ದೊಡ್ಡ ಚರ್ಚೆಯಾಗುತ್ತಿದೆ ನಾವು ನೋಡಿಕೊಂಡು ಬರುತ್ತಿದ್ದೇವೆ. ವಿರೋಧ ಪಕ್ಷದವರು ರಾಜ್ಯಪಾಲರ ಭಾಷಣವನ್ನು ವಿರೋಧಿಸುತ್ತಾರೆ, ಆಡಳಿತ ಪಕ್ಷದವರು ರಾಜ್ಯಪಾಲರ ಭಾಷಣವನ್ನು ಸಮರ್ಥನೆ ಮಾಡಿಕೊಳ್ಳುತ್ತಾರೆ. ನಾವು ವಿರೋದ ಪಕ್ಷದಲ್ಲಿದಾಗ ಅದನ್ನೇ ಮಾಡಿಕೊಂಡು ಬಂದಿದ್ದೇವೆ. ವಿರೋಧ ಪಕ್ಷದವರು ಸರ್ಕಾರ ರಾಜ್ಯಪಾಲರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಾಯಿಯಿಂದ ಸುಳ್ಳು ಹೇಳಿಸಿದ್ದಾರೆ, ಸುಳ್ಳಿನ ಕಂತೆ, ಕಳ್ಳರ ಭಾವನೆಗಳನ್ನು ರಾಜ್ಯಪಾಲರ ಬಾಯಿಯಿಂದ ಹೇಳಿಸಿದ್ದಾರೆ ಎಂದು ಹೇಳುವುದು, ಈ ಎಲ್ಲ ಪದಗಳನ್ನು ಕೇಳಿದಾಗ ನನ್ನ ಮನಸ್ಸಿಗೆ ಬಹಳ ನೋವಾಗುತ್ತದೆ.

**(212) 09-03-2020/01-10 ಬಿಎಸ್‌ಡಿ-ಕೆಎಸ್**

**ಶ್ರೀ ವೈ.ಎ. ನಾರಾಯಣಸ್ವಾಮಿ (ಮುಂದು)**

ಸಂವಿಧಾನದ ಮುಖ್ಯಸ್ಥರಾದ ರಾಷ್ಟ್ರಪತಿಗಳು ಹಾಗೂ ರಾಜ್ಯಪಾಲರು ಮಾಡಿದ ಭಾಷಣಕ್ಕೆ ಗೌರವ ವಂದನೆ ಸಲ್ಲಿಸಬೇಕು ಎಂಬ ಪ್ರಸ್ತಾವನೆಯನ್ನು ನಾವೆಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ಇದರ ಪಾವಿತ್ರ್ಯತೆ ಬಗ್ಗೆ ನಾವೆಲ್ಲರೂ ಗಂಭೀರವಾಗಿ ಯೋಚನೆ ಮಾಡಬೇಕು ಎಂಬ ಮನವಿಯನ್ನು ಮಾಡಬಯಸುತ್ತೇನೆ. ನಾವು ಆ ಕಡೆ ಇದ್ದಾಗ ಇದೇ ಮಾತನಾಡಿದ್ದು, ಈಗ ಆಡಳಿತ ಪಕ್ಷದಲ್ಲಿಯೂ ಈ ಮಾತನ್ನು ಹೇಳುತ್ತಿದ್ದೇನೆ. ನನ್ನ ಭಾವನೆ ಏನೆಂದರೆ, ರಾಜ್ಯಪಾಲರ ಭಾಷಣ ಬೇಕೇ, ಬೇಡವೇ ಎಂಬುದಾಗಿದೆ.

**ಶ್ರೀ ಹೆಚ್.ಎಂ. ರಮೇಶ್‌ಗೌಡ:-** ಮಾನ್ಯ ಸಭಾಪತಿಯವರೇ, ಅವರು ರಾಜ್ಯಪಾಲರ ಭಾಷಣದ ಪ್ರತಿಯನ್ನು ಹರಿದುಹಾಕಿದ್ದಾರೆ, ಆದರೆ ನಾವು ಅಂತಹ ಕೆಲಸವನ್ನು ಮಾಡಿಲ್ಲ.

**ಡಾ॥ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಕಾಲಘಟ್ಟದಲ್ಲಿ ರಾಜ್ಯಪಾಲರ ಭಾಷಣ ಅವಶ್ಯಕತೆ ಇದೆಯೇ ಎಂಬುದರ ಬಗ್ಗೆ ದೊಡ್ಡ ಚರ್ಚೆ ಆಗಬೇಕೆಂಬ ಮನವಿಯನ್ನು ಸದನದಲ್ಲಿ ಮಾಡುತ್ತಿದ್ದೇನೆ. ಇದರ ಬಗ್ಗೆ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರುಗಳಲ್ಲಿ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ರಾಜ್ಯಪಾಲರ ಭಾಷಣಕ್ಕೆ ಎಲ್ಲೋ ಒಂದು ಕಡೆ ಅಗೌರವ ಬರುವಂತೆ ಪದಗಳನ್ನು ಬಳಸುವುದಾಗಲೀ, ಅವರ ಭಾಷಣಕ್ಕೆ ಪಾವಿತ್ರ್ಯತೆ ಇಲ್ಲದೇ ವಿಚಾರಗಳನ್ನು ನಾವೆಲ್ಲರೂ ಗಂಭೀರವಾಗಿ ಯೋಚನೆ ಮಾಡಿ, ಮಾನ್ಯ ಸಭಾಪತಿಯವರು ಈ ಭಾಷಣದ ಅವಶ್ಯಕತೆ ಇದೆಯೇ? ಎಂಬುದರ ಬಗ್ಗೆ ಅವಕಾಶ ಮಾಡಿಕೊಡಬೇಕು. ಈಗ ಸಂವಿಧಾನದ ಚರ್ಚೆಗೆ ಅವಕಾಶ ಮಾಡಿಕೊಟ್ಟಿರುವಂತೆ ರಾಜ್ಯಪಾಲರ ಭಾಷಣದ ಅವಶ್ಯಕತೆ ಬಗ್ಗೆ ಚರ್ಚೆಯಾಗಬೇಕು ಎಂಬ ಮನವಿಯನ್ನು ಪೀಠಕ್ಕೆ ಮಾಡುತ್ತಿದ್ದೇನೆ. ಏಕೆಂದರೆ ರಾಷ್ಟ್ರಪತಿಗಳು ಸೆಂಟ್ರಲ್ ಹಾಲ್‌ನಲ್ಲಿ ಭಾಷಣ ಮಾಡಿದಂತೆ ತದ್ರೂಪ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಾಷಣಗಳನ್ನು ಎಲ್ಲಾ ರಾಜ್ಯಗಳಲ್ಲಿ ಮಾಡಿಕೊಂಡು ಬರುತ್ತಿದ್ದಾರೆ. ನಾವು ಆ ಕಡೆ ಇದ್ದಾಗ ವಿರೋಧ ಮಾಡಲೇಬೇಕು ಎಂದು ವಿರೋಧ ಮಾಡುವುದು.

**(ಈ ಹಂತದಲ್ಲಿ ಉಪಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಕೆ.ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ರಾಜ್ಯಪಾಲರ ಭಾಷಣವನ್ನು ಬೇಡ ಎಂದು ಹೇಳುತ್ತಿದ್ದಾರೆಯೇ?

**ಡಾ॥ ವೈ.ಎ.ನಾರಾಯಣಸ್ವಾಮಿ:–** ನಾನು ಬೇಡ ಎಂದು ಹೇಳುತ್ತಿಲ್ಲ, ಆದರೆ ಅದರ ಅವಶ್ಯಕತೆ ಇದೆಯೇ ಎಂಬ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳುತ್ತಿದ್ದೇನೆ. ಆಡಳಿತ ಪಕ್ಷದಲ್ಲಿ ಸಮರ್ಥನೆ ಮಾಡಬೇಕೆಂದು ಸಮರ್ಥನೆ ಮಾಡುವುದು, ಇದರ ಮಧ್ಯದಲ್ಲಿ ರಾಜ್ಯಪಾಲರ ಘನತೆಯನ್ನು ಎಲ್ಲೋ ಒಂದು ಕಡೆ ಕಡಿಮೆ ಮಾಡುತ್ತಿದ್ದೇವೆಯೇ ಎಂಬ ಭಾವನೆ ನನಗೆ ಬಂದಿದ್ದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇದಕ್ಕೆ ದಯವಿಟ್ಟು ಮುಂದಿನ ದಿನಮಾನಗಳಲ್ಲಿ ಅವಕಾಶ ಕಲ್ಪಿಸಬೇಕು.

**ಉಪ ಸಭಾಪತಿಯವರು:–** ಒಬ್ಬರು ಮಾನ್ಯ ಸದಸ್ಯರು ಮಾತನಾಡುವಾಗ ಮತ್ತೊಬ್ಬ ಸದಸ್ಯರು ದಯವಿಟ್ಟು ಡಿಸ್ಟರ್ಬ್ ಮಾಡಬಾರದು. ಸುಮ್ಮನೆ ಸಮಯವನ್ನು ಹಾಳು ಮಾಡುವುದು ಬೇಡ.

**ಡಾ॥ ವೈ.ಎ. ನಾರಾಯಣಸ್ವಾಮಿ:–** ಆದ್ದರಿಂದ ಭಾಷಣ ಪ್ರಾರಂಭಿಸುವ ಮುನ್ನ ನಾನು ಪೀಠಕ್ಕೆ ಆಗ್ರಹ ಮಾಡುತ್ತಿದ್ದೇನೆ. ಮುಂದಿನ ದಿನಮಾನಗಳಲ್ಲಿ ಒಂದು ದಿನ ಈ ವಿಷಯದ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಆ ಅಧಿಕಾರವು ನಮಗೆ ಇರುವುದಿಲ್ಲ. ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸಬೇಕೋ ಅಥವಾ ಸಲ್ಲಿಸಬಾರದೋ ಎಂಬ ಬಗ್ಗೆ ಚರ್ಚೆ ಮಾಡುವುದಕ್ಕಿಂತ ಈ ವಿಚಾರವು ಸಂವಿಧಾನಬದ್ಧವಾಗಿ ಬಂದಿದೆ. ಆದ್ದರಿಂದ ಇದರ ಬಗ್ಗೆ ಚರ್ಚೆ ಮಾಡಿದರೂ ಉಪಯೋಗವಿಲ್ಲ. ಏಕೆಂದರೆ ಸಂವಿಧಾನಬದ್ಧವಾಗಿ ಬಂದಿದ್ದು, ಇಡೀ ದೇಶದಲ್ಲಿ ಸಂವಿಧಾನವನ್ನು ಅನುಸರಿಸುತ್ತಿದ್ದೇವೆ. ರಾಜ್ಯಪಾಲರು ಯಾರೇ ಇದ್ದರೂ ಅವರಿಗೆ ಗೌರವ ಸಲ್ಲಿಸಬೇಕಾದ್ದು ನಮ್ಮ ಕರ್ತವ್ಯವಾಗಿದೆ. ರಾಜ್ಯಪಾಲರ ಭಾಷಣದ ಬಗ್ಗೆ ಎಂತಹ ಮಾತುಗಳನ್ನು ಮಾತನಾಡಬೇಕೆಂದು ನಮಗೆಲ್ಲರಿಗೂ ಗೊತ್ತಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ಸಂದರ್ಭದಲ್ಲಿ ಏನು ಬೇಕಾದರೂ ಮಾತನಾಡಬಹುದೆಂದು ನಾನು ಕೇಳಿಕೊಂಡಿದ್ದೇನೆ. ಇಲ್ಲಿ ಉಲ್ಲೇಖ ಮಾಡದೇ ಇರುವ ವಿಚಾರಗಳನ್ನು ಚರ್ಚೆ ಮಾಡಬಹುದು. ರಾಜ್ಯಪಾಲರ ಭಾಷಣದ ಪಾವಿತ್ರ್ಯತೆ ಮತ್ತು ಅಗತ್ಯತೆಗೆ ಸಂಬಂಧಪಟ್ಟಂತೆ ಒಂದು ದಿನ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡುತ್ತೇನೆ.

ಇನ್ನು ಎರಡನೆಯದಾಗಿ, ಜುಲೈ 26ನೇ ತಾರೀಖಿನಂದು ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ಬಿ.ಜೆ.ಪಿ ಸರ್ಕಾರವು ಅಧಿಕಾರಕ್ಕೆ ಬಂತು. ಆ ಸಂದರ್ಭದಲ್ಲಿ ವಾತಾವರಣ ಹೇಗಿತ್ತು ಎಂದು ಎಲ್ಲರಿಗೂ ಗೊತ್ತಿದೆ. ಸುಮಾರು 103 ತಾಲ್ಲೂಕುಗಳು ಮುಳುಗಿಹೋಗಿದ್ದವು. ಅಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅವರ ವಯಸ್ಸನ್ನು ಮೀರಿ, ರೈತರ ಬಗ್ಗೆ ಕಾಳಜಿ ಇಟ್ಟುಕೊಂಡು, ದಲಿತರು, ಸಂಕಷ್ಟಕ್ಕೆ ಒಳಗಾಗಿರುವ ಜನರಿಗೆ ಸಾಂತ್ವನ ಹೇಳಲು ಕಾಲಿಗೆ ಚಕ್ರ ಕಟ್ಟಿಕೊಂಡು ರಾಜ್ಯವೆಲ್ಲಾ ಸುತ್ತಿದರು. ಜೊತೆಗೆ ಅವರ ನೆರವಿಗೆ ಬರಬೇಕೆಂದು ಆ ಪರಿಸ್ಥಿತಿಯನ್ನು ನಿಭಾಯಿಸಿದ ರೀತಿ ನೋಡಿ ವಿರೋಧ ಪಕ್ಷದವರು ಶ್ಲಾಘನೆ ಸಲ್ಲಿಸಿದರು. ಇದರಿಂದ ವಿರೋಧ ಪಕ್ಷದ ಸದಸ್ಯರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ.

**ಶ್ರೀ ಕೆ. ಗೋವಿಂದರಾಜ್:-** ಅವರೊಬ್ಬರು ಮಾತ್ರ ಮಾಡಿದರು ಎಂದು ನಾವು ಶ್ಲಾಘನೆ ಮಾಡಿದೆವು. ಬೇರೆ ಯಾರೂ ಜೊತೆಯಲ್ಲಿ ಹೋಗಲಿಲ್ಲ.

**ಡಾ॥ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಎಲ್ಲರೂ ಹೋಗಿದ್ದರು, ಆದರೆ ಮಂತ್ರಿಮಂಡಲವನ್ನು ರಚನೆ ಮಾಡಿರಲಿಲ್ಲ.

**ಶ್ರೀ ಕೆ. ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೇ, ಕೇವಲ ಅಡ್ಡಾಡಿ ಬಂದುಬಿಟ್ಟರೆ ಆಗುವುದಿಲ್ಲ. ಎಲ್ಲಿಗೆ ಏನು ಕೊಡಬೇಕೋ ಅದನ್ನು ಕೊಡಬೇಕಲ್ಲವೇ? ಒಂದು ಮನೆ ಕಟ್ಟಲಿಲ್ಲ, ಒಂದು ರೂಪಾಯಿ ಕೊಡಲಿಲ್ಲ.

**ಡಾ॥ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಏನು ಕೊಟ್ಟರು, ನಾವು ಏನು ಕೊಟ್ಟಿದ್ದೇವೆ ಎಂಬುದನ್ನು ಹೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಎಲ್. ಭೋಜೇಗೌಡಃ–** ಮಾನ್ಯ ಸಭಾಪತಿಯವರೇ, ಮಂಗಳೂರು ಕಡೆಯಿಂದ ಬಂದ ಅನೇಕ ಸದಸ್ಯರು ಸದನದಲ್ಲಿ ಇದ್ದು, ನಾನೂ ಕೂಡ ಮಂಗಳೂರಿನ ಭಾಗದ ಪ್ರತಿನಿಧಿಯಾಗಿದ್ದೇನೆ. ನಮ್ಮ ಮಾನ್ಯ ಬಿ.ಎಸ್. ಯಡಿಯೂರಪ್ಪನವರ ದಕ್ಷತೆ ಬಗ್ಗೆ ನಾನು ಮಾತನಾಡುವುದಿಲ್ಲ. ಅದನ್ನು ಎಲ್ಲರೂ ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ನೆರೆ ಬಂದ ಸಂದರ್ಭದಲ್ಲಿ ಕಾಲಿಗೆ ಚಕ್ರ ಕಟ್ಟಿಕೊಂಡು ಇಡೀ ರಾಜ್ಯವನ್ನು ಸುತ್ತಿದ್ದಾರೆ ಎಂಬುದರಲ್ಲಿ ವಿವಾದವಿಲ್ಲ. ಇದರಲ್ಲಿ ಎರಡನೆಯ ಮಾತಿಲ್ಲ. ನಮ್ಮಲ್ಲಿ ಹೇಗೆಂದರೆ ಗಂಡ–ಹೆಂಡತಿ ರಾತ್ರಿ ಡೈನಿಂಗ್ ಟೇಬಲ್ ಮೇಲೆ ಊಟ ಮಾಡುವಾಗ ಮಾತನಾಡುತ್ತಿದ್ದರು. ಅವರು ಕುಂದಾಪುರದಲ್ಲಿ ಒಂದು ಘಟನೆ ಆಗಿಬಿಟ್ಟಿದೆ, ಅಲ್ಲಿಗೆ ಕುಟ್ಟಿಯನ್ನು ಕಳುಹಿಸಬೇಕು ಎಂದು ಮಾತನಾಡುತ್ತಿದ್ದರು. ಆದರೆ ಅಲ್ಲೇ ಇದ್ದ ಕುಟ್ಟಿ ಯಾವ ವಿಚಾರಕ್ಕೆ ಎಂದು ಕೇಳಿಸಿಕೊಳ್ಳಲಿಲ್ಲ. ಆದರೆ ಕುಟ್ಟಿಯನ್ನು ಕಳುಹಿಸಬೇಕು ಎಂಬುದನ್ನು ಕೇಳಿಸಿಕೊಂಡ. ಆತ ಗಂಡ–ಹೆಂಡತಿಗೆ ಬಹಳ ಖುಷಿ ಮಾಡಬೇಕೆಂದು ರಾತ್ರೋರಾತ್ರಿ ಕುಟ್ಟಿ ಕುಂದಾಪುರಕ್ಕೆ ಹೋಗಿ ವಾಪಸ್ಸು ಬಂದ. ಆ ರೀತಿ ಇಡೀ ರಾಜ್ಯ ಸುತ್ತಿ ಬಂದರೂ ವಿಷಯ ಏನಿಲ್ಲ. ಕುಟ್ಟಿ ಕುಂದಾಪುರಕ್ಕೆ ಹೋಗಿ ಬಂದಂತೆ ನೆರೆ ವಿಚಾರ ಆಯಿತು.

**ಶ್ರೀ ಯು.ಬಿ. ವೆಂಕಟೇಶ್ಃ–** ಬರೀ ವಯಸ್ಸು–ವಯಸ್ಸು ಎಂದು ಪೀಠಿಕೆ ಹಾಕುತ್ತಿದ್ದಾರೆ.

**ಡಾ॥ವೈ.ಎ.ನಾರಾಯಣಸ್ವಾಮಿ:–**ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಡಿ.ಕುಮಾರಸ್ವಾಮಿನವರು ಯಂಗ್‌ಸ್ಟರ್, ಯುವಕ ಆಗಿದ್ದರೂ ವೆಸ್ಟ್‌ಎಂಡ್ ಹೊಟೇಲ್‌ನಿಂದ ಆಚೇ ಬರಲೇ ಇಲ್ಲ.

**ಶ್ರೀ ಕೆ.ಟಿ. ಶ್ರೀಕಂಠೇಗೌಡಃ–** ಮಾನ್ಯ ಸದಸ್ಯರು ಮಡಿಕೇರಿಗೆ ಹೋಗಿ ನೋಡಿಕೊಂಡು ಬರಬೇಕು. ಏನೇನು ಮಾಡಿದ್ದೇವೆ ಎಂದು ನೋಡಿಕೊಂಡು ಬರಬೇಕು. ಇತಿಹಾಸ ನಿರ್ಮಾಣ ಮಾಡಿದ್ದೇವೆ. ಅವರು ಹೋಗಿ ನೋಡಿಕೊಂಡು ಬರಲಿ.

**ಶ್ರೀ ಎಸ್.ಎಲ್. ಭೋಜೇಗೌಡಃ–** ರೂ. 25 ಸಾವಿರ ಕೋಟಿಗಳ ರೈತರ ಸಾಲವನ್ನು ವೆಸ್ಟ್‌ಎಂಡ್ ಹೊಟೇಲ್‌ನಿಂದ ಹೊರಗೆ ಬರದೇ ಮನ್ನಾ ಮಾಡಿದರು. ಅದರ ಜ್ಞಾಪಕ ಇರಲಿ. ಈಗಾಗಲೇ ರೂ.18 ಸಾವಿರ ಕೋಟಿಗಳ ಪಾವತಿ ಆಗಿದೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿಃ–** ಮಾನ್ಯ ಸಭಾಪತಿಯವರೇ, ಪ್ರವಾಹ ಮತ್ತು ಗ್ರಾಮ ವಾಸ್ತವ್ಯಗಳ ಬಗ್ಗೆ ಮಾನ್ಯ ಸಭಾಪತಿಯವರು ಒಪ್ಪುವುದಾದರೆ ಒಂದು ಗಂಟೆ ಚರ್ಚೆಯನ್ನೇ ಮಾಡೋಣ. ನಾನು ಆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಾಗದಿಂದ ಬಂದಿದ್ದೇನೆ. ಹಿಂದಿನ ಯಾವ್ಯಾವ ಮುಖ್ಯಮಂತ್ರಿಗಳು ಏನೇನು ಭರವಸೆಗಳನ್ನು ಕೊಟ್ಟರು, ಏನೇನು ಆಯಿತು ಎಂಬುದರ ಬಗ್ಗೆ ಚರ್ಚೆ ಮಾಡೋಣ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:-** ಒಂದು ದಿವಸ ಅವಕಾಶ ಕೊಡಿ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ನಾನು ಸುಮ್ಮನೆ ಜುಜುಬಿ ವಿಷಯಗಳಿಗೆ ಹೇಳುವುದಿಲ್ಲ. ಮಾನ್ಯ ಭೋಜೇಗೌಡರಿಗೆ ಹೇಳುತ್ತಿದ್ದೇನೆ. ಅವರು ನಮ್ಮ ಊರಿಗೆ ಬರಲಿಲ್ಲ.

**(ಗೊಂದಲ)**

**ಡಾ॥ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಪ್ರಧಾನ ಮಂತ್ರಿಯವರು ಈ ದೇಶದ ಜನತೆಗೆ ಏನು ಮಾಡಿದ್ದಾರೆ ಎಂಬುದನ್ನು ಹೇಳಿ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೇ, 2005-06 ಮಹಾಪೂರ ಬಂದಿದ್ದು, ಆಗಲೂ ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿದ್ದು, ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿ ಮತ್ತು ಮಾನ್ಯ ಯಡಿಯೂರಪ್ಪನವರು ಉಪಮುಖ್ಯಮಂತ್ರಿಗಳಾಗಿದ್ದರು. ಉತ್ತರ ಕರ್ನಾಟಕದಲ್ಲಿ ಕೃಷ್ಣ ಮಹಾಪೂರ ಬಂದ ಸಂದರ್ಭದಲ್ಲಿ ಇವರಿಬ್ಬರನ್ನು ನಾನೇ ಕರೆದುಕೊಂಡು ಹೋಗಿದ್ದೆನು. ನಾನೇ ಟ್ರ್ಯಾಕ್ಟರ್ ಓಡಿಸಿ, ನಾನೇ ಟ್ರೇಲರ್‌ನಲ್ಲಿ ಕೂರಿಸಿದ್ದೆನು. ಅಲ್ಲಿ ನಾನೇ ಗ್ರಾಮ ವಾಸ್ತವ್ಯ ಮಾಡಿಸಿದ್ದೆನು. ಎಲ್ಲಿ ಊಟ ಮಾಡಿದರು, ಎಲ್ಲಿ ಮಲಗಿದ್ದರು ಎಂಬ ಸಂಪೂರ್ಣ ಮಾಹಿತಿ ನನಗೆ ಇದೆ.

**(213)/09.03.2020/1.20/ಹೆಚ್‌ವಿ-ಜಿಆರ್**

**(ಗೊಂದಲ)**

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಮುಂದು):-** ಸನ್ಮಾನ್ಯ ಸಭಾಪತಿಯವರೇ, 'ಕುಂಬಳಕಾಯಿ ಕಳ್ಳ' ಎಂದರೆ, ಇವರು ಹೆಗಲು ಮುಟ್ಟಿ ನೋಡಿಕೊಳ್ಳುತ್ತಿದ್ದಾರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಒಂದು ದಿನ ಅವಕಾಶವನ್ನು ನೀಡಿದರೆ ನಾವು ಸಹ ಚರ್ಚೆಗೆ ಸಿದ್ಧರಿದ್ದೇವೆ.

**(ಗೊಂದಲ)**

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಸನ್ಮಾನ್ಯ ಸಭಾಪತಿಯವರೇ, ನಾನು ಏನು ಹೇಳಲು ಹೊರಟಿದ್ದೇನೆ ಅದನ್ನು ಅವರು ಪೂರ್ತಿಯಾಗಿ ಕೇಳಬೇಕು. ರಾತ್ರಿ 12 ಗಂಟೆಗೆ ನಮ್ಮ ಮನೆಯಲ್ಲಿ ಊಟ ಮಾಡಿ, ಸಿದ್ಧಾರೂಢ ಮಠ ಎಂದು ಇದೆ ಆ ಮಠದಲ್ಲಿ, .......

**ಉಪಸಭಾಪತಿಯವರು:–** ನೆರೆ ಪರಿಹಾರಕ್ಕೆ ಸಂಬಂಧಪಟ್ಟಂತೆ ಒಂದು ದಿನ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಹೇಳಿದ್ದೀರಿ, ಆಗ ಈ ವಿಚಾರಗಳ ಮೇಲೆ ಮಾತನಾಡಿ. ಈಗ ವೈ.ಎ.ನಾರಾಯಣಸ್ವಾಮಿ ಮಾತನಾಡುತ್ತಿದ್ದಾರೆ. ಅವರು ಮಾತನಾಡಲು ಅವಕಾಶವನ್ನು ನೀಡಿ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೇ, ನೆರೆ ಪರಿಹಾರದ ಮೇಲೆ ರಾತ್ರಿ ಹಗಲು ಚರ್ಚೆ ಮಾಡೋಣ ತಾವು ಅವಕಾಶವನ್ನು ನೀಡಬೇಕು.

**(ಗೊಂದಲ)**

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** –ಸನ್ಮಾನ್ಯ ಸಭಾಪತಿಯವರೇ, ಅವತ್ತು ಏನೇನಾಯಿತು ಏನೇನು ಭರವಸೆಗಳನ್ನು ನೀಡಿದ್ದರು ಎನ್ನುವುದು ನನಗೆ ಗೊತ್ತಿದೆ. ಅದರ ಬಗ್ಗೆ ಚರ್ಚೆ ಮಾಡೋಣ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಸನ್ಮಾನ್ಯ ಸಭಾಪತಿಯವರೇ, ನಾನು ಒಂದು ನಿಮಿಷದಲ್ಲಿ ನನ್ನ ಮಾತಿನ ಬಗ್ಗೆ ಸ್ಪಷ್ಟೀಕರಣವನ್ನು ನೀಡುವುದಕ್ಕೆ ಬಯಸುತ್ತಿದ್ದೇನೆ.

**(ಗೊಂದಲ)**

**ಡಾ||ವೈ.ಎ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ನಾನು ಅವರಿಗೆ ಯೀಲ್ಡ್ ಆಗಿಲ್ಲ, ಅವರು ನಾನು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಎಲ್.ಭೋಜೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ನಾನು ಕುಟ್ಟಿ ಕುಂದಾಪುರಕ್ಕೆ ಹೋದಂತಹ ಕೆಲಸ ಏತಕ್ಕೋಸ್ಕರ ಆಗಿದೆಯೆಂದರೆ, 1,25,795 ಮನೆಗಳು ಸಂಪೂರ್ಣವಾಗಿ ನಾಶ ಹೊಂದಿವೆ. ಅದಕ್ಕೆ 1,232 ಕೋಟಿ ರೂಪಾಯಿಗಳ ಅನುದಾನವನ್ನು ನೀಡಿದ್ದಾರೆ.

**(ಗೊಂದಲ)**

**ಡಾ॥ವೈ.ಎ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ನೆರೆ ಪರಿಹಾರದ ಮೇಲೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರು ಇದರ ಬಗ್ಗೆ ಮಾತನಾಡಲಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಇವರು 5 ಲಕ್ಷ ರೂಪಾಯಿಗಳನ್ನು ಮನೆ ಕಟ್ಟಿಕೊಳ್ಳುವುದಕ್ಕೆ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. 1,25,795 ಅನ್ನು 5 ರಿಂದ ಗುಣಿಸಿದರೆ ಎಷ್ಟು ಕೋಟಿ ರೂಪಾಯಿಗಳಾಗುತ್ತದೆ ಎನ್ನುವುದನ್ನು ಅವರೇ ಹೇಳಬೇಕಾಗಿದೆ. ಇಲ್ಲಿಯವರೆಗೆ ಒಂದೇ ಒಂದು ಮನೆ ಸಹ ಸಂಪೂರ್ಣಗೊಂಡಿಲ್ಲ. ಒಂದೇ ಒಂದು ಮನೆ ಕಟ್ಟುವುದಕ್ಕೆ ಸರ್ಕಾರ 5 ಲಕ್ಷ ರೂಪಾಯಿಗಳನ್ನು ಕೊಟ್ಟಿಲ್ಲ ಎನ್ನುವ ವಿಚಾರ ಅಲ್ಲಿಗೆ ಹೋಗಿ ಬಂದವರು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ಅವರು ಮಾತನಾಡುವಂತಹ ಸಂದರ್ಭದಲ್ಲಿ ಈ ವಿಚಾರಗಳನ್ನು ಮಂಡನೆ ಮಾಡಲಿ. ಉತ್ತರ ಕೊಡುವಂತಹ ಅಧಿಕಾರ ಸರ್ಕಾರಕ್ಕಿದೆ, ಸರ್ಕಾರ ಉತ್ತರವನ್ನು ಕೊಡುತ್ತದೆ. ಈಗ ತಾವು ವೈ.ಎ.ನಾರಾಯಣಸ್ವಾಮಿಯವರಿಗೆ ಮಾತನಾಡಲು ಅವಕಾಶವನ್ನು ನೀಡಿದ್ದೀರಿ. ಅವರು ಮಾತನಾಡುವಂತಹ ಸಂದರ್ಭದಲ್ಲಿ ಇವರು ಎದ್ದು ನಿಂತು ಮಾತನಾಡಿದರೆ ಹೇಗೆ? ಇಬ್ಬಿಬ್ಬರು ಮಾತನಾಡುವುದಕ್ಕೆ ಸಾಧ್ಯವೇ? ತಾವು ಮಾನ್ಯ ಭೋಜೇಗೌಡರಿಗೆ ಮಾತನಾಡಲು ಅವಕಾಶವನ್ನು ನೀಡಿಲ್ಲ. ಅವರು ಮಾತನಾಡುವುದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲವೆಂದು ತಾವು ಹೇಳಬೇಕಾಗುತ್ತದೆ.

**(ಗೊಂದಲ)**

**ಉಪಸಭಾಪತಿಯವರುಃ–** ಮಾನ್ಯ ಭೋಜೇಗೌಡರೇ, ತಮ್ಮ ಸರದಿ ಬಂದಾಗ ಮಾತನಾಡಿ, ಈಗ ಕುಳಿತುಕೊಳ್ಳಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಎಲ್.ಭೋಜೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಕಳೆದ ಬಾರಿ ಮಡಿಕೇರಿಯಲ್ಲಿ ನೆರೆ ಹಾವಳಿಯುಂಟಾದಾಗ, 9 ಲಕ್ಷದ 95 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಸುಮಾರು 2000 ಮನೆಗಳನ್ನು ಕಟ್ಟಿ ಪೂರ್ಣಗೊಳಿಸಿ ಅವುಗಳ ಗೃಹ ಪ್ರವೇಶ ಮಾಡಿರುವುದು ಅವರಿಗೂ ಗೊತ್ತಿದೆ. ‘ಕುಟ್ಟಿ’ ಕುಂದಾಪುರಕ್ಕೆ ಹೋಗಲಿಲ್ಲ. ವಿಷಯವನ್ನು ಮುಟ್ಟಿಸಿದರು.

**(ಗೊಂದಲ)**

**ಉಪಸಭಾಪತಿಯವರುಃ–** ಮಾನ್ಯ ನಾರಾಯಣಸ್ವಾಮಿಯವರೇ, ತಾವು ತಮ್ಮ ಮಾತುಗಳನ್ನು ಮುಂದುವರಿಸಿ. ಬಹಳ ವಿಷಯವಿದೆ ತಮಗೆ ಬಹಳ ಸಮಯ ಬೇಕಾಗುತ್ತದೆ. ತಾವು ತಮ್ಮ ಮಾತುಗಳನ್ನು ಮುಂದುವರಿಸಿ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್ಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ.

**ಉಪಸಭಾಪತಿಯವರುಃ–** ಮಾನ್ಯ ಪ್ರಾಣೇಶ್‌ರವರೇ, ನಾನು ತಮಗೆ ಮಾತನಾಡಲು ಅವಕಾಶವನ್ನು ನೀಡಿಲ್ಲ. ನಾನು ಮಾನ್ಯ ಪ್ರೊ.ಎ.ನಾರಾಯಣಸ್ವಾಮಿಯವರಿಗೆ ಮಾತನಾಡಲು ಅವಕಾಶವನ್ನು ನೀಡಿದ್ದೇನೆ. ತಾವು ಕುಳಿತುಕೊಳ್ಳಿ.

**ಶ್ರೀ ಎಂ.ಕೆ.ಪ್ರಾಣೇಶ್ಃ–** ಸನ್ಮಾನ್ಯ ಸಭಾಪತಿಯವರೇ, ನಾನು ಅವರ ಅನುಮತಿಯನ್ನು ಪಡೆದುಕೊಂಡು ಮಾತನಾಡುತ್ತಿದ್ದೇನೆ. ಮಾನ್ಯ ಭೋಜೇಗೌಡರು ಸರ್ಕಾರ ಮನೆಗಳನ್ನು ಕಟ್ಟಿಕೊಟ್ಟಿಲ್ಲ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಅವರು ಸಹ ಚಿಕ್ಕಮಗಳೂರು ಜಿಲ್ಲೆಯಿಂದ ಬಂದವರು. ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕು ಹೆಚ್ಚು ತೊಂದರೆಗೆ ಒಳಗಾಗಿದೆ. ಸಾಕಷ್ಟು ಹಣವನ್ನು ಒದಗಿಸಲಾಗಿದೆ. ವಿರೋಧ ಮಾಡುತ್ತೇವೆಂದು ಜಿಲ್ಲಾಧಿಕಾರಿಗಳ ಬಗ್ಗೆಯೂ ವಿರೋಧ ವ್ಯಕ್ತಪಡಿಸಬಾರದು. ಏಕೆಂದರೆ, ಸಾಕಷ್ಟು ಹಣ ಜಿಲ್ಲಾಧಿಕಾರಿಗಳ ಖಾತೆಯಲ್ಲಿದೆ. ಕೆಲವು ಸಮಸ್ಯೆಗಳಿಂದ ಅಂದರೆ, ಯಾರ ಮನೆಗಳು ಮತ್ತು ಜಾಗ ಕೊಚ್ಚಿ ಹೋಗಿದೆ ಅವರಿಗೆ ಕೊಡಬೇಕೆಂದು ಸರ್ಕಾರ ಸುಮಾರು 373 ಎಕರೆ ಜಾಗವನ್ನು ಗುರುತು ಮಾಡಿತ್ತು. ಆ ಸಂದರ್ಭದಲ್ಲಿ ಅರಣ್ಯ ಇಲಾಖೆಯವರು ಆ ಜಾಗವೆಲ್ಲ ಡೀಮ್ಡ್ ಫಾರೆಸ್ಟ್ ಎಂದು ಹೇಳಿ ಕೇವಲ 73 ಎಕರೆ ಜಾಗವನ್ನು ಮಾತ್ರ ಕೊಟ್ಟಿದ್ದಾರೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎಸ್.ಎಲ್.ಭೋಜೇಗೌಡಃ-**(ಈ ಹಂತದಲ್ಲಿ ಪತ್ರಿಕೆಯಲ್ಲಿ ಪ್ರಕಟವಾಗಿರುವ ಚಿತ್ರದ ತುಣುಕೊಂದನ್ನು ಪ್ರದರ್ಶಿಸುತ್ತಾ) ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಣೇಶ್‌ರವರ ಊರಿನಲ್ಲಿಯೇ ಶಾಲೆಯನ್ನು ಒಂದು ಶೆಡ್‌ನಲ್ಲಿ ನಡೆಸುತ್ತಿದ್ದಾರೆ. ನಾನು ಸುಳ್ಳು ಹೇಳುತ್ತಿಲ್ಲ. ಮಕ್ಕಳು ಶೆಡ್‌ನಲ್ಲಿ ಕುಳಿತುಕೊಂಡು ಪಾಠ ಕೇಳುತ್ತಿರುವುದನ್ನು ತಾವು ಸಹ ನೋಡಬಹುದಾಗಿದೆ. ಪತ್ರಿಕೆಯಲ್ಲಿ ಪ್ರಕಟವಾಗಿರುವ ಸಂಗತಿಯನ್ನು ಅವರು ನೋಡಬೇಕಾಗಿದೆ. ಶೆಡ್‌ನಲ್ಲಿ ಶಾಲೆ ನಡೆಯುತ್ತಿಲ್ಲವೆಂದು ಅವರು ಹೇಳಲಿ ನೋಡೋಣ.

**ಶ್ರೀ ಎಂ.ಕೆ.ಪ್ರಾಣೇಶ್‌ಃ-** ಸನ್ಮಾನ್ಯ ಸಭಾಪತಿಯವರೇ, ಬೇರೆಯವರು ಮಾತನಾಡುವಂತಹ ಸಂದರ್ಭದಲ್ಲಿ ಮಧ್ಯೆ ಎದ್ದು ನೀತು ಅಡಚಣೆಯನ್ನುಂಟು ಮಾಡಬಾರದು. 73 ಎಕರೆ ಜಾಗ ಮಾತ್ರ ನಮಗೆ ದೊರಕಿದೆ. ಈಗಾಗಲೇ ಜಿಲ್ಲಾಧಿಕಾರಿಗಳ ಖಾತೆಗೆ ಇದಕ್ಕಾಗಿ ಖರ್ಚು ಮಾಡಲು ಹಣವನ್ನು ತುಂಬಲಾಗಿದೆ. ಈಗಾಗಲೇ ತಳಪಾಯವನ್ನು ಹಾಕುವಂತಹ ಸಂದರ್ಭದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಕೊಡಲಾಗುತ್ತಿದೆ. ಮನೆ ಕಟ್ಟಿದ ಕೂಡಲೇ 4 ಲಕ್ಷ ರೂಪಾಯಿಗಳನ್ನು ಕೊಡಲಾಗುತ್ತಿದೆ. ಮನೆಗಳು ಸಂಪೂರ್ಣಗೊಂಡಿವೆ. ಮಾನ್ಯ ಸದಸ್ಯರು ಸದನಕ್ಕೆ ತಪ್ಪು ಮಾಹಿತಿಯನ್ನು ನೀಡುತ್ತಿದ್ದಾರೆ. ಅವರೂ ಅದೇ ಜಿಲ್ಲೆಯವರು ಅವರಿಗೆ ಸಂಪೂರ್ಣವಾದ ಮಾಹಿತಿ ಇಲ್ಲ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡಃ-** ಸನ್ಮಾನ್ಯ ಸಭಾಪತಿಯವರೇ, ಚಿಕ್ಕಮಗಳೂರು ಜಿಲ್ಲೆಯಲ್ಲಿ 5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ, ಒಂದು ಮನೆ ಕಟ್ಟಿಸಿ ಕೊಟ್ಟಿದ್ದರೆ ನಾನು ತೀವ್ರವಾದ ಶಿಕ್ಷೆಗೊಳಗಾಗುತ್ತೇನೆ. ಮಕ್ಕಳು ಎಲ್ಲಿ ಕುಳಿತುಕೊಂಡು ಪಾಠ ಕೇಳುತ್ತಿದ್ದಾರೆ ಎನ್ನುವುದನ್ನು ಅವರೇ ನೋಡಬೇಕಾಗಿದೆ. ಇದು, ಪ್ರಾಣೇಶ್‌ರವರ ಊರಿನ ಶಾಲೆಯಲ್ಲಿ ನಡೆಯುತ್ತಿರುವ ಘಟನೆಯಾಗಿದೆ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್‌ಃ-** ಸನ್ಮಾನ್ಯ ಸಭಾಪತಿಯವರೇ, ಅವರು ವಿರೋಧ ಪಕ್ಷದಲ್ಲಿದ್ದಾರೆಂದು ಎಲ್ಲವನ್ನೂ ವಿರೋಧ ಮಾಡುವುದು ಸರಿಯಲ್ಲ. ಸದನದಲ್ಲಿ ಸತ್ಯವನ್ನು ಹೇಳಬೇಕಾಗುತ್ತದೆ. ವಿರೋಧವನ್ನು ವ್ಯಕ್ತಪಡಿಸುವುದಕ್ಕಾಗಿ ಇಲ್ಲಸಲ್ಲದ್ದನ್ನು ಹೇಳಿದರೆ ಕೇಳುವುದಕ್ಕೆ ಯಾರೂ ತಯಾರಿಲ್ಲ.

**(ಗೊಂದಲ)**

**ಶ್ರೀ ಹೆಚ್.ಎಂ.ರಮೇಶ್‌ಗೌಡಃ-** ಸನ್ಮಾನ್ಯ ಸಭಾಪತಿಯವರೇ, . . . . .

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಉಪಸಭಾಪತಿಯವರು:–** ಮಾನ್ಯ ರಮೇಶ್‌ಗೌಡರೇ, ತಮ್ಮ ಸರದಿ ಬಂದಾಗ ತಾವು ಮಾತನಾಡಿ. ಈಗ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಹೆಚ್.ಎಂ.ರಮೇಶ್‌ಗೌಡ:–**ಸನ್ಮಾನ್ಯ ಸಭಾಪತಿಯವರೇ, ಡಾ॥ ವೈ.ಎ.ನಾರಾಯಣಸ್ವಾಮಿ ಯವರು ಮಾತನಾಡುತ್ತಿದ್ದ ಸಂದರ್ಭದಲ್ಲಿ ತಾಜ್‌ವೆಸ್ಟ್ ಹೋಟೆಲ್‌ನಲ್ಲಿ ವಾಸ ಮಾಡುತ್ತಿದ್ದರು ಎನ್ನುವ ಮಾತನ್ನು ಹೇಳಿದ್ದಾರೆ. ಆಗಿನ ಉಪ ಮುಖ್ಯಮಂತ್ರಿಗಳು ರಾಜ್ಯದ ರೈತರ ಸಾಲವನ್ನು ಮನ್ನಾ ಮಾಡುವುದಕ್ಕೆ ಮುಖ್ಯಮಂತ್ರಿಗಳಿಗೆ ಅವಕಾಶ ಮಾಡಿಕೊಡಲಿಲ್ಲ. ವಿರೋಧ ವ್ಯಕ್ತಪಡಿಸಿದ್ದರು.

**(ಗೊಂದಲ)**

**ಉಪಸಭಾಪತಿಯವರು:–** ಸುಮ್ಮನೆ ಸದನದ ವೇಳೆಯನ್ನು ಹಾಳು ಮಾಡಬೇಡಿ, ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:–** ಸನ್ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಭೋಜೇಗೌಡರು ಒಂದೇ ಕ್ಷೇತ್ರದಿಂದ ಗೆದ್ದು ಬಂದಿರುವವರು.

**ಉಪಸಭಾಪತಿಯವರು:–** ತಾವೆಲ್ಲರೂ ದೊಡ್ಡ ವಿಚಾರವಂತರು ಏತಕ್ಕೋಸ್ಕರ ಈ ರೀತಿ ಸದನದ ಸಮಯವನ್ನು ಹಾಳು ಮಾಡುತ್ತಿದ್ದೀರಿ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು, ಸದನದ ಸಮಯವನ್ನು ಹಾಳು ಮಾಡುತ್ತಿರುವುದು.

**ಶ್ರೀ ಆಯನೂರು ಮಂಜುನಾಥ್–** ಸನ್ಮಾನ್ಯ ಸಭಾಪತಿಯವರೇ, ಈ ನಮ್ಮ 'ಕುಟ್ಟಿ' ಎಲ್ಲಿಯೂ ಓಡಾಡಿಲ್ಲ. ಯಾರದೋ ಪಕ್ಕದಲ್ಲಿ ನಿಂತು ದೇವಸ್ಥಾನದಲ್ಲಿ ಮಂಗಳಾರತಿಯನ್ನು ತೆಗೆದುಕೊಳ್ಳುವುದು, ಯಾರೋ ದೇವಸ್ಥಾನಕ್ಕೆ ಹೋದರೆ, ಇವರು ಬಾಳೆಹಣ್ಣು ತೆಂಗಿನಕಾಯಿಯನ್ನು ತೆಗೆದುಕೊಂಡು ಹೋಗಿರುವುದನ್ನು ಬಿಟ್ಟರೆ, ರಾಜ್ಯದ ಪರಿಚಯವಿಲ್ಲ. ಅವರು ತೋರಿಸಿರುವ ಫೋಟೋ ನಮ್ಮೂರಿನ ಫೋಟೋ ಅವರ ಊರಿನ ಫೋಟೋ ಅಲ್ಲ.

**ಉಪಸಭಾಪತಿಯವರು:–** ಎಲ್ಲ ಸದಸ್ಯರಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ಒಬ್ಬ ಸದಸ್ಯರು ಮಾತನಾಡುವಂತಹ ಸಂದರ್ಭದಲ್ಲಿ ಮತ್ತೊಬ್ಬ ಸದಸ್ಯರು ಎದ್ದು ನಿಂತು ಮಾತನಾಡಿ ಅಡಚಣೆಯನ್ನುಂಟು ಮಾಡಬೇಡಿ. ಇನ್ನೂ ಸಾಕಷ್ಟು ವಿಚಾರಗಳ ಮೇಲೆ ಬಹಳಷ್ಟು ಸದಸ್ಯರು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾತನಾಡುವವರಿದ್ದಾರೆ. ಡಾ॥ವೈ.ಎ.ನಾರಾಯಣಸ್ವಾಮಿಯವರೇ, ತಾವು ತಮ್ಮ ಮಾತನ್ನು ಮುಂದುವರಿಸಿ, ತಾವು ಮಾತನಾಡುವ ಸಂದರ್ಭದಲ್ಲಿ ಚುಚ್ಚಿ ಮಾತನಾಡಬೇಡಿ. ತಾವು ಚುಚ್ಚಿ ಮಾತನಾಡಿದಾಗ ಅವರುಗಳು ಎದ್ದು ನಿಲ್ಲುತ್ತಾರೆ. ಆ ರೀತಿ ಮಾತನಾಡಬೇಡಿ. ತಾವು ಕೆಳಮನೆ ಮತ್ತು ಮೇಲ್ಮನೆಯ ಸದಸ್ಯರಾಗಿ ಕಾರ್ಯನಿರ್ವಹಿಸಿ ತಮಗೆ ಅನುಭವವಿದೆ. ದಯವಿಟ್ಟು ಚುಚ್ಚಿ ಮಾತನಾಡಬೇಡಿ.

**ಡಾ॥ವೈ.ಎ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಮಾತನಾಡುತ್ತಿದ್ದ ಸಂದರ್ಭದಲ್ಲಿ ಘನತೆವೆತ್ತ ರಾಜ್ಯಪಾಲರ ಭಾಷಣ ಕೇವಲ 20 ಪುಟಗಳಷ್ಟೇ ಇದೆ. ಅದರಲ್ಲಿ ಉಪ್ಪು, ಖಾರ, ಮಸಾಲೆ ಇಲ್ಲ. ಇದಕ್ಕೆ 'ಧಮ್' ಇಲ್ಲ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ನನಗೆ ಅವರ ಬಗ್ಗೆ ಬಹಳ ಗೌರವವಿದೆ.

**ಶ್ರೀ ಆರ್.ಬಿ.ತಿಮ್ಮಾಪೂರಃ–** ಸನ್ಮಾನ್ಯ ಸಭಾಪತಿಯವರೇ, ಮಂತ್ರಿಗಳು ಇಷ್ಟೊಂದು ಜನ ಕುಳಿತುಕೊಂಡಿದ್ದಾರೆ. ಅವರು ಉತ್ತರ ಕೊಡುತ್ತಾರೆ. ಆದರೆ, ಈಗ ಪ್ರತಿಯೊಬ್ಬ ಸದಸ್ಯ ನಾನೇ ಸರ್ಕಾರ ಎನ್ನುವ ರೀತಿಯಲ್ಲಿ ಮಾತನಾಡಿದರೆ, ಇವರು ಮಂತ್ರಿಗಳೋ, ಅವರುಗಳು ಮಂತ್ರಿಗಳೋ ಎನ್ನುವುದರ ಬಗ್ಗೆ ನನಗೆ ಸಂಶಯ ಬರುತ್ತಿದೆ.

**ಡಾ॥ವೈ.ಎ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ತಿಮ್ಮಾಪೂರ್‌ರವರು ಮಂತ್ರಿಗಳಾಗಿ ಕಾರ್ಯನಿರ್ವಹಿಸಿದ್ದಾರೆ. ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಪ್ರಸ್ತಾವನೆಯನ್ನು ಮಾನ್ಯ ಆಯನೂರು ಮಂಜುನಾಥ್‌ರವರು ಸದನದಲ್ಲಿ ಮಂಡನೆ ಮಾಡಿದ್ದರು. ಅನುಮೋದನೆ ಮಾಡುವ ಕಾರ್ಯವನ್ನು ನನಗೆ ಕೊಟ್ಟಿದ್ದಾರೆ. ಸಮರ್ಥನೆ ಮಾಡಿಕೊಳ್ಳಬೇಕಾಗಿರುವುದು ನನ್ನ ಜವಾಬ್ದಾರಿಯಾಗಿದೆ. ದಯವಿಟ್ಟು ಸಹಕರಿಸಬೇಕೆಂದು ಅವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಆರ್.ಬಿ.ತಿಮ್ಮಾಪೂರಃ–** ಸನ್ಮಾನ್ಯ ಸಭಾಪತಿಯವರೇ, ಸಮರ್ಥನೆ ಮಾಡಿಕೊಳ್ಳುವ ನೆಪದಲ್ಲಿ ಏನೇನೋ ಹೇಳಬಾರದು.

**ಡಾ॥ವೈ.ಎ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಕೇವಲ 20 ಪುಟಗಳ ರಾಜ್ಯಪಾಲರ ಭಾಷಣದಲ್ಲಿ ಏನೇನು ಇಲ್ಲ ಎನ್ನುವ ಮಾತುಗಳನ್ನು ಕೇಳಿ ನಾನು ಪ್ರತಿಯೊಂದು ಪುಟವನ್ನು ಓದಿಕೊಂಡು ಬಂದಿದ್ದೇನೆ. ವಿರೋಧ ಪಕ್ಷದ ಸದಸ್ಯರುಗಳು ಮಾತನಾಡುತ್ತಾ, 'ಎಸ್.ಡಿ.ಆರ್.ಎಫ್/ಎನ್.ಡಿ.ಆರ್.ಎಫ್ ಅಡಿಯಲ್ಲಿ ಪರಿಹಾರವನ್ನು ನೀಡುವ ಬಗ್ಗೆ ಭಾರತ ಸರ್ಕಾರದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೈಡ್‌ಲೈನ್ಸ್ ಪ್ರಕಾರ ಪರಿಹಾರದ ಹಣ ಬಹಳ ಕಡಿಮೆ ಇದೆ. ಮಳೆ ಹಾನಿಗೆ ತುತ್ತಾಗಿ ಬಟ್ಟೆ, ಪಾತ್ರೆ ಮತ್ತು ಗೃಹೋಪಯೋಗಿ ವಸ್ತುಗಳನ್ನು ಕಳೆದುಕೊಂಡವರಿಗೆ 3,800 ರೂಪಾಯಿಗಳನ್ನು ಮಾತ್ರ ಕೊಡುವುದಕ್ಕೆ ಅವಕಾಶವಿದೆ. ಮಾನವೀಯ ದೃಷ್ಟಿಯಿಂದ ಇನ್ನೂ ಹೆಚ್ಚಿಗೆ ಕೊಡುವ ಬಗ್ಗೆ ಯೋಚನೆ ಮಾಡಬೇಕು, ಹೃದಯ ವೈಶಾಲ್ಯ ತೋರಬೇಕು' ಎನ್ನುವ ಆಗ್ರಹವನ್ನು ಪದೇಪದೇ ಮಾಡುತ್ತಿದ್ದರು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಮಾನ್ಯ ಮುಖ್ಯಮಂತ್ರಿಗಳು ಪ್ರವಾಹ ಪೀಡಿತ ಸಂತ್ರಸ್ತರಿಗೆ 3,800 ರೂಪಾಯಿಗಳ ಜೊತೆಗೆ 6,200 ರೂಪಾಯಿಗಳನ್ನು ಸೇರಿಸಿ ಒಬ್ಬೊಬ್ಬ ಸಂತ್ರಸ್ತರಿಗೆ 10,000 ರೂಪಾಯಿಗಳನ್ನು ನೀಡಲಾಗಿದೆ. ಈ ರೀತಿ ಪರಿಹಾರ ನೀಡಿರುವುದು ರಾಜ್ಯದ ಇತಿಹಾಸದಲ್ಲಿಲ್ಲ. ನಾವು ಕೊಟ್ಟಿದ್ದೇವೆ. ಇದಕ್ಕಾಗಿ 207 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ.

**(214) 9.3.2020 1.30 ಪಿಕೆ:ಜಿಆರ್**

**ಡಾ:॥ ವೈ.ಎ.ನಾರಾಯಣಸ್ವಾಮಿ (ಮುಂದು)**

ಇದೇ ಸದನದಲ್ಲಿ ಮಾನ್ಯ ಎಸ್.ಆರ್.ಪಾಟೀಲ್‌ರವರು ಮಾತನಾಡುತ್ತಾ, ತೋಟಗಾರಿಕೆ ಬೆಳೆಗಳಿಗೆ . . .

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:-** ನಾವೂ 35 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇತಿಹಾಸದಲ್ಲೇ ಯಾರೂ ಕೊಟ್ಟಿಲ್ಲ ಎಂದು ಸದನದಲ್ಲಿ ಏಕೆ ಸುಳ್ಳು ಹೇಳುತ್ತೀರಿ?

**ಉಪಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರು ಏನು ಮಾತನಾಡುತ್ತಾರೋ ಅದನ್ನು ತಾವು ನೋಟ್ ಮಾಡಿ ಇಟ್ಟುಕೊಳ್ಳಿ. ಆ ಕುರಿತು ನಿಮಗೆ ಅವಕಾಶ ಕೊಟ್ಟಾಗ ನೀವು ಮಾತನಾಡಿ. ದಯವಿಟ್ಟು ಕುಳಿತುಕೊಳ್ಳಿ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು ತಮಗೆ ಮಾತನಾಡುವ ಸರದಿ ಬಂದಾಗ ನನ್ನನ್ನು ಕೋಟ್ ಮಾಡಿ ಮಾತನಾಡಲಿ.

ಮಾನ್ಯ ಸಭಾಪತಿಯವರೇ, ಇದೇ ಸದನದಲ್ಲಿ, ಗೈಡ್‌ಲೈನ್ಸ್ ಪ್ರಕಾರ ಪರಿಹಾರ ಮೊತ್ತ ಬಹಳ ಕಡಿಮೆ ಇದೆ, ಕೊಡುವ ಕಾಸು ಪೀಡಿತರಿಗೆ ಏತಕ್ಕೂ ಸಾಲುವುದಿಲ್ಲ ಎಂದು ಆಕಡೆ ಇದ್ದಾಗ ನಾವೂ ಕೂಡ ಮಾತನಾಡಿದ್ದೇವೆ; ಮಾನ್ಯ ಹೊರಟ್ಟಿಯವರೂ ಕೂಡ ಮಾತನಾಡಿದ್ದಾರೆ. ನಮ್ಮ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮುಖ್ಯಮಂತ್ರಿಗಳು ರೂ. 6200 ಗಳನ್ನು ಸೇರಿಸಿ ಒಟ್ಟು ರೂ. 10,000 ಮೊತ್ತದ ಲೆಕ್ಕದಲ್ಲಿ ಸುಮಾರು ರೂ. 207 ಕೋಟಿಗಳನ್ನು ಬಿಡುಗಡೆ ಮಾಡಿದ್ದಾರೆ.

ತೋಟಗಾರಿಕೆ ಬೆಳೆಗಳು, ಕೃಷಿ ಭೂಮಿ ಇವುಗಳು ನಷ್ಟ ಅನುಭವಿಸಿದಾಗ ಎನ್.ಡಿ.ಆರ್.ಎಫ್., ಎಸ್.ಡಿ.ಆರ್.ಎಫ್., ಗಳ guidelines ಮೀರಿ, ಹೆಕ್ಟೇರ್‌ಗೆ ರೂ. 10,000 ದಂತೆ 6 ಲಕ್ಷ 38 ಸಾವಿರ ರೈತರಿಗೆ ರೂ. 1126 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. Its on record. I am not lying here. Its on record. ಮಾನ್ಯ ಸಭಾಪತಿಯವರೇ, ಈ ದೇಶಕ್ಕೆ ರೈತರೇ ಬೆನ್ನೆಲುಬು. ನನ್ನ ಲೆಕ್ಕದಲ್ಲಿ ಮಾನ್ಯ ಯಡಿಯೂರಪ್ಪನವರು ರೈತರ ಬೆನ್ನೆಲುಬು. ರೈತರಿಗೆ ಕಷ್ಟ ಬಂದಾಗ ಸುಮ್ಮನೆ ಕುಳಿತುಕೊಳ್ಳುವ ಜೀವ ಅವರದಲ್ಲ. ನುಗ್ಗಿ ಹೋಗಿ ಕೆಲಸ ಮಾಡಿ, ರೈತರಿಗೆ ಏನು ಬೇಕು ಎಂಬುದನ್ನು ಅರಿತುಕೊಂಡು ಅದಕ್ಕೆ ಸ್ಪಂದಿಸುವ ದಾರ್ಷ್ಟ್ಯ, ಸಮರ್ಥತೆ ಮತ್ತು ಹೃದಯ ವೈಶಾಲ್ಯತೆ ಇದೆ. ಆದ್ದರಿಂದಲೇ, ಪ್ರವಾಹ ಬಂದಾಗ ನಿಭಾಯಿಸಿದ ರೀತಿ, ರೈತರ ನೆರವಿಗೆ ಬಂದ ರೀತಿ ನಿಜವಾಗಿಯೂ ಅನನ್ಯವಾದುದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರುಗಳು ಮಾತನಾಡುತ್ತಾ, ರೂ. 5 ಲಕ್ಷ ಘೋಷಣೆ ಮಾಡಿದ್ದೀರಿ, ಆದರೆ ಎಷ್ಟು ಜನರಿಗೆ ಕೊಟ್ಟಿದ್ದೀರಿ ಎಂದು ಕೇಳಿದರು. 3 ಲಕ್ಷ ಮನೆಗಳಿಗೆ ಏನು ತೊಂದರೆಗಳಾಗಿದೆಯೋ ಅದರ ಸರ್ವೇ ಆಗುತ್ತಿದೆ. ಆ ಕುರಿತು ವರದಿಯನ್ನು ಸದನದ ಮುಂದೆ ಮಂಡಿಸುತ್ತಾರೆ. ಎಷ್ಟು ಜನರಿಗೆ ಪರಿಹಾರ ಸಿಕ್ಕಿದೆ ಎನ್ನುವುದನ್ನು ಮುಂದಿನ ದಿನಗಳಲ್ಲಿ ಚರ್ಚೆ ಮಾಡೋಣ. 6 ತಿಂಗಳ ಒಳಗೆ ಅಸೆಸ್ ಮಾಡಿ ಮನೆ ಕಟ್ಟಿಕೊಡಲು ಸಧ್ಯಕ್ಕೆ ಆಗುವುದಿಲ್ಲ. ತಾವು ಸ್ವಲ್ಪ ಸಮಾಧಾನದಿಂದ ಇದ್ದರೆ ತಮಗೆ ಸರ್ಕಾರದ ಕಡೆಯಿಂದ ಖುಷಿ ಕೊಡುವಂತಹ ಉತ್ತರ ಸಿಗುತ್ತದೆ.

ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ಸುಮಾರು 7–8 ಜಿಲ್ಲೆಗಳ 70 ತಾಲ್ಲೂಕುಗಳು ನಿರಂತರವಾಗಿ ಬರಪೀಡಿತವಾಗುತ್ತವೆ. ಈ ಕುರಿತು ನಾವ್ಯಾರೂ ಚರ್ಚೆ ಮಾಡಲೇ ಇಲ್ಲ. "ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ" ಮತ್ತು "ನರೇಗಾ" ಯೋಜನೆಗಳನ್ನು ಮರ್ಜ್ ಮಾಡಿ, synchronise ಮಾಡಿ ಅದನ್ನು ಬರ ನಿಯಂತ್ರಣ ಜಲಾನಯನ ಅಭಿವೃದ್ಧಿ ಎನ್ನುವ ಹೊಸ ಯೋಜನೆ ತಂದಿದ್ದೇವೆ. ಮಾನ್ಯ ಶ್ರೀಕಂಠೇಗೌಡರ ಭಾಗದಲ್ಲಿ ಕಾವೇರಿ ನದಿ ಇದೆ. ಉತ್ತರ ಕರ್ನಾಟಕಕ್ಕೆ ಕೃಷ್ಣೆ ನದಿ ಇದೆ. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ ಮತ್ತು ಮಾಗಡಿ ಈ ಪ್ರದೇಶಗಳ ವ್ಯಾಪ್ತಿಗಳಲ್ಲಿ ಯಾವುದೇ ನದಿಗಳು ಇಲ್ಲ. ಈ ಭಾಗದ ಬಗ್ಗೆ ನಾವು ಇದುವರೆಗೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚರ್ಚೆ ಮಾಡಿಲ್ಲ. ಈ ಭಾಗದ ಬರದ ಬಗ್ಗೆ ಯಾರೂ ಚಕಾರ ಎತ್ತಲಿಲ್ಲ, ಈ ಕುರಿತು ಪ್ರಸ್ತಾಪವನ್ನೇ ಮಾಡಲಿಲ್ಲ. ರಾಜಕೀಯ ಮೇಲಾಟದ ಹಿನ್ನೆಲೆಯಲ್ಲಿ ಮಾತ್ರ ನಾವು ಚರ್ಚೆ ಮಾಡುತ್ತಿದ್ದೇವೆ. ಬರಪೀಡಿತ ಭಾಗದಿಂದ ಬಂದಿರುವ ನನಗೆ ಬಹಳ ನೋವಾಗಿದೆ. ಆ ಭಾಗದಲ್ಲಿ ಅಂತರ್ಜಲ 1500 ಅಡಿಗೆ ಹೋಗಿದೆ. ಹೈ ಪ್ರೆಷರ್ ಬೋರ್‌ವೆಲ್ ಹಾಕಿದರೆ ಮಾತ್ರ ನೀರು ಸಿಗುತ್ತದೆ, ಆ ಒಂದು ಮಟ್ಟಕ್ಕೆ ಬಂದಿದ್ದೇವೆ. ನಾನೂ ರೈತ, ಟೊಮಾಟೋ ಬೆಳೆಯುತ್ತಿದ್ದೇನೆ. 2 ಇಂಚು ನೀರು ತರಲು ಸುಮಾರು ರೂ.10 ಲಕ್ಷಗಳನ್ನು ಖರ್ಚು ಮಾಡಿ 1442 ಅಡಿ ಆಳಕ್ಕೆ ಕೊಳವೆ ಬಾವಿಯನ್ನು ಕೊರೆಸಬೇಕಾಯಿತು. ಆ ಭಾಗಕ್ಕೆ ನಾವೇನಾದರೂ ಮಾಡಬೇಕು ಅಲ್ಲವೇ? ಆದ್ದರಿಂದ ನಮ್ಮ ಸರ್ಕಾರ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಜೊತೆಗೆ synchronise ಮಾಡಿ, 100 ಬರಪೀಡಿತ ತಾಲ್ಲೂಕುಗಳಿಗೆ "ಬರ ನಿಯಂತ್ರಣ ಜಲಾನಯನ ಅಭಿವೃದ್ಧಿ ಯೋಜನೆ" ಎನ್ನುವ ಯೋಜನೆಯನ್ನು ತಂದಿದೆ. ಬರ ರೆಗ್ಯುಲರ್ ಆಗಿ ಬರುವುದಕ್ಕೆ ಕಾರಣವೇನು? ಬರಗಾಲ ಬಂದಾಗ ಅದನ್ನು ನಿಭಾಯಿಸುವುದಕ್ಕೆ, ನಿಯಂತ್ರಣ ಮಾಡುವುದಕ್ಕೆ, prearrangement ಮಾಡಿಕೊಳ್ಳುವುದಕ್ಕೆ ಏಕೆ ನಮ್ಮ ಕೈಯಲ್ಲಿ ಆಗುತ್ತಿಲ್ಲ? ಬರದ ಬರುವಿಕೆಯನ್ನು ನಿರೀಕ್ಷೆ ಮಾಡುವಂತಹ ತಂತ್ರಗಾರಿಕೆ ನಮ್ಮಲ್ಲಿ ಇಲ್ಲವೇ? ಇಸ್ರೋ ಇದೆ, ನಾಸಾ ಇದೆ, Remote Sensing Technology ಇದೆ. ಇದರ ಮುಖಾಂತರ ಮುಂದಿನ ವರ್ಷ ಯಾವರೀತಿ ಮಳೆ ಆಗುತ್ತದೆ, ಸರಾಸರಿ 750 ಎಂಎಂ ಗಿಂತ ಕಡಿಮೆ ಮಳೆ ಎಲ್ಲಾಗುತ್ತದೆ ಎಂದು ತಿಳಿದುಕೊಂಡು, ಯೋಜನೆ ಮಾಡಿಕೊಂಡು ಆ ಭಾಗದ ಜನರ ಬದುಕಿಗೆ ಆಸರೆ ಕೊಡಲು ಏಕೆ ಆಗುತ್ತಿಲ್ಲ? ಇದರ ಬಗ್ಗೆ ನಾವೆಲ್ಲಾ ಚರ್ಚೆ ಮಾಡಬೇಕು ಎಂದು ತಮ್ಮೆಲ್ಲರಲ್ಲಿ ಮನವಿ ಮಾಡುತ್ತೇನೆ. ಇವತ್ತು ನಾವು 100 ತಾಲ್ಲೂಕುಗಳ ರೈತರಿಗೆ ಹೊಸ ಆಯಾಮ ಸಿಗುತ್ತದೆ ಎನ್ನುವ ಮಹತ್ತರವಾದ ಆಶಯವನ್ನು ಇಟ್ಟುಕೊಂಡು "ಬರನಿಯಂತ್ರಣ ಜಲಾನಯನ ಅಭಿವೃದ್ಧಿ ಸ್ಕೀಮ್" ತಂದಿದ್ದೇವೆ. ಮುಖ್ಯವಾದ ಸಂಗತಿ ಎಂದರೆ, ಅಂತರ್ಜಲ ಕುಸಿದು ಪಾತಾಳಕ್ಕೆ ಹೋಗಿದೆ.

**ಉಪಸಭಾಪತಿಯವರು:-** ನೀವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ 20 ನಿಮಿಷಗಳಾಗಿವೆ. ದಯವಿಟ್ಟು ಗಮನದಲ್ಲಿ ಇಟ್ಟುಕೊಳ್ಳಿ.

**ಡಾ:॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅಂತರ್ಜಲ ಅಭಿವೃದ್ಧಿಗೆ ಪ್ರಧಾನ ಮಂತ್ರಿಗಳು ಒಂದು ಘೋಷಣೆ ಮಾಡಿದ್ದಾರೆ. ಎಲ್ಲೆಲ್ಲಿ ಮೇಲ್ಮೈ ನೀರಿದೆಯೋ ಅಂತಹ ಕಡೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಹಾಕಿ ನೀರು ಸರಬರಾಜು ಮಾಡಬಹುದು, ಆದರೆ ಅಂತರ್ಜಲ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಸಿದು ಹೋಗಿರುವ ಕಡೆ ನೀರು ಬರುವಂತೆ ಮಾಡಲು ಏನು ಮಾಡಬೇಕು ಎಂದು ಚರ್ಚೆ ಮಾಡಿದಾಗ, ಕರ್ನಾಟಕ ರಾಜ್ಯದಲ್ಲಿ ಅಂತರ್ಜಲ ವೃದ್ಧಿ ಮಾಡುವ ಸಲುವಾಗಿ ರೂ.1207 ಕೋಟಿ ರೂಪಾಯಿಗಳ ವೆಚ್ಚದಲ್ಲಿ "ಅಟಲ್ ಭೂಜಲ್ ಯೋಜನೆ" ಅಡಿಯಲ್ಲಿ ಒಂದು ಸ್ಕೀಮನ್ನು ತರಲಾಗಿದೆ. ಕೇಂದ್ರ ಸರ್ಕಾರ ಇಡೀ ದೇಶಕ್ಕೆ ಸಂಬಂಧಪಟ್ಟಂತೆ ಸುಮಾರು ರೂ. 6000 ಕೋಟಿ ಇಟ್ಟಿದ್ದರೆ, ಕರ್ನಾಟಕಕ್ಕೆ ರೂ. 1200 ಕೋಟಿ ಬಿಡುಗಡೆ ಮಾಡಿದೆ. ರೈತರನ್ನು ಗಮನದಲ್ಲಿಟ್ಟುಕೊಂಡು, ಮುಂದಿನ ಭವಿಷ್ಯದ ಪೀಳಿಗೆಯ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು, ಅಂತರ್ಜಲ ಬತ್ತಿ ಹೋಗಿರುವ ಜಿಲ್ಲೆಗಳಲ್ಲಿ ಆ ನೀರಿನಿಂದ ಆಗುತ್ತಿರುವ ದುಷ್ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು ಈ ಯೋಜನೆಯನ್ನು ತರಲಾಗಿದೆ. ನೀರಿನ ಅಂತರ್ಜಲದ ಮಟ್ಟವನ್ನು ಮೇಲ್ಕೆ ತರಬೇಕು, ಶುದ್ಧ ಕುಡಿಯುವ ನೀರು ಬರಬೇಕು, ಅದರ ಮುಖಾಂತರ ಜನರಿಗೆ ಆರೋಗ್ಯ ಸಿಗಬೇಕು ಎಂದು"ಅಟಲ್ ಭೂಜಲ್ ಯೋಜನೆ" ಯನ್ನು ನಮ್ಮ ಸರ್ಕಾರ ಜಾರಿಗೆ ತಂದಿದೆ. ಬಹಳ ಮುಖ್ಯವಾಗಿ, ರೈತರಿಗೆ "ಕಿಸಾನ್ ಸಮ್ಮಾನ್ ಸ್ಕೀಮ್" ಅಡಿ ಪ್ರಧಾನ ಮಂತ್ರಿಗಳು ರೂ.6000 ಗಳನ್ನು ರೈತರ ಖಾತೆಗೆ ಹಾಕುತ್ತಿದ್ದಾರೆ. ತುಮಕೂರಿನಲ್ಲಿ ದೊಡ್ಡ ಕಾರ್ಯಕ್ರಮ ಮಾಡಿ, ಒಂದೇ ದಿನ 6 ಕೋಟಿ ರೈತರ ಅಕೌಂಟ್‌ಗೆ ದುಡ್ಡು ಜಮಾವಣೆ ಆಗಿರುವುದನ್ನು ನಾವು ನೋಡಿದ್ದೇವೆ.

**ಶ್ರೀ ಐವನ್ ಡಿ'ಸೋಜಾ:-** ಕಿಸಾನ್ ಸಮ್ಮಾನ್ ಯೋಜನೆ ಅಡಿ ಎಷ್ಟು ಕುಟುಂಬಗಳು ಬರುತ್ತವೆ ಮತ್ತು ಈ ಕುಟುಂಬಗಳ ಪೈಕಿ ಎಷ್ಟು ಕುಟುಂಬಗಳು ಫಲಾನುಭವಿಗಳಾಗಿದ್ದಾರೆ ಎನ್ನುವುದನ್ನು ಹೇಳಿ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ನಾನು yield ಆಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಭಾಪತಿಯವರೇ, ರೂ. 6000 ಕ್ಕೆ ರೂ. 4000 ಸೇರಿಸಿ, ನಾವು ನಿಮ್ಮ ಜೊತೆಗೆ ಇರುತ್ತೇವೆ, ರೈತರ ಪರ ಇದ್ದೇವೆ ಎಂದು ತೋರಿಸಿ ಕೊಟ್ಟಿದ್ದೇವೆ. ಈ ರೀತಿ ಯಾವುದೇ ರಾಜ್ಯದವರು ಮಾಡಿಲ್ಲ. ಇವತ್ತು ವ್ಯವಸಾಯ ಎಂದರೆ "ವ್ಯವಸಾಯ, ನೀನು ಸಾಯ, ನಿಮ್ಮ ಮನಮಂದಿಯೆಲ್ಲಾ ಸಾಯ" ಎನ್ನುವ ಮಟ್ಟಕ್ಕೆ ಬಂದಿದೆ. ಅದು ಲಾಭದಾಯಕ ಕೆಲಸವಲ್ಲವೆಂದು ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಹಾಗಾಗಬಾರದು ಎಂದು, ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿ ಆದಮೇಲೆ "ಕೃಷಿ ಸಮ್ಮಾನ್ ಯೋಜನೆ"ಗೆ ರೂ. 4000 ಸೇರಿಸಿ, ವರ್ಷಕ್ಕೆ ಒಟ್ಟು ರೂ. 10000 ಗಳಂತೆ 41 ಲಕ್ಷ ರೈತರ ಬ್ಯಾಂಕ್ ಖಾತೆಗಳಿಗೆ ಒಟ್ಟು ರೂ. 825 ಕೋಟಿಗಳನ್ನು ವರ್ಗಾವಣೆ ಮಾಡಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಹೆಚ್.ಎಂ.ರೇವಣ್ಣ:-** ಅದರ ಸರಿಯಾದ ಅಂಕಿ-ಅಂಶಗಳನ್ನು ಕೊಡಿ. ಸದರಿ ಕಾರ್ಯಕ್ರಮದ ಅಡಿಯಲ್ಲಿ ನಿರ್ದಿಷ್ಟ ದುಡ್ಡನ್ನು ಇಟ್ಟಿದ್ದೀರಿ ಎನ್ನುವುದನ್ನು ಒಪ್ಪುತ್ತೇವೆ. ಆದರೆ, ಒಟ್ಟು ಎಷ್ಟು ಜನಕ್ಕೆ ತಲುಪಬೇಕಾಗಿತ್ತು, ಎಷ್ಟು ಜನರಿಗೆ ತಲುಪಿದೆ ಎನ್ನುವ ಮಾಹಿತಿಯನ್ನು ಸರ್ಕಾರ ಕೊಡಬೇಕು. ಕೇಂದ್ರ ಸರ್ಕಾರ ಕೊಡುವಂತಹ ದುಡ್ಡಿನ ಜೊತೆ ರಾಜ್ಯ ಸರ್ಕಾರವೂ ದುಡ್ಡನ್ನು ಹಾಕಿ ಕೊಡುವಂತಹ ಈ ಯೋಜನೆ ಸರ್ವಸಮ್ಮತವಾಗಿದೆ. ಆದರೆ, ಇದರ ಅಡಿ ಒಟ್ಟು ಎಷ್ಟು ಕುಟುಂಬಗಳು ಬರುತ್ತವೆ; ಎಷ್ಟು ಕುಟುಂಬಗಳಿಗೆ ಕೊಟಿದ್ದೀರಿ ಎನ್ನುವ ಮಾಹಿತಿ ಬೇಕು.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಸರ್ಕಾರ ಉತ್ತರ ಕೊಡಬೇಕಾದರೆ ಈ ಎಲ್ಲಾ ಮಾಹಿತಿಗಳನ್ನು ಸದನಕ್ಕೆ ನೀಡುತ್ತದೆ. ಈ ಯೋಜನೆ ತಂದಿದ್ದೇವೆ, ಇದರಿಂದ ರೈತರಿಗೆ ಅನುಕೂಲವಾಗುತ್ತದೆ.

**ಶ್ರೀ ಯು.ಬಿ.ವೆಂಕಟೇಶ್:-** ಕೇವಲ ಯೋಜನೆ ತಂದರೆ ಪ್ರಯೋಜನ ಇಲ್ಲ. ಆ ಯೋಜನೆ ಕಾರ್ಯಗತವಾಗಬೇಕು.

**ಶ್ರೀ ಐವನ್ ಡಿ'ಸೋಜಾ:-** ಇದರಲ್ಲಿ ನೀವು ಮೊದಲ ಕಂತನ್ನೂ ಕೊಟ್ಟಿಲ್ಲ. ಇನ್ನೂ 20 ಲಕ್ಷ ಕುಟುಂಬಗಳಿಗೆ ಸದರಿ ಯೋಜನೆಯ ಅಡಿಯಲ್ಲಿ ಉಪಯೋಗ ಮಾಡಿಕೊಡಬೇಕಿದೆ. (ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ:-** ನಿಮ್ಮ ಸರ್ಕಾರ ಇದ್ದಾಗ "ಕಿಸಾನ್ ಸಮ್ಮಾನ್ ಸ್ಕೀಮ್" ಗೆ ಡೇಟಾ ಕೊಟ್ಟಿರಲಿಲ್ಲ. ಇದನ್ನು ದಯವಿಟ್ಟು ಜ್ಞಾಪಕ ಇಟ್ಟುಕೊಳ್ಳಿ. ನಮ್ಮ ಸರ್ಕಾರ ಬಂದಮೇಲೆ 41 ಲಕ್ಷ ಕುಟುಂಗಳಿಗೆ ಕೊಡಲಾಗಿದೆ.

**ಶ್ರೀ ಐವನ್ ಡಿ"ಸೋಜಾ:-** 60 ಲಕ್ಷ ಕುಟುಂಬಗಳ ಪೈಕಿ 40 ಲಕ್ಷ ಕುಟುಂಬಗಳಿಗೆ ಕೊಟ್ಟಿದ್ದೀರಿ. ಇನ್ನೂ 20 ಲಕ್ಷ ಕುಟುಂಬಗಳಿವೆ.

**(215) 9-3-2020 1.40 ಡಿಎಸ್-ಎಂಡಿ**

**ಡಾ॥ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಐವನ್ ಡಿ'ಸೋಜಾರವರೇ, ನಿಮ್ಮ ಸರ್ಕಾರ ಇದ್ದಾಗಲೂ ಈ ಸ್ಕೀಮ್ ಬಂದಿತ್ತು. ಕೋಲಾರ, ಚಿಕ್ಕಬಳ್ಳಾಪುರಕ್ಕೆ *KDP* (Karnataka Development Programme) *meeting* ಗೆ ಹೋದಾಗ ರಾಜ್ಯ ಸರ್ಕಾರ data ಕೊಡದಿದ್ದರೆ ಈ ಸ್ಕೀಮ್ ಅನುಷ್ಠಾನಕ್ಕೆ ಬರುವುದಿಲ್ಲವೆಂದು ಹೇಳಿದ್ದರು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ 'ರೈತ ಬೆಳಕು' ಎನ್ನುವ ಕಾರ್ಯಕ್ರಮವನ್ನು ಘೋಷಣೆ ಮಾಡಿದ್ದರು. ಅದರ ಮುಂದುವರೆದ ಭಾಗ ಅಷ್ಟೆ.

**ಡಾ॥ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮಗೆ ಬಹಳ ಹೆಮ್ಮೆಯಾಗುತ್ತದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 4,000 ರೂಪಾಯಿ ಸೇರಿಸಿ ಸುಮಾರು 41 ಲಕ್ಷ ರೈತ್ತರ ಬ್ಯಾಂಕ್ ಖಾತೆಗಳಿಗೆ 825 ಕೋಟಿ ರೂಪಾಯಿಗಳನ್ನು ಡಿಪಾಸಿಟ್ ಮಾಡಿದ್ದೇವೆ.

**(ಈ ಹಂತದಲ್ಲಿ ಸಭಾಪತಿಯವರು ಪೀಠವನ್ನಲಂಕರಿಸಿದರು)**

ಇನ್ನು ಏನಾದರೂ ಬಿಟ್ಟು ಹೋಗಿದ್ದರೆ ಮುಂದೆ ಮಾಡುತ್ತಾರೆ ಎನ್ನುವ ವಿಶ್ವಾಸ ನನಗಿದೆ. ಸಾಲದಿಂದ ಕಂಗೆಟ್ಟ ರೈತರಿಗೆ ಸಾಲ ಮನ್ನಾ ಸ್ಕೀಮ್ ಏನಿತ್ತು ಅದನ್ನು ಜಾರಿಗೆಗೊಳಿಸಿ ಸಾಲ ಮನ್ನಾ ಮಾಡುವುದಕ್ಕೆ ಕಟಿಬದ್ಧವಾಗಿದ್ದೇವೆ. ಬಹಳ ಮುಖ್ಯವಾಗಿ ರೇಷ್ಮೆ ಗೂಡಿನ ಬಗ್ಗೆ ಹೇಳಬೇಕೆಂದರೆ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಾಮರಾಜನಗರದಲ್ಲಿ ರೇಷ್ಮೆ ಬೆಳೆ ಜಾಸ್ತಿ. ಅಲ್ಲೆಲ್ಲಾ ದಳ್ಳಾಳಿಗಳ ಹಾವಳಿ ಜಾಸ್ತಿ. ಇದರ ಬಗ್ಗೆ ಮಾನ್ಯ ಸದಸ್ಯರಾದ ಯು.ಬಿ.ವೆಂಕಟೇಶ್‌ರವರಿಗೆ ಗೊತ್ತಿದೆ. ಅವರು ಶಿಡ್ಲಘಟ್ಟದಲ್ಲಿದ್ದರು. ಅಲ್ಲಿ e-payment and e- tender scheme ನ್ನು ತಂದು ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಿ ನೇರವಾಗಿ ರೈತರ ಖಾತೆಗೆ ಹಣವನ್ನು ವರ್ಗಾವಣೆ ಮಾಡುವ ವ್ಯವಸ್ಥೆಯನ್ನು ತಂದಿದ್ದಾರೆ. ಬಹಳ ಮುಖ್ಯವಾಗಿ ಈ ರಾಜ್ಯದಲ್ಲಿ ರೈತರ ರೇಷ್ಮೆ ಗೂಡಿಗೆ ಬೆಲೆ ಕಡಿಮೆಯಾದಾಗ ಪ್ರತಿ ಕೆ.ಜಿ.ಗೆ 20 ರೂಪಾಯಿ ಕೊಟ್ಟಿದ್ದು ನಮ್ಮ ಹಳೆ ಸರ್ಕಾರ. ಅದನ್ನು ಅವರು ಮುಂದುವರೆಸಿದ್ದಾರೆ. ಅದಕ್ಕೆ ನಾನು ಅವರನ್ನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ:-** ನಮ್ಮ ಸರ್ಕಾರವಿದ್ದಾಗ ಬೆಂಬಲ ಬೆಲೆ ಕೊಟ್ಟಿದ್ದೇವೆ.

**ಡಾ॥ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಬೆಂಬಲ ಬೆಲೆ ಕೊಟ್ಟಿದ್ದಾರೆ. ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಹೈನುಗಾರಿಕೆ ಬಹಳಷ್ಟು ಗಟ್ಟಿಯಾಗಿ ದೊಡ್ಡ ಉದ್ದಿಮೆಯಾಗಿ ಬೆಳೆದಿದೆ. ನಿನ್ನೆ ನಾವು ಮಹಿಳಾ ದಿನಾಚರಣೆಯನ್ನು ಆಚರಣೆ ಮಾಡಿದ್ದೇವೆ. ಹೈನುಗಾರಿಕೆಯಲ್ಲಿ ಹೆಣ್ಣುಮಕ್ಕಳೇ ಜಾಸ್ತಿ ಭಾಗಿಯಾಗಿದ್ದಾರೆ. ಪ್ರತಿ ಹೆಣ್ಣುಮಕ್ಕಳು ಸೊಸೈಟಿಯಲ್ಲಿ ಸದಸ್ಯರಾಗಿರುವ ಈ ಹೈನು ಉದ್ದಿಮೆ ಬಹಳ ಪ್ರಬಲವಾಗಿ ಬೆಳೆದಿದೆ. ನಮ್ಮ ಸರ್ಕಾರ ಈ ಹೈನು ಉದ್ದಿಮೆಯಲ್ಲಿ ಪ್ರತಿ ಒಂದು ಲೀಟರ್‌ಗೆ ಐದು ರೂಪಾಯಿ ಪ್ರೋತ್ಸಾಹ ಧನ ಕೊಡುವುದಕ್ಕೆ ಸುಮಾರು 691 ಕೋಟಿ ರೂಪಾಯಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಿಡುಗಡೆ ಮಾಡಿದೆ. ಆದರೂ ನಾವು ಗಮನಹರಿಸಬೇಕಾಗಿರುವುದೇನೆಂದರೆ, ಖಾಸಗಿ ಡೈರಿಗಳ ಕಾಟ ಜಾಸ್ತಿಯಾಗಿದೆ. ಆ ಖಾಸಗಿ ಡೈರಿಗಳ ಕಾಟವನ್ನು ವಿಮುಕ್ತಿ ಮಾಡುವುದಕ್ಕೆ ನಮ್ಮ ಸರ್ಕಾರ ಯೋಚನೆ ಮಾಡುತ್ತದೆ ಎನ್ನುವ ವಿಶ್ವಾಸ ನೂರಕ್ಕೆ ನೂರು ಭಾಗ ಇದೆ. ಆರೋಗ್ಯ ಕ್ಷೇತ್ರದಲ್ಲಿ ಮಾನ್ಯ ನರೇಂದ್ರ ಮೋದಿಯವರ 'Fit India Movement' ಇಡೀ ದೇಶದಲ್ಲಿ ಆರೋಗ್ಯವಂತರಾಗಿ ಜನರು ಜೀವನ ಮಾಡ ಬೇಕೆನ್ನುವ ಆಸೆ ಅವರದ್ದು. 'Fit India Movement' ಗೆ ಆರೋಗ್ಯದ ಆಯುಷ್ಮಾನ್ ಭಾರತ್ ಕಾರ್ಡ್, ಸುವರ್ಣ ಆರೋಗ್ಯ ರಕ್ಷಾ ಕವಚ ಇವೆರಡನ್ನು ಸೇರಿಸಿ ಕರ್ನಾಟಕ ರಾಜ್ಯದಲ್ಲಿ ಇದುವರೆವಿಗೂ ಸುಮಾರು 3,30,000 ಜನಕ್ಕೆ ಸುಮಾರು ಐದು ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಿದ್ದಾರೆ. ಈ ಯೋಜನೆಯನ್ನು ರಾಜ್ಯದಲ್ಲಿ 2019 ರಲ್ಲಿ ಜಾರಿಗೆ ತಂದಿದ್ದೇವೆ. ಆದರೆ ಇಲ್ಲಿ ನಾವು ಬಹಳ ಮುಖ್ಯವಾಗಿ ಯೋಚನೆ ಮಾಡಬೇಕಾಗಿರುವುದೇನೆಂದರೆ, ಇಡೀ ಕರ್ನಾಟಕ ರಾಜ್ಯದಲ್ಲಿ ಬಿಪಿಎಲ್ ಕಾರ್ಡ್‌ದಾರರು ಏನಿದ್ದಾರೆ ಅವರೆಲ್ಲರಿಗೂ ಈ ಯೋಜನೆ ಅನ್ವಯಿಸುತ್ತದೆ. ಈ ಯೋಜನೆಯನ್ನು ಫಲಾನುಭವಿಗಳು ಪಡೆದುಕೊಳ್ಳುತ್ತಿದ್ದಾರೆಂದು ಬಹಳ ಖುಷಿಯಾಗಿ ಹೇಳಬಯಸುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ಪ್ರತಿ ಜಿಲ್ಲಾ ಮಟ್ಟದಲ್ಲಿ ಮೆಡಿಕಲ್ ಕಾಲೇಜು ಪ್ರಾರಂಭ ಮಾಡಬೇಕೆಂದು ನಾವು ಇಲ್ಲಿ ಬಹಳಷ್ಟು ಒತ್ತಡವನ್ನು ಹಾಕಿದ್ದೇವೆ. ನಾವು ಇವತ್ತು ಎರಡು ಕಡೆಗಳಲ್ಲಿ ಮೆಡಿಕಲ್ ಕಾಲೇಜನ್ನು ಪ್ರಾರಂಭ ಮಾಡಿದ್ದೇವೆ. ಮುಂದಿನ ದಿನಮಾನಗಳಲ್ಲಿ ಎಲ್ಲಾ ಕಡೆ ಮೆಡಿಕಲ್ ಕಾಲೇಜು ಬರುವಂಥ ದೂರ ಇಲ್ಲ ಎನ್ನುವ ಮಾತನ್ನು ನಾನು ಬಹಳ ಹೆಮ್ಮೆಯಿಂದ ಹೇಳಬಯಸುತ್ತಿದ್ದೇನೆ. ಬೆಂಗಳೂರಿನಲ್ಲಿ ವಿಶೇಷವಾಗಿ ಕ್ಯಾನ್ಸರ್ ರೋಗಿಗಳು ಜಾಸ್ತಿಯಾಗುತ್ತಿದ್ದಾರೆ. ತುಮಕೂರಿನಲ್ಲಿ 200 ಹಾಸಿಗೆಯುಳ್ಳ ಕ್ಯಾನ್ಸರ್ ಆಸ್ಪತ್ರೆಯನ್ನು ಕಟ್ಟುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ಮೊನ್ನೆ ಕೋಲಾರದಲ್ಲಿ IMR (Infant Mortality Rate) and MMR (Maternal Mortality Ratio) ಕಡಿಮೆ ಮಾಡುವುದಕ್ಕೆ ತಾಯಿ ಮತ್ತು ಮಕ್ಕಳ Combined Hospital ನ್ನು ಓಪನ್ ಮಾಡಿದ್ದೇವೆ. ಏಕೆ ಇದನ್ನೆಲ್ಲಾ ಹೇಳುತ್ತಿದ್ದೇನೆಂದರೆ, ಬಹಳ ಮುಖ್ಯವಾಗಿ ಆರೋಗ್ಯ ಪೂರ್ಣ ಸಮಾಜ ಕಟ್ಟಬೇಕು, 'Fit India Movement' ಗೆ ಹೆಚ್ಚಿನ ಒತ್ತು ಕೊಡಬೇಕು, ಅದರ ಮುಖಾಂತರ ಇಡೀ ರಾಜ್ಯದಲ್ಲಿ ಆಯುಷ್ಮಾನ್ ಭಾರತ್ ಕಾರ್ಡ್ ಜಾರಿಗೆ ತರಬೇಕೆನ್ನುವ ಮಹತ್ವಕಾಂಕ್ಷೆ ನಮ್ಮ ಸರ್ಕಾರದ್ದಾಗಿದೆ ಎನ್ನುವ ಮಾತನ್ನು ಹೇಳಬಯಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಶಿಕ್ಷಣ ಸಚಿವರಾದ ಮಾನ್ಯ ಸುರೇಶ್ ಕುಮಾರ್‌ರವರು ಇಲ್ಲೇ ಇದ್ದಾರೆ. ‘ವಾಟರ್ ಬೆಲ್’ (ನೀರು ಸೇವನೆ ಗಂಟೆ) ಎಂಬ ಹೊಸ ಪರಿಕಲ್ಪನೆಯನ್ನು ಜಾರಿಗೆ ತಂದಿದ್ದೇವೆ. ಮಕ್ಕಳು ನಿರ್ಜಲೀಕರಣದಿಂದ ಬಳಲುಬಾರದು. 411 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪದವಿ ಶಿಕ್ಷಣವನ್ನು ಪಡೆಯುತ್ತಿರುವ ಸುಮಾರು 1.70 ಲಕ್ಷ ವಿದ್ಯಾರ್ಥಿನಿಯರಿಗೆ ಪೂರ್ಣ ಪ್ರಮಾಣದಲ್ಲಿ ಶುಲ್ಕ ವಿನಾಯಿತಿಯನ್ನು ನೀಡಲಾಗಿದೆ. ಇದು ಕೂಡ ಬಹಳ impact ಆಗಿದೆ ಎನ್ನುವುದನ್ನು ತಮ್ಮ ಮುಖಾಂತರ ಸದನದಲ್ಲಿ ಹೇಳಬಯಸುತ್ತಿದ್ದೇನೆ. ವಿಶ್ವವಿದ್ಯಾಲಯದ ಸ್ಥಾಪನೆ, ಗುಣಮಟ್ಟವನ್ನು ಕಾಯ್ದುಕೊಳ್ಳುವುದು, ಶಿಕ್ಷಣದ ಮುಖಾಂತರ ಮೌಲ್ಯಾಧಾರಿತ ಶಿಕ್ಷಣವನ್ನು ಕೊಡುವುದು, ಅದಕ್ಕೆ ಹೆಚ್ಚಿನ ಒತ್ತು ಕೊಡುವುದಕ್ಕೆ ಸುಮಾರು 276 ಕರ್ನಾಟಕ ಪಬ್ಲಿಕ್ ಶಾಲೆಗಳ ಸ್ಥಾಪನೆ. ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಶಿಕ್ಷಣ ಸಾಲಗಳ ಮಂಜೂರಾತಿ, ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಅಭಿವೃದ್ಧಿ ಕಾರ್ಯಕ್ರಮ ಮುಂತಾದವುಗಳಿಗಾಗಿ 4,762 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ.

**ಶ್ರೀ ಹೆಚ್.ಎಂ.ರೇವಣ್ಣ:–** 25 ಲಕ್ಷ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡುವುದು ನಿಂತಿದೆಯಲ್ಲಾ ಅದರ ಬಗ್ಗೆ ಈ ಸರ್ಕಾರ ಯೋಚನೆ ಮಾಡಬೇಕಲ್ಲವೇ?

**ಡಾ॥ವೈ.ಎ.ನಾರಾಯಣಸ್ವಾಮಿ:–** ಸರ್ಕಾರ ಉತ್ತರ ಕೊಡಬೇಕಾದರೆ ನಿಮ್ಮೆಲ್ಲಾ ಪ್ರಶ್ನೆಗೆ ಉತ್ತರ ತೆಗೆದುಕೊಳ್ಳಬಹುದು.

**ಶ್ರೀ ಹೆಚ್.ಎಂ.ರೇವಣ್ಣ:–** ಈಗ ನೀವು ವಿದ್ಯಾರ್ಥಿಗಳಿಗೆ ಎಂದು ವಿಷಯ ತೆಗೆದುಕೊಂಡಿದ್ದೀರಲ್ಲಾ ಅದಕ್ಕಾಗಿ ಹೇಳಿದೆ.

**ಡಾ॥ವೈ.ಎ.ನಾರಾಯಣಸ್ವಾಮಿ:–** ಅದಕ್ಕೆ ತಮ್ಮ ಸರ್ಕಾರ ಇದ್ದಾಗ ಖಜಾನೆ–2 ಎನ್ನುವ ಅಕೌಂಟ್ ಪ್ರಾರಂಭವಾಯಿತು. ಆ ಖಜಾನೆ–2 ಬಂದ ಮೇಲೆ ಹಣವಿದ್ದರೂ ಬಿಡುಗಡೆ ಮಾಡುವುದಕ್ಕಾಗಲಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಇದರ ಬಗ್ಗೆ ಚರ್ಚೆ ಮಾಡಿದ್ದೇನೆ. ಸುತ್ತೋಲೆ ಹೊರಡಿಸಿ ನಿಲ್ಲಿಸಿದ್ದಾರೆ. ಇದಕ್ಕೂ ಖಜಾನೆ–2 ಗೂ ಸಂಬಂಧವಿಲ್ಲ.

**ಡಾ॥ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇವತ್ತಿನ ದಿನಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲೆ ಬಹಳ ದೌರ್ಜನ್ಯ ಆಗುತ್ತಿದೆ. ಮಹಿಳೆಯರು ಸಾಯಂಕಾಲ ಪಾಳಿಯಲ್ಲಿ ಕೆಲಸ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡುವುದು ಕಷ್ಟವಾಗುತ್ತಿದೆ. ಅದಕ್ಕೋಸ್ಕರ ಮಹಿಳೆಯರ ಸುರಕ್ಷತೆಗಾಗಿ ಕೆಲವು ಕ್ರಮಗಳನ್ನು ಕೈಗೊಂಡಿದೆ. ಮಕ್ಕಳ ಮೇಲೆ ನಡೆಯುವ ದೌರ್ಜನ್ಯ POCSO (The Protection of Children from Sexual Offences Act) ಅಡಿಯಲ್ಲಿ ಸುಮಾರು 17 Trial Courts ನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಂಡಿದೆ. ಅದೇ ರೀತಿ ಮಹಿಳೆಯರ ಮೇಲೆ ದೌರ್ಜನ್ಯ ಮತ್ತು ಮಕ್ಕಳ ಮೇಲೆ ಆಗುವ ದೌರ್ಜನ್ಯವನ್ನು ತಡೆಗಟ್ಟುವುದಕ್ಕೆ 14 ತ್ವರಿತ ನ್ಯಾಯಾಲಯಗಳನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಂಡಿದೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಚಿಕ್ಕ ಮಕ್ಕಳನ್ನೇ ಅರೆಸ್ಟ್ ಮಾಡಿಸುತ್ತಾರೆ.

**ಡಾ॥ವೈ.ಎ.ನಾರಾಯಣಸ್ವಾಮಿ:-** ಅದರ ಬಗ್ಗೆ ಮಾತನಾಡಿದರೆ ಬೇರೆ ಭಾಷಣ ಮಾಡಬೇಕಾಗುತ್ತದೆ. (ಗೊಂದಲ) ಮಕ್ಕಳ ಮನಸ್ಸನ್ನು ಕೆಡಿಸಿ ದೇಶದ ಬಗ್ಗೆ ಕೆಟ್ಟ ಅಭಿಪ್ರಾಯ ಬರುವ ಹಾಗೆ ಮಾಡುತ್ತೀರಲ್ಲಾ? ಮಕ್ಕಳ ಕೈಯಲ್ಲಿ ಡ್ರಾಮಾ ಮಾಡಿಸುತ್ತೀರಲ್ಲಾ ನಿಮಗೆ ನಾಚಿಕೆಯಾಗುವುದಿಲ್ಲವೇ?

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಹೌದು, ನಾವು ಅದನ್ನೇ ಹೇಳುತ್ತಿದ್ದೇನೆ. ನಾವು ಮಾತನಾಡುವಾಗ ನೀವು ಸಹ ಮಾತನಾಡುತ್ತೀರಲ್ಲಾ.

**ಡಾ॥ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಕ್ಕಳ ಮತ್ತು ಮಹಿಳೆಯರ ಸುರಕ್ಷತೆಗಾಗಿ ನಮ್ಮ ಸರ್ಕಾರ, we have taken utmost care. ಅಂದರೆ 17 Trial Courts and 14 ತ್ವರಿತ ನ್ಯಾಯಾಲಯಗಳನ್ನು ಮಾಡಿ ಈ ರಾಜ್ಯದ ಮಹಿಳೆಯರ ಮತ್ತು ಮಕ್ಕಳ ಜೊತೆ ನಾವಿದ್ದೇವೆ ಎನ್ನುವ ಮಾತನ್ನು ಮಾನ್ಯ ಯಡಿಯೂರಪ್ಪ ಸರ್ಕಾರ ಗಟ್ಟಿಯಾಗಿ ಹೇಳಿದೆ.

ಅದೇ ರೀತಿ ಬಹಳ ಮುಖ್ಯವಾಗಿ ಬೆಂಗಳೂರು ನಗರದಲ್ಲಿ ಭಯೋತ್ಪಾದನೆ ಚಟುವಟಿಕೆಗಳು ಜಾಸ್ತಿಯಾಗಿವೆ. ಡ್ರಗ್, ಗಾಂಜಾ, ಅಫೀಮು, ಅಪರಾಧ ಕೃತ್ಯಗಳು ಬಹಳ ಜಾಸ್ತಿಯಾಗಿವೆ. ಬೆಂಗಳೂರಿನಲ್ಲಿ ಇವೆಲ್ಲಾ ಇವೆ ಎಂದು ಎಲ್ಲರು ಒಪ್ಪಿಕೊಳ್ಳುತ್ತಾರೆ. ಇದಕ್ಕೆ ಕಡಿವಾಣ ಹಾಕಬೇಕೆಂದು ವಿಶೇಷವಾಗಿ ಸೌತ್ ಆಫ್ರಿಕಾದಿಂದ ಬಂದ ವಿದ್ಯಾರ್ಥಿಗಳ ಜೊತೆಗೆ ನಮ್ಮ ಸ್ಥಳೀಯರು ಕೈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜೋಡಿಸಿದ್ದಾರೆ. ನಾನು ಇಲ್ಲಿ ಅವರಿವರ ಮೇಲೆ ಅಪಾದನೆ ಮಾಡುವುದಕ್ಕೆ ಹೋಗುತ್ತಿಲ್ಲ. ಅಪಾದನೆ ಮಾಡಿ ಸುಮ್ಮನೆ ಕಸಿವಿಸಿಗೊಳಿಸುವ ಅವಶ್ಯಕತೆ ಇಲ್ಲ. ನಾವೆಲ್ಲರೂ ಆತ್ಮಸಾಕ್ಷಿಯಿಂದ ಒಪ್ಪಿಕೊಳ್ಳಬೇಕಾಗಿದೆ. ಬೆಂಗಳೂರಿನಲ್ಲಿ ಎಲ್ಲಾ ಶಾಲಾ–ಕಾಲೇಜುಗಳ ಪಕ್ಕದಲ್ಲಿ ಇವತ್ತು drugs ಮಾರಾಟ ಮಾಡುತ್ತಿದ್ದಾರೆ.

**216/9-3-2020/1-50/bkp-md**

**ಡಾ॥ ವೈ.ಎ.ನಾರಾಯಣಸ್ವಾಮಿ(ಮುಂದು)**

ಇದಕ್ಕೆ ಕಡಿವಾಣ ಹಾಕಲಿಕ್ಕೋಸ್ಕರ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸೈಬರ್, ಆರ್ಥಿಕ, ಮಾದಕ ವಸ್ತುಗಳ ಮೇಲಿನ ತನಿಖೆಗಾಗಿ 8 Cyber Crime Police Stations ಗಳನ್ನು ತೆರೆದಿದ್ದೇವೆ. ಇದು ಅತ್ಯಂತ ಅವಶ್ಯಕವಾಗಿ ಬೇಕಾಗಿರುವಂತಹ, ಸಮಾಜವನ್ನು ಕೆಡಿಸಬೇಕೆಂದು ಯಾವ ಒಂದು ದುಷ್ಟ ಶಕ್ತಿಗಳು ಪ್ರಯತ್ನ ಮಾಡುತ್ತಿವೆ, ಅವರಿಗೆ ಪಾಠವನ್ನು ಕಲಿಸಲಿಕ್ಕೆ ಈ Cyber Crime Police Stations ಬಹಳ ಮುಖ್ಯ ಎಂದು ಹೇಳಿ ಪ್ರಾರಂಭ ಮಾಡಲಾಗಿದೆ. ದೆಹಲಿಯಲ್ಲಿ ಯಾವುದೇ ಒಂದು ಘಟನೆಯಾದರೆ, ಉತ್ತರ ಪ್ರದೇಶದಲ್ಲಿ ಘಟನೆಯಾದರೆ, ಇಲ್ಲವೇ ಕಾಶ್ಮೀರದಲ್ಲಿ ಏನಾದರೂ ಒಂದು bomb blast ಆದರೆ ಬೆಂಗಳೂರಿಗೆ ಏನ್.ಐ ಪೋಲೀಸ್‌ನವರು ಹುಡುಕಿಕೊಂಡು ಬರುತ್ತಾರೆ. ಅದರಲ್ಲೂ ವಿಶೇಷವಾಗಿ ಹೆಬ್ಬಾಳಕ್ಕೆ ಬರುತ್ತಾರೆ. ಕೋಲಾರಕ್ಕೆ ಬರುತ್ತಾರೆ, ರಾಮನಗರಕ್ಕೆ ಬರುತ್ತಾರೆ, ದಾವಣಗೆರೆಗೆ, ತುಮಕೂರಿಗೆ ಬರುತ್ತಾರೆ. ಏಕೆಂದರೆ, ಆ ಉಗ್ರ ಸಂಘಟನೆಗಳ ಜೊತೆ ನಮ್ಮ ಇಲ್ಲಿನ ಕೆಲವು ಸಂಘಟನೆಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಅದಕ್ಕೋಸ್ಕರ ಈ ಬೆಂಗಳೂರಿನಲ್ಲಿ ಭಯೋತ್ಪಾದನಾ ನಿಗ್ರಹ ಘಟಕ (Anti-Terrorist Cell) ನ್ನು ನಾವು ಪ್ರಾರಂಭ ಮಾಡಿದ್ದೇವೆ ಎನ್ನುವುದನ್ನು ಹೇಳಿ, ಈ ರಾಜ್ಯಪಾಲರ ಭಾಷಣದಲ್ಲಿ ಇನ್ನೂ ಬಹಳಷ್ಟು ಸ್ಕೀಂಗಳು ಇವೆ. ಊಟಕ್ಕೆ ಹೋಗಲಿಕ್ಕೆ ಸಮಯ ಆಗುತ್ತಿದೆ. ಆದಕ್ಕೋಸ್ಕರ ನಾನು ಬಹಳ ಗೌರವವಾಗಿ ಏನು 20 ಪುಟಗಳ ಈ ಒಂದು ಪುಸ್ತಕ ಇದೆ, ಇದನ್ನು ತಾವು ದಯವಿಟ್ಟು ಕಾಮಾಲೆ ಕಣ್ಣಿನಿಂದ ನೋಡಲಿಕ್ಕೆ ಹೋಗಬೇಡಿ. ಹಳದಿ ಕಣ್ಣಿನಿಂದ ನೋಡಲಿಕ್ಕೆ ಹೋಗಬೇಡಿ. ನಿಜವಾದ ಗ್ಲಾಸ್ ಮೂಲಕ ನೋಡಿ. ಮತ್ತೆ, ನಾವೀನ್ಯತಾ ಪ್ರಾಧಿಕಾರವೆಂದು ಮಾಡಿದ್ದೇವೆ. ನಾವಿನ್ಯತಾ ಪ್ರಾಧಿಕಾರವೆಂದರೆ ಏನು? ಈಗ ನವೋದ್ಯಮಗಳು (Start-up Companies) ಪ್ರಾರಂಭವಾಗುತ್ತಿವೆ. ಇಡೀ ದೇಶದಲ್ಲಿ, ಕರ್ನಾಟಕದಲ್ಲಿ Start-up Companies ಗಳ ಸಂಖ್ಯೆ ಜಾಸ್ತಿ ಇದೆ. ಅದಕ್ಕೆ ನೈಪುಣ್ಯತೆಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೇರಿಸಲಿಕ್ಕೆ ತರಬೇತಿಯನ್ನು ಕೊಡಲಿಕ್ಕೆ ಯಾವರೀತಿಯಲ್ಲಿ ನವೋದ್ಯಮಗಳನ್ನು ಪ್ರಾರಂಭ ಮಾಡಬೇಕು, ಆ ಮೂಲಕ ನಮ್ಮ ಸಮಾಜಕ್ಕೆ ಮತ್ತು ನಮ್ಮ ನಿರುದ್ಯೋಗಿ ಯುವಕ-ಯುವತಿಯರಿಗೆ ಕೆಲಸ ಕೊಡುವುದರ ಬಗ್ಗೆ ನಾವೀನ್ಯತಾ ಪ್ರಾಧಿಕಾರವನ್ನು ಇಲ್ಲಿ ನಮೂದಿಸುವುದರ ಮೂಲಕ ಸ್ಥಾಪನೆ ಮಾಡಿದ್ದೇವೆ. ಅದರ ಬಗ್ಗೆ ಎಲ್ಲರೂ ಗಮನಹರಿಸಬೇಕು ಮತ್ತು ಬೆಳಕನ್ನು ಚೆಲ್ಲಬೇಕು. ಬೆಂಗಳೂರಿನಲ್ಲಿ ಟ್ರಾಫಿಕ್ ಜಾಸ್ತಿ ಇದೆ. ನಾವೆಲ್ಲರೂ ಕಣ್ಣು ಮುಚ್ಚಿಕೊಂಡು ಹೋಗುವ ಕಾಲ ಬಂದುಬಿಟ್ಟಿದೆ. ಇದರ ಬಗ್ಗೆ ಇಲ್ಲಿ ಚರ್ಚೆಯಾಗಬೇಕು. ಅದರ ಬಗ್ಗೆ ಪರಿಹಾರವನ್ನು ಏನು ಕೊಡಬೇಕು? ಇದರ ಬಗ್ಗೆ ನಮ್ಮ ಮೇಲೆ ನೀವು ಆರೋಪ ಮಾಡುವುದು, ನಿಮ್ಮ ಮೇಲೆ ನಾವು ಆರೋಪ ಮಾಡುವುದು, ಈ ರೀತಿ ಮಾಡುವುದರ ಮೂಲಕ ಜನತೆ ಈ ಸದನದ ಮೂಲಕ ಏನು ಸಂದೇಶವನ್ನು ಕಳುಹಿಸುತ್ತಿದ್ದೇವೆ ಎನ್ನುವುದನ್ನು ಯೋಚನೆ ಮಾಡಬೇಕು. ನಾವು ಇಲ್ಲಿ ಏನು ಮಾಡಿದ್ದೇವೆ, ನೀವು ಇಲ್ಲಿ ಏನು ಮಾಡಿದ್ದೀರಿ ಎನ್ನುವುದು ಮುಖ್ಯವಲ್ಲ. ನಾವೆಲ್ಲರೂ ಸೇರಿ ಈ ಜನರ ಬದುಕಿಗೆ, ರೈತರ ಬದುಕಿಗೆ ಮತ್ತು ಕಾರ್ಮಿಕರ ಸಮಗ್ರತೆಗೆ ಮತ್ತು ಅವರ ಬದುಕಿಗೆ ಏನು ಹೊಸ ಪರಿಹಾರಗಳನ್ನು ಇದರಲ್ಲಿ ಕೊಡುತ್ತಿದ್ದೇವೆ ಎನ್ನುವುದನ್ನು ಬಹಳ ಮುಖ್ಯವಾಗಿ ನೋಡಬೇಕಾಗಿದೆ. ಅಂತಹ ಒಂದು ನೋಟವನ್ನು ನಮ್ಮ ಸರ್ಕಾರದಲ್ಲಿ ಸನ್ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪನವರು ಬಹಳ ಗಟ್ಟಿಯಾಗಿ ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಈ ರಾಜ್ಯದ ದಿಕ್ಸೂಚಿಯಾಗಿ 12 ತಿಂಗಳು ಕಾಲ ಈ ರಾಜ್ಯದಲ್ಲಿ ಏನು ಮಾಡುತ್ತೇವೆ, ಯಾವ ರೀತಿಯಲ್ಲಿ ಸರ್ವವ್ಯಾಪಿ, ಸರ್ವ ಶ್ರೇಷ್ಠವಾದ ಕಾರ್ಯಕ್ರಮಗಳನ್ನು ತರುತ್ತೇವೆ, ಅದರ ಮೂಲಕ ಈ ರಾಜ್ಯದ ಕಲ್ಯಾಣವನ್ನು ಮಾಡುತ್ತೇವೆ ಎನ್ನುವ ಮಾತನ್ನು ಬಹಳ ಗಟ್ಟಿಯಾಗಿ ಹೇಳಿದ್ದಾರೆ. ಆ ಒಂದು ಭಾಷಣವನ್ನು ದಯಪಾಲಿಸಿದ ಘನತೆವೆತ್ತ ರಾಜ್ಯಪಾಲರಿಗೆ ತಮ್ಮ ಅನುಮತಿಯೊಂದಿಗೆ ಭಾಷಣಕ್ಕೆ ಅನುಮೋದನೆಯನ್ನು ಮಾಡಿ, ಗೌರವವನ್ನು ಸಲ್ಲಿಸಿ, ತಮಗೂ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

ಶ್ರೀ **ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾ ನಿರ್ಣಯದ ಪ್ರಸ್ತಾವನೆ ಮೇಲೆ ಭಾಗವಹಿಸಲು ಅವಕಾಶ ನೀಡಿದ್ದಕ್ಕೆ ತಮಗೆ ವಂದಿಸುತ್ತೇನೆ. ಘನತೆವೆತ್ತ ರಾಜ್ಯಪಾಲರು ಮಾಡಿದಂತಹ ಭಾಷಣದಲ್ಲಿ ಹೊಸದೇನೂ ಇಲ್ಲ. ಹಿಂದೆ ಮೈತ್ರಿ ಸರ್ಕಾರ ಏನು ಜಾರಿಗೊಳಿಸಿತ್ತು, ಅದನ್ನೇ ಇಲ್ಲಿ ಪುನರುಚ್ಚರಿಸಿದ್ದಾರೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಉದಾಹರಣೆಗೆ ಹೇಳುವುದಾದರೆ, ರಾಜ್ಯದಲ್ಲಿ ಮೈತ್ರಿ ಸರ್ಕಾರ ಇದ್ದಂತಹ ಸಂದರ್ಭದಲ್ಲಿ Karnataka Public School ನ್ನು ಪ್ರಾರಂಭಿಸಿದರು, ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಅನುದಾನ ನೀಡುವುದು ಇರಬಹುದು, ಕ್ಯಾನ್ಸರ್ ತಪಾಸಣೆ ಕಾರ್ಯಕ್ರಮ, ನಮ್ಮ ಗ್ರಾಮ–ನಮ್ಮ ರಸ್ತೆ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸುವಂತಹದ್ದು ಮತ್ತು ಇನ್ನು ಮುಂತಾದ ಹಲವು ಯೋಜನೆಗಳು. ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ದೇಶದಲ್ಲಿ ಕುಸಿಯುತ್ತಿರುವ ಆರ್ಥಿಕ ಪರಿಸ್ಥಿತಿ ಮತ್ತು ನಿರುದ್ಯೋಗ ಪರಿಸ್ಥಿತಿ ಬಗ್ಗೆ ಯಾವುದೇ ರೀತಿಯಾದಂತಹ ಹೇಳಿಕೆಗಳು ಇಲ್ಲ.

ಇನ್ನು ಬರ ಮತ್ತು ಪ್ರವಾಹಪೀಡಿತ ತಾಲ್ಲೂಕುಗಳಲ್ಲಿ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಅಂದರೆ *MGNREGA (*Mahatma Gandhi National Rural Employment Guarantee Scheme) ಯೋಜನೆಗಳಡಿಯಲ್ಲಿ 100 ದಿನಗಳ ಉದ್ಯೋಗ ನೀಡುವ ಬದಲಾಗಿ 150 ದಿನಗಳ ಉದ್ಯೋಗ ನೀಡುವ ಮೂಲಕ ಸಂಕಷ್ಟಕ್ಕೆ ಒಳಗಾದ ಕುಟುಂಬಗಳಿಗೆ ಜೀವನೋಪಾಯ ಕಲ್ಪಿಸುವುದಾಗಿ ತಿಳಿಸಿದ್ದಾರೆ. ಆದರೆ, *MGNREGA* ಯೋಜನೆಯಡಿ ಕೇಂದ್ರ ಸರ್ಕಾರದಿಂದ ಇದುವರೆಗೆ ಬರತಕ್ಕಂತಹ 2000 ಕೋಟಿ ರೂಪಾಯಿಗಳು ಏನು ಬಾಕಿ ಇದೆ, ಅದನ್ನು ತರಲಿಕ್ಕೆ ಯಾವುದೇ ಪ್ರಯತ್ನವನ್ನು ಸರ್ಕಾರ ಇದುವರೆವಿಗೂ ಮಾಡಿರುವುದಿಲ್ಲ. ಇನ್ನು ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ಹೇಳುವುದಾದರೆ ಕಳಸ ಮತ್ತು ಬಂಡೂರಿ ನಾಲಾ ಯೋಜನೆ ಅಂದರೆ ಮಹದಾಯಿ ಯೋಜನೆಗೆ ಸಂಬಂಧಪಟ್ಟಂತೆ ನಮ್ಮ ರಾಜ್ಯದ ಪಾಲು 13.25 ಟಿಎಂಸಿ ಇದ್ದು, ಇದರಲ್ಲಿ ಕುಡಿಯುವ ನೀರಿಗೆ ಮತ್ತು ನೀರಾವರಿಗೋಸ್ಕರವಾಗಿ 5.5. ಟಿಎಂಸಿ ಮತ್ತು ವಿದ್ಯುತ್ ಉತ್ಪಾದನೆಗೆ 8 ಟಿಎಂಸಿ. ನೀರು ಇರುತ್ತದೆ. ಈ ಸಂಬಂಧ ಸುಪ್ರಿಂ ಕೋರ್ಟ್‌ನಲ್ಲಿ ಇದ್ದಂತಹ ವ್ಯಾಜ್ಯ ತೀರುವಳಿಯಾಗಿ ಕೇಂದ್ರ ಸರ್ಕಾರ ಇತ್ತೀಚೆಗೆ ನೋಟಿಫೈ ಮಾಡಿದೆ. ನಿನ್ನೆಯೂ ಕೂಡ ಈ ಯೋಜನೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು 500 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಈಗಾಗಲೇ ಕೈಗೊಂಡಿರುವ ಕಳಸ ಬಂಡೂರಿ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರ, ಕೇಂದ್ರ ಸರ್ಕಾರದ ಕೇಂದ್ರ ಜಲ ಆಯೋಗ ಅಂದರೆ *CWC (Central Water Commission*) ಮತ್ತು ಅರಣ್ಯ, ಪರಿಸರ ಮಂತ್ರಾಲಯದಿಂದ ನಿರಾಕ್ಷೇಪಣಾ ಪತ್ರ ಅಂದರೆ NOC (No Objection Certificate) ತೆಗೆದುಕೊಳ್ಳಬೇಕಾಗಿದೆ. ಈ ರೀತಿ ಕೇಂದ್ರ ಸರ್ಕಾರದ ಕ್ಲಿಯರೆನ್ಸ್ ಇಲ್ಲದೆ, ಒಂದು ವೇಳೆ ಈ ಯೋಜನೆಗಳನ್ನು ರಾಜ್ಯ ಸರ್ಕಾರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಾರಿಗೊಳಿಸಲು ಮುಂದಾದರೆ ತುಂಬಾ ತೊಂದರೆಗೆ ಸಿಕ್ಕಿ ಹಾಕಿಕೊಳ್ಳಬೇಕಾಗುತ್ತದೆ ಮತ್ತು ಕೋರ್ಟ್‌ನಲ್ಲಿ ನೆರೆ ರಾಜ್ಯವಾದ ಗೋವಾ ದಾವೆಯನ್ನು ಹೂಡಬಹುದು. ಅದರ ಬಗ್ಗೆ ಸರ್ಕಾರ ಎಚ್ಚರವಹಿಸಬೇಕಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಇನ್ನು ರಾಜ್ಯದ ಪ್ರತಿಷ್ಠಿತ ಯೋಜನೆ ಮತ್ತು ಕಲ್ಯಾಣ ಕರ್ನಾಟಕ ಯೋಜನೆಯಾದ ಕೃಷ್ಣ ಮೇಲ್ದಂಡೆ ಯೋಜನೆಯ 3ನೇ ಹಂತದ ಅನುಷ್ಠಾನದ ಬಗ್ಗೆ ಹೇಳಲಿಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಚರ್ಚೆ ಮಾಡುವುದಕ್ಕಿಂತ ಮುಂಚೆ ಈ ಕೃಷ್ಣ ಮೇಲ್ದಂಡೆ ಯೋಜನೆಯನ್ನು ಅನುಷ್ಠಾನಗೊಳಿಸಲಿಕ್ಕೆ ನಮ್ಮ ಹಿರಿಯರಾದಂತಹ ಮಾಜಿ ಪ್ರಧಾನಿಗಳಾದಂತಹ ಶ್ರೀ ಹೆಚ್.ಡಿ.ದೇವೇಗೌಡರವರ ಕಾಣಿಕೆಯನ್ನು ಈ ಸಂದರ್ಭದಲ್ಲಿ ಇಲ್ಲಿ ನೆನಪು ಮಾಡಿಕೊಳ್ಳಬೇಕಾಗುತ್ತದೆ. ಶ್ರೀ ಹೆಚ್.ಡಿ.ದೇವೇಗೌಡರವರು 1983 ರಿಂದ 89 ರವರೆಗೆ ಈ ರಾಜ್ಯದ ಲೋಕೋಪಯೋಗಿ ಮತ್ತು ನೀರಾವರಿ ಸಚಿವರಾಗಿ ಕೆಲಸ ನಿರ್ವಹಿಸಿದ್ದಾರೆ. ಈ ಕೃಷ್ಣ ಮೇಲ್ದಂಡೆ ಯೋಜನೆಯ 1ನೇ ಹಂತದ ಕಾಮಗಾರಿಗೆ 115 ಮಿಲಿಯನ್ ಡಾಲರ್‌ನಷ್ಟು ಆರ್ಥಿಕ ನೆರವನ್ನು ವಿಶ್ವಬ್ಯಾಂಕ್ ನೀಡಿತ್ತು. ಅದು ಮುಗಿದ ನಂತರ 1987–88ನೇ ಇಸವಿಯಲ್ಲಿ 325 ಮಿಲಿಯನ್ ಡಾಲರ್ ಆರ್ಥಿಕ ನೆರವಿಗೋಸ್ಕರವಾಗಿ ನಾವು ವಿಶ್ವಬ್ಯಾಂಕ್ ನೆರವು ಕೋರಿದ್ದೆವು. ಆದರೆ, ಆ ಸಮಯದಲ್ಲಿ ವಿಶ್ವಬ್ಯಾಂಕ್ ನೀಡಿದಂತಹ ಷರತ್ತುಗಳು ಏನಿದ್ದವು, ಅವುಗಳನ್ನು ಅನುಷ್ಠಾನ ಮಾಡಲಿಕ್ಕೆ ಆಗುವುದಿಲ್ಲ ಎನ್ನುವ ದೃಷ್ಟಿಯಿಂದ ರಾಜ್ಯ ಸರ್ಕಾರ ಹಿಂಜರಿಯುತ್ತಿತ್ತು. 1988ನೇ ನವೆಂಬರ್ ತಿಂಗಳಿನಲ್ಲಿ ಅಂದಿನ ಮುಖ್ಯ ಕಾರ್ಯದರ್ಶಿಗಳಾಗಿದ್ದಂತಹ ದಾತರ್‌ರವರು ಮತ್ತು ನೀರಾವರಿ ಇಲಾಖೆಯ ಕಾರ್ಯದರ್ಶಿಗಳಾಗಿದ್ದಂತಹ ಚಿಕ್ಕಣ್ಣನವರು ಕೇಂದ್ರ ತಂಡದೊಂದಿಗೆ *Washington DC* ನಲ್ಲಿ ವಿಶ್ವಬ್ಯಾಂಕ್‌ನೊಂದಿಗೆ ಈ ಆರ್ಥಿಕ ನೆರವಿಗೆ ಮಾತುಕತೆ ಅಂದರೆ *negotiation* ನಡೆಯುತ್ತಿರಬೇಕಾದರೆ ಅದು ಫಲಪ್ರದವಾಗದೇ ಬಿದ್ದು ಹೋಗುತ್ತಿದೆ ಎಂದು, ಮತ್ತೆ ಅಲ್ಲಿಂದ ಈ ವಿಚಾರವಾಗಿ ಪೋನ್ ಬಂದ ತಕ್ಷಣ ನೀರಾವರಿ ಸಚಿವರಾದ ಶ್ರೀ ಹೆಚ್.ಡಿ.ದೇವೇಗೌಡರವರು ಆಗಿನ ಮುಖ್ಯಮಂತ್ರಿಗಳಾಗಿದ್ದಂತಹ ಸನ್ಮಾನ್ಯ ಎಸ್.ಆರ್.ಬೊಮ್ಮಾಯಿ ಯವರೊಂದಿಗೆ ಮಾತನಾಡಿ *Washington* ಗೆ ಹೋಗಿ ಕುಳಿತು ಮಾತನಾಡಿ, ಚರ್ಚೆ ಮಾಡಿ, ಆದಷ್ಟು ನಿಬಂಧನೆಗಳನ್ನು ಸಡಿಲಗೊಳಿಸಲಿಕ್ಕೆ ಚರ್ಚೆ ಮಾಡಿ, ನಂತರದಲ್ಲಿ ನಗೋಷಿಯೇಷನ್ ಮಾಡಿ ಲೋನ್ ಅಗ್ರಿಮೆಂಟ್‌ಗೆ ಸಹಿ ಮಾಡಿಸುತ್ತಾರೆ. ಇದು ಅಂದು ತೆಗೆದುಕೊಂಡಂತಹ ಮಹತ್ತರವಾದಂತಹ ನಿರ್ಧಾರ. ಈ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನಿರ್ಧಾರದಿಂದ ಕೂಡ ಅಂದು ಕೃಷ್ಣ ಮೇಲ್ದಂಡೆ ಯೋಜನೆಯ 2ನೇ ಹಂತದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಿಕ್ಕೆ ಸಾಧ್ಯವಾಯಿತು. ತದನಂತರ ಶ್ರೀ ಹೆಚ್.ಡಿ.ದೇವೇಗೌಡ ರವರು 1994ರಿಂದ 1996 ರವರೆಗೆ ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಈ ಕೃಷ್ಣ ಮೇಲ್ದಂಡೆ ಯೋಜನೆಯ ಕಾಮಗಾರಿಗಳು ತ್ವರಿತವಾಗಿ ಆಗಬೇಕೆಂದು ಹೇಳಿ ಒಂದು ಸ್ಕೀಂ ಅನ್ನು *introduce* ಮಾಡುತ್ತಾರೆ.

**(217) 09.03.2020 02.00 ಎಸ್‌ವಿ-ಎಕೆ**

**Sri K.A. THIPPESWAMY (contd.):** 'Direct Entrustment System' ಎಂದು ಹೇಳಿ ತರಲಾಯಿತು. ಅಂದರೆ ಮೆಷಿನರಿ ಮತ್ತು ಆರ್ಥಿಕತೆ ಬಲ ಇರುವವರು ರಾಜ್ಯದಲ್ಲಾಗಲೀ ಅಥವಾ ಹೊರ ರಾಜ್ಯದಲ್ಲಾಗಲೀ, ಯಾರಿಗೆ ರೂ.2.5 ಕೋಟಿ ಕಾಮಗಾರಿಯ ನಿರ್ವಹಣೆ ಮಾಡುವ ಶಕ್ತಿ ಇದೆಯೋ ಅಂತಹವರನ್ನು ಗುರುತಿಸಿಕೊಳ್ಳುವಂತೆ ಒಂದು ಅಧಿಸೂಚನೆಯನ್ನು ತರಲಾಗುತ್ತದೆ. ಅದರಲ್ಲಿ ಬರತಕ್ಕಂತಹ ಎಲ್ಲಾ ಗುತ್ತಿಗೆದಾರರನ್ನು shortlist ಮಾಡಿ ಒಂದು ಸಮಿತಿಯನ್ನು ಮಾಡಿ ಅಂದಿನ ಕಾರ್ಯದರ್ಶಿ ಹಾಗೂ ಸಲಹೆಗಾರರಾಗಿದ್ದಂತಹ ಶ್ರೀ ಕೆ.ಸಿ.ರೆಡ್ಡಿಯವರ ನೇತೃತ್ವದಲ್ಲಿ ಒಂದು ಪಟ್ಟಿಯನ್ನು ಮಾಡಿ, ಗುತ್ತಿಗೆದಾರರಿಗೆ ನೇರವಾಗಿ entrustment ಮಾಡುತ್ತಾರೆ ಮತ್ತು ಒಂದು ಷರತ್ತನ್ನೂ ಸಹ ವಿಧಿಸಲಾಗುತ್ತದೆ. ಈ ಕೆಲಸವನ್ನು ಪ್ರಾರಂಭ ಮಾಡುವ ಮುನ್ನ ಎಲ್ಲಿಯಾದರೂ ಭೂಸ್ವಾಧೀನ ಮಾಡಿಕೊಳ್ಳುವುದರಲ್ಲಿ ಸ್ವಲ್ಪ ತಡವಾಗಿದ್ದರೆ ಗುತ್ತಿಗೆದಾರರು ತಾವೇ ಸ್ವತಃ ಮುತುವರ್ಜಿಯನ್ನು ವಹಿಸಿ ರೈತರಿಂದ ಜಮೀನನ್ನು ಪಡೆದುಕೊಂಡು ಕೆಲಸವನ್ನು ಪ್ರಾರಂಭವನ್ನು ಮಾಡಬಹುದು ಎಂದು ಹೇಳಲಾಗಿತ್ತು. ಇದೊಂದು ದಿಟ್ಟ ನಿರ್ಣಯ. ಇಂತಹ ನಿರ್ಣಯದಿಂದ ಅಂದು ಕೃಷ್ಣಾ ಮೇಲ್ದಂಡೆ ಯೋಜನೆಯ ಎರಡನೇ ಹಂತದ ಕಾಮಗಾರಿಯು ಮುಂದೆ ಹೋಗುತ್ತದೆ. ಇದೊಂದೇ ಅಲ್ಲ. ಆಗತಾನೇ ಕೃಷ್ಣಾ ಜಲ ಭಾಗ್ಯ ನಿಗಮ ಎಂಬ ಒಂದು ನೀರಾವರಿ ನಿಗಮವನ್ನು ಸ್ಥಾಪನೆ ಮಾಡಿದ್ದರು. ಆ ನಿಗಮಕ್ಕೆ ಬೇಕಾದಂತಹ ಹಣವನ್ನು ಕ್ರೋಢೀಕರಿಸುವ ಸಲುವಾಗಿ ಬ್ಯಾಂಕ್ ಮುಖೇನ ನೀರಾವರಿ ಬಾಂಡ್‌ಗಳನ್ನು ಜಾರಿಗೆ ತರಲಾಯಿತು. ಮೊದಲನೆಯ ಹಂತದಲ್ಲಿ ರೂ.400 ಕೋಟಿ ರೂಪಾಯಿ ವಸೂಲಿಯಾಗುತ್ತದೆ. ತದನಂತರ ಮಾನ್ಯ ಹೆಚ್.ಡಿ.ದೇವೇಗೌಡರು ಪ್ರಧಾನಮಂತ್ರಿಯಾಗಿ ದೆಹಲಿಗೆ ತೆರಳಿದ ಮೇಲೆಯೂ ಸುಮಾರು ರೂ.600 ಕೋಟಿಗಳನ್ನು ಸಂಗ್ರಹಿಸಲಾಯಿತು. ಇದು ಬಹಳ ದೊಡ್ಡ ಕಾಣಿಕೆಯಾಗಿದ್ದು, ಎಲ್ಲರೂ ಇದನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೆನೆಸಿಕೊಳ್ಳಬೇಕು. ಅವರು ಪ್ರಧಾನಮಂತ್ರಿಯಾಗಿದ್ದಾಗ ದೇಶದಲ್ಲಿ ಯಾವುದೇ ನೀರಾವರಿ ಯೋಜನೆ ನೆನೆಗುದಿಗೆ ಬಿದ್ದಿದ್ದರೆ ಆ ನೀರಾವರಿ ಯೋಜನೆಯನ್ನು ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರದಿಂದ 'Accelerated Irrigation Benefit Programme' ಎಂಬ ಒಂದು ಯೋಜನೆಯನ್ನು ಜಾರಿಗೆ ತರಲಾಯಿತು. ಆ ಯೋಜನೆಯಡಿಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಒಳಗೊಂಡಂತೆ ದೇಶದಲ್ಲಿರುವ ಪ್ರತಿಯೊಂದು irrigation project ಗಳಿಗೆ ಕೂಡ ಒಂದು ವರ್ಷದಲ್ಲಿ ರೂ.500 ಕೋಟಿಗಳನ್ನು ಮೀಸಲಿಡಲಾಗಿತ್ತು. ಈ ಯೋಜನೆ ಈಗಲೂ ಜಾರಿಯಲ್ಲಿದ್ದು, ಇದರಡಿಯಲ್ಲಿ ಸುಮಾರು ರೂ.15,000 ಕೋಟಿಯಷ್ಟು ಆರ್ಥಿಕ ನೆರವು ಕೃಷ್ಣಾ ಮೇಲ್ದಂಡೆ ಯೋಜನೆಗೆ ಬಂದಿದ್ದೆ. ಇದು ಒಂದು ಅಮೋಘ ಸಾಧನೆ ಎಂದು ಹೇಳಬಹುದು.

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ತಿಪ್ಪೇಸ್ವಾಮಿಯವರೇ, ಮಾಜಿ ಪ್ರಧಾನಿಗಳ ಮೇಲೆ ನಮ್ಮೆಲ್ಲರಿಗೂ ಬಹಳ ಅಭಿಮಾನವಿದೆ. ಅವರೊಬ್ಬ ಹಿರಿಯ ನಾಯಕರೆಂಬುದನ್ನು ನಾವೆಲ್ಲರೂ ಒಪ್ಪುತ್ತೇವೆ. ನೀವಿದರ ಬಗ್ಗೆ ಪ್ರಸ್ತಾಪ ಮಾಡುವಾಗ ನಿಮ್ಮ ಪಕ್ಷದ ಸದಸ್ಯರು ಒಬ್ಬರೂ ಇಲ್ಲಿ ಇಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಚಿವರೇ, ಕಾರಣ ಏನೆಂಬುದು ತಮಗೆ ತಿಳಿದಿದೆ. ನಮ್ಮ ಹಿರಿಯ ನಾಯಕರಾದ ಮಾನ್ಯ ಬಸವರಾಜ ಹೊರಟ್ಟಿಯವರು ಇದ್ದಾರೆ. ಅವರಿದ್ದರೆ ಸಾಕು.

ಇನ್ನು ಯೋಜನೆಯ ಮೂರನೆಯ ಹಂತದ ಅನುಷ್ಠಾನದ ಬಗ್ಗೆ ಹೇಳುವುದಾದರೆ ಈವರೆಗೆ ಜಲಾಶಯಕ್ಕೆ 519 ಮೀ. Radial Crest Gate ಅನ್ನು ಅಳವಡಿಸಲಾಗಿದೆ. ಇದರಿಂದ 130 ಟಿ.ಎಂ.ಸಿ.ಯಷ್ಟು ನೀರನ್ನು ಸಂಗ್ರಹಣೆ ಮಾಡಲಾಗಿದೆ. 524 ಮೀ.ಗೆ Radial Crest Gate ಅನ್ನು ಅಳವಡಿಸಿದರೆ 303 ಟಿ.ಎಂ.ಸಿ.ಯಷ್ಟು ನೀರನ್ನು ಸಂಗ್ರಹಿಸಬಹುದು. ಆಗ ನಮ್ಮ ರಾಜ್ಯದ ಪಾಲನ್ನು ನಾವು ಉಪಯೋಗ ಮಾಡಿಕೊಂಡಂತಾಗುತ್ತದೆ. ಆದರೆ 524 ಮೀ. ಎತ್ತರಕ್ಕೆ Crest Gate ಅನ್ನು ಅಳವಡಿಸಿದಲ್ಲಿ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯ 20 ಹಳ್ಳಿಗಳು ಸಂಪೂರ್ಣ ಮುಳುಗಡೆಯಾಗುತ್ತದೆ. ಸುಮಾರು 1.30 ಲಕ್ಷ ಎಕರೆಯಷ್ಟು ಜಮೀನು ಮುಳುಗಡೆಯಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, 2.70 ಲಕ್ಷ ಎಕರೆ ಒಂದು ಮತ್ತು ಎರಡನೆಯ ಹಂತದಲ್ಲಿ ಮುಳುಗಿದೆ. ಮೂರನೇ ಹಂತದಲ್ಲಿ 1.30 ಲಕ್ಷ ಎಕರೆಯಷ್ಟು ಭೂಮಿ ಮುಳುಗಡೆಯಾಗಲಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ವಿರೋಧಪಕ್ಷದ ನಾಯಕರು ಹಿಂದಿನ SR (Schedule of Rates) ನ ಪ್ರಕಾರ ಸುಮಾರು 40,000 ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ಹೇಳಿದರು. ಈಗಿನ SR ನ ಪ್ರಕಾರ ಸುಮಾರು 65,000 ಕೋಟಿ ರೂಪಾಯಿ ಬೇಕಾಗುತ್ತದೆ. ಆದರೆ ಇದುವರೆವಿಗೆ ಸರ್ಕಾರ ಕೇವಲ ಶೇ.10ರಷ್ಟು ಭೂಮಿಯನ್ನು ಮಾತ್ರ ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಪ್ರಕಟಣೆಯನ್ನು ಹೊರಡಿಸಿದೆ. ಮಾನ್ಯ ವಿರೋಧಪಕ್ಷದ ನಾಯಕರು ಗಮನ ಹರಿಸಬೇಕು. ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಣೆ ಮಾಡುವುದು ಅವಶ್ಯಕವಾಗಿದೆ. ದೇಶದಲ್ಲಿ ಈಗಾಗಲೇ ಐದಾರು ಯೋಜನೆಗಳನ್ನು ರಾಷ್ಟ್ರೀಯ ಯೋಜನೆಯೆಂದು ಘೋಷಿಸಲಾಗಿದೆ. ಅದರಲ್ಲಿ ಮುಖ್ಯವಾಗಿ ಪೋಲಾವರಂ ಯೋಜನೆ, ಸರಯೂ ಪರಿಯೋಜನೆ, ತೀಸ್ತಾ ಬ್ಯಾರೇಜ್ ಯೋಜನೆ ಮುಂತಾದವುಗಳು ಇದೆ. ಈ ಹಿಂದೆ ಮೈತ್ರಿ ಸರ್ಕಾರದ ಅವಧಿಯಲ್ಲಿ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಕೇಂದ್ರ ಸರ್ಕಾರಕ್ಕೆ ಇದನ್ನು ರಾಷ್ಟ್ರೀಯ ಯೋಜನೆಯೆಂದು ಘೋಷಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದರು. ಇದನ್ನೊಂದು ರಾಷ್ಟ್ರೀಯ ಯೋಜನೆಯೆಂದು ಈಗ ತತ್ಕಾಲಿಕವಾಗಿ ಘೋಷಿಸಲಾಗುವುದಿಲ್ಲ ಎಂದು ಅಲ್ಲಿಂದ ಉತ್ತರ ಬಂದಿತು. ಕಾರಣ ಆಂಧ್ರಪ್ರದೇಶ ಟ್ರಿಬ್ಯೂನಲ್-2ರ ಆದೇಶವನ್ನು ಪ್ರಶ್ನಿಸಿ ಸರ್ವೋಚ್ಚ ನ್ಯಾಯಾಲಯದಲ್ಲಿ Special Leave Petition ಅನ್ನು ದಾಖಲಿಸಿದೆ. ಅದರಂತೆ ನಮ್ಮ ರಾಜ್ಯದಿಂದಲೂ ಸಹ ಇನ್ನೂ ಹೆಚ್ಚು ನೀರು ಹಂಚಿಕೆಯಾಗಬೇಕೆಂದು ಒಂದು Special Leave Petition ಅನ್ನು ದಾಖಲಿಸಲಾಗಿದೆ. ಗೋದಾವರಿ diversion ನಿಂದಲೂ ಸಹ ನಮಗೆ 113 ಟಿಎಂಸಿ ನೀರು ಬರಬೇಕು. ಅದನ್ನೂ ಸೇರಿ ಎಸ್.ಎಲ್.ಪಿ.ಯಲ್ಲಿ ಕೇಳಲಾಗಿದೆ. ಈ ಪ್ರಕರಣಗಳು ತೀರ್ಮಾನವಾಗುವವರೆವಿಗೂ ಇದನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಲಾಗಿದೆ.

ಮಾನ್ಯ ಸಭಾಪತಿಯವರೇ, ಈ ಪ್ರಕರಣಗಳು ತೀರ್ಮಾನವಾಗಲು ಇನ್ನೂ ಸಮಯವನ್ನು ತೆಗೆದುಕೊಳ್ಳಬಹುದು. ಆದರೆ ಈ ಯೋಜನೆಯು ರಾಷ್ಟ್ರೀಯ ಯೋಜನೆಯಾಗಬೇಕು. ಏಕೆಂದರೆ ಯೋಜನೆಯ ಶೇ.90ರಷ್ಟು ವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲನೆಯ ಹಂತ ನಾರಾಯಣಪುರ ಜಲಾಶಯ. ಎರಡನೆಯ ಹಂತ ಆಲಮಟ್ಟಿ ಜಲಾಶಯ 519.6 ಮೀಟರ್‌ವರೆಗೆ. ಇವೆರಡೂ ಹಂತಗಳು ಮುಗಿದಿವೆ. ಎರಡೂ ಹಂತಗಳಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಳುಗಡೆಯಾಗುವ 176 ಹಳ್ಳಿಗಳನ್ನು ಸ್ವಾಧೀನ ಪಡಿಸಿಕೊಂಡು 136 ಪುನರ್ವಸತಿ ಕೇಂದ್ರಗಳನ್ನು ಮಾಡಿ ಜನರನ್ನು ಸ್ಥಳಾಂತರಗೊಳಿಸಲಾಗಿದೆ. ಮೊದಲ ಮತ್ತು ಎರಡನೆಯ ಹಂತದಲ್ಲಿ 176 ಗ್ರಾಮಗಳು ಮುಳುಗಡೆಯಾಗಿ ಅವುಗಳನ್ನು ಸ್ವಾಧೀನ ಪಡಿಸಿಕೊಂಡು ಪುನರ್ವಸತಿ ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. ಈಗ ಮುಳುಗಡೆಯಾಗಲಿರುವುದು 20 ಹಳ್ಳಿಗಳು. ಮೊದಲ ಮತ್ತು ಎರಡನೆ ಹಂತದಲ್ಲಿ 1,73,000 ಎಕರೆ ಭೂಮಿಯನ್ನು ಕಳೆದುಕೊಂಡಿದ್ದು, ಅದಕ್ಕೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಈಗ ಮೂರನೆಯ ಹಂತದಲ್ಲಿ ಕಳೆದುಕೊಳ್ಳುವ ಭೂಮಿ 1,30,000 ಎಕರೆ. ಒಂದು ಮತ್ತು ಎರಡನೆಯ ಹಂತದಲ್ಲಿ ಮುಳುಗಡೆಯಾದ ಒಟ್ಟು structures ಅಂದರೆ 78,000 structures. ಈಗ ಮುಳುಗಡೆಯಾಗಲಿರುವ structures 28,000. ಅಂದರೆ ಅದರ ಮೂರನೆ ಒಂದು ಅಂಶದಷ್ಟು ಮಾತ್ರ. ಸ್ವಾಧೀನ ಪಡಿಸಿಕೊಳ್ಳಲಿರುವ ಜಮೀನು ಮೊದಲ ಮತ್ತು ಎರಡನೆಯ ಹಂತಕ್ಕೆ 2,73,000 ಎಕರೆಯಾದರೆ, ಮೂರನೆಯ ಹಂತಕ್ಕೆ 1,30,000 ಎಕರೆ. ಅಂದರೆ ಅದರ ಅರ್ಧದಷ್ಟು ಮಾತ್ರ. 176 ಹಳ್ಳಿಗಳ ಪೈಕಿ ಕೇವಲ 20 ಹಳ್ಳಿಗಳು ಮಾತ್ರ. ಮೊದಲ ಮತ್ತು ಎರಡನೆಯ ಹಂತಗಳನ್ನು ನಮ್ಮ ರಾಜ್ಯದ ಹಣದಿಂದಲೇ ಪೂರೈಸಲಾಗಿದೆ. ಇನ್ನು ಮೂರನೆಯ ಹಂತಕ್ಕೆ ಕೆಲಸ ಸ್ವಲ್ಪವಷ್ಟೇ ಇದೆ. ಅದಕ್ಕೆ ಇದನ್ನು ರಾಷ್ಟ್ರೀಯ ಯೋಜನೆಯಾಗಿ ಮಾಡಬೇಕೆಂದು ಕಾಲ ದೂಡುವುದು ಸರಿಯಲ್ಲ. ಕೇಂದ್ರ ಸರ್ಕಾರವನ್ನು ತೆಗೆದುಕೊಳ್ಳಿ ಎಂದು ನಾವು ಕೇಳುವುದು. ಅವರು ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಿರುವುದು. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ 130 ಟಿ.ಎಂ.ಸಿ.ಯಷ್ಟು ನೀರು ನಮಗೆ allocation ಆಗಿದ್ದು, ಅದನ್ನು ನಾವು ಬಳಸಿಕೊಳ್ಳಬೇಕಾಗಿದೆ. ಅದರಿಂದ 14,85,000 ಎಕರೆ ನೀರಾವರಿಯಾಗುತ್ತದೆ. ಏಳು ಜಿಲ್ಲೆಗಳು ಸಂಪದ್ಭರಿತವಾಗುತ್ತದೆ.

**(218) 2.10 9.3.2020 kg ak**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):–** ಮಾನ್ಯ ಸಭಾಪತಿಯವರೇ, ನಮಗೆ ಇದರ ಉದ್ದೇಶ ಅರ್ಥವಾಗಿದೆ. ಇದು ರಾಷ್ಟ್ರೀಯ ಯೋಜನೆ ಎಂದು ಪ್ರತಿಪಾದನೆ ಮಾಡುವುದು, ಅವರು ತೆಗೆದುಕೊಳ್ಳಲಿಲ್ಲ ನಾವು ಏನು ಮಾಡೋಣವೆಂದು ಹೇಳುವುದು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಆ ತರಹ ಆಗಬಾರದು. It should be an ongoing scheme.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, 101% the people of North Karnataka have been fully convinced. You take up in the State budget itself. ಒಂದು ಮತ್ತು ಎರಡನೆ ಹಂತವನ್ನು ಯಾವ ರೀತಿ ರಾಜ್ಯ ಬಜೆಟ್‌ನಲ್ಲಿ ಮಾಡಿ ಮುಗಿಸಿದ್ದಾರೋ, ಅದೇರೀತಿ ಮೂರನೆ ಹಂತವನ್ನು ಸಹ ಮಾಡಲಿ. ಕೇಂದ್ರ ಸರ್ಕಾರದಿಂದ ಕೊಟ್ಟರೆ ತೆಗೆದುಕೊಳ್ಳಲಿ. ಒಂದು ನಿಮಿಷವು ಸಹ ನಿಧಾನ ಆಗಬಾರದು. We have no patience at all. ನಮ್ಮ ಸಹನೆಯ ಕಟ್ಟೆ ಒಡೆದು ಹೋಗಿದೆ. Now we are ready for anything. I will declare in this House. ಕೃಷ್ಣ ಮೇಲ್ದಂಡೆ ಯೋಜನೆ ರಾಷ್ಟ್ರೀಯ ಯೋಜನೆ ಎಂದು ಅದಕ್ಕೆ ಹಣ ಕೊಡುವುದಕ್ಕೆ ಹಿಂದು ಮುಂದು ಮಾಡಿದರೆ ನಾವು ಎಲ್ಲಾ ತ್ಯಾಗಕ್ಕೂ ರೆಡಿ ಇದ್ದೇವೆಂದು ಹೇಳಬಯಸುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಬೆಂಗಳೂರು ಸುತ್ತಮುತ್ತಲೂ 148 km ಉದ್ದದ ಉಪನಗರ ರೈಲು ಯೋಜನೆ ಅಂದಾಜು ಮೊತ್ತ 18,600 ಕೋಟಿ ರೂಪಾಯಿಗಳಲ್ಲಿ ಅನುಷ್ಠಾನಗೊಳಿಸಲು ಯೋಚಿಸಲಾಗಿದೆ. ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ತಲಾ 20% ಅನುದಾನ ನೀಡಬೇಕಾಗುತ್ತದೆ. ಉಳಿದ ಶೇಕಡಾ 60% ಅನುದಾನವನ್ನು ಅಥವಾ ಸಾಲವನ್ನು K-RIDE [Rail Infrastructure Development Company (Karnataka) Limited], ಇತರೆ ಹಣಕಾಸು ಸಂಸ್ಥೆಗಳಿಂದ ಸಾಲದ ಮುಖೇನ ಪಡೆದು ಭರಿಸಬೇಕಾಗುತ್ತದೆ. ಆದರೆ, ರೈಲ್ವೆ ಇಲಾಖೆಯಿಂದ ಇತ್ತೀಚೆಗೆ Pink Book ನಲ್ಲಿ ಈ ಯೋಜನೆಯನ್ನು ಅಳವಡಿಸಿದ್ದಾರೆ. ಇದು ಸಂತೋಷಕರವಾದಂತಹ ವಿಷಯ. ಆದರೆ, ಅದಕ್ಕೆ ಒಂದು ಕೋಟಿ ರೂಪಾಯಿಗಳ ಅನುದಾನವನ್ನು ಮಾತ್ರ ಮೀಸಲಿಟ್ಟಿದ್ದಾರೆ. ಈ ವರ್ಷ ಕಾಮಗಾರಿಯನ್ನು ಆರಂಭಿಸುವುದಕ್ಕೆ ಸುಮಾರು 14 ಸಾವಿರ ಕೋಟಿ ರೂಪಾಯಿಗಳ ಅನುದಾನದ ಅವಶ್ಯಕತೆ ಇದೆ. ಈ ಮೀಸಲಿಟ್ಟಿರುವಂತಹ ಒಂದು ಕೋಟಿ ರೂಪಾಯಿಗಳಲ್ಲಿ ಸುಮಾರು ಈ ಯೋಜನೆಗೆ ಸುಮಾರು 103 ಎಕರೆ ಖಾಸಗಿಯವರ ಜಮೀನು, 327

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಕರೆ ರೈಲ್ವೆ ಜಮೀನು ಮತ್ತು ರಾಜ್ಯ ಸರ್ಕಾರದ್ದು 153 ಎಕರೆ ಭೂಮಿಯನ್ನು ಹೀಗೆ ಒಟ್ಟು 583 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದು ಸಾಧ್ಯವೇ? ಈ ವರ್ಷ ಈ ಕಾಮಗಾರಿಯನ್ನು ಪ್ರಾರಂಭ ಮಾಡಿ, ಮೂರು ವರ್ಷದೊಳಗೆ ಅನುಷ್ಠಾನಗೊಳಿಸುವುದಾಗಿ ಮಾನ್ಯ ಮುಖ್ಯಮಂತ್ರಿಯವರು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವರು ಹೇಳಿಕೆ ನೀಡಿದ್ದಾರೆ. ಆದ್ದರಿಂದ, ಮೂರನೇ ಒಂದು ಭಾಗದಷ್ಟು ಅನುದಾನವನ್ನು ನೀಡಬೇಕೆಂದು ನಾನು ಸಂದರ್ಭದಲ್ಲಿ. ಒತ್ತಾಯಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯ ಸಮಸ್ಯೆಯನ್ನು ತಡೆಗಟ್ಟುವ ಸಲುವಾಗಿ Electric Bus ಗಳನ್ನು ರಸ್ತೆಗೆ ಇಳಿಸಲು ಮೈತ್ರಿ ಸರ್ಕಾರ ಅಧಿಕಾರಕ್ಕೆ ಬರುವ ಮುಂಚೆಯೇ ನಿರ್ಧಾರವಾಗಿತ್ತು. ಈ ಬಸ್‌ಗಳನ್ನು ಪೂರೈಸಲು ಬಿಡ್‌ದಾರ ನಮೂದಿಸಿದ್ದ ಕಂಪನಿಯೊಂದು ಅಧಿಕ ಬಿಡ್‌ದಾರ ನಮೂದಿಸಿದಿದ್ದರಿಂದ ಈ ಹಿನ್ನೆಯಲ್ಲೆ ಗುತ್ತಿಗೆ ದರವನ್ನು ರದ್ದುಪಡಿಸಿ ಮರು ಟೆಂಡರ್‌ನ್ನು ಕರೆಯಲಾಗಿದೆ ಎಂದು ತಿಳಿದು ಬಂದಿದೆ. ಈ ಯೋಜನೆಯಲ್ಲಿ ಕೇಂದ್ರ ಸರ್ಕಾರದ ಬಾರಿ ಕೈಗಾರಿಕೆ ಸಚಿವಾಲಯವು ಎರಡನೇ ಹಂತದ FAME India [Faster Adoption and Manufacturing of (Hybrid) and Electric Vehicles in India] ಯೋಜನೆಯಡಿಯಲ್ಲಿ 400 Electric Bus ಗಳನ್ನು ಅಂದರೆ, 4 ಸಾರಿಗೆಗಳು ಸೇರಿದಂತೆ ರಾಜ್ಯದಲ್ಲಿ ಕಾರ್ಯಾಚರಣೆಗೊಳಿಸಲು ಸಹಾಯಧನ ನೀಡಿರುತ್ತದೆ. ಈ ಎರಡನೆ ಹಂತದ FAME India ದಲ್ಲಿ ಕೇಂದ್ರ ಸರ್ಕಾರ ಎ.ಸಿ ಬಸ್‌ಗಳಿಗೆ ತಲಾ 55 ಲಕ್ಷ ರೂಪಾಯಿಗಳನ್ನು ಮತ್ತು 45 ಲಕ್ಷ ರೂಪಾಯಿಗಳ subsidy ಯನ್ನು ಕೊಡುತ್ತಿದೆ. ಒಂದನೆ ಹಂತದ ಕ್ರಮವಾಗಿ ಒಂದು ಕೋಟಿ ರೂಪಾಯಿಗಳ ಹಾಗೂ 73 ಲಕ್ಷ ರೂಪಾಯಿಗಳ ಸಹಾಯಧನವನ್ನು ಸಹ ಘೋಷಿಸಿತ್ತು. ಆದರೆ, ಇದುವರೆಗೂ ಈ ಸಹಾಯಧನವನ್ನು ರಾಜ್ಯ ಸರ್ಕಾರ ಬಳಸಲು ವಿಫಲವಾಗಿದೆ. ಉಳಿದ ವಿಷಯವನ್ನು ಭೋಜನ ವಿರಾಮದ ನಂತರ ಹೇಳುತ್ತೇನೆ.

**ಸಭಾಪತಿಯವರು:-** ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2 ಗಂಟೆ 45 ನಿಮಿಷಗಳವರೆಗೆ ಮುಂದೂಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(219) 09.03.2020 03.00 LL-RN**

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2 ಗಂಟೆ 14 ನಿಮಿಷಗಳಿಗೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 03 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಸಭಾಪತಿಯವರು ಸಭಾಪೀಠದಲ್ಲಿ ಉಪಸ್ಥಿತರಾದರು)**

**ಸಭಾಪತಿಯವರು:-** ಮಾನ್ಯ ತಿಪ್ಪೇಸ್ವಾಮಿಯವರೇ, ತಾವು 5 ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸಿ. ಏಕೆಂದರೆ, ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ವಂದನಾರ್ಪಣಾ ಪ್ರಸ್ತಾವದ ಮೇಲೆ ಇತರ ಸದಸ್ಯರು ಮಾತನಾಡಬೇಕು. ತದನಂತರ, ಮಾನ್ಯ ಮುಖ್ಯಮಂತ್ರಿಗಳ ಸದರಿ ಪ್ರಸ್ತಾವದ ಮೇಲೆ ಉತ್ತರ ನೀಡಬೇಕು.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಸದನದಲ್ಲಿ ಕೋರಮ್ ಇರುವುದಿಲ್ಲ. ಒಬ್ಬ ಮಂತ್ರಿಗಳು ಮಾತ್ರ ಹಾಜರಿದ್ದಾರೆ. ಮಾನ್ಯ ಕೆ.ಎನ್. ತಿಪ್ಪೇಸ್ವಾಮಿಯವರೇ ತಾವು ಈ ಸದನದ ಗೋಡೆಗೆ ತಮ್ಮ ಮಾತುಗಳನ್ನು ಹೇಳುತ್ತೀರಾ?

**ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ.**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಸದನದಲ್ಲಿ ಮಾನ್ಯ ಉಪ ಮುಖಮಂತ್ರಿಗಳು ಇದ್ದಾರೆ. ಆದಾಗ್ಯೂ, ನಾನು ಮಾತನಾಡುವುದು ಕನಿಷ್ಠ ಪಕ್ಷ ದಾಖಲೆಗೆ ಹೋಗುತ್ತದೆ. ಆದುದರಿಂದ, ನಾನು ಈಗ ಮಾತನಾಡುತ್ತೇನೆ. ಹಿಂದಿನ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರ್ಕಾರವು ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆಯಡಿ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಕೈಗೊಂಡ ಕಾಮಗಾರಿಗಳು ಮತ್ತು ಟೆಂಡರ್ ಪ್ರಕ್ರಿಯೆ ಸ್ಥಗಿತಗೊಳಿಸಲು ಪ್ರಸ್ತುತ ಬಿಜೆಪಿ ಸರ್ಕಾರ ಆದೇಶಿಸಿದೆ. 2019-20ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿದ ಮತ್ತು ಉಭಯ ಸದನಗಳ ಅನುಮೋದನೆಯನ್ನು ನೀಡಿದಂತಹ ಕಾಮಗಾರಿಗಳನ್ನು ಸರ್ಕಾರ ಏಕಪಕ್ಷೀಯವಾಗಿ ಮುಖ್ಯಮಂತ್ರಿಗಳು ಬರೆದ ಟಿಪ್ಪಣಿಯನ್ನು ಆಧರಿಸಿ ಸಂವಿಧಾನ ಪರಿಚ್ಛೇದ 166ರ ಪ್ರಕಾರ ರಾಜ್ಯಪಾಲರ ಹೆಸರಿನಲ್ಲಿ ಆದೇಶ ಹೊರಡಿಸಿರುವುದು ಸದನದ ಹಕ್ಕು ಬಾಧ್ಯತೆಗೆ ಒಳಪಡುತ್ತದೆ. ಅಲ್ಲದೇ, ಯಾವುದೇ ವಿವೇಚನೆ ಇಲ್ಲದೇ ಇಂತಹ ಆದೇಶವನ್ನು ಹೊರಡಿಸಿರುವ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಬಂಧಸಿದ ಸರ್ಕಾರದ ಇಲಾಖಾ ಕಾರ್ಯದರ್ಶಿಗಳು ಸಹ ಸದನದ ಹಕ್ಕು ಬಾಧ್ಯತೆಗೆ ಒಳಪಟ್ಟಿರುತ್ತಾರೆ.

ಇದಲ್ಲದೇ, ಈ ವಿಷಯವನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಮುಖೇನ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಸರ್ಕಾರದ ಈ ಕ್ರಮದ ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸಿರುತ್ತಾರೆ. ಇದಲ್ಲದೇ, ಲೋಕೋಪಯೋಗಿ ಇಲಾಖೆಯಲ್ಲಿ 2018-19ನೇ ಸಾಲಿನಲ್ಲಿ ಮೈತ್ರಿ ಸರ್ಕಾರದ ಅವಧಿಯಲ್ಲಿ ಆರ್ಥಿಕ ಇಲಾಖೆಯ ಅನುಮೋದನೆ ಪಡೆದು, ಮೊದಲನೇ ಹಂತದಲ್ಲಿ 1,765 ಕೋಟಿ ರೂಪಾಯಿಗಳ ಅಂದಾಜು ಮೊತ್ತದ ಕಾಮಗಾರಿಗಳನ್ನು ಹಾಗೂ ಎರಡನೇ ಹಂತದಲ್ಲಿ 5,900 ಕೋಟಿ ರೂಪಾಯಿಗಳ ಕೆಲವೊಂದು ಕಾಮಗಾರಿಗಳನ್ನು ಬಿಜೆಪಿ ಸರ್ಕಾರ ತಡೆಹಿಡಿದಿರುತ್ತದೆ. ಇದಲ್ಲದೇ, ಮಾನ್ಯ ಉಪ ಮುಖ್ಯಮಂತ್ರಿಗಳು ಸದನದ ಹೊರಗೆ ಮತ್ತು ಒಳಗಡೆ ಆರ್ಥಿಕ ಇಲಾಖೆಯ ಮತ್ತು ಸದನದ ಅನುಮೋದನೆ ಇಲ್ಲದೇ ಹಿಂದಿನ ಮೈತ್ರಿ ಸರ್ಕಾರ 59 ಸಾವಿರ ಕೋಟಿ ರೂಪಾಯಿಗಳ ವೆಚ್ಚದ ಕಾಮಗಾರಿ ಕೈಗೊಂಡಿದೆ ಎಂದು ಹೇಳುತ್ತಾರೆ. ಮತ್ತೊಮ್ಮೆ 32ಸಾವಿರ ಕೋಟಿ ರೂಪಾಯಿಗಳ ಕಾಮಗಾರಿಗಳು ಎಂದು ಹೇಳುತ್ತಾರೆ. ಇರಬಹುದು, ಅಂದಿನ ಮೈತ್ರಿ ಸರ್ಕಾರದ ಒತ್ತಡದಲ್ಲಿ ಕೆಲವೊಂದು ಬಾರಿ ಆರ್ಥಿಕ ಇಲಾಖೆಯ ಮೇಲೆ ಒತ್ತಡ ಅಥವಾ ದಭಾವು ಹಾಕಿ ಕೆಲವೊಂದು ಕಾಮಗಾರಿಗಳನ್ನು ಕೈಗೊಂಡಿರಬಹುದು. ಆದರೆ, ಯಾವುದೇ ಕಾಮಗಾರಿಗಳು ಕೂಡ ಈ ಸದನದ ಅನುಮತಿ ಇಲ್ಲದೇ ನಡೆದಿರುವುದಿಲ್ಲ, ಆದುದರಿಂದ, ಈ ರೀತಿಯಾಗಿ ಸದನದ ಹೊರಗಡೆ ಅಥವಾ ಒಳಗಡೆ ಈ ರೀತಿ ಹೇಳಿಕೆ ಕೊಡುವ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ನೀಡಬೇಕು. ಇದರಲ್ಲಿ ನಾವೇನು ಆರ್ಥಿಕ ಇಲಾಖೆಗೆ embarrassment ಮಾಡಬೇಕೆಂದಿಲ್ಲ. ಅಂದಿನ ಮೈತ್ರಿ ಸರ್ಕಾರದ ಒತ್ತಡದಿಂದ ಕೆಲವೊಂದು ಕಾಮಗಾರಿಗಳನ್ನು ಪಡೆದುಕೊಂಡಿದ್ದೇವೆ, ಬಹುಶಃ ಅವುಗಳು ಮೈತ್ರಿ ಸರ್ಕಾರದಲ್ಲಿರತಕ್ಕಂತಹ ಅಗತ್ಯತೆಗೆ ಅನುಗುಣವಾಗಿ ಇದ್ದಂತಹ ಬೇಡಿಕೆಗಳಾಗಿರುತ್ತವೆ.

ಇನ್ನೂ ಆರ್ಥಿಕ ವ್ಯವಸ್ಥೆ ಬಗ್ಗೆ ನಾನು ಮಾತನಾಡಬೇಕು. ಅದಕ್ಕಾಗಿ, ತಾವು ನನಗೆ ಸ್ವಲ್ಪ ಸಮಯ ಕಾಲಾವಕಾಶ ನೀಡಬೇಕು. ಕರ್ನಾಟಕ ಸರ್ಕಾರ ತೆರಿಗೆ ಸಂಗ್ರಹಣೆಯಲ್ಲಿ ದೇಶದಲ್ಲಿಯೇ ಗುಜರಾತ್, ಮಹಾರಾಷ್ಟ್ರ, ತಮಿಳುನಾಡು, ಕೇರಳ ಮುಂತಾದ ರಾಜ್ಯಗಳಂತೆ ಮಂಚೂಣಿಯಲ್ಲಿದ್ದ ರಾಜ್ಯವಾಗಿತ್ತು. ಇದಕ್ಕೆ ಬಹುತೇಕ ಕಾರಣ ರಾಜ್ಯದಲ್ಲಿ ಹಿಂದೆ ಜಾರಿಯಲ್ಲಿದ್ದ ವ್ಯಾಟ್ ಪದ್ಧತಿ ಅಂದರೆ VAT regime

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಲ್ಲಿ ಯಾವೆಲ್ಲಾ ವಸ್ತುಗಳನ್ನು ತೆಗೆದು ಹಾಕಬಹುದು ಅದೆಲ್ಲವನ್ನೂ ಕೂಡ ನಾವು ಅಳವಡಿಸಿ ಸರ್ಕಾರ ವ್ಯಾಟ್‌ನಲ್ಲಿ ಸಾಕಷ್ಟು ತೆರಿಗೆಯನ್ನು ತೆಗೆದುಕೊಳ್ಳುತ್ತಿತ್ತು.

ಜಿ.ಎಸ್.ಟಿ. ಜಾರಿಗೆ ಬಂದ ನಂತರ ರಾಜ್ಯದಲ್ಲಿ ನಮ್ಮ ತೆರಿಗೆ ಬೆಳವಣಿಗೆ ಇರಲಿಲ್ಲ. ಅದಕೋಸ್ಕರ ಕೇಂದ್ರ ಸರ್ಕಾರ 14ನೇ ಆರ್ಥಿಕ ಆಯೋಗದ ಶಿಫಾರಸ್ಸು ಮೇರೆಗೆ 5 ವರ್ಷಗಳ ಕಾಲ ಯ್ಯಾವ ರಾಜ್ಯಗಳಿಗೆ ಜಿ.ಎಸ್.ಟಿ. ನಷ್ಟವಾಗುತ್ತದೆ. ಅದಕ್ಕೆ ಪರಿಹಾರವನ್ನು ಕೊಡುತ್ತದೆಯೆಂದು ಹೇಳಿದ್ದರು. ಆ ಪ್ರಕಾರ ಕಳೆದ ನವೆಂಬರ್ ತಿಂಗಳಿನಿಂದ 8 ಸಾವಿರ ಕೋಟಿ ರೂಪಾಯಿಗಳ ಜಿ.ಎಸ್.ಟಿ. ಪರಿಹಾರವನ್ನು ನೀಡಬೇಕಾಗಿರುತ್ತದೆ. ಅದನ್ನೂ ಈವರೆಗೂ ಬಿಡುಗಡೆ ಮಾಡಿರುವುದಿಲ್ಲ. ಅದನ್ನು ಕೊಡುವಂತಹ ವ್ಯವಸ್ಥೆ ಆಗಬೇಕು. ಜಿ.ಎಸ್.ಟಿ. ಪರಿಹಾರವನ್ನು ಕೇಂದ್ರ ಸರ್ಕಾರ ಕೊಡುವುದಿಲ್ಲ. ಕೇಂದ್ರ ಸರ್ಕಾರ ಈ ಪರಿಹಾರ ಹಣವನ್ನು ಸೆಸ್ ಮುಖೇನ ಆಟೋಮೊಬೈಲ್, ಟೊಬ್ಯಾಕೋ ಮತ್ತು ಅರೇಟೆಡ್ ಪಾನೀಯಗಳ ಮೇಲೆ ವಿಧಿಸಿ ಸಂಗ್ರಹಿಸಿರುತ್ತದೆ. ಅದರ ಹಣವನ್ನು ಮಾತ್ರ ಕೇಂದ್ರ ಸರ್ಕಾರ ನಮಗೆ ಕೊಡುತ್ತದೆ. ಅದನ್ನೂ ಕೇಂದ್ರ ಸರ್ಕಾರದ kit ನಿಂದ ಕೊಡುತ್ತಿರುವುದಿಲ್ಲ.

**ಸಭಾಪತಿಯವರು:-** ಮಾನ್ಯ ತಿಪ್ಪೇಸ್ವಾಮಿಯವರೇ ತಮ್ಮ ಸಮಯ ಮುಗಿದಿದೆ. ದಯಮಾಡಿ, ಕುಳಿತುಕೊಳ್ಳಿ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಇನ್ನೆರಡು-ಮೂರು ನಿಮಿಷಗಳಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ. 15ನೇ ಆರ್ಥಿಕ ಆಯೋಗ 2020-2021ನೇ ಸಾಲಿಗೆ ಸಲ್ಲಿಸಿದ ಮಧ್ಯಂತರ ವರದಿಯನ್ನು ಕೇಂದ್ರ ಸರ್ಕಾರ ಪಾರ್ಲಿಮೆಂಟ್‌ನಲ್ಲಿ ಮಂಡಿಸಲಾಗಿದೆ. ಈ ವರ್ಷದ ಅಕ್ಟೋಬರ್ ತಿಂಗಳಿನಲ್ಲಿ ಉಳಿದಂತಹ 4 ವರ್ಷದ ಅವಧಿಗೆ 2ನೇ ಹಂತದ ವರದಿ ಬರಲಿದೆ. ಮಾನ್ಯ ಹಣಕಾಸು ಸಚಿವರು ಪಾರ್ಲಿಮೆಂಟ್‌ನಲ್ಲಿ “the Central Government has accepted the report in totality” ಎಂದು ಹೇಳಿದ್ದಾರೆ. ಆದರೆ, 15ನೇ ಆಯೋಗವು ರೂಪಿಸಿದ terms of reference ಏನಿದೆ performance criteria, weightage ಮತ್ತು parameter ಗಳಿಂದ ದಕ್ಷಿಣ ರಾಜ್ಯಗಳಿಗೆ ಅದರಲ್ಲೂ ಕರ್ನಾಟಕ ರಾಜ್ಯಕ್ಕೆ ತುಂಬಲಾರದಷ್ಟು ಆರ್ಥಿಕ ನಷ್ಟ ಉಂಟಾಗಿರುತ್ತದೆ. ಈ parameter ಗಳನ್ವಯ ಕೇಂದ್ರ ಸರ್ಕಾರದಿಂದ ರಾಜ್ಯಗಳಿಗೆ ಮರು ಹಂಚಿಕೆಯಾಗುವ ತೆರಿಗೆ ಪಾಲಿನಲ್ಲಿ ಸುಮಾರು 1.066 percent ಕಡಿಮೆಯಾಗಿರುತ್ತದೆ. ಇದರಿಂದಾಗಿ,

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದಂತೆ ಸುಮಾರು 11,300 ಕೋಟಿ ರೂಪಾಯಿಗಳಷ್ಟು ಮುಂದಿನ ದಿನಗಳಲ್ಲಿ ನಮ್ಮ ರಾಜ್ಯಕ್ಕೆ ನಷ್ಟವಾಗುತ್ತದೆ.

ಈಗಾಗಲೇ ದಕ್ಷಿಣ ರಾಜ್ಯಗಳಾದ ಕೇರಳ, ತೆಲಂಗಾಣ ಮತ್ತು ಆಂಧ್ರ ಪ್ರದೇಶಗಳು ಕೇಂದ್ರ ಸರ್ಕಾರಕ್ಕೆ 15ನೇ ಆರ್ಥಿಕ ಆಯೋಗವು ನೀಡಿರುವ ಶಿಫಾರಸ್ಸುಗಳು ಮಲತಾಯಿ ಧೋರಣೆಯಿಂದ ಕೂಡಿದ್ದು, ಈ ಶಿಫಾರಸ್ಸುಗಳನ್ನು ತಿರಸ್ಕರಿಸುವಂತೆ ಮತ್ತು ದಕ್ಷಿಣ ರಾಜ್ಯಗಳಿಗೆ ಅನ್ಯಾಯವಾಗದಂತೆ ಎಚ್ಚರವಹಿಸುವಂತೆ ಒತ್ತಾಯಿಸಿದ್ದಾರೆ. ಹಿಂದಿನ ಆರ್ಥಿಕ ಆಯೋಗಗಳಲ್ಲಿ ದಕ್ಷಿಣ ಭಾರತದ ರಾಜ್ಯಗಳಿಂದ ಕನಿಷ್ಠ ಅಧ್ಯಕ್ಷರಾಗಲಿ ಅಥವಾ ಒಬ್ಬ ಸದಸ್ಯರಾಗಲಿ ಇರುತ್ತಿದ್ದರು. ಉದಾಹರಣೆಗೆ, ತಮಗೆಲ್ಲಾ ಗೊತ್ತಿರುವಂತೆ ಈ ಹಿಂದೆ ಅತ್ಯಂತ ಅರಿತ ಮತ್ತು ಪ್ರಭಾವಿತ ಹಿರಿಯ ರಾಜಕಾರಣಿಗಳಾದ ಶ್ರೀ ಬ್ರಹ್ಮಾನಂದರೆಡ್ಡಿ, ಶ್ರೀ ಎನ್.ಕೆ.ಪಿ. ಸಾಳ್ವೆ ಮತ್ತು ಆರ್ಥಿಕ ತಜ್ಞರಾದ ಶ್ರೀ ರಾಜ ಮನ್ನಾರ್, ಡಾ|| ರಂಗರಾಜನ್, ಡಾ|| ವೈ.ಬಿ. ರೆಡ್ಡಿ ಇದ್ದರು ಮತ್ತು ನಮ್ಮ ರಾಜ್ಯದವರೇ ಆದಂತಹ ಶ್ರೀ ಗೋವಿಂದರಾವ್ ಈ ಆಯೋಗದಲ್ಲಿ ಯಾವಾಗಲೂ ಸದಸ್ಯರಾಗಿರುತ್ತಿದ್ದರು. ಆದರೆ, 15ನೇ ಆರ್ಥಿಕ ಆಯೋಗದಲ್ಲಿ ದಕ್ಷಿಣ ಭಾರತದಿಂದ ಕನಿಷ್ಠ ಒಬ್ಬ ಸದಸ್ಯರಿಲ್ಲ. ನಮ್ಮ ರಾಜ್ಯದ ಹಿತ ಕಾಪಾಡುವುದಕ್ಕೆ ಯಾವ ಒಬ್ಬ ಸದಸ್ಯರೂ ಕೂಡ ಇಲ್ಲ.

**ಸಭಾಪತಿಯವರು:–** ಆಯಿತು. ತಮ್ಮ ಸಮಯಾವಕಾಶ ಮುಗಿದಿದೆ. ಈಗ ಶ್ರೀ ಐವನ್ ಡಿ'ಸೋಜಾರವರು ಮಾತನಾಡಲಿ.

**ಶ್ರೀ ಕೆ.ಎಸ್. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಎರಡು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮ ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆಯಾಗಿ, ಕೇಂದ್ರದ ಅರ್ಥ ಸಚಿವೆಯಾಗಿರುವ ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರು ರಾಜ್ಯದ ಹಿತ ಕಾಪಾಡುವಲ್ಲಿ ಮುಂದಾಗಬೇಕು ಮತ್ತು ಸಕ್ರಿಯರಾಗಬೇಕು ಮತ್ತು 15ನೇ ಆರ್ಥಿಕ ಆಯೋಗದಿಂದ ರಾಜ್ಯಕ್ಕೆ ಉಂಟಾಗುವ ಆರ್ಥಿಕ ನಷ್ಟವನ್ನು ತಪ್ಪಿಸಲು ಮಾರ್ಗೋಪಾಯಗಳನ್ನು ಕಂಡುಹಿಡಿದು ರಾಜ್ಯದ ಜನತೆಯ ಶ್ರೇಯೋಭಿವೃದ್ಧಿಗೆ ಮುಂದಾಗಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(220)09.03.2020/3.10/ವೈಎಲ್-ವಿಕೆ

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದಿಸುತ್ತಾ, ನಮ್ಮ ಜಿಲ್ಲೆಗೆ ಸಂಬಂಧಿಸಿದಂತೆ ಈ ಒಂದು ಭಾಷಣದ ಮೂಲಕ ತುಂಬಾ ವಿಚಾರಗಳನ್ನು ಮಂಡನೆ ಮಾಡಬೇಕಾಗಿತ್ತು. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಆಗಮಿಸಿರುವುದರಿಂದ ನನ್ನ ಅವಕಾಶ ಕಡಿಮೆ ಇದೆ ಎಂದು ತಿಳಿದುಕೊಂಡು, ಈಗಾಗಲೇ ನಾನು ಅನೇಕ ವಿಚಾರಗಳನ್ನು ಮಾತನಾಡಿದ್ದು, 2-3 ವಿಚಾರಗಳ ಬಗ್ಗೆ ಮಾತ್ರ ಬೆಳಕು ಚೆಲ್ಲುವುದಕ್ಕೆ ಬಯಸುತ್ತೇನೆ. ನನ್ನ ದಕ್ಷಿಣ ಕನ್ನಡ ಜಿಲ್ಲೆ ಸ್ವಲ್ಪ ಸೂಕ್ಷ್ಮದ ಜಿಲ್ಲೆ ಎಂದು ನಮ್ಮ ರಾಜ್ಯದೊಳಗೆ ಮಾತನಾಡಿಕೊಳ್ಳುತ್ತಾರೆ. ಹಾಗಾಗಿ ನಮ್ಮ ಜಿಲ್ಲೆಯಲ್ಲಿ ಪೊಲೀಸ್ ವ್ಯವಸ್ಥೆಯನ್ನು ಕಲ್ಪಿಸಬೇಕೆಂಬುದು ನಮ್ಮೆಲ್ಲರ ಬೇಡಿಕೆಯಾಗಿದೆ. ಗೌರವಾನ್ವಿತ ರಾಜ್ಯಪಾಲರು ಸಹ ತಮ್ಮ ಭಾಷಣದ ಪುಟ ಸಂಖ್ಯೆ 17 ರಲ್ಲಿ ಕ್ರಮ ಸಂಖ್ಯೆ 57 ರಿಂದ 62 ರವರೆಗೆ ಪೊಲೀಸ್ ವ್ಯವಸ್ಥೆ ಮತ್ತು ತೆಗೆದುಕೊಂಡಂತಹ ಕ್ರಮದ ಬಗ್ಗೆ ಮುನ್ನುಡಿಯನ್ನು ನೀಡಿದ್ದಾರೆ. 2011ನೇ ಸಾಲಿನಲ್ಲಿ Commissionerate ಮತ್ತು ಎಸ್.ಪಿ. ಕಛೇರಿಯನ್ನು ನಿರ್ಮಿಸಲಾಗಿತ್ತು. Commissionerate formation ಆದ ನಂತರ ನಮ್ಮ ಸಭಾನಾಯಕರು ಆ ಜಿಲ್ಲೆಯವರೇ ಆಗಿದ್ದು, ಜಿಲ್ಲಾ ಉಸ್ತುವಾರಿ ಸಚಿವರೂ ಆಗಿದ್ದಾರೆ. 2011ನೇ ಸಾಲಿನಿಂದ ಇವತ್ತಿನವರೆಗೂ ಎಸ್.ಪಿ. ಕಛೇರಿಯು Commissionerate ಕಛೇರಿಯೊಳಗೇ ಕಾರ್ಯನಿರ್ವಹಿಸುತ್ತಿದ್ದು, 105 ಕಿಲೋ ಮೀಟರ್ ವ್ಯಾಪ್ತಿಯಷ್ಟು ದೂರದಲ್ಲಿದೆ. ಸೂಕ್ಷ್ಮ ಹಾಗೂ ಪೊಲೀಸ್ ಬಲ ಕಡಿಮೆ ಇರುವ ಪ್ರದೇಶ ಎಂದು ಹೇಳುತ್ತೇವೆ ಅದರ ಮೂಲಕವೂ ಸಹ ಎಸ್.ಪಿ. ಕಛೇರಿಯನ್ನು Commissionerate ಕಛೇರಿಯಿಂದ ಹೊರಗೆ ನಿರ್ಮಿಸಿ ಎಂದು ಅನೇಕ ಬಾರಿ ಇದೇ ಸದನದ ಮೂಲಕ ಒತ್ತಾಯ ಮಾಡಿದಂತಹ ಸಂದರ್ಭದಲ್ಲಿಯೂ ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ, ಎಸ್.ಪಿ. ಕಛೇರಿಯನ್ನು ಹೊರಗೆ ನಿರ್ಮಿಸುವ ಅಗತ್ಯ ಇದೆ ಎಂದು ಹೇಳಿದರೂ ಕೂಡ ಇವತ್ತಿನವರೆಗೂ ಆಗಿಲ್ಲ ಎಂಬುದನ್ನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಮಂಗಳೂರು ನಗರದಲ್ಲಿರುವ ಸುಳ್ಯ, ಸಂಪಾಜೆ, ಸುಬ್ರಹ್ಮಣ್ಯ, ಬೆಳ್ತಂಗಡಿ, ಪುತ್ತೂರು ಪ್ರದೇಶಕ್ಕೆ ಹೋಗಬೇಕಾದರೆ, 105 ಕಿಲೋ ಮೀಟರ್‌ಗಳಷ್ಟು ದೂರದಲ್ಲಿದೆ. ಕನಿಷ್ಠ ಪಕ್ಷ 3 ಗಂಟೆಗಳ ಕಾಲ ಸಮಯಬೇಕಾಗುತ್ತದೆ. ಏನಾದರೂ ಅವಗಡವಾದರೆ, entire police force, DAR (District Armed Reserve) ಹಿಡಿದು ಎಲ್ಲವೂ ಸಿಟಿಯೊಳಗೆ ಇದೆ, ಎಸ್.ಪಿ. ಕಛೇರಿಯು ಸಿಟಿ ಯೊಳಗೆ ಇದೆ. ಆದರೆ, ಅವರು ಆ ಭಾಗಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗಬೇಕಾದರೆ 3 ಗಂಟೆಗಳ ಕಾಲ ಸಮಯ ಬೇಕಾಗುತ್ತದೆ. ಹಾಗಾಗಿ ಎಸ್.ಪಿ. ಕಛೇರಿಯನ್ನು ತೆರೆಯುವುದು ಬಹಳ ಅವಶ್ಯಕತೆ ಇದೆ. ಮಾನ್ಯ ಮುಖ್ಯಮಂತ್ರಿಗಳು ಸಹ ಸದನದಲ್ಲಿಯೇ ಇದ್ದಾರೆ, ದಯವಿಟ್ಟು ಇದನ್ನು ಗಮನದಲ್ಲಿಟ್ಟುಕೊಂಡು ಎಸ್.ಪಿ. ಕಛೇರಿಯನ್ನು ಯಾವ ಭಾಗದಲ್ಲಿಯಾದರೂ ಸರಿ ನಿರ್ಮಿಸಿ. ಹಲವಾರು ಶಾಸಕರಿಂದ ಬೇರೆ–ಬೇರೆ ಕಡೆ ಎಸ್.ಪಿ.ಕಛೇರಿಯನ್ನು ನಿರ್ಮಿಸಲು ಅನೇಕ ಬೇಡಿಕೆಗಳಿವೆ. ಆದರೆ, ಇಂತಹ ಕಡೆಯೇ ನಿರ್ಮಿಸಿ ಎಂದು ನಾನು ಹೇಳುವುದಿಲ್ಲ. ಬಂಟ್ವಾಳ ಅಥವಾ ಪುತ್ತೂರು ತಾಲ್ಲೂಕುಗಳಿಗೂ ಕೇಳಿದ್ದಾರೆ. ಹಾಗಾಗಿ ಎಲ್ಲಿಯಾದರೂ ಸರಿ ಎಸ್.ಪಿ.ಕಛೇರಿಯನ್ನು ತೆರೆಯಬೇಕೆಂಬುದು ಒತ್ತಾಯವಾಗಿದೆ. ಎರಡನೆಯದಾಗಿ, ಕ್ರೈಸ್ತ ಸಮುದಾಯಕ್ಕೆ ಒಂದು ನಿಗಮವನ್ನು ಮಾಡಬೇಕೆಂಬುದು ಬೇಡಿಕೆಯಾಗಿತ್ತು. ಈ ಬಾರಿಯ ಬಜೆಟ್‌ನಲ್ಲಿ ರೂ.200.00 ಕೋಟಿಗಳನ್ನು ಮೀಸಲಿರಿಸಿದ್ದು ಅದನ್ನು ಸ್ವಾಗತಿಸುತ್ತಾ, ಅದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಕಳೆದ ಬಜೆಟ್‌ನಲ್ಲಿಯು ರೂ.200.00 ಕೋಟಿಗಳನ್ನು ಮೀಸಲಿಟ್ಟಿದ್ದು, ಅದರ ಜೊತೆಗೆ ಅಂದಿನ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಕ್ರೈಸ್ತ ಅಭಿವೃದ್ಧಿ ನಿಗಮವನ್ನು ಘೋಷಣೆ ಮಾಡಿದ್ದರು. ನಾನೂ ಸಹ ನೋಡಿದ್ದೆ. ಆ ಬಜೆಟ್‌ನಲ್ಲಿ ರೂ.200.00 ಕೋಟಿಗಳನ್ನು ಘೋಷಣೆ ಮಾಡಿದ್ದು, ಈಗಾಗಲೇ ನಾಲ್ಕು ನಿಗಮಗಳ ಪೈಕಿ, 3 ನಿಗಮಗಳು ಕಾರ್ಯಚರಣೆ ಮಾಡುತ್ತಿದೆ. ಆದರೆ, ಕ್ರೈಸ್ತ ಸಮುದಾಯದ ನಿಗಮಕ್ಕೆ ಕೊಟ್ಟಿದ್ದ ರೂ.200.00 ಕೋಟಿಗಳು ಬಳಕೆಯಾಗಿಲ್ಲ. ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಈ ಸಮುದಾಯವು ಶೇಕಡಾ 3 ರಿಂದ 4 ರಷ್ಟಿರಬಹುದು. ಆದರೆ, ಸೇವೆಯಲ್ಲಿ ತನ್ನದೇ ಆದ ಪ್ರಾಮುಖ್ಯತೆಯನ್ನು ಹೊಂದಿದೆ. ಇತರ ಸಮುದಾಯದೊಂದಿಗೆ ಹಣವನ್ನು ನೀಡಿದರೆ, ಆ ಹಣವು ನಮ್ಮ ಸಮುದಾಯಕ್ಕೆ ಸಿಗುವುದಿಲ್ಲ ಎಂಬ ಬೇಡಿಕೆಗಾಗಿ ಕಳೆದ 5 ವರ್ಷಗಳಿಂದ ಸತತವಾಗಿ ರಾಜ್ಯ ಸರ್ಕಾರದ ಗಮನಕ್ಕೆ ತಂದು, ಕ್ರೈಸ್ತ ಅಭಿವೃದ್ಧಿ ನಿಗಮವನ್ನು ಕೂಡಲೇ ಕಾರ್ಯಚರಣೆಗೆ ತನ್ನಿ ಹೇಳಿದ್ದರೂ ಸಹ ಇವತ್ತಿಗೂ C&I (Commercial and Industrial) ರಿಜಿಸ್ಟ್ರೇಷನ್‌ಗೆ ಕಳುಹಿಸಿದ್ದೇವೆ ಮತ್ತು rules frame ಮಾಡುವುದಕ್ಕೆ ಕಳುಹಿಸಿದ್ದೇವೆ ಎಂದು ಹೇಳಿ, ಒಂದು ವರ್ಷವಾದರೂ ಆಗಿಲ್ಲ. ಜೊತೆಗೆ ಈಗಾಗಲೇ ಮೀಸಲಿಟ್ಟಿರತಕ್ಕಂಥ ರೂ.60.00 ಕೋಟಿಗಳು ಖರ್ಚಾಗಿಲ್ಲ. ಹಾಗಾಗಿ ಕ್ರೈಸ್ತ ಸಮುದಾಯಕ್ಕೆ ಹಣವನ್ನು ನೀಡಿದ್ದು, ಅದರ ಬೆಳವಣಿಗೆ ಆಗಬೇಕಾದರೆ ಆ ಹಣವು ಕ್ರೈಸ್ತ ಸಮುದಾಯಕ್ಕೆ ಮುಟ್ಟಬೇಕೆಂದು ಹೇಳುತ್ತಾ, ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನಮ್ಮಲ್ಲಿರತಕ್ಕಂಥ ಮತ್ತೊಂದು ದೊಡ್ಡ ಸಮಸ್ಯೆಯೇನೆಂದರೆ, ಅಡಿಕೆಗೆ ಕೊಳೆ ರೋಗ ಬರುತ್ತಿರುವುದಾಗಿದೆ. ನಾನು ಅನೇಕ ಬಾರಿ ಸದನದಲ್ಲಿ ಪ್ರಶ್ನೆ ಕೇಳಿ, ಕಡತವೇ ದಪ್ಪವಾಗಿದೆ. ಈ ಸದನದಲ್ಲಿ ಅಂದಿನ ಸಚಿವರು ಉತ್ತರವನ್ನು ನೀಡಿದ್ದು, ಅದರ ಕೊನೆಯ ಪ್ಯಾರಾವನ್ನು ಓದಿ ಹೇಳುತ್ತೇನೆ. ಈ ಉತ್ತರದಲ್ಲಿ 'ಅಡಿಕೆ ಮಂಡಳಿಯನ್ನು ರಚನೆ ಮಾಡುತ್ತೇವೆ' ಎಂದು ಹೇಳಿದ್ದಾರೆ. ಅದಕ್ಕೊಂದು ಸಮಿತಿಯನ್ನು ಸಹ ರಚನೆ ಮಾಡಿದ್ದರು. Horticultural and Agricultural Science ನ Vice Chancellor ಗಳನ್ನಿಟ್ಟು ಒಂದು ಸಮಿತಿಯನ್ನು ರಚಿಸಲಾಗಿತ್ತು. ಆ ಸಮಿತಿಯಿಂದ ಒಂದು ವರದಿ ಬಂದಿದ್ದು, ಆ ವರದಿಯನ್ನು ಶಿಫಾರಸ್ಸು ಮಾಡಿದ್ದರು. ರಾಜ್ಯದ ಒಟ್ಟಾರೆ ದೇಶದಲ್ಲಿ ಉತ್ಪಾದನೆಯಾಗುವಂಥ ಅಡಿಕೆಯಲ್ಲಿ ಕರ್ನಾಟಕ ರಾಜ್ಯದ ನಮ್ಮ ಜಿಲ್ಲೆಯಲ್ಲಿ ಅಡಿಕೆ ಉತ್ಪಾದನೆಯಲ್ಲಿ ಶೇಕಡಾ 51 ರಷ್ಟು ನಮ್ಮ ಜಿಲ್ಲೆ ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ ಆಗುತ್ತಿದೆ. ಹಾಗಾಗಿ ಶೇಕಡಾ 51 ರಷ್ಟು ಅಡಿಕೆ ಉತ್ಪಾದನೆಯಾಗುತ್ತಿರುವ ಕರ್ನಾಟಕ ರಾಜ್ಯಕ್ಕೆ ಅಡಿಕೆ ಮಂಡಳಿಯನ್ನು ಮಾಡುತ್ತೇವೆ ಎಂಬ ಘೋಷಣೆಯನ್ನು ಕೂಗಿದರು. ನಾನು 17 ಡಿಸೆಂಬರ್ 2018 ರಂದು ನೀಡಿರತಕ್ಕಂಥ ಉತ್ತರವನ್ನು ಓದಿ ಹೇಳುತ್ತೇನೆ. ಅದೇನೆಂದರೆ, 'ಅಡಿಕೆ ಬೆಳೆ ಮೇಲೆ ಅವಲಂಬಿತವಾಗಿರತಕ್ಕಂಥ ಸಣ್ಣ, ಅತೀ ಸಣ್ಣ ರೈತರ ಕ್ಷೇಮಾಭಿವೃದ್ಧಿಗೆ ಪ್ರಮುಖ ಪಾತ್ರವಹಿಸುವುದಕ್ಕಾಗಿ ಅಡಿಕೆ ಮಂಡಳಿ ರಚಿಸುವುದು ಅವಶ್ಯವಲ್ಲ ಎಂದು ಅಭಿಪ್ರಾಯ ಪಡಲಾಗಿದೆ' ಎಂದು ಉತ್ತರವನ್ನು ನೀಡಿದ್ದಾರೆ. ಒಂದು ಸಲ ಅವರೇ ಅಡಿಕೆ ಮಂಡಳಿ ಬೇಕು ಅವಶ್ಯಕವಾಗಿದೆ ಎಂದು ಹೇಳುತ್ತಾರೆ. ಆದರೆ, ಯಾವಾಗ ಅಡಿಕೆ ಮಂಡಳಿ ತೆರೆಯಲಾಗುತ್ತದೆ ಎಂದು ಕೇಳಿದರೆ, ಅದರ ಬಗ್ಗೆ ಯಾವುದೇ ತಕರಾರು ಇಲ್ಲ. ಈ ಬಾರಿಯ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಡ್ಡಿ ರಿಯಾಯಿತಿ ಮಾಡುವಂಥ ಕಾರ್ಯಕ್ರಮವನ್ನು ಘೋಷಣೆ ಮಾಡಿದ್ದು, ಅದನ್ನು ಸ್ವಾಗತಿಸುತ್ತೇನೆ. ಆದರೆ, ಈ ರಾಜ್ಯಕ್ಕೆ ಅಡಿಕೆ ಬೆಳೆಗಾರರ ರಕ್ಷಣೆಗೆ ನಾವು ಬರಬೇಕಾಗಿದೆ ಮತ್ತು ಪದೇ-ಪದೇ ಅಡಿಕೆ ಬೆಳೆಗಾರರಿಗೆ ಆಗತಕ್ಕಂಥ ತೊಂದರೆಗಳೆಂದರೆ, ಕ್ಯಾನ್ಸರ್ ಬರುತ್ತದೆ, ಆರೋಗ್ಯಕ್ಕೆ ಹಾನಿಕಾರಕ ಎಂದು ಸರ್ವೋಚ್ಚ ನ್ಯಾಯಾಲಯದವರೆಗೂ ಹೋಗುವಂಥ ಸಂದರ್ಭದಲ್ಲಿ ಇದು ಬಹಳ ಅವಶ್ಯಕತೆ ಇದೆ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಕಸ್ತೂರಿ ರಂಗನ್ ವರದಿ. ಕರ್ನಾಟಕ ರಾಜ್ಯದಲ್ಲಿ ದೊಡ್ಡ ಅನಾಹುತವಾಗಿರುವುದು ಯಾವುದರಿಂದ ಎಂದರೆ, ಅದು ಕಸ್ತೂರಿ ರಂಗನ್ ವರದಿಯಿಂದ ಆಗಿರುವುದು. ಕಸ್ತೂರಿ ರಂಗನ್ ವರದಿಯು ಅಭಿವೃದ್ಧಿ ಹೊಂದುತ್ತಿಲ್ಲ. ಎಲ್ಲಿ ಹೋದರೂ No

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Objection Certificate ನೀಡುತ್ತಿಲ್ಲ. ಮನೆ ನಿರ್ಮಿಸಿಕೊಳ್ಳಲು ಅನುಮತಿ ನೀಡುತ್ತಿಲ್ಲ. 20 ರಿಂದ 25 ಕಿಲೋ ಮೀಟರ್ ವ್ಯಾಪ್ತಿಯೊಳಗೆ Sensitive and Eco-Sensitive Zone ಎಂದು ಘೋಷಣೆ ಮಾಡಿದ್ದು, ಯಾರಿಗೂ ಸಹ ಮನೆ ನಿರ್ಮಿಸಲು ಸಾಧ್ಯವಾಗದೇ ತೊಂದರೆಗೆ ಸಿಲುಕಿದ್ದಾರೆ. ಈ ಒಂದು ವಿಚಾರದಲ್ಲಿಯೂ ಸಹ ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ತಾವೂ ಸಹ ಪದೇ ಪದೇ ಮಾತನಾಡಿದ್ದು ಸಾಕು ಕುಳಿತುಕೊಳ್ಳಿ ಎಂದು ಹೇಳುತ್ತಿದ್ದೀರಿ. ತಾವು ಹೇಳುವುದು ಸರಿ ಇದೆ. ಆದರೆ, ನಮ್ಮ ಒತ್ತಡಗಳನ್ನು ಮಾನ್ಯ ಮುಖ್ಯಮಂತ್ರಿಗಳು ಸಹ ಸದನದಲ್ಲಿದ್ದಾಗ ಹೇಳುವುದು ಒಳ್ಳೆಯ ವಿಚಾರವಾಗಿದೆ. ಈಗ ತಾನೇ Mahatma Gandhi National Rural Employment Guarantee Act ಬಗ್ಗೆ ಪ್ರಸ್ತಾಪಿಸಲಾಗಿತ್ತು. MGNREGA ಯೋಜನೆಯಿಂದ ಬಹಳ ಜನರಿಗೆ ಕೆಲಸ ಸಿಕ್ಕಿದೆ, MGNREGA ಯೋಜನೆಯಿಂದಾಗಿ ಸಿಗುವ daily wages ನಿಂದಾಗಿ ಜನರು ಬದುಕಿದ್ದಾರೆ. 2019-20ನೇ ಸಾಲಿನಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದು, ಅದಕ್ಕೆ ಉತ್ತರ ಬಂದಿದೆ. 2017ನೇ ಸಾಲಿನಿಂದ 2020ನೇ ಸಾಲಿನವರೆಗೂ ರೂ.851.00 ಕೋಟಿಗಳಷ್ಟು ಆ ಜನರಿಗೆ ನೀಡಬೇಕಾಗಿರುವ ಕೂಲಿ ಹಣ ಬಾಕಿ ಇದೆ. ದಯವಿಟ್ಟು ಆ ಹಣವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನ ಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಬಹುಶಃ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದು 7ನೇ ತಿಂಗಳನ್ನು ಪೂರೈಸಿ 8ನೇ ತಿಂಗಳಾಗುತ್ತಿದೆ. ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದ ದಿಕ್ಸೂಚಿ, ನಡತೆ ಬಗ್ಗೆ ಮುಂದೆ ಏನು ಮಾಡಬೇಕೆಂಬುದರ ವಿಚಾರ ಧಾರೆಗಳನ್ನು ಈ ಸದನದಲ್ಲಿ ತಿಳಿಸುತ್ತಾರೆ ಎಂಬ ಭಾವನೆಯನ್ನಿಟ್ಟುಕೊಂಡಿದ್ದೇವೆ. ಆದರೆ, ನಾನು ರಾಜ್ಯಪಾಲರ ಭಾಷಣದ ಪುಸ್ತಕವನ್ನು ಸಂಪೂರ್ಣವಾಗಿ ಓದಿದಾಗ ಹಿಂದಿನ ಸರ್ಕಾರಗಳ ಯೋಜನೆಗಳನ್ನು ಮುಂದುವರೆಸಿಕೊಂಡು ಹೋಗುತ್ತೇನೆ ಎನ್ನುವ ಮಾತನ್ನು ಬಿಟ್ಟರೆ, ಬಿಜೆಪಿ ಸರ್ಕಾರದ ಯೋಜನೆಗಳೇನು, ಏನು ಮಾಡುತ್ತಾರೆ ಎಂಬುದನ್ನು ಹೇಳುತ್ತಿಲ್ಲ. 6-7 ತಿಂಗಳಿಂದ ಮುಖ್ಯಮಂತ್ರಿಗಳಾಗಿದ್ದು, ಮಂತ್ರಿಮಂಡಲ ರಚನೆ ಮಾಡುವುದಕ್ಕೆ ಆಗಲಿಲ್ಲ. ಅದರ ಜೊತೆಗೆ 17 ಜನ ಶಾಸಕರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳುವುದರಲ್ಲಿಯೇ ವಿಳಂಬವಾಗಿದೆ ಆಗಲಿ. ಕೊನೆಯ ಪಕ್ಷ ಇವತ್ತಾದರೂ ಈ ರಾಜ್ಯದ ಜನತೆಗೆ ಇಂತಿಂಥ ಕಾರ್ಯಕ್ರಮಗಳನ್ನು ನೀಡುತ್ತೇನೆ ಎಂದು ಹೇಳಲಿ. ಏನು ಕಾರ್ಯಕ್ರಮಗಳಿವೆ ಎಂದು ಒಂದು ಕಡೆ ನೋಡಿದಾಗ ಪ್ರವಾಹಕ್ಕೆ ಸಂಬಂಧಿಸಿದಂತೆ ರೂ.5.00

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲಕ್ಷಗಳನ್ನು ಭರಿಸುತ್ತೇವೆ ಎಂದು ಹೇಳಿದ್ದು, ಇವತ್ತಿನವರೆಗೂ ಒಟ್ಟು ಹಣವನ್ನು ಭರಿಸಿಲ್ಲ. ಸುಮಾರು ರೂ.1.00 ಲಕ್ಷ ಕೊಡುವಂಥ ಕೆಲಸವಾಗುತ್ತಿದೆ. ಹಲವಾರು ರೈತರು ರಸ್ತೆಗೆ ಕರೆಂಟ್ ಕಂಬಗಳು ಬಾರದೇ ಕರೆಂಟ್, transformer ಗಳು ಇಲ್ಲದೇ ಬೀದಿಯಲ್ಲಿದ್ದಾರೆ. ಆತನ ಪರಿಸ್ಥಿತಿ ಹೇಳುವುದಕ್ಕಾಗುವುದಿಲ್ಲ. ದಯವಿಟ್ಟು ವಿನಂತಿಸಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬರುವ ಮೊದಲೇ ಕೆಲವು ವಿಚಾರಧಾರೆಗಳಾಗಿವೆ. ಈ ಕಾಮಗಾರಿಗಳನ್ನು ನೀಡುವಂಥ ವಿಷಯದಲ್ಲಿ ನಮ್ಮ ಕಾರ್ಯಕರ್ತರನ್ನು ಪೋಷಣೆ ಮಾಡತಕ್ಕಂಥ ರೀತಿಯಲ್ಲಿ ಏನಾದರೂ ಬರೆದುಕೊಟ್ಟರೆ, ಒಳ್ಳೆಯ ಕಾಮಗಾರಿಗಳನ್ನು ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಿದೆಯೇ? ಯಾವತ್ತೂ ಈ ರೀತಿಯಾಗಿರುವುದನ್ನು ನೋಡಿರಲಿಲ್ಲ. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಯವರ ಹತ್ತಿರ ಹೋಗದಿದ್ದರೆ ಒಳ್ಳೆಯದು. ಬಿಜೆಪಿ ಕಾರ್ಯಕರ್ತರಿಗೆ ಕಾಮಗಾರಿ ಕೆಲಸ ಮಾಡಲು ನೋಟ್ ಬರೆದು, ಕುಳಿತುಕೊಂಡರೆ ರಾಜ್ಯಕ್ಕೆ ಏನು ಸಂದೇಶವನ್ನು ನೀಡುವುದಕ್ಕೆ ಸಾಧ್ಯ. ಇದರಿಂದ ಒಳ್ಳೆಯ ಕಾಮಗಾರಿಯಾಗುವುದಕ್ಕೆ ಶಕ್ಯವಿಲ್ಲ ಎನ್ನುವಂಥ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**(221)09.03.2020 ಎಸ್‌ಕೆ-ವಿಕೆ**

**ಶ್ರೀ ಆರ್. ಬಿ. ತಿಮ್ಮಾಪುರ (ಮುಂದು):-** ಮಾನ್ಯ ಸಭಾಪತಿಯವರೇ, ಕಬ್ಬು ಬೆಳೆ ಸಂಪೂರ್ಣವಾಗಿ ಹಾಳಾದಾಗ, ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಸಿದ್ದರಾಮಯ್ಯನವರು ಒಂದು ಟನ್ ಕಬ್ಬಿಗೆ ರೂ.350 ಪರಿಹಾರ ಕೊಟ್ಟಾಗ ಒಬ್ಬೊಬ್ಬ ರೈತನ ಖಾತೆಗೆ ಸುಮಾರು ರೂ. 10 ರಿಂದ 15 ಲಕ್ಷಗಳವರೆಗೂ ಬಂತು. ಇವತ್ತು ಎಲ್ಲವನ್ನೂ ಕಳೆದುಕೊಂಡು ದಿವಾಳಿಯಾಗಿರುವ ಕಬ್ಬು ಬೆಳೆದಂತಹ ರೈತರಿಗೆ ಅವನ್ನು ಬಿತ್ತನೆ ಮಾಡುವುದಕ್ಕೆ ಬರೀ ಎರಡು ಹೆಕ್ಟೇರ್‌ಗೆ ಹಣವನ್ನು ನೀಡಿದರೆ ಏನಾಗುತ್ತದೆ? ಈ ಹಣ ಯಾವುದಕ್ಕೂ ಸಾಕಾಗುವುದಿಲ್ಲ. ಆದುದರಿಂದ ಇನ್ನು ಹೆಚ್ಚಿನ ಹಣವನ್ನು ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ರೈತರ ಪರವಾಗಿದ್ದಾರೆಂದು ಹಸಿರು ಶಾಲು ಹೊದ್ದಿಕೊಂಡು ಕಾರ್ಯಕ್ರಮಗಳನ್ನು ಘೋಷಣೆ ಮಾಡಿರುತ್ತಾರೆ. ರೈತಾಪಿ ವರ್ಗದವರು ಏನೊಂದು ಆಶ್ವಾಸನೆ ಬಗ್ಗೆ ಆಸೆಯನ್ನಿಟ್ಟುಕೊಂಡು ನೋಡುತ್ತಿದ್ದಾರೆ. ಆದರೆ ಮುಖ್ಯಮಂತ್ರಿಗಳು ಏನೇನೂ ಕೊಟ್ಟಿದ್ದಾರೆ? ರೈತರ ಆತ್ಮಹತ್ಯೆಗಳು ಏನಾದರೂ ಕಡಿಮೆ ಮಾಡಿದ್ದಾರೆ? ಬಲತ್ಕಾರವಾಗಿ ಸಾಲ-ವಸೂಲಿ ಮಾಡುವುದನ್ನೆನಾದರೂ ಕಡಿಮೆ ಮಾಡಿದ್ದಾರೆ. ಮಳೆ ಹೆಚ್ಚಾಗಿ ಬಂದು ಜಮೀನುಗಳಲ್ಲಿ ಸಿಕ್ಕಾಬಟ್ಟೆ ಸವಳು-ಜವಳು ತುಂಬಿಕೊಂಡು ಭೂಮಿ ಹಾಳಾಗಿದೆ. ಸರ್ಕಾರ ವಿಶ್ವವಿದ್ಯಾನಿಲಯದವರಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನು ಸಂಶೋಧನೆಗಳನ್ನು ಮಾಡಿಸಿದ್ದಾರೆಯೇ? at least ಅದನ್ನು ಲ್ಯಾಂಡ್‌ಗೆ ತರುವಂತಹ 'Lab to Land Programme' ಏನಾದರೂ ಇದೆಯೇ? ನಾನಂತೂ ಎ.ಪಿ.ಎಂ.ಸಿಯನ್ನು ನೋಡುತ್ತಿದ್ದೇನೆ. ಎ.ಪಿ.ಎಂ.ಸಿಗೆ ವ್ಯಾಪಾರಸ್ಥರು, ರೈತರು ಬರಲಾರದೇ ಹಂದಿಗಳು ತುಂಬಾ ಅಡ್ಡಾಡುತ್ತಿವೆ. ಇಂತಹ ವಾತಾವರಣ ನಿರ್ಮಾಣವಾಗಿದೆ. ಎ.ಪಿ.ಎಂ.ಸಿ.ಗೆ ರೈತ ಮಾಲುಗಳನ್ನು ತೆಗೆದುಕೊಂಡು ಬಂದರೆ, at least ಅಲ್ಲೊಂದು godown ಮಾಡಿ, ರೈತರ ಬಗ್ಗೆ ಕಾಳಜಿಯಿದ್ದರೆ ಶೇಕಡ 75 ರಷ್ಟು ಹಣವನ್ನು ಅಲ್ಲಿಟ್ಟ ಮಾಲಿನ ಮೇಲೆ ಬ್ಯಾಂಕ್ ಲೋನ್ ಕೊಡುವಂಥದ್ದು ಆಗಬೇಕು. ಒಂದು ರಫ್ತು ವಿಭಾಗ ಪ್ರಾರಂಭ ಮಾಡಿ ಅಲ್ಲಿ ಒಂದು export zone ಮಾಡಿ. ರೈತ ಮಾಲು ತೆಗೆದುಕೊಂಡು ಬಂದರೆ at least certify ಮಾಡುವಂತಹದ್ದು, packaging ಮಾಡುವಂಥದ್ದು ಮತ್ತು ಯಾವ ದೇಶದಲ್ಲಿ ಇವನು ತೆಗೆದುಕೊಂಡ ಬಂದ ಮಾಲಿಗೆ ಏನು ಬೆಲೆಯಿದೆ ಆ ಎಲ್ಲಾ ಮಾಹಿತಿಗಳು ರೈತನಿಗೆ ಎ.ಪಿ.ಎಂ.ಸಿ. ಒಳಗೆ ಎಲ್ಲಾ ಮಾಹಿತಿ ಸಿಗುವ ರೀತಿಯಲ್ಲಿ ಆಗಬೇಕು.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್ (ಗಣಿ ಮತ್ತು ಭೂ ವಿಜ್ಞಾನ ಸಚಿವರು):–** ಅಷ್ಟೊಂದು ಹಂದಿಗಳು ಈಗ ಬಂದಿದೆಯೇ?

**ಶ್ರೀ ಆರ್. ಬಿ. ತಿಮ್ಮಾಪುರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ ಹಿಂದೆ ಏನಾಯಿತು, ಮುಂದೇನಾಯಿತು ಎನ್ನುವುದಲ್ಲ. ಈಗ ತಾವೇನೂ ಮಾಡುತ್ತೀರಾ ಎಂಬುದರ ಬಗ್ಗೆ ಹೇಳಿ. ನಾವಂತೂ ಮಾಡಿದ್ದೇವೆಯೋ, ಇಲ್ಲವೋ ಎಂಬುದು ಬೇರೆ ಇಲ್ಲಿಯವರೆಗೆ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಈಗ ಇದ್ದಾರೆ. ಸ್ವಲ್ಪ ಸಮಾಧಾನವಾಗಿರಿ. ಅವರಿಗೆ ಯೋಚನೆಗಳಿವೆ. ಅವರು ಏನು ಮಾಡುತ್ತಾರೆಂಬುದರ ಬಗ್ಗೆ ಅವರು ಸ್ವಲ್ಪ ಮಾತನಾಡಲಿ. ದಯವಿಟ್ಟು, ಬ್ಯಾಂಕಿಂಗ್ ವ್ಯವಸ್ಥೆ, packaging ವ್ಯವಸ್ಥೆ ತೆರೆದರೆ, ರೈತಾಪಿ ವರ್ಗದವರಿಗೆ ಬಹಳ ಸಹಾಯವಾಗುತ್ತದೆಂಬ ಮಾತನ್ನು ಹೇಳುತ್ತಿದ್ದೇನೆ. ರಾಜ್ಯಪಾಲರ ಭಾಷಣದಲ್ಲಿ ಉತ್ತರ ಕರ್ನಾಟಕದ ಬಗ್ಗೆ ಎಲ್ಲಿಯೂ ಪ್ರಸ್ತಾಪ ಮಾಡಿಲ್ಲ. ಪ್ರಾದೇಶಿಕ ಅಸಮತೋಲನವನ್ನು ಹೋಗಲಾಡಿಸುವುದಕ್ಕೆ ಇಂತಿಂಥ ಕಾರ್ಯಗಳಿವೆ ಎಂಬುದರ ಬಗ್ಗೆಯೂ ಹೇಳಿಲ್ಲ. ಕುಡಚಿ ಬಾಗಲಕೋಟೆ ಜಿಲ್ಲೆಯ ಬಗ್ಗೆ ಪ್ರಸ್ತಾಪವಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಬಹಳ ಗಲಾಟೆಯಾಗುತ್ತದೆ ಎನ್ನುವ ದೃಷ್ಟಿಯನ್ನಿಟ್ಟು ಸುಮಾರು ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಅದು ಯಾವ ರೀತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

adjustment ಮಾಡಿಕೊಡುತ್ತಾರೆಂಬದು ನನಗಂತೂ ಗೊತ್ತಿಲ್ಲ. ಪ್ರವಾಸಿ ತಾಣಗಳಾದ ವಿಜಯಪುರ, ಬಾದಾಮಿ, ಹಂಪಿ ಬಗ್ಗೆ ಕೂಡ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿಲ್ಲ.

ಮಾನ್ಯ ಸಭಾಪತಿಯವರೇ, ಈ ಶಿಕ್ಷಣ ವ್ಯವಸ್ಥೆಯಲ್ಲಿ ನಾನಂತೂ ಕಂಡ ಹಾಗೇ ಶ್ರೀಮಂತರ ಮಕ್ಕಳ ಇಂಗ್ಲಿಷ್ ಶಾಲೆ ಕಲಿಯುವುದು ಬಡವರ ಮಕ್ಕಳು ಕನ್ನಡ ಶಾಲೆ ಕಲಿಯವುದು. ಇನ್ನೊಂದು ಶ್ರೀಮಂತ ಮಕ್ಕಳು ಖಾಸಗಿ ಶಾಲೆಯಲ್ಲಿ ಕಲಿಯುವುದು. ಬಡವರ ಮಕ್ಕಳು ಸರ್ಕಾರಿ ಶಾಲೆ ಕಲಿಯುವುದು. ಎಷ್ಟೊಂದು ವ್ಯತ್ಯಾಸಗಳಿವೆಂಬುದನ್ನು ನೋಡಿ. ಇದನ್ನು ಸರಿಪಡಿಸುವಂತಹ ಕೆಲಸವಾಗಬೇಕು. **(ಗೊಂದಲ)** ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ, ದಯವಿಟ್ಟು ಸಮಾಧಾನವಾಗಿರಿ. ಹಿಂದುಳಿದ ಜಾತಿಯವರಿಗೆ ಇಷ್ಟು ಪರ್ಸೆಂಟ್ ಕೊಡುವಂಥದ್ದರ ಬಗ್ಗೆ ಹೇಳಿದ್ದೇ ಹೇಳಿದ್ದು. Scholarships ಕೊಡುತ್ತೇವೆ, Hostels ತೆರೆಯುತ್ತೇವೆ, Laptops ಕೊಟ್ಟಿದ್ದೇವೆ ಏನೂ ಹೇಳಿದ್ದೇ ಹೇಳಿದ್ದು. ಸರ್ಕಾರದಿಂದ special fund ಆಗಿ ಏನಾದರೂ ತಂದುಕೊಟ್ಟಿದ್ದಾರೋ, ಆ ಜನಾಂಗ ಶೇಕಡ 18 ರಷ್ಟು ಇದೆ. ಆ ಜನಾಂಗದವರಿಗೆ ಖರ್ಚು ಮಾಡುವುದಕ್ಕೆ ಮಾತ್ರ ಸಾಧ್ಯವಿದೆಯೇ ಅಷ್ಟು ಮಾತ್ರ ಹಣವನ್ನು ಮಾತ್ರ ಕೊಟ್ಟಿದ್ದಾರೆ. ಈ ಮಕ್ಕಳಲ್ಲಿ ಜಾತಿ-ಭೇದ, ಬಡವ-ಶ್ರೀಮಂತ ಎನ್ನುವುದನ್ನು ಪ್ರೈಮರಿ ಶಾಲೆಯಲ್ಲಿಯೇ ಕಲಿಸಿದರೆ ಹೇಗೆ? ಜನತೆ ನಾಳೆ ಈ ಮಕ್ಕಳ ಭವಿಷ್ಯದ ಬಗ್ಗೆ ಏನಾದರೂ ಹೇಳಬೇಕೆಂದು ಮಾಡಿದರೆ, **(ಗೊಂದಲ)** ನನ್ನ ಸರ್ಕಾರವಲ್ಲ ನಿಮ್ಮ ಸರ್ಕಾರವಲ್ಲ ಎಂದಲ್ಲ. ಈ ರಾಜ್ಯಪಾಲರ ಭಾಷಣದ ಮೇಲೆಯೇ ಮಾತನಾಡುತ್ತಾ, ವ್ಯವಸ್ಥೆಯ ಬಗ್ಗೆ ಹೇಳುತ್ತಿದ್ದೇನೆ. ಇಲ್ಲ ನೀವು ಬೇಡ ಎಂದರೆ ನಾವು ಬಿಟ್ಟಿದ್ದೇವೆ. ಆದರೆ ದೇಶವನ್ನು ಈ ರಾಜ್ಯವನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತೀರಾ ಹೇಳಿ. ಜಾತಿಯ ವಿಷ ಬೀಜ ಬಿತ್ತಿದರೆ ಹೇಗೆ? merit ಇನ್ನೊಂದು ಅಲ್ಲದೆ ಇನ್ನೊಂದು ಇದೆ. ಹಣ ಇದ್ದವರು donation ಕೊಟ್ಟರೆ merit ಬಂದು ಬಿಡುತ್ತದೆ. ಅಲ್ಲಿ ಬಡವರು ಹಿಂದುಳಿದ ಜಾತಿ ಎಂಬ ಸಂಬಂಧವಿಲ್ಲ. ಹಣವಿದ್ದರೆ ಸಾಕು. ಮೆಡಿಕಲ್ ಕಾಲೇಜಿನಲ್ಲಿ ಸೀಟ್ ಸಿಗುತ್ತದೆ. ಇಂಜಿನೀಯರ್ ಕಾಲೇಜಿನಲ್ಲಿ ಸೀಟ್ ಸಿಗುತ್ತದೆ. ಇದು ಯಾವ merit? ಹಣವಿದ್ದವರಿಗೆ ಮಾತ್ರ merit. Donation ಕೊಟ್ಟವರಿಗೊಂದು merit. ಅಂದರೆ ಮುಂದೆ ಈ ವಿದ್ಯಾರ್ಥಿಗಳು ಏನಾಗುತ್ತಾರೆ? ಹಣ ಇದ್ದವರೇ contractor ಆಗುತ್ತಾನೆ. ಅದೇ ಹಣವಂತ ಆಸ್ಪತ್ರೆಗಳನ್ನು ತೆರೆಯುತ್ತಾನೆ. ಈ ಬಡ ವಿದ್ಯಾರ್ಥಿಗಳು ಹಣವಂತನ ಕೈಕೆಳಗೆ ದುಡಿಯುತ್ತಾರೆ. ಹಣ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದ್ದಂತಹವರು ಮಾತ್ರ ಮಾಡುವುದಕ್ಕೆ ಸಾಧ್ಯ. ಇದು ಎಂತಹ merit ರೀ. ಇದನ್ನು ಕಿತ್ತು ಬಿಸಾಕಿ. ಇವತ್ತು ಖಾಸಗಿ ಸಂಸ್ಥೆಗಳಲ್ಲಿ ಯಾರು ಹಣ ಮಾಡುವುದಕ್ಕೆ ಹೊರಟಿದ್ದಾರೆ. ಅಂತಹವರನ್ನು control ಮಾಡಿ. Yes, ಒಂದನೇ ತರಗತಿಯಿಂದ ಪಿ.ಯುಸಿಯವರೆಗೆ ಸರ್ಕಾರ ಎಲ್ಲಾ ಜಾತಿಯವರೆಗೆ ಹಾಸ್ಟೆಲ್, ಶಿಕ್ಷಣ ಕೊಡುತ್ತೇವೆಂಬುದನ್ನು ಹೇಳಲಿ. ಇಲ್ಲದೇ ಹೋದರೆ, ದಯವಿಟ್ಟು, ಈ ಖಾಸಗಿ ವಿದ್ಯಾ ಸಂಸ್ಥೆಗಳಲ್ಲಿ ನಡೆಯುವಂತಹ ಈ ಅವ್ಯವಹಾರ ಅಂದರೆ ಹಣದ ವ್ಯವಸ್ಥೆ ಇದು ಈ ನಾಡನ್ನು ನಾಚಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎನ್ನುವುದನ್ನು ನಾನು ಹೇಳಲೇಬೇಕಾಗಿದೆ. ಬಡವರಿಗೆ merit ಇಲ್ಲ. ಹಣವಿದ್ದರೆ merit. ಸುಮಾರು 70 ರಿಂದ 80 ಲಕ್ಷ ರೂಪಾಯಿಗಳನ್ನು ನೀಡಿದರೆ ಮೆಡಿಕಲ್ ಸೀಟ್ ಸಿಗುತ್ತದೆ. ಅವನಿಗೆ ಮೆರಿಟ್ ಏನೂ ಬೇಡ.

**ಡಾ॥ ವೈ.ಎ.ನಾರಾಯಣ ಸ್ವಾಮಿ (ಶಿಕ್ಷಕರ ಕ್ಷೇತ್ರ):-** ಈಗ NEET examination ಬಂದಿದೆ. ಮೆಡಿಕಲ್ ಕಾಲೇಜಿನ owner ಗಳ ಮಕ್ಕಳಿಗೂ ಮೆಡಿಕಲ್ ಸೀಟ್ ಕೊಡುವುದಕ್ಕಾಗುವುದಿಲ್ಲ. ಎಲ್ಲಾ NEET ಮುಖಾಂತರವೇ ಬರಬೇಕು.

**ಶ್ರೀ ಆರ್. ಬಿ. ತಿಮ್ಮಾಪುರ:-** ಮಾನ್ಯ ನಾರಾಯಣ ಸ್ವಾಮಿಯವರೇ NEET ನಲ್ಲಿ ಏನೂ ನಡೆಯುತ್ತಿದೆಂಬುದು ನನಗೆ ಗೊತ್ತಿದೆ. NEET ನಲ್ಲಿ ನಡೆದಿದ್ದು ದೊಡ್ಡ merit ಏನಲ್ಲ. ಹಾಗಾದರೆ ಶ್ರೀಮಂತ್ರ ಮಕ್ಕಳು NEET ಪರೀಕ್ಷೆಯಲ್ಲಿ ಏಕೆ ಪಾಸ್ ಆಗಲಿಲ್ಲ? **(ಗೊಂದಲ)** ಗೊತ್ತು ಬಿಡಿ ಸ್ವಾಮಿ ಹಣದ್ದು ಒಂದು merit ಇದೆ. ಆ merit ನ್ನು ತೆಗೆಯಬೇಕೆಂಬುದು ನನ್ನ ವಾದವಿದೆ.

ಮಾನ್ಯ ಸಭಾಪತಿಯವರೇ, ಬಡವರು ಮಕ್ಕಳಿಗೆ ಉದ್ಯೋಗ ಸಿಗುತ್ತದೆಂದು ಸಾಲ ಮಾಡಿ ಶಾಲೆಗೆ ಕಳುಹಿಸುತ್ತಾರೆ. ಬಡವರ ಮಕ್ಕಳಿಗೆ ಎಲ್ಲಿ ಹೋದರೂ ಕೂಡ ಉದ್ಯೋಗ ಸಿಗುತ್ತಿಲ್ಲ. ಆ ಬ್ಯಾಂಕಿನವರು ಅವರ ಮನೆಗೆ ಹೋದರೆ, ಪಾಲಕರು ಮತ್ತು ಅವರ ಮಕ್ಕಳು ಏನು ಹೇಳಬೇಕು. ಬಡವರ ಮಕ್ಕಳಿಗೆ ಉದ್ಯೋಗವಿಲ್ಲ. ಸಾಲವಂತೂ ಆಗಿದೆ. Technical course ಏನಾದರೂ ಕಲಿತರೆ, ಅವರಿಗೆ ನೌಕರಿ ಸಿಗುತ್ತದೆ. ಆ ನೌಕರಿಯಿಂದ ಸಾಲವನ್ನು ತೀರಿಸುತ್ತೇವೆಂಬುದು ಇತ್ತು. ಅವರ ಪಾಡು ಯಾರು ಕೇಳಬೇಕು. ನನಗೆ ಅನಿಸುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಯಾವ ಮಕ್ಕಳು ಪರಿಸ್ಥಿತಿ ಸರಿಯಿಲ್ಲವೋ, ಅಂತಹವರಿಗೆ ನಾವು ಸಾಲ ಬಡ್ಡಿ ತೀರಿಸಿ ಬಿಡುತ್ತೇವೆಯೋ ಎಂಬ ಭಾವನೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇತ್ತು. ಅದು ಇವತ್ತು ಆಗಿಲ್ಲ. ಇವತ್ತಿನ ಯುವಕರು ಉದ್ಯೋಗ ಇರಲಾರದೇ ಬಹುಶಃ ಐದು ಸಾವಿರ ರೂಪಾಯಿ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ಕೊಟ್ಟರೆ ಸಾಕು ಎಂದು ಉದ್ಯೋಗಕ್ಕೆ ಅಲೆದಾಡುತ್ತಿದ್ದಾರೆ. ಇನ್ನೊಂದು ಕಡೆ ನಾವು ರಾಜಕೀಯ ಪುಡಾರಿಗಳು. ನಾವು ಹಳದಿ ಬಣ್ಣದ ಧ್ವಜವನ್ನು ಹಿಡಿದುಕೊಂಡರೆ, ಇನ್ನೊಂದು ಕಡೆ ಕೇಸರಿ ಧ್ವಜನವನ್ನು ಹಿಡಿದುಕೊಳ್ಳುತ್ತೇವೆ. ಎಲ್ಲರೂ ರಾಷ್ಟ್ರ ಧ್ವಜಗಳನ್ನು ಹಿಡಿದುಕೊಳ್ಳುವ ಆ ಕಡೆ ಗಮನಕೊಡಬೇಕೆಂಬ ಮಾತನ್ನು ಹೇಳುತ್ತಿದ್ದೇನೆ.

**ಡಾ॥ ವೈ.ಎ.ನಾರಾಯಣ ಸ್ವಾಮಿ:-** ರಾಷ್ಟ್ರ ಧ್ವಜ ಮತ್ತು ಕೇಸರಿ ಧ್ವಜ ಎರಡೂ ಒಂದೇ. ಬಹಳ ಒಳ್ಳೆಯ ಕಾಲ ಬಂದು ಬಿಟ್ಟಿದೆ.

**ಶ್ರೀ ಆರ್. ಬಿ. ತಿಮ್ಮಾಪುರ:-** ಮಾನ್ಯ ನಾರಾಯಣ ಸ್ವಾಮಿಯವರೇ ಇಡೀ ರಾಜ್ಯದ ಜನತೆ ನೋಡುತ್ತಿದೆ.

**ಡಾ॥ ವೈ.ಎ.ನಾರಾಯಣ ಸ್ವಾಮಿ:-** ಈ ದೇಶದಲ್ಲಿ ಒಳ್ಳೆಯ ಕಾಲ ಬಂತಲ್ಲ ಎಂದು ಬಹಳ ಖುಷಿಯಾಯಿತು.

**ಶ್ರೀ ಆರ್. ಬಿ. ತಿಮ್ಮಾಪೂರ:-** ಕೇಸರಿ ಮತ್ತು ಇನ್ನೊಂದು ಹಸಿರು. ದಯವಿಟ್ಟು, ಈ ಧ್ವಜಗಳನ್ನು ಬಿಡಿಸಿ, ರಾಷ್ಟ್ರ ಧ್ವಜವನ್ನು ಹಿಡಿಯುವ ಕಡೆಗೆ ನೀವು ಹೆಚ್ಚಿನ ಗಮನಕೊಡಬೇಕೆಂದು ಹೇಳುತ್ತಾ, ಮಕ್ಕಳ ಪರಿಸ್ಥಿತಿ ಬಗ್ಗೆ ಹೇಳುವುದಕ್ಕಾಗುವುದಿಲ್ಲ. ಹೆಣ್ಣು-ಮಕ್ಕಳ ಪಾಪ ಏಳು ಮತ್ತು ಎಂಟನೇ ತರಗತಿಯನ್ನು ಕಲಿಯುತ್ತಾರೆ. ವಿದ್ಯಾಭ್ಯಾಸದಲ್ಲಿ ಮುಂದುವರೆಸದೇ ಮನೆಯಲ್ಲಿಯೇ ಇರುತ್ತಾರೆ. ಇಂತಹ ಹೆಣ್ಣು ಮಕ್ಕಳ ಪರಿಸ್ಥಿತಿ ಏನಾದರೂ ಗಮನಿಸಿದ್ದೀರಾ? ಆದ್ದರಿಂದ ಮಕ್ಕಳು ಮತ್ತು ಮಹಿಳೆಯರ ಮೇಲೆ ಆಗುವಂತಹ ದೌರ್ಜನ್ಯವನ್ನು ತಡೆಗಟ್ಟುವುದಕ್ಕೆ ತಾವು ವಿಶೇಷವಾಗಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂಬ ಬಗ್ಗೆ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ದಯವಿಟ್ಟು, ಹೆಚ್ಚಿಗೆ ಜಮೀನುಗಳನ್ನು ಖರೀದಿ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಪ್ರತಿ ತಾಲ್ಲೂಕಿನಲ್ಲಿ ಈ ಫಲಾನುಭವಿಗಳ ಆಯ್ಕೆಯಲ್ಲಿ ದಯಮಾಡಿ ಅಧಿಕಾರೇತರರು Member ಮಾಡುವುದರ ಮೂಲಕ ಆ ಜನಾಂಗದವರಿಗೆ ಇರುವಂತಹ ಏನೂ ಕಾರ್ಯಕ್ರಮಗಳಿವೆ. ಅವರಿಗೆ ಅವುಗಳು ಮುಟ್ಟಿದ್ದಾವೆಯೋ ಅಥವಾ ಇಲ್ಲವೋ ಇಂತಿಂಥ ಕಾರ್ಯಕ್ರಮಗಳಿದೆ ಎನ್ನುವುದರ ಬಗ್ಗೆ ಅರಿವು ಅಧಿಕಾರೇತರನ್ನು Member ಮಾಡಿಸಬೇಕು. ಯಾರು ಅವರ ಪಕ್ಷದವರಿದ್ದಾರೋ ಅವರೇ ಮಾಡಲಿ. ಶಾಸಕ ಅಧ್ಯಕ್ಷರಾಗಿದ್ದರೂ ಆ ಜನಾಂಗದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದಸ್ಯರಾಗುವ ಮೂಲಕ ಮತ್ತು ಆ ಜನಾಂಗಕ್ಕೆ ಸೌಲಭ್ಯಗಳನ್ನು ಸಿಗುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಹಲವಾರು ಕಮಿಷನ್‌ಗಳಾದವು. ಆ ಕಮಿಷನ್‌ಗಳು ಏಕೆ ಎಸ್‌ಸಿ ಕಮಿಷನ್, ಹಿಂದುಳಿದ ಕಮಿಷನ್‌ಗಳಾಗಲೀ, ಸದಾಶಿವ ಕಮಿಷನ್‌ಗಳಾಗಲೀ ಕೊಟ್ಟಂತಹ ವರದಿಗಳನ್ನು yes, ನಾವು ಜಾರಿಗೆ ತರುತ್ತೇವೆ ಅಥವಾ ಇಲ್ಲ, ಈ ಕಮಿಷನ್‌ನ್ನು implement ಮಾಡುತ್ತೇವೆ ಅಥವಾ ಇಲ್ಲ ಎಂದು ಹೇಳುವುದಕ್ಕೆ ಏನಾಗಿದೆ?

<u>**(222)9.3.2020/3.30/ಎಂ.ಎಂ-ಬಿ.ಎನ್.ಎಸ್**</u>

**ಶ್ರೀ ಆರ್.ಬಿ. ತಿಮ್ಮಾಪೂರ (ಮುಂದು)**

Appointment of Commission ನಮ್ಮ ಸರ್ಕಾರ ಇದ್ದಾಗಲೂ ಮಾಡುತ್ತೇವೆ, ಇನ್ನೊಂದು ಸರ್ಕಾರ ಇದ್ದಾಗಲೂ ಆಗುತ್ತದೆ. ಕಮಿಷನ್‌ನ ರಿಪೋರ್ಟ್ ಮಾತ್ರ ಅಲ್ಲಿಗೆ ಬೀಳುತ್ತದೆ. ದಯಮಾಡಿ ಸದಾಶಿವ ಆಯೋಗದಂತಹ ಹಲವಾರು ಕಮಿಷನ್‌ಗಳೇನಿವೆ ಅವುಗಳ ವರದಿಯನ್ನು ಆದಷ್ಟು ಬೇಗ ಇಂಪ್ಲಿಮೆಂಟ್ ಮಾಡುವುದು ಅಥವಾ ತಮ್ಮ ವಿಚಾರಗಳನ್ನು ಹೇಳುವಂತಹ ಕೆಲಸ ಆಗಬೇಕು ಎಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ನೀಡಿದ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರೇ, 10 ನಿಮಿಷ ಟೈಂ ಇದೆಯೇ? ಹಾಗಿದ್ದರೆ ಈಗ ಮಾನ್ಯ ಎಂ. ನಾರಾಯಣಸ್ವಾಮಿಯವರೇ, ತಾವೀಗ ಐದೇ ನಿಮಿಷ ಮಾತನಾಡಿ.

**ಶ್ರೀ ಎಂ.ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ನೀಡಿದ ತಮಗೆ ವಂದಿಸುತ್ತಾ, ಸನ್ಮಾನ್ಯ ರಾಜ್ಯಪಾಲರು ಜಂಟಿ ಅಧಿವೇಶನದಲ್ಲಿ ಮಾಡಿರತಕ್ಕಂತಹ ಭಾಷಣವನ್ನು ಸುಮಾರು 20 ಪುಟಗಳ ಕಿರು ಹೊತ್ತಿಗೆಯ ರೂಪದಲ್ಲಿ ಕೊಟ್ಟಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಧನ್ಯವಾದಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸರ್ಕಾರ ಇದ್ದಾಗ ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಮತ್ತು ಸಮ್ಮಿಶ್ರ ಸರ್ಕಾರ ಇದ್ದಾಗ, ನಮ್ಮ ಸರ್ಕಾರ ಹಮ್ಮಿಕೊಂಡಿದ್ದ ಕಾರ್ಯಕ್ರಮಗಳೇನಿತ್ತು ಆ ಕಾರ್ಯಕ್ರಮಗಳನ್ನು ಮುಂದುವರೆಸಿ ನಮ್ಮ ಸರ್ಕಾರ ಇದೆಲ್ಲವನ್ನೂ ಮಾಡಿದೆ ಎಂದು ರಾಜ್ಯಪಾಲರ ಮಾತಿನಲ್ಲಿ ಹೇಳಿಸಿದ್ದಾರೆ. ನಾವು ಕೆಲಸವನ್ನು ಮಾಡಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಚಾರ ತೆಗೆದುಕೊಳ್ಳುವುದಕ್ಕೆ ನಮ್ಮ ಕೈಯಲ್ಲಿ ಆಗಲಿಲ್ಲ. ಆದರೆ ಇವತ್ತು ರಾಜ್ಯಪಾಲರ ಬಾಯಿಯಲ್ಲಿ ಹೇಳಿಸಿ ಈ ಪುಸ್ತಕವನ್ನು ಹೊರಡಿಸುವ ಮುಖಾಂತರ ನಾವು ಮಾಡಿರುವ ಸಾಧನೆಗಳನ್ನು 'ನಮ್ಮ ಸರ್ಕಾರ ಮಾಡಿದೆ' ಎಂದು ಹೇಳಿರುವುದಕ್ಕೆ ನಿಮಗೆ ಶಹಬ್ಬಾಷ್ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದು ವಿಚಾರವೆಂದರೆ ಈ ಚರ್ಚೆಯನ್ನು ಎಲ್ಲಿಂದ ಪ್ರಾರಂಭ ಮಾಡಬೇಕು, ಏನು ಮಾತನಾಡಬೇಕೆಂದು ನನಗೆ ಅರ್ಥವಾಗುತ್ತಿಲ್ಲ.

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ, ವಿಷಯಕ್ಕೆ ಬನ್ನಿ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಯವರು ಅಧಿಕಾರ ಸ್ವೀಕಾರ ಮಾಡಿದ ಮೇಲೆ ಮಾನ್ಯ ಸದಸ್ಯರಾದ ಆಯನೂರು ಮಂಜುನಾಥರವರು ಬಹಳ ಕಲರ್ ಕೊಟ್ಟು ಮಾತನಾಡಿದರು. ಮಾನ್ಯ ರವಿಕುಮಾರ್‌ರವರು ಕೂಡ ಮಾತನಾಡಿದರು. 'ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯವರಾದ ಮೇಲೆ ಒಬ್ಬರೇ ಇಡೀ ರಾಜ್ಯಾದ್ಯಂತ ಕಾಲಿಗೆ ಚಕ್ರ ಕಟ್ಟಿಕೊಂಡು ಎಲ್ಲಾ ಕಡೆ ಓಡಾಡಿದರು' ಎಂದು ಹೇಳಿದರು. ಸಂತೋಷ, ನಾವು ಅದನ್ನು ಖಂಡಿತವಾಗಿಯೂ ಸ್ವಾಗತ ಮಾಡುತ್ತೇವೆ. ಪಾಪ! ಅವರು ಕಾಲಿಗೆ ಚಕ್ರ ಕಟ್ಟಿಕೊಂಡಿರಲಿಲ್ಲ, ಕಾಲಿಗೆ ಗೆಜ್ಜೆ ಕಟ್ಟಿಕೊಂಡಿದ್ದರು. ಅವರು ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕಾರ ಮಾಡಿದ ಮೇಲೆ ಈ ರಾಜ್ಯದಲ್ಲಿ ಎಂದೂ ಕಂಡರಿಯದಂತಹ ನೆರೆ ಬಂದಿತು. ಮಾನ್ಯ ಯಡಿಯೂರಪ್ಪನವರು ಒಬ್ಬ ಹುಟ್ಟು ಹೋರಾಟಗಾರರು. ರೈತರ ಬಗ್ಗೆ ಕಾಳಜಿ ಇರುವಂತಹವರು, ನಮ್ಮ ರಾಜ್ಯದಲ್ಲಿ ಈ ರೀತಿ ಅನಾಹುತವಾಗಿದೆ, ಏನಾದರೂ ಮಾಡಿ ಈ ಸಮಸ್ಯೆಯನ್ನು ಪರಿಹಾರ ಮಾಡಬೇಕೆನ್ನುವ ಆಸೆಯನ್ನಿಟ್ಟುಕೊಂಡು ಅದನ್ನು ಕಾರ್ಯಗತ ಮಾಡಬೇಕೆಂದು ಹೋದರು. ಆದರೆ ಒಬ್ಬರ ಕೈಯಲ್ಲಿ ಇಷ್ಟು ದೊಡ್ಡ ರಾಜ್ಯದಲ್ಲಿ ಏನು 23 ಜಿಲ್ಲೆಗಳು ಮತ್ತು 103 ತಾಲ್ಲೂಕುಗಳಲ್ಲಿ ನೆರೆ ಬಂದಿತ್ತೋ ಅದಕ್ಕೆ ಸರಿಯಾದ ರೀತಿಯಲ್ಲಿ ಸ್ಪಂದಿಸುವುದಕ್ಕೆ ಅವರಿಂದ ಸಾಧ್ಯವಾಗಲಿಲ್ಲ. ಒಂದು ಸಂಪುಟವನ್ನು ರಚನೆ ಮಾಡಬೇಕೆಂದು ಬಹಳಷ್ಟು ಕಾತುರದಿಂದ ಹೋರಾಟ ಮಾಡಿದರು. ಆದರೆ ಅವರ ಹೈಕಮಾಂಡ್ ಅವರನ್ನು ಯಾವ ರೀತಿ ನಡೆಸಿಕೊಂಡಿತು? ಅವರೊಬ್ಬರೇ ಕಷ್ಟ ಪಟ್ಟು ದುಡಿದರು, ಅವರ ಜೊತೆ ಸಂಪುಟ ಇತ್ತು, ಎಲ್ಲರೂ ಜೊತೆಯಲ್ಲಿ ಹೋಗಿದ್ದಿದ್ದರೆ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಬಹುದಾಗಿತ್ತು. ಸಂಪುಟ ಮಾಡುವುದಕ್ಕೆ ನಾವು ಅವರಿಗೆ ಬೇಡ ಎಂದು ಹೇಳಿದ್ದೇವೇನು? ಆದರೆ ಒಬ್ಬ ವ್ಯಕ್ತಿ ಸರ್ಕಾರವನ್ನು ತೆಗೆದುಕೊಂಡು ಅದರ ಮುಂಚೂಣಿಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವಂತಹವರು ಈ ರಾಜ್ಯಕ್ಕೆ ನೆರೆ ಬಂದಿದೆ, ಏನಾದರೂ ಸಹಕಾರವನ್ನು ಮಾಡಬೇಕೆಂದು ಕಾತುರದಿಂದ ಇದ್ದರೂ ಕೂಡ ಅವರ ಹೈಕಮಾಂಡ್ ಅವರನ್ನು ಯಾವ ರೀತಿ ನಡೆಸಿಕೊಂಡಿತು ಎಂಬುದನ್ನು ತಾವು ಯೋಚನೆ ಮಾಡಬೇಕಾಗುತ್ತದೆ. ಜೊತೆಗೆ ನಾವು ಕಾಂಗ್ರೆಸ್ ಪಕ್ಷದಿಂದ ಕೂಡ ಹಲವಾರು ನಿಯೋಗಗಳನ್ನು ಮಾಡಿ, ಎಲ್ಲಾ ಜಿಲ್ಲೆಗಳಿಗೂ ಭೇಟಿ ಕೊಟ್ಟು ಪರಿಶೀಲನೆ ಮಾಡಿದಾಗ, ಅಂದಾಜು ಸುಮಾರು ಒಂದು ಲಕ್ಷ ಕೋಟಿಗಳಷ್ಟು ಹಾನಿಯಾಗಿದೆ. ಪ್ರಾಮಾಣಿಕವಾಗಿ ಮಾತನಾಡೋಣ. ನಾವು ವಿರೋಧ ಪಕ್ಷದಲ್ಲಿ ಕುಳಿತಿದ್ದೇವೆ, ನೀವು ಮಾಡಿದ್ದೆಲ್ಲವನ್ನೂ ವಿರೋಧ ಮಾಡುವುದು ನಮ್ಮ ಕರ್ತವ್ಯವಲ್ಲ; ನೀವು ಆಡಳಿತ ಪಕ್ಷದಲ್ಲಿ ಕುಳಿತಿದ್ದರೆ ಅದೆಲ್ಲವನ್ನೂ ಸಮರ್ಥನೆ ಮಾಡುವಂತಹದ್ದಲ್ಲ. ನಿಜವಾದ ಜನಪ್ರತಿನಿಧಿಗಳಾದಂತಹ ನಾವುಗಳು ಈ ರಾಜ್ಯದ ಜನ ಏನು ಕಷ್ಟದಲ್ಲಿದ್ದಾರೆ, ಅವರಿಗೆ ಸ್ಪಂದಿಸುವಂತಹ ಕೆಲಸ ಮಾಡಬೇಕು. ಆದರೆ ನಮ್ಮ ಮುಖ್ಯಮಂತ್ರಿಯವರು unofficial ಆಗಿ ಮಾತನಾಡುತ್ತಾ, ಸುಮಾರು 50 ಸಾವಿರ ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆ ಎಂದು ಹೇಳಿದರು. ಅದಾದ ಮೇಲೆ ಅಧಿಕಾರಿಗಳನ್ನು ಕರೆದು ಎಲ್ಲವನ್ನೂ ಚರ್ಚೆ ಮಾಡಿದ ಮೇಲೆ ಸುಮಾರು 35 ಸಾವಿರ ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆಯೆಂದು ಇವರು ಕೇಂದ್ರಕ್ಕೆ ವರದಿಯನ್ನು ಕೊಡುತ್ತಾರೆ. ಆದರೆ ಕೇಂದ್ರದವರು "ಗೋರ್ಕಲ್ಲ ಮೇಲೆ ಮಳೆ ಸುರಿದಂತೆ" ಎಷ್ಟೆಲ್ಲಾ ಕೇಳಿಕೊಂಡರೂ ಕೂಡ ಒಂದು ಬಿಡಿಗಾಸನ್ನೂ ಕೊಡಲಿಲ್ಲ. ನಮ್ಮ ಸರ್ಕಾರ ಇತ್ತು, ಕೇಂದ್ರದಲ್ಲಿ ಯು.ಪಿ.ಎ. ಸರ್ಕಾರ ಇತ್ತು. ಅವತ್ತು ಕೂಡ ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಅವತ್ತು ಕೂಡ ರಾಜ್ಯದಲ್ಲಿ ನೆರೆ ಬಂದಿತ್ತು. ಕೂಡಲೇ ಮುಖ್ಯಮಂತ್ರಿಯವರು ಕೇಳಿದಂತಹ ಮಾತಿಗೆ ಅಂದಿನ ಪ್ರಧಾನ ಮಂತ್ರಿಯವರಾದಂತಹ ಸನ್ಮಾನ್ಯ ಡಾ: ಮನಮೋಹನ್‌ಸಿಂಗ್‌ರವರು ಸ್ಪಂದಿಸಿ ಕೂಡಲೇ ಕರ್ನಾಟಕಕ್ಕೆ ಬಂದರು. ವೈಮಾನಿಕ ಸಮೀಕ್ಷೆಯನ್ನು ಮಾಡಿದರು. ಜೊತೆಯಲ್ಲಿ ಯಡಿಯೂರಪ್ಪನವರನ್ನು ಕೂಡ ಕೂರಿಸಿಕೊಂಡಿದ್ದರು. ಕೂಡಲೇ ಪರಿಹಾರವನ್ನು ಘೋಷಣೆ ಮಾಡಿ ಹೋದರು. ಆದರೆ ಇವತ್ತು ಮಾನ್ಯ ಅಮಿತ್ ಶಾ ರವರು ಬಂದರು. ಅವರು ಕೂಡ ವೈಮಾನಿಕ ಸಮೀಕ್ಷೆಯನ್ನು ಮಾಡಿದರು. ಈ ರಾಜ್ಯದಿಂದ ಆಯ್ಕೆಯಾಗಿರುವ ಆರ್ಥಿಕ ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರು ಕೂಡ ಬಂದರು, ವೈಮಾನಿಕ ಸಮೀಕ್ಷೆಯನ್ನು ಮಾಡಿ ಹೋದರು, ಒಂದು ಬಿಡಿಗಾಸನ್ನೂ ಕೊಡಲಿಲ್ಲ. ಆ ಸಂತ್ರಸ್ತರು ಯಾವ ರೀತಿ ಸಂಕಷ್ಟದಲ್ಲಿದ್ದರು ಎಂದರೆ, ಅವರು ತಮ್ಮ ಮನೆ, ಮಠಗಳು, ಜಾನುವಾರುಗಳು, ಆಸ್ತಿ ಪಾಸ್ತಿಗಳನ್ನೆಲ್ಲಾ ಕಳೆದುಕೊಂಡರು. ಅವರ ಜಮೀನು ಎಲ್ಲಿದೆಯೆಂದು ಗುರುತಿಸುವುದಕ್ಕೆ ಸಹ ಆಗದ ರೀತಿಯಲ್ಲಿ ಎಲ್ಲವನ್ನೂ ಕಳೆದುಕೊಂಡರು. ಆದರೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾರೂ ಕೂಡ ಪರಿಹಾರವಾಗಿ ಅವರಿಗೆ ಒಂದು ರೂಪಾಯಿಯನ್ನೂ ಘೋಷಣೆ ಮಾಡಲಿಲ್ಲ. 60 ದಿನಗಳಾದ ಮೇಲೆ 1200 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಾರೆ. ಇದು ಎಲ್ಲಿಗೆ ಸಾಕಾಗುತ್ತದೆ? ಆದರೆ ಮಾನ್ಯ ಯಡಿಯೂರಪ್ಪನವರನ್ನು ನಿಜವಾಗಿಯೂ ಪಕ್ಷಾತೀತವಾಗಿ ಹೊಗಳುತ್ತೇನೆ. ತುಮಕೂರಿನಲ್ಲಿ ಒಂದು ಸಮಾವೇಶವಾಗುತ್ತದೆ, ಪ್ರಧಾನ ಮಂತ್ರಿಯವರು ಕೂಡ ಅಲ್ಲಿರುತ್ತಾರೆ. ಅವರು ಎಂತಹ ಕೆಚ್ಚೆದೆಯಿಂದ ಮಾತನಾಡುತ್ತಾರೆ ಎಂದರೆ, 'ಎಷ್ಟು ಬಾರಿ ಕೇಂದ್ರ ಸರ್ಕಾರವನ್ನು ಕೇಳಿಕೊಂಡರೂ ಕೂಡ ನಮಗೆ ಪರಿಹಾರ ಕೊಡುವುದಕ್ಕಾಗುತ್ತಿಲ್ಲವೇ' ಎಂದು ಅವರನ್ನು ಕೇಳಿದಂತಹ ಅವರ ಧೈರ್ಯಕ್ಕೆ ಮೆಚ್ಚುತ್ತೇನೆ. ಆದರೆ ಕರ್ನಾಟಕ ರಾಜ್ಯದಿಂದ 25 ಜನ ಬಿ.ಜೆ.ಪಿ. ಎಂ.ಪಿ.ಗಳನ್ನು ಆಯ್ಕೆ ಮಾಡಿ ಕಳುಹಿಸಲಾಗಿದೆಯಲ್ಲಾ, ಕೇಂದ್ರ ಸಚಿವರೂ ಇದ್ದಾರಲ್ಲವೇ ಯಾರಾದರೂ ಒಬ್ಬರು ಪ್ರಧಾನ ಮಂತ್ರಿಯವರ ಹತ್ತಿರ ನಿಂತು ನಮ್ಮ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗಿದೆ, ಈ ರೀತಿ ನೆರೆ ಬಂದಿದೆ, ಜನ ಸಾಯುತ್ತಿದ್ದಾರೆ, ಜಾನುವಾರುಗಳು ಸತ್ತಿವೆ, ಕುಡಿಯುವುದಕ್ಕೆ ನೀರಿಲ್ಲ, ಶಾಲೆ ಇಲ್ಲ, ಮನೆಗಳಿಲ್ಲ, ಅವರಿಗೆ ಪರಿಹಾರ ಕಾರ್ಯಕ್ರಮಗಳಿಗಾಗಿ ಹಣ ಕೊಡಿ ಎಂದು ಯಾರಾದರೂ ಕೇಳಿದ್ದಾರೆಯೇ? ಯಾಕೆ ಆ ಧೈರ್ಯ ಮಾಡಲಿಲ್ಲ? ನಿಜವಾಗಿಯೂ ನಿಮಗೆ ಕಾಳಜಿ ಇದ್ದಿದ್ದರೆ ಮುಖ್ಯಮಂತ್ರಿಗಳಿಗೆ ಶಕ್ತಿ ಕೊಡಬೇಕಾಗಿತ್ತಲ್ಲವೇ? ಯಾರಾದರೂ ಅವರಿಗೆ ಧೈರ್ಯ ತುಂಬುವಂತಹ ಕೆಲಸವನ್ನು ಮಾಡಿದ್ದಾರೆಯೇ? ಇದೆಲ್ಲವೂ ಒಂದು ಕಡೆಯಾದರೆ, ನಾನು ಇಲ್ಲಿ ರಾಜಕೀಯ ಮಾತನಾಡುತ್ತಿಲ್ಲ. ಸತ್ಯವನ್ನು ಮಾತನಾಡುತ್ತಿದ್ದೇನೆ. ಜೊತೆಗೆ ಇದರಲ್ಲಿ 3ನೇ ಪ್ಯಾರಾದಲ್ಲಿ ಹೇಳುತ್ತಾರೆ, 'ನಮ್ಮ ಸರ್ಕಾರವು ತೀವ್ರವಾಗಿ ಹಾನಿಗೊಳಗಾದ ಮನೆಗಳ ಪುನರ್ನಿರ್ಮಾಣಕ್ಕಾಗಿ ತಲಾ ಐದು ಲಕ್ಷ ರೂಪಾಯಿಗಳು, ದುರಸ್ತಿಗಾಗಿ ತಲಾ ಮೂರು ಲಕ್ಷ ರೂಪಾಯಿಗಳು ಹಾಗೂ ಭಾಗಶಃ ಹಾನಿಗೊಳಗಾದ ಮನೆಗಳಿಗೆ ತಲಾ 50 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಘೋಷಣೆ ಮಾಡಿದರು. ಶಹಬ್ಬಾಷ್! ನಾವು ಒಪ್ಪಿಕೊಳ್ಳುತ್ತೇವೆ. ಮಾನ್ಯ ರವಿಕುಮಾರ್‌ರವರು 'ಇತಿಹಾಸದಲ್ಲಿ ಯಾರೂ ಕೂಡ ಕೊಡದೇ ಇರುವಂತಹ ಹಣವನ್ನು ನಾವು ಕೊಟ್ಟಿದ್ದೇವೆ' ಎಂದು ಹೇಳಿದರು. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ, ಕೂರ್ಗ್‌ಗೆ ಇದೇ ರೀತಿ ನೆರೆ ಹಾವಳಿ ಬಂದಂತಹ ಸಂದರ್ಭದಲ್ಲಿ ನಮ್ಮ ಕಾಂಗ್ರೆಸ್ ಸರ್ಕಾರ ಒಂದು ಮನೆಗೆ 9,80,000 ರೂಪಾಯಿಗಳನ್ನು ಕೊಟ್ಟಿರುವಂತಹ ಇತಿಹಾಸ ಇದೆ ಎಂದು ಹೇಳಿದರು. ಇವತ್ತೂ ಕೊಡಿ, ನಾವು ಬೇಡ ಎಂದು ಹೇಳುವುದಿಲ್ಲ; ಐದು ಲಕ್ಷ ರೂಪಾಯಿಗಳನ್ನು ಕೊಡಿ, ನಾವು ಸ್ವಾಗತ ಮಾಡುತ್ತೇವೆ. ಆದರೆ ಮಾನ್ಯ ಮುಖ್ಯಮಂತ್ರಿಯವರೇ, ದಯಮಾಡಿ ಇದನ್ನು ಗಮನಿಸಿ; ನೀವು ಐದು ಲಕ್ಷ ರೂಪಾಯಿಗಳನ್ನು ಘೋಷಣೆ ಮಾಡಿ ಬಂದಿದ್ದೀರಿ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆದರೆ ಇನ್ನೂ ಅಲ್ಲಿ ಸರ್ವೆ ಕೂಡ ಆಗಿಲ್ಲ ಸ್ವಾಮಿ. ಜನ ಸಾಯುತ್ತಿದ್ದಾರೆ. ಅವರಿಗೆ ಒಂದೊಂದು ಲಕ್ಷ ರೂಪಾಯಿ ಬಿಡುಗಡೆ ಮಾಡಿ ಬಂದಿದ್ದೀರಿ ಇನ್ನೂ ಉಳಿದಿರುವಂತಹ ಹಣ ಸೇರಲಿಲ್ಲ. ಸರ್ವೆ ಮಾಡಬೇಕೆಂದರೆ, ಅಧಿಕಾರಿಗಳು ಲಂಚ ಕೇಳುತ್ತಿದ್ದಾರೆ. ಎ, ಬಿ ಮತ್ತು ಸಿ ವರ್ಗ ಎಂದು ತಾವು ಮಾಡಿದ್ದೀರಿ. 'ಸಿ' ವರ್ಗದವರನ್ನು influence ಇತ್ತು ಎಂದರೆ, ಲಂಚ ಕೊಟ್ಟರೆ 'ಎ' ವರ್ಗಕ್ಕೆ ಬದಲಾವಣೆ ಮಾಡುತ್ತಿದ್ದಾರೆ. 'ಎ' ವರ್ಗದಲ್ಲಿರುವವರನ್ನು 'ಸಿ' ವರ್ಗಕ್ಕೆ ಬದಲಾವಣೆ ಮಾಡುತ್ತಿದ್ದಾರೆ. ದಯಮಾಡಿ ಇದರ ಕಡೆ ಸ್ವಲ್ಪ ಕಾಳಜಿ ಕೊಟ್ಟು ಯಾರು ಪ್ರಾಮಾಣಿಕವಾಗಿ;

**ಸಭಾಪತಿಯವರು:–** ಮಾನ್ಯ ಪ್ರಸನ್ನಕುಮಾರ್‌ರವರೇ, ತಾವು ಮಾತನಾಡಿ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಯಾರು ಮನೆಗಳನ್ನು ಕಳೆದುಕೊಂಡು ಸಂತ್ರಸ್ತರಾಗಿದ್ದಾರೋ ಅವರಿಗೆ ಆ ಪರಿಹಾರದ ಮೊತ್ತ ತಲುಪುವಂತಹ ಕೆಲಸ ಆಗಬೇಕೆಂದು ನಿಮ್ಮ ಮೂಲಕ ಸರ್ಕಾರದಲ್ಲಿ ಪ್ರಾಮಾಣಿಕವಾಗಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಒಂದೇ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಏಕೆಂದರೆ, ನಾನು ಬೆಂಗಳೂರನ್ನು ಪ್ರತಿನಿಧಿಸುತ್ತಿರುವುದರಿಂದ ಬೆಂಗಳೂರಿಗೆ ಸಂಬಂಧಪಟ್ಟ ಹಾಗೆ development ಸಲುವಾಗಿ ಸುಮಾರು ಹಣಗಳನ್ನು ಬಿಡುಗಡೆ ಮಾಡಿದ್ದಾರೆ. ಆದರೆ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ಅದನ್ನು ಕೊಟ್ಟು ಟೆಂಡರ್‌ಗಳಿಲ್ಲದೇ, ಕಂಟ್ರಾಕ್ಟರ್ ಆಗಿ ಕೆಲಸ ಮಾಡದ, ಅದರ ಗಂಧ ಗೊತ್ತಿಲ್ಲದಿರುವಂತಹ ಶಾಸಕರ ಅನುಯಾಯಿಗಳನ್ನು ಕರೆದು, ಕರೆದು; "ನೀನು ಎಷ್ಟು ಕೋಟಿ ಕೆಲಸ ಮಾಡುತ್ತೀಯಾ" ಎಂದು ಹೇಳಿ ಸುಮಾರು ಶೇ.15 ರಿಂದ 20ರಷ್ಟು ಲಂಚ ತೆಗೆದುಕೊಂಡು ಟೆಂಡರ್‌ಗಳಿಲ್ಲದೇ ಕೆಲಸ ಕೊಟ್ಟು, ಸಾವಿರಾರು ಕೋಟಿ ರೂಪಾಯಿ ಬಿ.ಬಿ.ಎಂ.ಪಿ. ಗೆ ಏನು ಕೊಡಲಾಗಿದೆಯೋ ಅದು ಇವತ್ತಿನ ದಿವಸ ಹಾಳಾಗಿ ಹೋಗುತ್ತಿದೆ. ಇದು ಯಾರ ಹಣ? ಸಾರ್ವಜನಿಕರ ಹಣ, ಅವರು ತೆರಿಗೆ ಕಟ್ಟಿರುವಂತಹ ಹಣ. ಇವತ್ತು ರಸ್ತೆಗಳಲ್ಲಿ ಕಾಮಗಾರಿ ಏನಾಗುತ್ತಿದೆ ಎಂದು ನೋಡುವವರಿಲ್ಲ. Work Order ಮಾಡುವುದಕ್ಕೆ ಮತ್ತು ಬಿಲ್ ಮಾಡುವುದಕ್ಕೆ ಮಾತ್ರ ಇಂಜಿನಿಯರುಗಳು ಬಹಳ ಮುತುವರ್ಜಿ ವಹಿಸಿ ಬರುತ್ತಾರೆ. ಆದರೆ ಕೆಲಸ ಮಾಡುತ್ತಿರುವ ಕ್ವಾಲಿಟಿಯನ್ನು ಯಾರೂ ನೋಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರೇ, ದಯಮಾಡಿ ಈ ಕಡೆ ಕೂಡ ತಮ್ಮ ಗಮನ ಇರಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(223) 09–03–2020/ 03–40/ ಕೆಹೆಚ್–ಬಿಎನ್‌ಎಸ್**

**ಶ್ರೀ ಎಂ.ನಾರಾಯಣಸ್ವಾಮಿ (ಮುಂದು):–**

ತಾವು ಕೊಡುತ್ತಿರುವಂತಹ ಹಣ ಪೋಲಾಗದೆ ಈ ರಾಜ್ಯದ ಉದ್ಧಾರಕ್ಕಾಗಿ ಸದುಪಯೋಗ ಆಗಲಿ ಎಂದು ನಾನು ಕೇಳಿಕೊಳ್ಳುತ್ತೇನೆ. ನಾನು ಇನ್ನು ಹೆಚ್ಚು ವಿಷಯಗಳ ಬಗ್ಗೆ ಮಾತನಾಡಬೇಕಾಗಿತ್ತು. ಆದರೆ ಸಮಯದ ಅಭಾವದಿಂದ ಮಾತನಾಡುವುದಕ್ಕೆ ಸಾಧ್ಯವಾಗುತ್ತಿಲ್ಲ, ಇನ್ನು ಅನೇಕ ವಿಷಯಗಳ ಬಗ್ಗೆ ಚರ್ಚೆ ಮಾಡಬೇಕೆಂದು ತಯಾರಾಗಿ ಬಂದಿದ್ದೆ. ನಾನು ತಮ್ಮನ್ನು ಹೀಯಾಳಿಸಬೇಕೆಂಬ ಉದ್ದೇಶದಿಂದ ಮಾತನಾಡುತ್ತಿಲ್ಲ. ನಾನು ಸರ್ಕಾರದ ಗಮನವನ್ನು ಸೆಳೆಯಬೇಕೆಂಬ ಉದ್ದೇಶದಿಂದ ಮತ್ತು ಸರ್ಕಾರ ಏನು ಮಾಡಬೇಕಾಗಿದೆಯೋ, ಸರ್ಕಾರ ಎಲ್ಲಿ ಎಡವುತ್ತಿದೆಯೋ ಎಂಬ ಬಗ್ಗೆ ನಾನು ಮಾತನಾಡಬೇಕಾಗಿತ್ತು. ಆದರೆ, ನಮ್ಮ ಸರ್ಕಾರ ಏನೇನು ಕೆಲಸಗಳನ್ನು ಮಾಡಿತ್ತೋ, ಆ ಕೆಲಸಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವುದಕ್ಕೆ ನಾನು ಶಭಾಷ್ ಎಂದು ಹೇಳುತ್ತೇನೆ. ನಾನು ಇನ್ನೊಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಎಂ.ನಾರಾಯಣಸ್ವಾಮಿಯವರೇ ದಯಮಾಡಿ ಕುಳಿತುಕೊಳ್ಳಿ. ಈಗ ಮಾನ್ಯ ಪ್ರಸನ್ನಕುಮಾರ್‌ರವರು ಮಾತನಾಡುತ್ತಾರೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಬಿ.ಪಿ.ಎಲ್. ಕಾರ್ಡ್‌ನ್ನು ಹೊಂದಿರುವಂತಹ ಕುಟುಂಬಗಳಿಗೆ ಒಂದು ತಲೆಗೆ 7 ಕೆ.ಜಿಗಳಂತೆ ಅಕ್ಕಿಯನ್ನು ಉಚಿತವಾಗಿ ವಿತರಿಸಲಾಗುತ್ತಿತ್ತು.

**ಶ್ರೀ ಆರ್.ಪ್ರಸನ್ನಕುಮಾರ್:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಸನ್ನಕುಮಾರ್‌ರವರೇ ಒಂದು ನಿಮಿಷ. ನಾನು ಮಾತನಾಡಿ ಮುಗಿಸುತ್ತೇನೆ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಮ್ಮ ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಕುರಿತಾಗಿ ಮಾನ್ಯ ಸದಸ್ಯರು ಮಾತನಾಡಿದ್ದಾರೆ, . . . ದಯವಿಟ್ಟು, ಇದನ್ನು ಯಾರಿಗೆ ದುಡ್ಡು ಕೊಡುತ್ತಿದ್ದಾರೆ ಎಂದು ನಿರ್ದಿಷ್ಟವಾಗಿ ಅವರು ಹೇಳಬೇಕು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-**ಮಾನ್ಯ ಸಭಾಪತಿಯವರೇ, ಮಾನ್ಯ ವೈ.ಎ.ನಾರಾಯಣಸ್ವಾಮಿ ಯವರೇ ದಯಮಾಡಿ ಸುಮ್ಮನೆ ಕುಳಿತುಕೊಳ್ಳಿ. ತಾವು ಏಕೆ ರಾಜಕೀಯ ವಿಚಾರಗಳನ್ನು ಮಾತನಾಡುತ್ತೀರಿ.

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಶೇಕಡಾ 15 ರಷ್ಟು ಲಂಚ ಯಾರಿಗೆ ಕೊಡುತ್ತಿದ್ದಾರೆಂಬ ಬಗ್ಗೆ ನಿರ್ದಿಷ್ಟವಾಗಿ ಮಾನ್ಯ ಸದಸ್ಯರು ಹೇಳಬೇಕು. . . . ಸುಮ್ಮನೇ ಅವರು ಆರೋಪ ಮಾಡಬಾರದು.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಹೌದು, ನಾನು ನಿರ್ದಿಷ್ಟವಾಗಿಯೇ ಹೇಳುತ್ತಿದ್ದೇನೆ.

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೆ.ಆರ್.ಐ.ಡಿ.ಎಲ್. ಗೆ ತಾವು ಅಧಿಕಾರದಲ್ಲಿ ಇದ್ದಾಗಲೂ ಕೊಡಲಾಗಿದೆ. ಇದರಲ್ಲಿ ಯಾರಿಗೆ ಹಣ ಕೊಟ್ಟಿದ್ದಾರೆಂದು ತಾವು ಹೇಳಬೇಕು?

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಚುನಾವಣೆಗೆ ಯಾರು ನಿಲ್ಲುತ್ತಾರೋ, ಒಬ್ಬೊಬ್ಬರಿಗೆ 700 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದರು.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ದಯವಿಟ್ಟು . . .

**ಸಭಾಪತಿಯವರು:-** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ, ಈಗ ಸಮಯ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಂ.ನಾರಾಯಣಸ್ವಾಮಿಯವರು ಇದರ ಬಗ್ಗೆ ನಿರ್ದಿಷ್ಟವಾಗಿ ತಿಳಿಸಬೇಕು. ಮಾನ್ಯ ಸಭಾಪತಿಯವರೇ, ಇದನ್ನು ಕಡತದಿಂದ ತೆಗೆಸಬೇಕು.

**ಸಭಾಪತಿಯವರು:–** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ, ಅದನ್ನು ನಂತರ ನೋಡುತ್ತೇನೆ.

**ಶ್ರೀ ಆರ್.ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನೆರೆ ಪರಿಸ್ಥಿತಿಯ ಬಗ್ಗೆ ಮಾನ್ಯ ಸದಸ್ಯರುಗಳು ಮತ್ತು ಪ್ರತಿಪಕ್ಷದ ನಾಯಕರು ಸಾಕಷ್ಟು ವಿಚಾರಗಳನ್ನು ಮಾತನಾಡಿದ್ದಾರೆ. ಆ ವಿಚಾರವಾಗಿ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಈಗ ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಸದನದಲ್ಲಿರುವುದರಿಂದ, ನಮ್ಮ ಶಿವಮೊಗ್ಗ ಜಿಲ್ಲೆಯ ಬಗ್ಗೆ ಒಂದೆರಡು ವಿಚಾರಗಳನ್ನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಕೇಂದ್ರ ಸರ್ಕಾರದಲ್ಲಿ ಬಿಜೆಪಿ ಸರ್ಕಾರ ಅಧಿಕಾರವನ್ನು ನಡೆಸುತ್ತಿದೆ. ಹಾಗೆಯೇ, ರಾಜ್ಯದಲ್ಲಿಯೂ ಬಿಜೆಪಿ ಸರ್ಕಾರ ಇದ್ದರೆ ಬಹಳ ದೊಡ್ಡ ಅನುಕೂಲವಾಗುತ್ತದೆ ಮತ್ತು ಕರ್ನಾಟಕ ಜನರಿಗೆ ಲಾಭವಾಗುತ್ತದೆ ಎನ್ನುವ ಉದ್ದೇಶ ಜನರಲ್ಲಿ ಇತ್ತು. ಮಾನ್ಯ ಮುಖ್ಯಮಂತ್ರಿಗಳು ಸಹ ಅದೇ ರೀತಿಯಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಈ ರಾಜ್ಯಕ್ಕೆ 4ನೇ ಬಾರಿಗೆ ಮುಖ್ಯಮಂತ್ರಿಯಾಗಿ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಅಧಿಕಾರವನ್ನು ಸ್ವೀಕರಿಸಿ, ಈ ಜನರಿಗೋಸ್ಕರ ಕೆಲಸಗಳನ್ನು ಮಾಡುತ್ತಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರದಿಂದ ಸ್ಪಂದನೆ ಸಿಗುತ್ತಿಲ್ಲ ಎಂಬ ನೋವು ನಮಗೆ ಇದೆ. ಮತ್ತೊಂದು ವಿಷಯವೇನೆಂದರೆ, ನಮ್ಮ ಜಿಲ್ಲೆಯಲ್ಲಿರುವ ಭದ್ರಾವತಿ ಉಕ್ಕು ಕಾರ್ಖಾನೆ ಮತ್ತು ಕಾಗದ ಕಾರ್ಖಾನೆ, ಈ ಎರಡು ಕಾರ್ಖಾನೆಗಳು ಬಹಳ ವರ್ಷಗಳಿಂದ ಸ್ಥಗಿತಗೊಂಡಿದ್ದು, ಅಲ್ಲಿ 100 ಜನರು ಮಾತ್ರ ಗುತ್ತಿಗೆ ಕೆಲಸವನ್ನು ಮಾಡುತ್ತಿದ್ದಾರೆ. ಅದು ಪೂರ್ಣವಾಗುವ ತನಕ ಯಾರಿಗೂ ಮಾರಾಟ ಮಾಡುವುದಕ್ಕಾಗಲಿ ಏನಾದರೂ ಕೆಲಸ ಮಾಡುವುದಕ್ಕಾಗಲಿ ಆಗುವುದಿಲ್ಲ ಎಂಬ ಕಾರಣಕ್ಕೆ ಕಾಗದ ಕಾರ್ಖಾನೆಯನ್ನು ಹಾಗೆಯೇ ಬಿಟ್ಟಿದ್ದರು. ನಾನು ಈ ಬಾರಿಯ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಕಾರ್ಖಾನೆಗಳಿಗೆ ಪುನಶ್ಚೇತನವನ್ನು ಕೊಡುತ್ತಾರೆ. ಇದ್ದರಿಂದ, ಈ ಕಾರ್ಖಾನೆಗಳು ಅಭಿವೃದ್ಧಿಯಾಗುತ್ತವೆ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳು ತಲೆ ಎತ್ತುತ್ತವೆ ಎಂದು ನಾನು ತಿಳಿದುಕೊಂಡಿದ್ದೆ. ಏಕೋ ಇದರ ಬಗ್ಗೆ ಈ ಬಾರಿಯ ಬಜೆಟ್‌ನಲ್ಲಿ ಗಮನಹರಿಸಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆದ್ದರಿಂದ ಸರ್ಕಾರಕ್ಕೆ ತಮ್ಮ ಮೂಲಕ ಮನವಿ ಮಾಡುವುದೇನೆಂದರೆ, ಮುಂದಿನ ದಿನಗಳಲ್ಲಿ ಆ ಎರಡು ಕಾರ್ಖಾನೆಗಳಿಗೆ ಪುನಶ್ಚೇತನ ಕೊಡುವಂತಹ ಕೆಲಸವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ ತಮ್ಮ ಮೂಲಕ ತಿಳಿಸಲಿಚ್ಛಿಸುತ್ತೇನೆ. ಇದರ ಜೊತೆಗೆ ಮುದ್ರಾಂಕ ಶುಲ್ಕ ಸುಮಾರು 5 ಸಾವಿರ ಕೋಟಿ ರೂಪಾಯಿಗಳಷ್ಟು ಕಡಿಮೆಯಾಗಿದೆ ಎಂದು ಇವತ್ತಿನ ಪತ್ರಿಕೆಗಳಲ್ಲಿ ಬಂದಿರುವುದನ್ನು ನೋಡಿದ್ದೇವೆ. ಆದರೆ, ಇವತ್ತಿನ ದಿವಸ ಸಬ್-ರಿಜಿಸ್ಟ್ರಾರ್ ಕಛೇರಿಗಳು ಯಾವ ಪರಿಸ್ಥಿಯಲ್ಲಿವೆ ಎಂಬ ವಿಚಾರವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಸುಧಾರಿತ ವ್ಯವಸ್ಥೆಗಳನ್ನು ತರುವುದಕ್ಕೆ ಓ.ಟಿ.ಪಿ. ಸಿಸ್ಟಂ ಮಾಡುತ್ತಿದ್ದಾರೆ. ಈ ವ್ಯವಸ್ಥೆಯನ್ನು ಮಾಡುವುದರಲ್ಲಿ ತೊಂದರೆ ಇಲ್ಲ. ಆದರೆ, ಅಲ್ಲಿಯವರೆಗೂ ಈಗಿರುವ ಹಳೆಯ ಪದ್ಧತಿಯ ಪ್ರಕಾರ ಸಬ್-ರಿಜಿಸ್ಟ್ರಾರ್ ಕಛೇರಿಗಳಲ್ಲಿ ರಿಜಿಸ್ಟ್ರೇಷನ್ ಆಗಬೇಕಾಗಿತ್ತು. ಆದರೆ ಇಲ್ಲಿಯವರೆಗೂ ಆ ಕೆಲಸ ಆಗುತ್ತಿಲ್ಲ. ಸುಮಾರು 100 ಜನ ಹೋದರೆ 50-60 ಜನರಿಗೆ ಮಾತ್ರ ರಿಜಿಸ್ಟ್ರೇಷನ್ ಕೆಲಸ ಆಗುತ್ತಿದೆ. ಇನ್ನುಳಿದ 30 ರಿಂದ 40 ಜನರಿಗೆ ರಿಜಿಸ್ಟ್ರೇಷನ್ ಆಗದೇ ಮುಂದಕ್ಕೆ ಹೋಗುತ್ತದೆ. ಇವತ್ತಿನ ದಿವಸ ಸಬ್-ರಿಜಿಸ್ಟ್ರಾರ್ ಕಛೇರಿಗಳು ಯಾವ ರೀತಿಯಲ್ಲಿದೆ ಎಂದರೆ, ವಯಸ್ಸಾದವರು ನಡೆದುಕೊಂಡು ಹೋಗುವಂತಹ ಪರಿಸ್ಥಿತಿ ಇಲ್ಲ. ಎಲ್ಲಾ ಸಬ್-ರಿಜಿಸ್ಟ್ರಾರ್ ಕಛೇರಿಗಳು ಮಹಡಿ ಮೇಲೆ ಇರುವುದರಿಂದ, ಅಲ್ಲಿಗೆ ಒಂದು ಲಿಫ್ಟ್‌ನ ವ್ಯವಸ್ಥೆ ಕೂಡ ಇರುವುದಿಲ್ಲ. ಸರ್ಕಾರಿ ಕಛೇರಿಗಳಲ್ಲಿ ಅಂಗವಿಕಲರು ಯಾರಾದರೂ ಬಂದರೆ ಅವರು ಸರಾಗವಾಗಿ ಆ ಕಛೇರಿಯಲ್ಲಿ ಓಡಾಡಬೇಕೆಂಬ ಉದ್ದೇಶದಿಂದ ಸರ್ಕಾರ ಒಂದು ಕಾನೂನನ್ನು ಮಾಡಿದೆ. ಆದರೆ ಸಬ್-ರಿಜಿಸ್ಟ್ರಾರ್ ಕಛೇರಿಗಳಲ್ಲಿ ಒಂದು ಶೌಚಾಲಯದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಕೂಡ ಇರುವುದಿಲ್ಲ. ಇವತ್ತಿನ ದಿವಸ ಸರ್ಕಾರಕ್ಕೆ ಬರುವ ಆದಾಯದಲ್ಲಿ ಕುಂಠಿತವಾಗುತ್ತಿದೆ. ಅದರ ಬಗ್ಗೆ ಸರ್ಕಾರ ಗಮನ ಹರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ನಾನು ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿ ಬಂದಿರುವುದರಿಂದ, ಗ್ರಾಮ ಪಂಚಾಯಿತಿಗಳಲ್ಲಿ ಪಿ.ಡಿ.ಓ. ಗಳ ಮತ್ತು ಸಿಬ್ಬಂದಿಗಳ ಕೊರತೆ ತುಂಬಾ ಇದೆ ಮತ್ತು ಸಕಾಲ ಯೋಜನೆಯಲ್ಲಿ 100 ಯೋಜನೆಗಳನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಆದರೆ, ಅದನ್ನು ಕೊಡುವುದಕ್ಕೆ ಆಗುತ್ತಿಲ್ಲ. ಇವತ್ತು ಅಲ್ಲಿ ಸರ್ವರ್‌ಗಳು ಸರಿಯಿಲ್ಲ ಮತ್ತು ನೆಟ್‌ವರ್ಕ್‌ಗಳ ತೊಂದರೆ ಬಹಳವಾಗಿರುವುದರಿಂದ, ಇದನ್ನು ನಿಲ್ಲಿಸುತ್ತಿದ್ದಾರೆ. ಇದರಿಂದ ಯಾವ ಕೆಲಸಗಳು ಆಗುತ್ತಿಲ್ಲ. ಆದ್ದರಿಂದ ಇದರ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಮ್ಮ ಶಿವಮೊಗ್ಗದಲ್ಲಿರುವ ಮೆಡಿಕಲ್ ಕಾಲೇಜಿನ ಬಗ್ಗೆ ತುಂಬಾ ಒಳ್ಳೆಯ ಹೆಸರು ಇತ್ತು. ಆದರೆ, ಇವತ್ತಿನ ದಿವಸ ಆ ಮೆಡಿಕಲ್ ಕಾಲೇಜಿನ ಆಡಳಿತ ಮಂಡಳಿ ಸರಿಯಾದ ರೀತಿಯಲ್ಲಿ ನಡೆಸದೇ, ಕಾಲೇಜು ಬಹಳ ಕೆಟ್ಟ ಪರಿಸ್ಥಿತಿಯಲ್ಲಿ ಇದೆ. ಇದರ ಬಗ್ಗೆ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಪರಿಶೀಲನಾ ಸಭೆಯನ್ನು ಮಾಡಿದರು. ಆದರೂ ಸಹ ಇದರ ಬಗ್ಗೆ ಏನು ಉಪಯೋಗಕ್ಕೆ ಬಂದಿಲ್ಲ. ದಯಮಾಡಿ, ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಗಮನವನ್ನು ಹರಿಸಬೇಕು. ಆಡಳಿತ ಮಂಡಳಿಯ ಚುಕ್ಕಾಣಿಯನ್ನು ಹಿಡಿದಿರುವ ಅಧಿಕಾರಿಗಳು ಸರಿಯಾಗಿ ಕೆಲಸ ನಿರ್ವಹಿಸದೇ ಇರುವ ಕಾರಣ ಕಾಲೇಜಿಗೆ ಕೆಟ್ಟ ಹೆಸರು ಬರುತ್ತಿದೆ. ಅದನ್ನು ಸರಿಪಡಿಸುವಂತಹ ಕೆಲಸ ಆಗಬೇಕು. ಅಷ್ಟು ದೊಡ್ಡ ಆಸ್ಪತ್ರೆಯನ್ನು ಇಟ್ಟುಕೊಂಡು ವಿಶೇಷವಾಗಿ ಕ್ಯಾನ್ಸರ್ ಮತ್ತು ಹಾರ್ಟ್ ಪ್ರಾಬ್ಲಂಗೆ ಯಾವುದೇ ರೀತಿಯ ಚಿಕಿತ್ಸೆ ಸಿಗುತ್ತಿಲ್ಲ ಮತ್ತು ಸರಿಯಾದ ಔಷಧಿಗಳು ಇಲ್ಲದೇ ಇರುವುದರಿಂದ ತುಂಬಾ ತೊಂದರೆಯಾಗುತ್ತದೆ. ಆ ಕಡೆ ಇನ್ನು ಮಾನ್ಯ ಮುಖ್ಯಮಂತ್ರಿಗಳು ಭೇಟಿ ಕೊಟ್ಟಿಲ್ಲ. ಇಲ್ಲದಿದ್ದರೆ ಅವರು ಬಿಡುತ್ತಿರಲಿಲ್ಲ. ಇಷ್ಟು ಹೊತ್ತಿಗೆ ಮಾನ್ಯ ಮುಖ್ಯಮಂತ್ರಿಗಳು ಭೇಟಿ ಕೊಟ್ಟು ಕೆಲಸಗಳನ್ನು ಮಾಡುತ್ತಿದ್ದರು. ಆದರೆ, ಮಾನ್ಯ ಮುಖ್ಯಮಂತ್ರಿಗಳು ಭೇಟಿ ಕೊಟ್ಟಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಗಮನವನ್ನು ಹರಿಸಬೇಕೆಂದು ಹೇಳುತ್ತಾ, ಅದರಲ್ಲೂ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇದ್ದಾಗ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ತಿಳಿಸುತ್ತಾ, ನಾನು ನೇರವಾಗಿ ಎರಡು ಅಂಶಗಳ ಬಗ್ಗೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈ ರಾಜ್ಯದಲ್ಲಿರುವ ಬರ ಮತ್ತು ನೆರೆ ಸಮಸ್ಯೆಯ ಬಗ್ಗೆ ಸಾಕಷ್ಟು ಮಾನ್ಯ ಹಿರಿಯ ಸದಸ್ಯರುಗಳು ಚರ್ಚೆ ಮಾಡಿದ್ದಾರೆ. ನಾನು ಹೇಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಸದನದಲ್ಲಿ ಇರುವುದರಿಂದ, ಜಿಎಸ್‌ಟಿ ಆ್ಯಕ್ಟ್ ಪ್ರಕಾರ ಈಗಾಗಲೇ ನಮ್ಮ ಕರ್ನಾಟಕ ರಾಜ್ಯಕ್ಕೆ ಬರಬೇಕಾದ ಪರಿಹಾರದ ಮೊತ್ತ ಎಂಟು ಸಾವಿರ ಕೋಟಿ ರೂಪಾಯಿಗಳು ಬಾಕಿ ಇದೆ. ಈ ಮೊತ್ತವನ್ನು ಇನ್ನು ಕೇಂದ್ರ ಸರ್ಕಾರ ಕೊಟ್ಟಿರುವುದಿಲ್ಲ.

ಎರಡನೆಯದು, 15ನೇ ಆರ್ಥಿಕ ಆಯೋಗದಿಂದ ನಮ್ಮ ರಾಜ್ಯಕ್ಕೆ 10 ರಿಂದ 11 ಸಾವಿರ ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತಿದ್ದು, ಆರ್ಥಿಕ ಆಯೋಗದಿಂದ ಬರಬೇಕಾದ ಪಾಲು ನಮಗೆ ಬರುತ್ತಿಲ್ಲ. ಮೊನ್ನೆಯ ದಿವಸ ಬೆಂಗಳೂರು ನಗರಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕು ಎಂದು ಪ್ರಸ್ತಾಪ ಮಾಡಿದ್ದೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನಮ್ಮ ಕರ್ನಾಟಕ ರಾಜ್ಯದಲ್ಲಿ ಪೊಲೀಸ್ ಇಲಾಖೆಯ ಬಗ್ಗೆ ಸಾಕಷ್ಟು ಗೌರವ ಇದೆ. ನಮ್ಮ ಕೆಲವು ಟ್ರಾಫಿಕ್ ಪೊಲೀಸ್‌ನವರು ಅಚಾತುರ್ಯದಿಂದ ಟ್ರಾಫಿಕ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಇದರ ಬಗ್ಗೆ ತಮ್ಮ ಗಮನಕ್ಕೂ ಸಹ ಬಂದಿದೆ ಎಂದು ತಿಳಿದಿದ್ದೇನೆ. ನಾನು ಹಿಂದಿನ ದಿವಸ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಅದರ ಮರು ದಿವಸವೇ ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ವಾಹನದಲ್ಲಿ ಹೋಗುವಂಥವರು ಹೆಲ್ಮೆಟ್ ಧರಿಸಿಲ್ಲ ಎಂದು ಟ್ರಾಫಿಕ್ ಪೊಲೀಸ್‌ನವರು ಕೂಡಲೇ ಆ ವಾಹನಕ್ಕೆ ಅಡ್ಡ ಹೋಗಿದ್ದ ಪರಿಣಾಮ ವಾಹನ ಸವಾರರು ಅಲ್ಲಿಯೇ ಇಬ್ಬರೂ ಬಿದ್ದು ಮರಣ ಹೊಂದಿರುವಂತಹದ್ದನ್ನು ನಾವೆಲ್ಲಾ ನೋಡಿದ್ದೇವೆ. ಅದೇ ರೀತಿ ನಮ್ಮ ಬೆಂಗಳೂರು ನಗರದಲ್ಲಿ ವಿಶೇಷವಾಗಿ ಟ್ರಾಫಿಕ್ ಪೊಲೀಸ್‌ನವರು ಎಲ್ಲಿ ನಿಂತಿರುತ್ತಾರೆ ಎಂಬುದೇ ಗೊತ್ತಾಗುವುದಿಲ್ಲ. ನಮ್ಮಲ್ಲಿ ಸಾಕಷ್ಟು equipments ಇದೆ. ಬೈಕ್‌ನಲ್ಲಿ ಹೋಗುವವರು ಅಚಾತುರ್ಯದಿಂದ ವರ್ತಿಸಿದರೆ, ಟ್ರಾಫಿಕ್ ಪೊಲೀಸ್‌ನವರಿಗೆ ಸರ್ಕಾರ ಅದರ ಕಡೆಗೆ ಗಮನಹರಿಸುವುದಕ್ಕೆ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಎಲ್ಲಾ ಸೌಲಭ್ಯಗಳನ್ನು ಒದಗಿಸಿದ್ದರೂ ಕೂಡ ಪೊಲೀಸ್ ಇಲಾಖೆಯವರು ಯಾರೋ ಬೈಕಿನಲ್ಲಿ ಹೋಗುತ್ತಿದ್ದರೆ, ಅವರು ಕಾನೂನನ್ನು ಸರಿಯಾಗಿ ಪಾಲನೆ ಮಾಡದೇ ಹೋದರೆ, ಅವರು ಹೋಗುತ್ತಿರುವ ವಾಹನದ ನಂಬರ್ ಇರುತ್ತದೆ. ಆ ನಂಬರ್‌ನ್ನು ತೆಗೆದುಕೊಂಡು ಅವರ ಮನೆಗೆ ನೋಟಿಸ್ ಕೊಡುವಂತಹದ್ದನ್ನು ಮತ್ತು ಪ್ರಕರಣವನ್ನು ದಾಖಲಿಸುವಂತಹದ್ದನ್ನು ಮಾಡಬಹುದು. ಆದರೆ, ಟ್ರಾಫಿಕ್ ಪೊಲೀಸಿನವರು ಎಲ್ಲೋ ಒಂದು ಕಡೆ ನಿಂತು ಕೊಂಡಿರುತ್ತಾರೆ. ಬೈಕ್ ಅಥವಾ ಕಾರಿನ ಸವಾರರು ಹೋಗುತ್ತಿರುವಾಗ ಟ್ರಾಫಿಕ್ ಪೊಲೀಸಿನವರು ಅಕಸ್ಮಾತಾಗಿ ಓಡಿ ಬರುತ್ತಾರೆ. ಈ ಸಂದರ್ಭದಲ್ಲಿ ಅನಾಹುತಗಳು ಸಂಭವಿಸುತ್ತವೆ. ಯಲಹಂಕ ಸರ್ಕಲ್‌ನಲ್ಲಿ ನನ್ನ ಕಣ್ಣ ಮುಂದೆ ನಡೆದಿರುವಂತಹದ್ದನ್ನು ನಾನು ಅಲ್ಲಿನ D.C.P. (Deputy Commissioner of Police) ಯವರಿಗೂ ಫೋನ್ ಮಾಡಿ ಹೇಳಿದ್ದೇನೆ. ನಾವು ಸಿಗ್ನಲ್‌ನಲ್ಲಿದ್ದಾಗ, ನನ್ನ ವಾಹನದ ಮುಂದೆ ಒಂದು ಬೈಕ್ ಇತ್ತು, ಆ ಟ್ರಾಫಿಕ್ ಪೊಲೀಸ್ ಎಲ್ಲಿದ್ದನೋ ಎಂಬುದೇ ಗೊತ್ತಿಲ್ಲ. ಓಡಿ ಬಂದು ಕುತ್ತಿಗೆ ಪಟ್ಟಿಗೆ ಕೈ ಹಾಕಿ ದಬ್ಬಿರುವಂತಹದ್ದನ್ನು ನನ್ನ ಕಣ್ಣ ಮುಂದೆ ನಡೆದಿದೆ. ನಾನು ದೂರವಾಣಿ ಕರೆಯನ್ನು ಮಾಡಿ ಅಲ್ಲಿನ D.C.P. ಆದ ಸಾರಾ ಫಾತಿಮಾ ರವರಿಗೆ ಹೇಳಿದ್ದೇನೆ. ಅವರು ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳುತ್ತೇನೆ ಎಂದು ಹೇಳಿದ್ದರು.

**ಸಭಾಪತಿಯವರು:–** ಮಾನ್ಯ ಹೆಚ್.ಎಂ. ರಮೇಶಗೌಡರವರೇ ಮಾತನಾಡುವುದನ್ನು ಬೇಗ ಮುಗಿಸಿ. ಈಗ ಮಾನ್ಯ ಮುಖ್ಯಮಂತ್ರಿಯವರು ಮಾತನಾಡುತ್ತಾರೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಮಾನ್ಯ ಸಭಾಪತಿಯವರೇ, ನಾನು ಈ ರೀತಿಯ ಉದಾಹರಣೆಯನ್ನು ಕೊಡುತ್ತಿದ್ದೇನೆ. ಬೆಂಗಳೂರು ನಗರದಲ್ಲಿ ಈ ರೀತಿ ಸಾಕಷ್ಟು ಅಚಾತುರ್ಯ ನಡೆಯುತ್ತಿರುವ ಬಗ್ಗೆ ಮತ್ತು ಟ್ರಾಫಿಕ್ ಪೋಲೀಸಿನವರು ವಾಹನಕ್ಕೆ ಆಕಸ್ಮಾತಾಗಿ ಓಡಿ ಬಂದು ಅಡ್ಡ ಹಾಕುವುದನ್ನು ಬಿಡಬೇಕೆನ್ನುವ ವಿಚಾರವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ತಿಳಿಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**(224) 09/03/2020/3:50/ಎಸ್‌ಪಿಆರ್/ಕೆಎಸ್**

**ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದಂತೆ, ರಾಜ್ಯದಲ್ಲಿ ಸುಸ್ಥಿರ ಅಭಿವೃದ್ಧಿ ನಮ್ಮ ಸರ್ಕಾರದ ಆದ್ಯತೆಯಾಗಿದೆ. ಈ ಸದನದ ಗೌರವಾನ್ವಿತ ಸದಸ್ಯರುಗಳಾದ ಶ್ರೀ ಎಸ್.ಆರ್.ಪಾಟೀಲ್‌ರವರನ್ನೂ ಸೇರಿ ಸುಮಾರು 14-15 ಸದಸ್ಯರು ರಾಜ್ಯಪಾಲರ ಭಾಷಣದ ಮೇಲೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತೂ ಸರ್ಕಾರಕ್ಕೆ ಮಾರ್ಗದರ್ಶನವನ್ನು ಮಾಡಿದ್ದಾರೆ. ನಾನು ಅಧಿಕಾರಕ್ಕೆ ಬಂದು ಕೇವಲ ಏಳು ತಿಂಗಳುಗಳು ಮುಗಿಯುತ್ತಿದೆ ಅಷ್ಟೇ. ನನಗೆ ಸ್ವಲ್ಪ ಕಾಲಾವಕಾಶವನ್ನು ನೀಡಿ. ಮಾನ್ಯ ಸದಸ್ಯರುಗಳು ನೀಡಿರುವ ಸಲಹೆಗಳನ್ನು ಮತ್ತು ವ್ಯಕ್ತಪಡಿಸಿರುವ ಅಪೇಕ್ಷೆಗಳನ್ನು ಹಣಕಾಸಿನ ಇತಿಮಿತಿಯಲ್ಲಿ ಕಾರ್ಯರೂಪಕ್ಕೆ ತರುವುದಕ್ಕೆ ನನ್ನ ಶಕ್ತಿ ಮೀರಿ, ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ ಎನ್ನುವ ಭರವಸೆಯನ್ನು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಮತ್ತು ಶ್ರೀ ಎಸ್.ಆರ್.ಪಾಟೀಲ್‌ರವರನ್ನೂ ಒಳಗೊಂಡಂತೆ ಈ ಸದನದ ಎಲ್ಲಾ ಸದಸ್ಯರುಗಳಿಗೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ಹರ್ಷವನ್ನು ವ್ಯಕ್ತಪಡಿಸಿದರು)**

ನಾನು ನೀರಾವರಿ ಯೋಜನೆಗಳಿಗೆ ಹೆಚ್ಚು ಆದ್ಯತೆಯನ್ನು ನೀಡಿದ್ದೇನೆ. ಈ ನಾಡಿಗೆ ಅನ್ನವನ್ನು ನೀಡುವ ಅನ್ನದಾತ ರೈತನು ನೆಮ್ಮದಿ, ಗೌರವ ಹಾಗೂ ಸ್ವಾಭಿಮಾನಗಳಿಂದ ಬಾಳಿ ಬದುಕ ಬೇಕೆಂದರೆ, ಅವನ ಹೊಲಕ್ಕೆ ನೀರನ್ನು ಕೊಡಬೇಕು. ಅವನು ಬೆಳೆದ ಬೆಳೆಗಳಿಗೆ ವೈಜ್ಞಾನಿಕ ಬೆಲೆಯನ್ನು ನೀಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದು ನಮ್ಮ ಆದ್ಯತೆಯಾಗಿದೆ. ತಮ್ಮೆಲ್ಲರ ಸಹಕಾರದಿಂದ ಹಾಗೂ ಎಲ್ಲಾ ಸದಸ್ಯರ ಅಪೇಕ್ಷೆಯಂತೆ ಭಾರತದ ಸರ್ವೋಚ್ಚ ನ್ಯಾಯಾಲಯವು ನಮ್ಮ ಸರ್ಕಾರಕ್ಕೆ ಹಾಗೂ ಜನತೆಗೆ ಮಹಾದಾಯಿ ವಿಚಾರದಲ್ಲಿ ನಮ್ಮ ಪರವಾಗಿ ನೀಡಿದ ತೀರ್ಪನ್ನು ಅಧಿಸೂಚನೆಗೊಳಿಸುವುದಕ್ಕೆ ಕೇಂದ್ರ ಸರ್ಕಾರಕ್ಕೆ ಸೂಚನೆಯನ್ನು ನೀಡಿದೆ. ಅದರನ್ವಯ ಕೇಂದ್ರ ಸರ್ಕಾರವು ಮಹಾದಾಯಿ ವಿಚಾರದಲ್ಲಿ ಅಧಿಸೂಚನೆಯನ್ನು ಹೊರಡಿಸಿದೆ. ಈ ವಿಚಾರದಲ್ಲಿ ನಾನು ಸುಮಾರು ಐದು ನೂರು ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ಹರ್ಷವನ್ನು ವ್ಯಕ್ತಪಡಿಸಿದರು)**

ಪರಿಸರ ಇಲಾಖೆಯಿಂದ ನಿರಾಪೇಕ್ಷಣಾ ಪತ್ರ ಮತ್ತಿತರೆ ಔಪಚಾರಿಕತೆಗಳನ್ನು ಪೂರ್ಣಗೊಳಿಸಿ, ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಯೋಜನೆಯ ಕೆಲಸಗಳನ್ನು ಪ್ರಾರಂಭಿಸುವ ಭರವಸೆಯನ್ನು ನಾನು ಈ ಸದನದಲ್ಲಿ ಮಾನ್ಯ ಸದಸ್ಯರುಗಳಿಗೆ ಕೊಡುವುದಕ್ಕೆ ಇಚ್ಛಿಸುತ್ತೇನೆ. ಅದೇ ರೀತಿಯಾಗಿ ಎತ್ತಿನ ಹೊಳೆ ಯೋಜನೆಗೂ ಸಹ ನಾನು ಒಂದೂವರೆ ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ಹರ್ಷವನ್ನು ವ್ಯಕ್ತಪಡಿಸಿದರು)**

ಶ್ರೀ ಎಸ್.ಆರ್.ಪಾಟೀಲ್‌ರವರು ಕೃಷ್ಣಾ ಮೇಲ್ದಂಡೆ ಯೋಜನೆಗೆ ಪ್ರತಿವರ್ಷ 25 ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಟ್ಟು, ಮುಂದಿನ ಮೂರು ವರ್ಷಗಳಲ್ಲಿ ಯೋಜನೆಯನ್ನು ಪೂರ್ಣಗೊಳಿಸಬೇಕೆಂಬ ಸಲಹೆಯನ್ನು ನೀಡಿದ್ದಾರೆ. ಹಿರಿಯ ಸದಸ್ಯರಾದ ಅವರು ನೀಡಿರುವ ಸಲಹೆಯನ್ನು ನಾನು ಸ್ವೀಕರಿಸುತ್ತೇನೆ. ಹಣಕಾಸಿನ ಇತಿಮಿತಿಯಲ್ಲಿ ಕೇಂದ್ರ ಸರ್ಕಾರದ ಸಹಕಾರವನ್ನು ಪಡೆದುಕೊಂಡು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡದಿದ್ದರೂ ಸಹ ನಾನು ಈಗಾಗಲೇ ಈ ಯೋಜನೆಯ ಅನುಷ್ಠಾನ ಕುರಿತಾಗಿ ಹಣಕಾಸು ಇಲಾಖೆಯ ಜೊತೆಗೆ ಸಮಾಲೋಚನೆ ಮಾಡಿ, ಸುಮಾರು ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಟ್ಟು, ಸದರಿ ಯೋಜನೆಗೆ ಆದ್ಯತೆಯನ್ನು ನೀಡಿದ್ದೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ಹರ್ಷವನ್ನು ವ್ಯಕ್ತಪಡಿಸಿದರು)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕಳೆದ ಐದು ವರ್ಷಗಳ ಅವಧಿಯಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರದಲ್ಲಿತ್ತು ಹಾಗೂ ಒಂದೂವರೆ ವರ್ಷ ಕಾಂಗ್ರೆಸ್ ಮತ್ತು ಜೆ.ಡಿ(ಎಸ್) ಪಕ್ಷಗಳ ಮೈತ್ರಿ ಸರ್ಕಾರವು ಅಧಿಕಾರದಲ್ಲಿತ್ತು. ಆ ಸಮಯದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಏಕೆ ಆದ್ಯತೆಯನ್ನು ನೀಡಿಲ್ಲವೆಂದು ಶ್ರೀ ಎಸ್.ಆರ್.ಪಾಟೀಲ್‌ರಂತಹ ಹಿರಿಯರು ಹಾಗೂ ಉತ್ತರ ಕರ್ನಾಟಕ ಭಾಗದ ಮುಖಂಡರುಗಳನ್ನು ನಾನು ಕೇಳುತ್ತೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಿ.ಎಸ್.ಯಡಿಯೂರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕುಳಿತುಕೊಂಡು ನನ್ನ ಮಾತುಗಳನ್ನು ಕೇಳಲಿ. ನಾನು ಹೇಳಲು ಹೊರಟಿರುವುದೇನೆಂದರೆ, ಒಂದು ವೇಳೆ ವಿರೋಧ ಪಕ್ಷದವರು ಅಧಿಕಾರದಲ್ಲಿದ್ದಾಗ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಜಾರಿಗೊಳಿಸಿದ್ದು, ನಾನೇನಾದರೂ ಆ ಯೋಜನೆಯನ್ನು ಸ್ಥಗಿತಗೊಳಿಸಿದ್ದರೆ ಅಥವಾ ಆದ್ಯತೆಯನ್ನು ನೀಡಿಲ್ಲವೆಂದಾದರೆ, ವಿರೋಧ ಪಕ್ಷದ ಸದಸ್ಯರು ಅದನ್ನು ಪ್ರಶ್ನಿಸುವುದಕ್ಕೆ ಸ್ವತಂತ್ರರಾಗಿರುತ್ತಿದ್ದರು ಹಾಗೂ ಅವರು ಪ್ರಶ್ನೆ ಮಾಡಲೇ ಬೇಕಾಗಿತ್ತು. ಆದರೆ ಈ ವಿಚಾರದಲ್ಲಿ ವಿರೋಧ ಪಕ್ಷದವರು ಸರ್ಕಾರವು ಯಾವುದೇ ರೀತಿಯ ಕ್ರಮಗಳನ್ನು ತೆಗೆದುಕೊಳ್ಳದೇ ಇದ್ದರೂ ಈ ರೀತಿಯ ಸಲಹೆಗಳನ್ನು ಕೊಟ್ಟರೆ, ಅದನ್ನು ಹೇಗೆ ಕಾರ್ಯರೂಪಕ್ಕೆ ತರಬೇಕೆನ್ನುವುದು ನನ್ನನ್ನು ಕಾಡುತ್ತಿರುವ ಯಕ್ಷಪ್ರಶ್ನೆಯಾಗಿದೆ. ಇಷ್ಟಾದರೂ ಸಹ ಹಿರಿಯ ಸದಸ್ಯರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಹೇಳಿದಂತೆ, ಕೃಷ್ಣಾ ಮೇಲ್ದಂಡೆ ಯೋಜನೆಯು ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದು, ಇದನ್ನು ಕಾರ್ಯರೂಪಕ್ಕೆ ತರಲೇಬೇಕು. ಈ ನಿಟ್ಟಿನಲ್ಲಿ ಸುಮಾರು 20 ಹಳ್ಳಿಗಳನ್ನು ಸ್ಥಳಾಂತರಿಸಬೇಕು. ಆ ಜನರಿಗೆ ಬೇರೆ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಡಬೇಕು. ಈ ವಿಚಾರದಲ್ಲಿ ನಾನು ವಿಶೇಷ ಒತ್ತನ್ನು ನೀಡುವ ಭರವಸೆಯನ್ನು ನಮ್ಮೆಲ್ಲಾ ಹಿರಿಯ ಸದಸ್ಯರಿಗೆ ಕೊಡಲಿಚ್ಛಿಸುತ್ತೇನೆ. ಈ ಸದನದ ಎಲ್ಲಾ ಸದಸ್ಯರುಗಳು ಚರ್ಚೆ ಮಾಡಿದಂತೆ, ನಾನು ಅಧಿಕಾರ ವಹಿಸಿಕೊಂಡ ಒಂದು ವಾರದಲ್ಲಿ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಇತ್ತು. ಇದ್ದಕ್ಕಿದ್ದಂತೆ ತೀವ್ರತರವಾದ ಪ್ರವಾಹ ಪರಿಸ್ಥಿತಿ ರಾಜ್ಯದಲ್ಲಿ ಎದುರಾಯಿತು. ಮಾನ್ಯ ಸದಸ್ಯರುಗಳು ಹೇಳುವುದು ನಿಜ. ಆ ಸಂದರ್ಭದಲ್ಲಿ ನನ್ನ ಸರ್ಕಾರದ ಮಂತ್ರಿಮಂಡಲ ವಿಸ್ತರಣೆಯಾಗಿರಲಿಲ್ಲ; ನಾನೊಬ್ಬನೇ ಇದ್ದೆನು. ಆ ಸಮಯದಲ್ಲಿ ಸುಮಾರು ಒಂದು ತಿಂಗಳುಗಳ ಕಾಲ ನಾನು ಪ್ರವಾಹ ಪೀಡಿತ ಪ್ರದೇಶದಲ್ಲಿ ಅಧಿಕಾರಿಗಳ ಸಹಕಾರದಿಂದ, ಅವರುಗಳ ಜೊತೆ ಓಡಾಟ ಮಾಡಿ, ಸಂತ್ರಸ್ತರ ಸಮಸ್ಯೆಗಳಿಗೆ ಸ್ಪಂದಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇನೆ. ಪ್ರಾಯಶಃ ಕಳೆದ 115–118 ವರ್ಷಗಳಲ್ಲಿ ರಾಜ್ಯದಲ್ಲಿ ಈ ರೀತಿಯ ಪ್ರವಾಹ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಪರಿಸ್ಥಿತಿ ಎದುರಾಗಿರಲಿಲ್ಲ. ಅತಿವೃಷ್ಟಿ ನಮಗೆ ಒಂದು ರೀತಿಯ ಅಗ್ನಿ ಪರೀಕ್ಷೆಯಂತಾಯಿತು. ಅಧಿಕಾರಿಗಳ ಸಹಕಾರದಿಂದ ನಾವು ಕೆಲಸಗಳನ್ನು ಕೈಗೊಂಡು ಪರಿಹಾರವನ್ನು ನೀಡಿದ್ದು, ಅದು ದಾಖಲೆಯ ಪ್ರಮಾಣದಲ್ಲಿ ನಾವು ಸಂತ್ರಸ್ತರಿಗೆ ನೀಡಿದ ಪರಿಹಾರವಾಗಿದೆ. ವಿರೋಧ ಪಕ್ಷದ ಸದಸ್ಯರುಗಳು ದೇಶದ ಪ್ರಧಾನ ಮಂತ್ರಿಗಳು ರಾಜ್ಯದಲ್ಲಿ ಪ್ರವಾಹವುಂಟಾದಾಗ, ಬರ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿಲ್ಲ ಎಂಬ ಅಂಶದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಆದರೆ ಕೇಂದ್ರದ ಹಣಕಾಸಿನ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಹಾಗೂ ಕೇಂದ್ರ ಗೃಹ ಮಂತ್ರಿಗಳಾದ ಶ್ರೀ ಅಮಿತ್ ಶಾ ರವರುಗಳು ಬಂದು ವೈಮಾನಿಕ ಸಮೀಕ್ಷೆಯನ್ನು ನಡೆಸಿದ್ದರು. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಾನು ಯಾವುದೇ ಸಂಗತಿಗಳ ಬಗ್ಗೆ ಮುಚ್ಚು ಮರೆ ಮಾಡಿಲ್ಲ; ವಾಸ್ತವಿಕ ಸ್ಥಿತಿಗಳನ್ನು ಅದರಲ್ಲಿ ಹೇಳಿದ್ದೇನೆ. ನಾವು ಅಂದಾಜಿಸಿದಂತೆ, ಪ್ರವಾಹದಿಂದಾಗಿ ಸುಮಾರು 35,160.81 ಕೋಟಿ ರೂಪಾಯಿಗಳು ನಷ್ಟವಾಗಿವೆ. ನಾವು 3,891 ಕೋಟಿ ರೂಪಾಯಿಗಳ ಪರಿಹಾರ ಮೊತ್ತವನ್ನು ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ಇದಕ್ಕೆ ಪ್ರತ್ಯುತ್ತರವಾಗಿ 1,869.85 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರವು ಬಿಡುಗಡೆ ಮಾಡಿದೆ. ಪ್ರವಾಹ ಪೀಡಿತ ಪ್ರದೇಶಗಳಲ್ಲಿನ ಪ್ರಾಥಮಿಕ ವರದಿಯಂತೆ, ಸುಮಾರು 2.47 ಲಕ್ಷದಷ್ಟು ಮನೆಗಳು ಹಾನಿಯಾಗಿವೆ ಎಂದು ಅಂದಾಜಿಸಲಾಗಿದೆ. ವಸತಿ ಇಲಾಖೆಯ ರಾಜೀವ್ ಗಾಂಧಿ ವಸತಿ ನಿಗಮದ ವತಿಯಿಂದ ತಯಾರಿಸಲಾದ ಜಿ.ಪಿ.ಎಸ್. ತಂತ್ರಾಂಶದ ಸಹಾಯದಿಂದ Geotagging ಮೂಲಕ ಸಂಗ್ರಹಿಸಲಾದ ಮಾಹಿತಿಯನ್ವಯ 1,25,795 ಮನೆಗಳು ಹಾನಿಯಾಗಿವೆ. ಎಲ್ಲರಿಗೂ ತಿಳಿದಿರುವಂತೆ, 2009 ನೇ ಇಸವಿಯಲ್ಲಿ ರಾಜ್ಯವು ಅತಿವೃಷ್ಟಿಗೆ ಒಳಗಾದ ಸಂದರ್ಭದಲ್ಲಿ ಪುನರ್ ವಸತಿ ಕೇಂದ್ರಗಳನ್ನು ನಿರ್ಮಿಸಿ, ನವ ನಗರಗಳನ್ನು ನಿರ್ಮಾಣ ಮಾಡಲಾಗಿತ್ತು. ನೆರೆ ಸಂತ್ರಸ್ತರಿಗೆ ಶಾಶ್ವತ ಪರಿಹಾರವನ್ನು ಒದಗಿಸುವ ಪ್ರಯತ್ನಗಳನ್ನು ಮಾಡಲಾಗಿತ್ತು. ಪೂರ್ಣ ಪ್ರಮಾಣದಲ್ಲಿ ಹಾನಿಗೊಂಡ ಮನೆಗಳನ್ನು ಪುನರ್ ನಿರ್ಮಿಸಲು ಈಗ ಒಂದೊಂದು ಮನೆ ಕಟ್ಟುವುದಕ್ಕೆ ಐದು ಲಕ್ಷ ರೂಪಾಯಿಗಳನ್ನು ನಿಗದಿಪಡಿಸಿ, ಆ ಪೈಕಿ ಮನೆಗೆ ಪಾಯ ಹಾಕಲು ಒಂದು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಎರಡನೇಯ ಹಂತದಲ್ಲಿ ಮತ್ತೂ ಒಂದು ಲಕ್ಷ ರೂಪಾಯಿಗಳನ್ನು ನೀಡಲು ಪ್ರಾರಂಭಿಸುತ್ತಿದ್ದೇವೆ. ಭಾಗಶಃ ಮನೆ ಕಳೆದುಕೊಂಡ ಸಂತ್ರಸ್ತರಿಗೆ ಒಂದು ಲಕ್ಷ ರೂಪಾಯಿಗಳ ಪರಿಹಾರ ಮೊತ್ತವನ್ನು ನೀಡಲಾಗುತ್ತಿದೆ. ಮಳೆಯಿಂದ ಹಾನಿಗೊಳಗಾದ ಅಂಗಡಿ, ಮುಗ್ಗಟ್ಟುಗಳಿಗೆ 25 ಸಾವಿರ ರೂಪಾಯಿಗಳ ಪರಿಹಾರವನ್ನು ನೀಡಿದ್ದೇವೆ. ಅದೇ ರೀತಿಯಾಗಿ ಮಗ್ಗಗಳನ್ನು ಕಳೆದುಕೊಂಡವರಿಗೆ 50 ಸಾವಿರ ರೂಪಾಯಿಗಳ ಪರಿಹಾರವನ್ನು ನೀಡಿದ್ದೇವೆ. ಬರ

ಪೀಡಿತದ ಸುತ್ತಮುತ್ತಲಿನ ಅಂಗಡಿ ಮುಗ್ಗಟ್ಟುಗಳು ನಾಶಗೊಂಡಾಗ ಅದಕ್ಕೂ ಸಹ 10–25 ಸಾವಿರ ರೂಪಾಯಿಗಳಷ್ಟು ಪರಿಹಾರವನ್ನು ನೀಡಲಾಗಿದೆ.

ಈ ಸದನದ ಸದಸ್ಯರ ಗಮನಕ್ಕೆ ಒಂದು ಸಂಗತಿಯನ್ನು ತರಲಿಕ್ಕೆ ಇಚ್ಛೆಪಡುತ್ತೇನೆ. ಅದೇನೆಂದರೆ, ಒಣ ಬೇಸಾಯದಲ್ಲಿ ಪ್ರತಿ ಹೆಕ್ಟೇರ್‌ಗೆ 6,500 ರೂಪಾಯಿಗಳನ್ನು, ನೀರಾವರಿ ಬೆಳೆಗಳಿಗೆ 13,200 ರೂಪಾಯಿಗಳನ್ನು ಮತ್ತು ತೋಟಗಾರಿಕೆ ಬೆಳೆಗಳಿಗೆ 18,200 ರೂಪಾಯಿಗಳನ್ನು ಕೇಂದ್ರ ಸರ್ಕಾರವು ನಿಗದಿಪಡಿಸಿದ್ದರೆ, ಈ ದೇಶದಲ್ಲಿಯೇ ಮೊದಲ ಬಾರಿಗೆ ನಮ್ಮ ಸರ್ಕಾರವು ಹತ್ತು ಸಾವಿರ ರೂಪಾಯಿಗಳನ್ನು ಸೇರಿಸಿ ನೀಡಿದೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ಹರ್ಷವನ್ನು ವ್ಯಕ್ತಪಡಿಸಿದರು)**

**(225)/9-3-2020/4-00/ಎಲ್‌ಎಂ/ಕೆಎಸ್**

**ಶ್ರೀ ಬಿ.ಎಸ್.ಯಡಿಯೂರಪ್ಪ**(ಮುಂದು):-

ಇಷ್ಟೊಂದು ಹೆಚ್ಚು ಮಾಡಿ ಬೆಳೆ ಪರಿಹಾರವನ್ನು ದೇಶದ ಇತಿಹಾಸದಲ್ಲಿಯೇ ನಮ್ಮ ಸರ್ಕಾರ ಕೊಟ್ಟಿರುವುದು. ಪ್ರಧಾನ ಮಂತ್ರಿ ಕಿಸಾನ್ ಯೋಜನೆಯಲ್ಲಿ ರಾಜ್ಯ ಸರ್ಕಾರ ಹೆಚ್ಚುವರಿಯಾಗಿ 4,000 ರೂ.ಗಳನ್ನು ಕೊಡುತ್ತಿದೆ. 41 ಲಕ್ಷಕ್ಕಿಂತಲೂ ಹೆಚ್ಚು ಫಲಾನುಭವಿಗಳ ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಮೊದಲನೆ ಕಂತಿನ ಹಣವನ್ನು ಕೊಡಲಾಗಿದೆ. ರಾಜ್ಯದ ಸಹಕಾರಿ ಸಂಸ್ಥೆಗಳ ಮುಖಾಂತರ ಸಾಲ ಪಡೆದು ಸುಸ್ತಿಯಾಗಿರುವ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಮತ್ತು ಕೃಷಿ ಸಲಕರಣೆಗಳಾದ ಟ್ರ್ಯಾಕ್ಟರ್, ಪಂಪ್‌ಸೆಟ್ ಮತ್ತು ಕೃಷಿ ಉಪಕರಣಗಳಿಗಾಗಿ ತೆಗೆದುಕೊಂಡ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿದ್ದೇವೆ. ಈ ಯೋಜನೆಯಿಂದ 92,525 ಜನ ರೈತರಿಗೆ 466 ಕೋಟಿ ರೂ.ಗಳಗಷ್ಟು ಲಾಭವಾಗಿದೆ. ಮುಂದಿನ ದಿನಗಳಲ್ಲಿ ಕೃಷಿ ಮತ್ತು ನೀರಾವರಿ ವಲಯಗಳಿಗೆ ಇನ್ನಷ್ಟು ಪ್ರಾಮುಖ್ಯತೆಯನ್ನು ನೀಡಲಾಗುವುದು. ಕೃಷಿ ವಲಯದ ಅಭಿವೃದ್ಧಿಗೆ ಕೇಂದ್ರ ಸರ್ಕಾರದ ಆಯವ್ಯಯದಲ್ಲಿ ಘೋಷಿಸಿರುವ ಕಾರ್ಯಕ್ರಮಗಳನ್ನು ಸದ್ಬುಪಯೋಗ ಮಾಡಿಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನಿಸುತ್ತೇನೆ. ಮೊದಲ ಬಾರಿಗೆ ಕೇಂದ್ರ ಸರ್ಕಾರ ಕೃಷಿಗೆ 2.83 ಕೋಟಿ ರೂ.ಗಳನ್ನು ಮೀಸಲಿಟ್ಟು ಇತಿಹಾಸವನ್ನು ಸೃಷ್ಟಿ ಮಾಡಿದೆ. ಆಯವ್ಯಯದ 9.5% ರಷ್ಟು ಹಣವನ್ನು ಕೃಷಿಗೆ ಮೀಸಲಿಡಲಾಗಿದೆ. 20

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲಕ್ಷ ಸೌರ ಐಪಿ ಸೆಟ್‌ಗಳನ್ನು ಘೋಷಣೆ ಮಾಡಲಾಗಿದೆ. ದೇಶದ 100 ಜಿಲ್ಲೆಗಳಲ್ಲಿ ಅಂದರೆ ನೀರಿನ ಕ್ಷಾಮವಿರುವ ಕಡೆಗಳಲ್ಲಿ ಅಭಿವೃದ್ಧಿಗೆ ಹಣ ಕೊಡುವುದಾಗಿ ಕೇಂದ್ರ ಸರ್ಕಾರ ಹೇಳಿದೆ.

ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಶಿಕ್ಷಕರಿಗೆ ತರಬೇತಿ, ಶಾಲಾ ಮಕ್ಕಳಿಗೆ ವಿಶೇಷ ತರಬೇತಿ ಹಾಗೂ ಇನ್ನಿತರ ಹಿತಕರವಾದ ವಾತಾವರಣವನ್ನು ಸೃಷ್ಟಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ಶಾಲಾ ಕೊಠಡಿಗಳು, ಶೌಚಾಲಯ ಮತ್ತಿತರ ಮೂಲಸೌಕರ್ಯವನ್ನು ಒದಗಿಸಲು ಒಟ್ಟು 141.81 ಕೋಟಿ ರೂ.ಗಳ ಕಾಮಗಾರಿ ಪ್ರಗತಿಯಲ್ಲಿದೆ. ಲೋಕೋಪಯೋಗಿ ಇಲಾಖೆಯಿಂದ ಹಾನಿಗೆ ಒಳಗಾದ ರಸ್ತೆಗಳ ದುರಸ್ತಿ ಮತ್ತು ಪುನರ್ ನಿರ್ಮಾಣಕ್ಕೆ 500 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಆ ಕಾಮಗಾರಿಯೂ ಪ್ರಗತಿಯಲ್ಲಿದೆ.

ಕೆರೆಗಳ ದುರಸ್ತಿಗಾಗಿ ಸಣ್ಣ ನೀರಾವರಿ ಇಲಾಖೆಯಿಂದ 449.58 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಗ್ರಾಮೀಣ ಪ್ರದೇಶಗಳ ರಸ್ತೆ ದುರಸ್ತಿಗಾಗಿ 447.47 ಕೋಟಿ ರೂ.ಗಳನ್ನು, ಹಾಗೂ ಗ್ರಾಮೀಣ ಕುಡಿಯುವ ನೀರಿನ ಸರಬರಾಜಿಗಾಗಿ, 48.55 ಕೋಟಿ ರೂ.ಗಳ ನೆರವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಬಿಡುಗಡೆ ಮಾಡಿದ್ದೇವೆ.

ವಿದ್ಯುತ್ ಉಪಕರಣಗಳ ದುರಸ್ತಿಗಾಗಿ 201 ಕೋಟಿ ರೂ.ಗಳ ಅನುದಾನ ಸೇರಿ ಎಲ್ಲಾ ಕಾರ್ಯಕ್ರಮಗಳಿಗೆ ಒಟ್ಟು 2,146.66 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿ, ಹಾನಿಗೊಳಗಾದ ಮೂಲಭೂತ ಸೌಲಭ್ಯಗಳನ್ನು ಕೊಡುವುದು ಮತ್ತು ಅವುಗಳನ್ನು ದುರಸ್ತಿ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ನಾನು ದಾವೋಸ್‌ಗೆ ಹೋಗಿ ಬಂದೆ. ಕೃಷಿ ಜೊತೆಗೆ ಕೈಗಾರಿಕೆಗಳು ಬೆಳೆದಾಗ ಮಾತ್ರ ರಾಜ್ಯ ಅಭಿವೃದ್ಧಿಯಾಗುತ್ತದೆ ಎನ್ನುವುದು ನನ್ನ ಅನ್ನಿಸಿಕೆ. ಅದಕ್ಕೆ ತಾವೆಲ್ಲರೂ ಒಪ್ಪಿಗೆಯನ್ನು ಸೂಚಿಸುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ. ಮೊನ್ನೆ ಮಾನ್ಯ ಜಗದೀಶ್ ಶೆಟ್ಟರ್‌ರವರ ನೇತೃತ್ವದಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಬಂಡವಾಳ ಹೂಡಿಕೆ ಸಮಾವೇಶದಲ್ಲಿ ಉತ್ತರ ಕರ್ನಾಟಕದಲ್ಲಿ 70,000 ಕೋಟಿ ರೂ.ಗಳ ಬಂಡವಾಳ ಬರುವಂತೆ ಮಾಡಲಾಗಿದೆ. ಯಾದಗಿರಿ ಜಿಲ್ಲೆಯ ಕೆಡಚೂರ ಕೈಗಾರಿಕಾ ಪಾರ್ಕ್ ಮುಂದಿನ ದಿನಮಾನಗಳಲ್ಲಿ ರಾಜ್ಯದ ಅತಿ ದೊಡ್ಡ ಔಷಧಿ ಮತ್ತು ಆರ್ವತಿ ಸಲಕರಣಾ ಕೇಂದ್ರವಾಗಿ ಪರಿವರ್ತನೆಯಾಗಲಿದೆ. ಇದರಿಂದ ಆ ಭಾಗದ ಯುವಕರಿಗೆ ಕೆಲಸ ಸಿಗುತ್ತದೆ. ಆ ಭಾಗದ ಜನರ ಆರ್ಥಿಕ ಸ್ಥಿತಿ ಸುಧಾರಿಸಲಿದೆ. **"ಹೈದ್ರಾಬಾದ್ ಕರ್ನಾಟಕವನ್ನು ಕಲ್ಯಾಣ ಕರ್ನಾಟಕವೆಂದು"** ನಾಮಕರಣ ಮಾಡಿದ್ದು, ಬರಿ ನಾಮ ಬದಲಾವಣೆಯಲ್ಲ, ಇಲ್ಲಿಗೆ 370 (ಜೆ) ನ್ನು ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಹಾಯವಾಗಲಿದೆ. ಕಲ್ಯಾಣ ಕರ್ನಾಟಕ ಎಂದು ನಾಮಕರಣ ಮಾಡಿರುವುದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜನರಲ್ಲಿ ಹೊಸ ಉಲ್ಲಾಸವನ್ನು ಮೂಡಿಸಿದೆ. ಬೀದರ್‌ನಲ್ಲಿ, ಕಲಬುರ್ಗಿಯಲ್ಲಿ ವಿಮಾನಯಾನ ಪ್ರಾರಂಭವಾಗಿರುವುದರಿಂದ ಅಲ್ಲಿ ಕೈಗಾರಿಕೋದ್ಯಮಗಳು ಬರಲು ಹೆಚ್ಚು ಸಹಕಾರಿಯಾಗುತ್ತದೆ. ಕೇಂದ್ರ ಸರ್ಕಾರದ Suburban Rail Project ಗೆ ಅನುಮೋದನೆ ಕೊಟ್ಟಿದೆ. ಇದು ಬೆಂಗಳೂರಿಗೆ ವರದಾನವಾಗಿದೆ. ಬೆಂಗಳೂರಿನ ಜನದಟ್ಟಣೆ, ವಾಹನ ದಟ್ಟಣೆ ಕಡಿಮೆ ಮಾಡಲು ಇದು ಬಹಳ ಉಪಯೋಗವಾಗುತ್ತದೆ ಎನ್ನುವುದನ್ನು ತಾವು ಒಪ್ಪಿಕೊಳ್ಳುತ್ತಿರಿ ಎಂದು ನಾನು ಅಂದುಕೊಂಡಿದ್ದೇನೆ. ಇದು 18,900 ಕೋಟಿ ಸಾವಿರ ರೂ.ಗಳ ಯೋಜನೆಯಾಗಿದ್ದು ರಾಜ್ಯ ಮತ್ತು ಕೇಂದ್ರ ಸರ್ಕಾರ 20:20 ಅನುಪಾತದಲ್ಲಿ ಬಂಡವಾಳ ಹೂಡಲಾಗುತ್ತದೆ. ಉಳಿದ 60% ಹೂಡಿಕೆದಾರರಿಂದ ಹಣ ಬರಲಿದೆ.

ಇತ್ತೀಚಿನ ದಿನಗಳಲ್ಲಿ ಬೆಂಗಳೂರಿನ 10 ಸಾವಿರ ಮನೆಗಳಿಗೆ ಹಕ್ಕು ಪತ್ರವನ್ನು ಕೊಡಲಾಗಿದೆ. ನಿನ್ನೆ ವಸತಿ ಸಚಿವರಾದ ಮಾನ್ಯ ವಿ.ಸೋಮಣ್ಣನವರ ನೇತೃತ್ವದಲ್ಲಿ 90.000 ಮನೆಗಳನ್ನು ಕಟ್ಟಬೇಕೆಂದು ಶಂಕುಸ್ಥಾಪನೆ ಮಾಡಲಾಗಿದೆ. 1 ಲಕ್ಷ ಮನೆಗಳನ್ನು ಕಟ್ಟಬೇಕು ಎನ್ನುವ ಪ್ರಯತ್ನ ಮಾಡುತ್ತಿದ್ದೇವೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳೆ 90,000 ಮನೆಗಳಿಗೆ ಶಂಕುಸ್ಥಾಪನೆ ಮಾಡಿರುವುದಿಲ್ಲ. ನಿನ್ನೆ ನಾನು ಆ ಕಾರ್ಯಕ್ರಮದಲ್ಲಿ ಇದ್ದೆ. 900 ಮನೆಗಳನ್ನು ಕಟ್ಟಲು ಶಂಕುಸ್ಥಾಪನೆ ಮಾಡಲಾಗಿದೆ.

**ಶ್ರೀ ಬಿ.ಎಸ್.ಯಡಿಯೂರಪ್ಪ:–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿ. 900 ಮನೆಗಳನ್ನು ಕಟ್ಟಲು ಶಂಕುಸ್ಥಾಪನೆ ಮಾಡಲಾಗಿದೆ. 1 ಲಕ್ಷ ಮನೆಗಳನ್ನು ಕಟ್ಟಲು ಗುರಿಯನ್ನು ಇಟ್ಟುಕೊಂಡು ಅದಕ್ಕೆ ಬೇಕಾದಂತಹ ಸ್ಥಳವನ್ನು ಗುರುತಿಸುವಂತಹ ಪ್ರಯತ್ನವನ್ನು ಮಾಡಿದ್ದೇವೆ.

ನಾನು ಮುಖ್ಯಮಂತ್ರಿಯಾದ ಮೇಲೆ ನಡೆದಂತಹ ಚುನಾವಣೆಯಲ್ಲಿ ಈ ನಾಡಿನ ಜನರು ನಮ್ಮ ಪರವಾಗಿ ನಿಂತರು. ಇದನ್ನು ವಿರೋಧ ಪಕ್ಷದವರು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ಲೋಕಸಭಾ ಚುನಾವಣೆಯಲ್ಲಿ 25 ಕ್ಷೇತ್ರಗಳಲ್ಲಿ ನಾವು ಗೆದ್ದಿದ್ದೇವೆ. ಕಾಂಗ್ರೆಸ್ 1 ಸ್ಥಾನದಲ್ಲಿ ಮತ್ತು ಜೆ.ಡಿ.(ಎಸ್) 1 ಸ್ಥಾನದಲ್ಲಿ ಮಾತ್ರ ಗೆದ್ದಿದೆ. ವಿಧಾನಸಭಾ ಉಪ ಚುನಾವಣೆಯಲ್ಲಿ 12 ಸ್ಥಾನಗಳನ್ನು ನಾವು ಗೆದ್ದಿದ್ದೇವೆ. ಅಂದರೆ ಈ ರಾಜ್ಯದ ಜನ ಭಾರತೀಯ ಜನತಾ ಪಾರ್ಟಿಯ ಕಾರ್ಯಕ್ರಮಗಳಿಗೆ ಮೆಚ್ಚಿಗೆಯನ್ನು ವ್ಯಕ್ತಪಡಿಸಿ ನಮಗೆ ಸಹಕಾರಿಯಾಗಿ ನಿಂತಿದ್ದಾರೆ ಎನ್ನುವುದನ್ನು ತಾವು ಒಪ್ಪುತ್ತಿರಿ ಎಂದು ನಾನು ತಿಳಿದುಕೊಂಡಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ಹರ್ಷವನ್ನು ವ್ಯಕ್ತಪಡಿಸಿದರು)**

**(ಗೊಂದಲ)**

**ಶ್ರೀ ಪ್ರಕಾಶ್ ರಾಠೋಡ್:-** ಚುನಾವಣೆ ಯಾವ ರೀತಿ ನಡೆಯಿತು ಎನ್ನುವುದು ಎಲ್ಲರಿಗೂ ಗೊತ್ತಿದೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಇಷ್ಟೊಂದು ಖರ್ಚು ಮಾಡಿ ಯಾವ ಪುರುಷಾರ್ಥಕ್ಕಾಗಿ ಚುನಾವಣೆ ಮಾಡಬೇಕಾಗಿತ್ತು?

**(ಗೊಂದಲ)**

**ಡಾ:ತೇಜಸ್ವಿನಿ ಗೌಡ:-** ಚುನಾವಣೆಯಲ್ಲಿ ಗೆದ್ದು ಬಂದಿರುವ ಸರ್ಕಾರ ಇದು. ನೀವು ಗೆದ್ದು ಬಂದಿದ್ದರೆ ಈ ಮಾತನ್ನು ಹೇಳುತ್ತಿದ್ದಿರಾ?

**(ಗೊಂದಲ)**

**ಶ್ರೀ ಗೋವಿಂದ ಎಂ.ಕಾರಜೋಳ:-** ಜನ ಕೊಟ್ಟಿರುವ ತೀರ್ಪನ್ನು ಒಪ್ಪಿಕೊಳ್ಳಿ.

**(ಗೊಂದಲ)**

**ಡಾ: ತೇಜಸ್ವಿನಿ ಗೌಡ:-** ಚುನಾವಣಾ ಪ್ರಕ್ರಿಯೆಯಲ್ಲಿ ತಾವು ಭಾಗವಹಿಸಿದ್ದೀರಿ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಅತೃಪ್ತ ಶಾಸಕರೆಂದು ಏನು ಹೇಳಲಾಗಿತ್ತು ಅವರುಗಳನ್ನು ಒಂದೂವರೆ ತಿಂಗಳು ಬಾಂಬೆಯಲ್ಲಿ ಉಳಿಸಿಕೊಳ್ಳಬೇಕಾಗಿತ್ತಾ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರು 12 ಕ್ಷೇತ್ರಗಳಲ್ಲಿ ನಮಗೆ ಗೆಲ್ಲವನ್ನು ಕೊಟ್ಟಿದ್ದಾರೆ. ಜನರು ಭಾರತೀಯ ಜನತಾ ಪಾರ್ಟಿಯನ್ನು ಬೆಂಬಲಿಸುತ್ತಾರೆ ಎನ್ನುವುದು ಇದರಿಂದಲೇ ಗೊತ್ತಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವ ವ್ಯವಸ್ಥೆಯ ಕಗ್ಗೊಲೆ ಮಾಡಿದ್ದಾರೆ. ಚುನಾವಣೆಗಾಗಿ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆಂದು ಹೇಳಲಿ.

**(ಗೊಂದಲ)**

**ಡಾ: ತೇಜಸ್ವಿನಿ ಗೌಡ:–** ನೀವು ಗೆದ್ದಿದರೆ ಈ ಮಾತನ್ನು ಹೇಳುತ್ತೀದ್ದಿರಾ?

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ರೀತಿ ಮಾಡುವ ಚುನಾವಣೆಗೆ ಚುನಾವಣೆ ಎನ್ನುತ್ತಾರೆಯೇ? ನಾನು ಕೂಡಾ ಕೆ.ಆರ್.ಪುರಂ ಕ್ಷೇತ್ರದಿಂದ ಸ್ಪರ್ಧೆ ಮಾಡಿದ್ದೆ. ಚುನಾವಣೆಯಲ್ಲಿ ಏನು ನಡೆಯಿತು ಎನ್ನುವುದನ್ನು ಹೇಳಿ ನೋಡೋಣ. ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಾರೆ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕಗ್ಗೊಲೆ ಮಾಡಿದ್ದೀರಾ. ಯಾವ ಪುರಷಾರ್ಥಕ್ಕೆ ಈ ಚುನಾವಣೆ. ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುವ ನೈತಿಕ ಹಕ್ಕು ಆಡಳಿತ ಪಕ್ಷದವರಿಗೆ ಇಲ್ಲ.

**(ಗೊಂದಲ)**

**ಡಾ: ವೈ.ಎ.ನಾರಾಯಣಸ್ವಾಮಿ:–** ಜನರ ತೀರ್ಪನ್ನು ಒಪ್ಪಿಕೊಳ್ಳಬೇಕಾಗುತ್ತದೆ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ಎಲ್ಲ ಸದಸ್ಯರು ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಅದನ್ನು ಬರೆದುಕೊಳ್ಳಲಿ, ಉತ್ತರ ಮುಗಿದ ಮೇಲೆ clarification ಕೇಳಲಿ. ಈ ರೀತಿ ಎಲ್ಲರೂ ಎದ್ದು ನಿಂತು ಮಾತನಾಡಿದರೆ ಯಾರಿಗೂ ಏನು ಅರ್ಥವಾಗುವುದಿಲ್ಲ. ಡಾ: ವೈ.ಎ. ನಾರಾಯಣಸ್ವಾಮಿಯವರು ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ ಎಂದು ಎಷ್ಟು ಮಾತನಾಡುತ್ತಾರೆ ನೋಡಿ.

**ಶ್ರೀ ಹೆಚ್.ಎಂ. ರಮೇಶ್ ಗೌಡ:–** ಇಲ್ಲಿ ಆಡಳಿತ ಪಕ್ಷದವರು ಯಾರು, ವಿರೋಧ ಪಕ್ಷದವರು ಯಾರು ಗೊತ್ತಾಗುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ಆಡಳಿತ ಪಕ್ಷದ ಸದಸ್ಯರಿಗೆ ಏನು ಆಗಿದೆ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲು ಸಮರ್ಥರಾಗಿದ್ದಾರೆ. He is capable ಎಂದು ನಾವೇ ಹೇಳಿದ್ದೇವೆ. ನಾವು ಕೊನೆಯಲ್ಲಿ ಕ್ಲಾರಿಫಿಕೇಶನ್ ಕೇಳುತ್ತೇವೆ. ಆಡಳಿತ ಪಕ್ಷದ ಸದಸ್ಯರು ಮಧ್ಯದಲ್ಲಿ ಎದ್ದು ನಿಂತು ಮಾತನಾಡಬೇಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಿಮ್ಮ ಕಡೆಯುವರಿಗೂ ಸ್ವಲ್ಪ ಹೇಳಿ.

**(ಗೊಂದಲ)**

**ಶ್ರೀ ಎಚ್.ಎಂ.ರೇವಣ್ಣ:–**ಚುನಾವಣೆ ಹೇಗೆ ನಡೆಯಿತು, ಏಕೆ ನಡೆಯಿತು, ಎಷ್ಟು ಖರ್ಚಾಯಿತು ಎಲ್ಲವನ್ನು ತಿಳಿದುಕೊಳ್ಳಬೇಕಾಗುತ್ತದೆ. ಬರಿ ಗೆದ್ದಿದೆವೆ ಎಂದು ಹೇಳಿದರೆ ಆಗುವುದಿಲ್ಲ.

**(226) 09–03–2020/04–10/ಬಿಎಸ್‌ಡಿ-ಜಿಆರ್**

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:–** ಆ ಚುನಾವಣೆ ಹೇಗೆ ಆಯಿತು, ಏನು ನಡೆಯಿತು ಎಂಬ ವಿಷಯಗಳು ಗೊತ್ತಾಗಬೇಕಲ್ಲವೇ? ಗೆದ್ದಿದ್ದೇವೆ ಎಂದು ಹೇಳುವುದು ಮುಖ್ಯವಲ್ಲ.

(ಗೊಂದಲ)

**ಡಾ॥ ತೇಜಸ್ವಿನಿ ಗೌಡ:–** ಅದೇ ನೀವು ಗೆದ್ದಿದ್ದರೆ ಈ ಮಾತು ಹೇಳುತ್ತಿರಲಿಲ್ಲ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಯಡಿಯೂರಪ್ಪನವರು ಇಲ್ಲದಿದ್ದರೆ ಬಿಜೆಪಿ ಶೂನ್ಯ ಎಂದು ಹೇಳಿದಾಗ ಉತ್ತರ ಕೊಡದೇ ಮಾನ್ಯ ನಾರಾಯಣಸ್ವಾಮಿಯವರು ಜಾರಿಕೊಂಡರು. ಆ ಪ್ರಶ್ನೆಗೆ ಉತ್ತರ ಕೊಡಲಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿಃ-** ಈ ದೇಶದಲ್ಲಿ ಇಬ್ಬರು ಹೀರೋಗಳಿದ್ದು, ಒಬ್ಬರು ಮಾನ್ಯ ಪ್ರಧಾನ ಮಂತ್ರಿಯಾದ ಶ್ರೀಯುತ ಮೋದಿಯವರು ಹಾಗೂ ಇನ್ನೊಬ್ಬರು ಮಾನ್ಯ ಯಡಿಯೂರಪ್ಪನವರಾಗಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡಃ-** ಬೆಳಿಗ್ಗೆ ಮಾನ್ಯ ಯಡಿಯೂರಪ್ಪನವರು ಇಲ್ಲದಿದ್ದರೆ ಬಿಜೆಪಿ ಶೂನ್ಯ ಎಂದು ಹೇಳಿದಾಗ ಅವರಿಗೆ ಉತ್ತರ ಕೊಡಲು ಆಗಲಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ಃ-** ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಇಷ್ಟೆಲ್ಲ ಸದಸ್ಯರು ಎದ್ದು ಮಾತನಾಡುವುದು ಸರಿಯೇ? They should have some sense. ಈ ರಾಜ್ಯದ ಮುಖ್ಯಮಂತ್ರಿಗಳು ಉತ್ತರ ಕೊಡಲು ಸಮರ್ಥರಿದ್ದಾರೆ. ಇವರುಗಳು ಮಧ್ಯೆ-ಮಧ್ಯೆ ಏಕೆ disturb ಮಾಡುತ್ತಾರೆ ಎಂದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಅರುಣ ಶಹಾಪುರಃ-** ಮಾನ್ಯ ಸಭಾಪತಿಯವರೇ, ಅವರು ಅವರ ಬೆನ್ನನ್ನು ನೋಡಿಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಈ ರೀತಿ ಮಾಡುವುದು ಸರಿಯಲ್ಲ.

**ಶ್ರೀ ಎಸ್. ಆರ್. ಪಾಟೀಲ್ಃ-** ಮೊದಲು ಶ್ರೀ ಅರುಣ ಶಹಾಪುರ ರವರು ಕುಳಿತುಕೊಳ್ಳಬೇಕು. ಆಡಳಿತ ಪಕ್ಷದವರಿಗೆ ತಾಳ್ಮೆ ಮತ್ತು ಸಹನೆ ಇರಬೇಕು.

**ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ)ಃ-** ಮಾನ್ಯ ಸಭಾಪತಿಯವರೇ, ನಾನು ಕಳೆದ 7 ತಿಂಗಳುಗಳಿಂದ ಬಹಳ ದೊಡ್ಡ ಸಾಧನೆ ಮಾಡಿದ್ದೇನೆ ಎಂದು ಹೇಳುತ್ತಿಲ್ಲ. ಹಣಕಾಸಿನ ಇತಿಮಿತಿಗಳ ಬಗ್ಗೆ ಅವರಿಗೂ ಗೊತ್ತಿದೆ. ರಾಜ್ಯಪಾಲರ ಭಾಷಣದಲ್ಲಿ ಬಹಳ ಸ್ಪಷ್ಟವಾಗಿ ಹಣಕಾಸಿನ ಬಗ್ಗೆ ಕೇಂದ್ರದಿಂದ ಆಗಿರುವ ಅನಾನುಕೂಲ ಮತ್ತು ತೊಂದರೆಗಳ ಬಗ್ಗೆ ಬಿಡಿಸಿ ಹೇಳಿದ್ದೇನೆ, ಯಾವುದನ್ನೂ ಮುಚ್ಚು-ಮರೆ ಮಾಡಿಲ್ಲ. ಆದ್ದರಿಂದ ಹಣಕಾಸಿನ ಇತಿಮಿತಿಗಳಲ್ಲಿ 7 ತಿಂಗಳಲ್ಲಿ ಏನೇನು ಮಾಡುವುದಕ್ಕೆ ಸಾಧ್ಯವಿದೆಯೋ, ಆ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಇನ್ನೊಂದು ಐದಾರು ತಿಂಗಳು ಅಥವ ವರ್ಷ ಕಳೆದ ನಂತರ ಮತ್ತೆ ನಾವು ಸದನ ಸೇರಿದಾಗ ಯಾವ ರೀತಿ ಕರ್ನಾಟಕ ರಾಜ್ಯದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಭಿವೃದ್ಧಿ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ ಎನ್ನುವ ಬಗ್ಗೆ ತಿಳಿಸುತ್ತೇನೆ. ಉದಾಹಣೆಗೆ ಬೆಂಗಳೂರಿನಲ್ಲಿ ಬೆಲೆ ಬಾಳುವ ಹತ್ತಾರು ಸಾವಿರ ಎಕರೆ ಭೂಮಿಯನ್ನು ಕಬಳಿಕೆ ಮಾಡಿಕೊಂಡಿದ್ದಾರೆ. ರಾಜಕಾಲುವೆಗಳ ಅಕ್ಕಪಕ್ಕದಲ್ಲಿಯೂ ಕಬಳಿಕೆ ಮಾಡಿದ್ದಾರೆ. ಇದಕ್ಕಾಗಿ ಶ್ರೀ ಕೆ.ಜಿ. ಬೋಪಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದು, ವಿರೋಧ ಪಕ್ಷದ ಸದಸ್ಯರು ಸಲಹೆಗಳನ್ನು ಕೊಡಲಿ. ಎಷ್ಟೇ ಪ್ರಭಾವಿಗಳಿದ್ದರೂ ಸರ್ಕಾರಿ ಭೂಮಿಯನ್ನು ಕಬಳಿಸಲು ಬಿಡುವುದಿಲ್ಲ. ಈಗಾಗಲೇ 40–50 ಎಕರೆ ಭೂಮಿಯನ್ನು ವಶಕ್ಕೆ ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆ. ನನ್ನ ಪ್ರಕಾರ ಸಾವಿರಾರು ಎಕರೆ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಲೂಟಿ ಮಾಡುತ್ತಿದ್ದಾರೆ. ಅವರ ಮಾಹಿತಿಯನ್ನು ಕೊಡಲಿ. ಯಾವುದೇ ಮುಲಾಜಿಲ್ಲದೇ ಆ ಎಲ್ಲಾ ಭೂಮಿಯನ್ನು ವಶಪಡಿಸಿಕೊಂಡಲ್ಲಿ, ಒಂದೆರಡು ವರ್ಷಗಳಲ್ಲಿ ನಮ್ಮಗೆ ಹತ್ತಾರು ಸಾವಿರ ಕೋಟಿ ಹಣಕಾಸು ಬರುತ್ತದೆ ಎಂಬ ವಿಶ್ವಾಸವಿದ್ದು, ಅದರಿಂದ ಕೊರತೆಯನ್ನು ನೀಗಿಸಿಕೊಳ್ಳಬಹುದಾಗಿದೆ. ಆ ದಿಕ್ಕಿನಲ್ಲಿ ನಾನು ಪ್ರಯತ್ನ ಮಾಡುತ್ತಿದ್ದೇನೆ.

**ಶ್ರೀ ಕೆ. ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ಹಿಂದೆ ಶ್ರೀಯುತ ಎ.ಟಿ. ರಾಮಸ್ವಾಮಿ, ಶ್ರೀ ಕೆ.ಬಿ. ಕೋಳಿವಾಡ್ ರವರುಗಳು ಭೂ ಒತ್ತುವರಿ ಬಗ್ಗೆ ವರದಿಗಳನ್ನು ಕೊಟ್ಟಿದ್ದು, ಅವುಗಳನ್ನು ಜಾರಿಗೆ ತರುವ ಬಗ್ಗೆ ಏನಾಗಿದೆ?

**ಶ್ರೀ ಬಿ.ಎಸ್. ಯಡಿಯೂರಪ್ಪ:–** ಈ ಸಮಿತಿಯಲ್ಲಿ ಮಾನ್ಯ ಎ.ಟಿ. ರಾಮಸ್ವಾಮಿಯವರು ಇದ್ದು, ಅವರನ್ನೇ ಅಧ್ಯಕ್ಷರಾಗುವ ಬಗ್ಗೆ ವಿನಂತಿಸಿದ್ದೆ. ಮಾನ್ಯ ರಾಮಸ್ವಾಮಿರವರು ಕೊಟ್ಟಿರುವ ವರದಿಯೂ ನನ್ನ ಕಣ್ಣ ಮುಂದೆ ಇದೆ. ಮಾನ್ಯ ಬೋಪಯ್ಯನವರ ಸಮಿತಿ ನೀಡುವ ವರದಿ ಅಥವಾ ಮಾಹಿತಿಗಳ ಬಗ್ಗೆ ಆಯಾ ದಿನ ಅಥವಾ ತಿಂಗಳಲ್ಲಿ ಭೂಮಿಯನ್ನು ವಶಪಡಿಸಿಕೊಂಡು, ಯಾವುದೇ ಮುಲಾಜಿಲ್ಲದೇ ಭೂಮಿಯನ್ನು ವಶಪಡಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಇನ್ನು ಕ್ರಿಶ್ಚಿಯನ್ ಸಮುದಾಯದ ಬಗ್ಗೆ ಪ್ರಸ್ತಾಪ ಮಾಡಿದ್ದು, ನನಗೆ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಎಂಬ ಭೇದ–ಭಾವದ ಪ್ರಶ್ನೆ ಇಲ್ಲ. ನಾನು ರೂ. 200 ಕೋಟಿಗಳನ್ನು ತೆಗೆದಿಟ್ಟಿದ್ದು, ಹಿಂದೆ ನೀಡಿದ್ದ ಹಣ ಖರ್ಚಾಯಿತೋ ಅಥವಾ ಇಲ್ಲವೋ ಎಂಬ ಬಗ್ಗೆ ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಈ ಬಾರಿ ರೂ.200 ಕೋಟಿಗಳನ್ನು ಮೀಸಲಿಟ್ಟ ನಂತರ ಆ ಸಮಾಜದ ಎಲ್ಲಾ ಹಿರಿಯರೆಲ್ಲರೂ ಬಿಷಪ್‌ರವರೊಡನೆ ಬಂದು ಅಭಿನಂದನೆ ಸಲ್ಲಿಸಿದರು. ಅವರು ಕೈಗೊಳ್ಳುವ ಕಾರ್ಯಕ್ರಮಗಳ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಲಹೆಯನ್ನು ಸಹ ಕೊಟ್ಟಿದ್ದಾರೆ. ಆ ದಿಕ್ಕಿನಲ್ಲಿ ಆ ಸಮುದಾಯಕ್ಕೆ ಆಗಬೇಕಾದ ಅನುಕೂಲಗಳನ್ನು ನಾನು ಮಾಡಿಕೊಡುತ್ತೇನೆ ಎಂಬ ಭರವಸೆ ಕೊಡುತ್ತಿದ್ದೇನೆ.

**ಶ್ರೀ ಐವನ್ ಡಿ'ಸೋಜಾಃ–** ನಿಗಮ ಮಾಡಲು ಮತ್ತು ಕಾರ್ಯಗತಗೊಳಿಸಲು ಕೂಡಲೇ ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಬಿ.ಎಸ್. ಯಡಿಯೂರಪ್ಪಃ–** ನಿಗಮ ಮಂಡಳಿ ಮುಖ್ಯ ಅಲ್ಲ, ನಾವು ಕೊಟ್ಟ ಹಣ ಸದ್ವಿನಿಯೋಗವಾಗಿ ಕೆಲಸಗಳು ಆಗಬೇಕು. ಬಹಳ ನಿಗಮಗಳನ್ನು ಮಾಡಿ ಆಗಿದೆ. ಆದ್ದರಿಂದ ನಂತರ ಏನಾದರೂ clarification ಇದ್ದರೆ ನಂತರ ಕೇಳಿ.

**ಶ್ರೀ ಕೆ. ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೇ, ಸರ್ಕಾರಿ ಉರ್ದು ಶಾಲೆಗಳನ್ನು English Medium ಗೆ ಉನ್ನತೀಕರಿಸುವ ಬಗ್ಗೆ ಬಜೆಟ್‌ನಲ್ಲಿ ತಿಳಿಸಿದ್ದು, ಅದಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ಇಡಲಾಗಿದೆ. ಈ ಒಂದು ಕೋಟಿ ರೂಪಾಯಿಗಳಲ್ಲಿ 400 ಶಾಲೆಗಳನ್ನು ಹೇಗೆ ಉನ್ನತ ಮಟ್ಟಕ್ಕೆ ಏರಿಸುತ್ತಾರೆ ಎಂದು ನನಗೆ ಆಶ್ಚರ್ಯವಾಗುತ್ತಿದೆ.

ಇನ್ನು ಎರಡನೆಯದಾಗಿ, Karnataka State Minorities Commission ಗೆ ಹೋದ ಸಾರಿ ರೂ. 2.80 ಕೋಟಿ ಕೊಟ್ಟಿದ್ದು, ಈ ಬಜೆಟ್‌ನಲ್ಲಿ ಕೇವಲ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಉರ್ದು ಅಕಾಡೆಮಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ನನ್ನ ಅಂದಾಜಿನಂತೆ ರಾಜ್ಯದ ಇತಿಹಾಸದಲ್ಲಿ, ಬಜೆಟ್‌ನಲ್ಲಿ ಯಾರೂ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಿಲ್ಲ. ಈ ಬಜೆಟ್‌ನಲ್ಲಿ ಆಗಿದೆ, ಅದು ತಪ್ಪಾಗಿರಬಹುದೆಂದು ನಾನು ಭಾವಿಸುತ್ತೇನೆ. ದಯಮಾಡಿ ಸರಿಪಡಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪಃ–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನೀಡಿರುವ ಸಲಹೆಗಳಂತೆ ಸರಿಪಡಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ನೆರೆ ಸಂತ್ರಸ್ತರಿಗೆ ನೀಡಿರುವ ಹಣ ಸದ್ಬಳಕೆ ಆಗದಿರುವ ಬಗ್ಗೆ ತಿಳಿಸಿದ್ದಾರೆ. ಯಾರ್‍ಯಾರಿಗೆ ಕಾನೂನಿನ ತೊಡಕಿನಿಂದ ಮನೆ ಕಟ್ಟಲು ಸಾಧ್ಯವಾಗಿಲ್ಲ. ಅದು ಯಾರೇ ಇರಲಿ, ಆ ಪಟ್ಟಿಯನ್ನು ನನಗೆ ನೀಡಿದರೆ ಪ್ರತಿಯೊಬ್ಬರಿಗೂ ರೂ.5 ಲಕ್ಷ ಕೊಟ್ಟು ಮನೆ ಕಟ್ಟಿಸಿಕೊಡುವ ಕೆಲಸ ಮಾಡುತ್ತೇನೆ. ಒಬ್ಬರಿಗೂ ಅನ್ಯಾಯವಾಗುವುದಕ್ಕೆ ಬಿಡುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನು ಎರಡನೆಯದಾಗಿ, ನೆರೆ ಸಂತ್ರಸ್ತರಿಗೆ ನೀಡಿರುವ ಹಣವು ದುರುಪಯೋಗವಾಗಿದೆ ಎಂದು ಮಾನ್ಯ ಸದಸ್ಯರಿಗೆ ಅನಿಸಿದರೆ ದಯಮಾಡಿ ಉದಾಹರಣೆಗಳನ್ನು ಕೊಡಬೇಕು. ಸಂಬಂಧಪಟ್ಟ ಅಧಿಕಾರಿಗಳನ್ನು suspension ನಲ್ಲಿ ಇಡೋಣ, ಯಾವುದೇ ಮುಲಾಜಿಲ್ಲದೇ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಈ ವಿಚಾರ ಪ್ರಸ್ತಾಪವಾದ್ದರಿಂದ ಹೇಳುತ್ತಿದ್ದೇನೆ. ಇದಕ್ಕಿಂತ ನಾನು ಹೆಚ್ಚೇನೂ ಹೇಳುವುದಿಲ್ಲ. ಅಡಕೆ ಕೊಳೆರೋಗ ಸಮಸ್ಯಗಳೆಲ್ಲವೂ ನಾನು ಅಧಿಕಾರಕ್ಕೆ ಬಂದ ಮೇಲೆ ಬಂದಿಲ್ಲ. ಎಲ್ಲಾ ಕಾಲದಲ್ಲೂ ಇದ್ದಂತಹ ರೋಗವಾಗಿದೆ. ಇದೆಲ್ಲವನ್ನೂ ಸರಿಪಡಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ ಎಂಬ ಭರವಸೆಯನ್ನು ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ರಾಜ್ಯಪಾಲರ ಭಾಷಣ ಮತ್ತು ಬಜೆಟ್‌ನಲ್ಲಿ ಅಮೃತ್‌ಮಹಲ್ ತಳಿ ಬಗ್ಗೆ ಒಂದು ಸಣ್ಣ word ಕೂಡ ಇಲ್ಲ. ‘ಅಮೃತ್ ಮಹಲ್ ಕಾವಲ್’ ಮತ್ತು ‘ಅಮೃತ್ ಮಹಲ್’ ತಳಿ ಇಡೀ ದೇಶದಲ್ಲಿಯೇ ಪ್ರಸಿದ್ಧಿಯಾಗಿದೆ. ಇದನ್ನು ರಾಜ–ಮಹಾರಾಜರ ಕಾಲದಲ್ಲಿ ನಮ್ಮ ನಾಡಿಗೆ ತಂದಿದ್ದಾರೆ. ಇದರ ಬಗ್ಗೆ ಮೂರು ದಿನಗಳ ಕಾಲ ಮಾತನಾಡಬಹುದು. ಆದರೆ ನಾನು ಹೆಚ್ಚು ಮಾತನಾಡುವುದಿಲ್ಲ. ಈ ನಾಡಿನಲ್ಲಿ 2 ಲಕ್ಷ ಎಕರೆ ‘ಅಮೃತ್ ಮಹಲ್ ಕಾವಲ್’ ಇತ್ತು. ಇವತ್ತು ಸರ್ವೆ ಪ್ರಕಾರ ಐದಾರು ಜಿಲ್ಲೆಗಳಲ್ಲಿ 56 ಸಾವಿರ ಎಕರೆ ಮಾತ್ರ ಉಳಿದಿದೆ. ಈಗಲೂ ಕಾಲ ಮಿಂಚಿಲ್ಲ. ಕೇವಲ 3 ಸಾವಿರ ತಳಿ ಮಾತ್ರ ಉಳಿದಿದೆ. ಅದನ್ನು ಕಾವಲ್‌ಗೂ ಉಪಯೋಗಿಸುತ್ತಿದ್ದರು, ಬೇಸಾಯಕ್ಕೂ ಉಪಯೋಗಿಸುತ್ತಿದ್ದರು. ‘ಅಮೃತ್ ಮಹಲ್’ ತಳಿಯ ಹಾಲು ಎಂದರೆ ಅಮೃತವನ್ನೂ ಮೀರಿದ medicinal value ಹೊಂದಿರುವ ಹಾಲಾಗಿತ್ತು. ದಯಮಾಡಿ ಆ ತಳಿಯನ್ನು ಉಳಿಸಬೇಕು, ಜೊತೆಗೆ 56 ಸಾವಿರ ಎಕರೆ ಜಮೀನನ್ನು ರಕ್ಷಣೆ ಮಾಡುವ ಕೆಲಸವನ್ನು ಸಹ ಮಾಡಬೇಕು ಎಂದು ವಿನಂತಿಸುತ್ತೇನೆ.

ಇನ್ನು ಡೈರಿ ಎಂದರೆ, ಅದರಲ್ಲೂ ಸುಮಾರು 90 ಭಾಗ ರೈತ ಮಹಿಳೆಯರು ಕೆಲಸ ಮಾಡುತ್ತಾರೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(227)/09.03.2020/4.20/ಹೆಚ್‌ವಿ–ಜಿಆರ್**

**ಶ್ರೀ ಎಸ್.ಎಲ್.ಭೋಜೇಗೌಡ(ಮುಂದು):–**

ಸನ್ಮಾನ್ಯ ಸಭಾಪತಿಯವರೇ, ಡೈರಿಯಿಂದ ಬರುವಂತಹ ಆದಾಯಕ್ಕೆ ಆದಾಯ ತೆರಿಗೆಯನ್ನು ವಿಧಿಸುವುದು ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಸಂಘಗಳಿಂದ ನಾವು ಏನು ಆದಾಯವನ್ನು ಗಳಿಸುತ್ತಿದ್ದೇವೆ. ಅದಕ್ಕೆ ತೆರಿಗೆಯನ್ನು ವಿಧಿಸಲಾಗುತ್ತಿದೆ. 'ಈ ಸಂಸ್ಥೆಗಳಿಂದ ಬರುವಂತಹ ಆದಾಯಕ್ಕೆ ತೆರಿಗೆ ವಿಧಿಸಬಾರದು' ಎನ್ನುವುದರ ಬಗ್ಗೆ ಕೇಂದ್ರ ಸರ್ಕಾರದ ಗಮನಸೆಳೆಯಲು ಮಾನ್ಯ ಮುಖ್ಯಮಂತ್ರಿಗಳು ನೇತೃತ್ವವನ್ನು ವಹಿಸಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಆರ್.ಎಂ.ಸಿ.ಐ. ಶಾಲೆಗಳ ಬಗ್ಗೆ ಹೇಳಬೇಕಾದರೆ, ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿಯೇ ಸುಮಾರು 84 ಕಟ್ಟಡಗಳು ಹಾಗೆಯೇ ಇವೆ. ಇಡೀ ರಾಜ್ಯದಲ್ಲಿ ಸುಮಾರು 3101 ಕೋಟಿ ರೂಪಾಯಿಗಳಷ್ಟು ಹಣ ಅವರಿಗೆ ಪಾವತಿಸುವುದು ಬಾಕಿ ಇದೆ. ಆರ್.ಎಂ.ಸಿ.ಐ.ಗಳನ್ನು ಬಹಳ ಮಹತ್ವಾಕಾಂಕ್ಷೆಯಿಂದ ಪ್ರಾರಂಭಿಸಲಾಗಿದೆ. ಇದಕ್ಕೊಂದು ಕಾಯಕಲ್ಪವನ್ನು ಒದಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಯುವಕರು ಹಳ್ಳಿಗಳನ್ನು ಬಿಟ್ಟು ಪಟ್ಟಣಪ್ರದೇಶಗಳಿಗೆ ವಲಸೆ ಬರುತ್ತಿದ್ದಾರೆ. ಇವರನ್ನು ತಡೆಯುವುದಕ್ಕೆ ಯಾವ ರೀತಿಯ ಕಾರ್ಯಕ್ರಮಗಳನ್ನು ಸರ್ಕಾರ ರೂಪಿಸಿದೆ ಎಂದು ನಾನು ಪ್ರಶ್ನೆಯನ್ನು ಕೇಳಿದ್ದೆ. ಆ ಪ್ರಶ್ನೆಗೆ ಉತ್ತರವನ್ನು ನೀಡುವಂತಹ ಸಮದರ್ಭದಲ್ಲಿ ಸರ್ಕಾರ 'ಯುವಕರಿಗೆ ಕೃಷಿಯಲ್ಲಿ ಆತ್ಮವಿಶ್ವಾಸ ಉಂಟಾಗುವಂತಹ ಕಾರ್ಯಕ್ರಮಗಳನ್ನು ರೂಪಿಸುತ್ತೇವೆ' ಎನ್ನುವ ಮಾತನ್ನು ಹೇಳಿತ್ತು. ಆದುದರಿಂದ ಇದಕ್ಕೆ ಹಚ್ಚಿನ ಒತ್ತು ಕೊಡಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಒತ್ತುವರಿ ಸಮಸ್ಯೆಯ ಬಗ್ಗೆ ಎಲ್ಲಿಯೂ ಪ್ರಸ್ತಾಪ ಮಾಡಿಲ್ಲ. ವಿಶೇಷವಾಗಿ ಮಲೆನಾಡು ಪ್ರದೇಶದಲ್ಲಿ ಆಗಿರುವ ಒತ್ತುವರಿಯ ಬಗ್ಗೆ ಸರ್ಕಾರ ಕಣ್ತೆರೆಯ ಬೇಕಾಗಿದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್(ನಾಮ ನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಪ್ರತಿ ವರ್ಷ ಯು.ಕೆ.ಪಿ.ಗೆ 25 ಸಾವಿರ ಕೋಟಿ ರೂಪಾಯಿಗಳನ್ನು ನೀಡಬೇಕೆನ್ನುವ ಬೇಡಿಕೆಯನ್ನು ಇಡಲಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ತರವನ್ನು ನೀಡುವಂತಹ ಸಂದರ್ಭದಲ್ಲಿ ‘ಹಿಂದಿನ ಸರ್ಕಾರಗಳು ಏನೂ ಮಾಡಿಲ್ಲ, ಆದರೂ ನಾವು ಕ್ರಮಕೈಗೊಳ್ಳುತ್ತೇವೆ’ ಎನ್ನುವ ಭರವಸೆಯನ್ನು ಕೊಟ್ಟಿದ್ದಾರೆ. ನಾನು ಒಂದು ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲು ಬಯಸುತ್ತಿದ್ದೇನೆ. 2013–14ನೇ ಸಾಲಿನ ಆಯವ್ಯಯ ಭಾಷಣದಲ್ಲಿ, ‘... ನೀರಾವರಿ ವಲಯದಲ್ಲಿ ಮುಂದಿನ 5 ವರ್ಷಗಳಲ್ಲಿ 50 ಸಾವಿರ ಕೋಟಿ ರೂಪಾಯಿಗಳ ಅನುದಾನ ಒದಗಿಸುವಂತೆ ಘೋಷಿಸಲಾಗಿತ್ತು. ಅದರಂತೆ ಕಳೆದ 4 ವರ್ಷಗಳಲ್ಲಿ ನೀರಾವರಿ ವಲಯಕ್ಕೆ 48,096 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ’ ಎಂದು ಹೇಳಲಾಗಿದೆ.

**ಸಭಾಪತಿಯವರುಃ–** ಆಯವ್ಯಯದ ಭಾಷಣದ ಮೇಲೆ ಮಾತನಾಡುವ ಸಂದರ್ಭದಲ್ಲಿ ಇದನ್ನು ಉಲ್ಲೇಖ ಮಾಡಿ.

**ಶ್ರೀ ಪ್ರಕಾಶ್ ಕೆ. ರಾಥೋಡ್ಃ–** ಸನ್ಮಾನ್ಯ ಸಭಾಪತಿಯವರೇ, ಹಿಂದಿನ ಸರ್ಕಾರಗಳು ಕೈಗೆತ್ತಿಕೊಂಡಿದ್ದ ಯು.ಕೆ.ಪಿ. 3ನೇ ಹಂತದ ನೀರಾವರಿ ಯೋಜನೆಗಳಾದ ಮುಳವಾಡ, ಕೊಪ್ಪಳ, ಮಲ್ಲಾಬಾದ್, ರಾಂಪುರ್, ಚಿಮ್ಮಲಗಿ, ಇಂಡಿ, ಎನ್.ಆರ್.ಬಿ.ಸಿ. ಇಳಕಲ್ ಏತ ನೀರಾವರಿ ಯೋಜನೆಗಳನ್ನು ಹಿಂದಿನ ಸರ್ಕಾರ ಪೂರ್ಣಗೊಳಿಸಿದೆ. ಇದರ ಜೊತೆಗೆ ಬಾಗಲಕೋಟೆ ಟೌನ್ ನಗರ್ ಯೂನಿಟ್‌ಗೆ 550 ಕೋಟಿ ರೂಪಾಯಿಗಳನ್ನು ಹಿಂದಿನ ಸರ್ಕಾರ ಕೊಟ್ಟಿದೆ. ಒಟ್ಟಾರೆಯಾಗಿ ಹೇಳಬೇಕಾದರೆ, ಹಿಂದಿನ ಸರ್ಕಾರ ಯು.ಕೆ.ಪಿ. ಯೋಜನೆಗಾಗಿ ಸುಮಾರು 5,076 ಕೋಟಿ ರೂಪಾಯಿಗಳಷ್ಟು ವೆಚ್ಚವನ್ನು ಮಾಡಲಾಗಿದೆ. ಅಂದರೆ, ನಮ್ಮ ಸರ್ಕಾರ ಈ ಯೋಜನೆಗಳಿಗಾಗಿ ವೆಚ್ಚ ಮಾಡಿದೆ.

**ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು)ಃ–** ಸನ್ಮಾನ್ಯ ಸಭಾಪತಿಯವರೇ, ಕಳೆದ ಆರೂವರೆ ವರ್ಷಗಳಲ್ಲಿ ಯು.ಕೆ.ಪಿ.ಯ ಯೋಜನೆಗಳಿಗೆ ಮತ್ತು ಆಲಮಟ್ಟಿ ಅಣೆಕಟ್ಟನ್ನು ಎತ್ತರಿಸುವ ದೃಷ್ಟಿಯಿಂದ ನಾವು ಎಷ್ಟು ಹಣವನ್ನು ಈಗ ನಾವು ಕೊಟ್ಟಿದ್ದೇವೆ, ಹಿಂದಿನ ಸರ್ಕಾರಗಳು ಎಷ್ಟು ಕೊಟ್ಟಿದ್ದವು ಎನ್ನುವುದರ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ. ಹಿಂದಿನ ಸರ್ಕಾರಗಳು ನೀರಾವರಿಗೆ ಯಾವ ಅನುದಾನವನ್ನು ಕೊಟ್ಟಿಲ್ಲವೆಂದು ನಾನು ಹೇಳಿಲ್ಲ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಸನ್ಮಾನ್ಯ ಸಭಾಪತಿಯವರೇ, ಹಿಂದಿನ ಸರ್ಕಾರ ಇದಕ್ಕಾಗಿಯೇ ಸುಮಾರು 6 ಸಾವಿರ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಅಧಿಕಾರಿಗಳಿಂದ ಸರಿಯಾದ ಮಾಹಿತಿಯನ್ನು ತೆಗೆದುಕೊಳ್ಳಬೇಕಾಗಿದೆ. ಸದನಕ್ಕೆ ತಪ್ಪು ಮಾಹಿತಿ ಕೊಡಬಾರದು.

**ಶ್ರೀ ಕೆ.ಗೋವಿಂದರಾಜ್(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಎಲ್ಲಿಯೂ ಕ್ರೀಡೆಯ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಸುಮಾರು 26 ವರ್ಷಗಳಿಂದ ಬಲ್ಲೆ. ಅವರು ಉಪ ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಕ್ರೀಡೆಗೆ ಹಣವಿಲ್ಲವೆಂದು ಎಂದೂ ಹೇಳಿಲ್ಲ. ಆದರೆ, ಈ ಬಾರಿಯ ಆಯವ್ಯಯದಲ್ಲಿ ಕ್ರೀಡೆಗೆ ಸರಿಯಾಗಿ ಹಣವನ್ನು ಒದಗಿಸಿಲ್ಲ. ಜೊತೆಗೆ ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿಯೂ ಇದರ ಬಗ್ಗೆ ಉಲ್ಲೇಖವಿಲ್ಲ. ಈ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಪತ್ರವನ್ನು ಸಹ ಕೊಟ್ಟಿದ್ದೇನೆ. ದಯಮಾಡಿ ಅದನ್ನು ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಈ ಬಾರಿಯ ಆಯವ್ಯಯದಲ್ಲಿ ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ನೀಡಲಾಗಿದೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಹೈದ್ರಾಬಾದ್–ಕರ್ನಾಟಕ ಭಾಗದಲ್ಲಿ ಶಿಕ್ಷಕರ ಕೊರತೆಯಿದೆ. ದಯಮಾಡಿ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಬೇಕೆನ್ನುವುದು ನನ್ನ ಮನವಿಯಾಗಿದೆ. 371(ಜೆ) ಅಡಿಯಲ್ಲಿ ಬರುವಂತಹ ಜಿಲ್ಲೆಗಳಿಗೆ 1500 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ಅದು ಸರಿಯಾದ ರೀತಿಯಲ್ಲಿ ಬಳಕೆಯಾಗುತ್ತಿಲ್ಲ. ಅಲ್ಲಿ ಅಧಿಕಾರಿಗಳ ಕೊರತೆಯಿದೆ. ಈ ಅನುದಾನ ಸರಿಯಾದ ರೀತಿಯಲ್ಲಿ ಉಪಯೋಗ ಆಗುವಂತೆ, ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಬೇಕೆನ್ನುವುದು ನನ್ನ ಸಲಹೆಯಾಗಿದೆ.

ಇನ್ನು ಮೂರನೆಯದಾಗಿ, ಶಾಸಕರಿಗೆ ಕಳೆದ ಒಂದು ವರ್ಷದಿಂದ ಇಡೀ ರಾಜ್ಯದ ಎಂ.ಎಲ್.ಸಿ.ಗಳಿಗೆ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿಗಾಗಿ ನೀಡುತ್ತಿದ್ದ ಅನುದಾನವನ್ನು ಕೊಟ್ಟಿಲ್ಲ. ನಾನು ಈ ಬಗ್ಗೆ ಯೋಜನಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳೊಂದಿಗೆ ಮಾತನಾಡಿದ್ದೇನೆ. ದಯಮಾಡಿ ಕೂಡಲೇ ಈ ಬಗ್ಗೆ ನಿರ್ದೇಶನವನ್ನು ನೀಡಿ ಆ ಮೊತ್ತವನ್ನು ರಾಜ್ಯದ 300 ಶಾಸಕರಿಗೂ ನೀಡುವಂತಹ ವ್ಯವಸ್ಥೆಯನ್ನು ಮಾಡಬೇಕೆನ್ನುವುದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ಮನವಿಯಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಳೆದ 6 ತಿಂಗಳುಗಳಿಂದ ಆರ್.ಎಂ.ಸಿ.ಐ. ಶಾಲೆಗಳ ಶಿಕ್ಷಕರಿಗೆ ಸಂಬಳವನ್ನು ಕೊಟ್ಟಿಲ್ಲ. ಶಿಕ್ಷಣ ಇಲಾಖೆಯ ಸಚಿವರಾದ ಮಾನ್ಯ ಸುರೇಶ್‌ಕುಮಾರ್‌ರವರು ಈ ಸದನದಲ್ಲಿಯೇ ಇದ್ದಾರೆ. ಅವರು ಬಹಳ ಒಳ್ಳೆಯ ಸಚಿವರು ಬಹಳ ಉತ್ತಮವಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ, ಕಳೆದ 6 ತಿಂಗಳುಗಳಿಂದ ಆ ಶಿಕ್ಷಕರಿಗೆ ಸಂಬಳವಿಲ್ಲ ಎನ್ನುವುದನ್ನು ನಾನು ಪದೇಪದೇ ಹೇಳುತ್ತಿದ್ದೇನೆ. 'ಖಜಾನೆ-2ರಲ್ಲಿ ತೊಂದರೆಯಾಗಿದೆ ಅದನ್ನು ಸರಿಪಡಿಸಿ ಸಂಬಳ ಕೊಡುತ್ತೇವೆ' ಎನ್ನುವ ಕಾರಣ ನೀಡಿ ಖಾಯಂ ಶಿಕ್ಷಕರಿಗೆ ಕಳೆದ 2 ತಿಂಗಳುಗಳಿಂದ ಸರ್ಕಾರ ಸಂಬಳ ಇಲ್ಲದಂತೆ ಮಾಡಿದೆ. ಕಳೆದ ಮೂರು ತಿಂಗಳುಗಳಿಂದ ಅನುದಾನಿತ ಶಾಲಾ ಶಿಕ್ಷಕರಿಗೆ ಸಂಬಳವಿಲ್ಲ. ಹೈದ್ರಾಬಾದ್-ಕರ್ನಾಟಕ ಭಾಗಕ್ಕೆ ಅನುಮೋದನೆಗೊಂಡಿರದ ಶಿಕ್ಷಕರನ್ನು ಕೌನ್ಸಿಲಿಂಗ್‌ನಲ್ಲಿ ತೋರಿಸಿ, ಅವರು ಸ್ಥಳವನ್ನು ನಿಗದಿಗೊಳಿಸಿದ್ದಾರೆ. ಇವರುಗಳಿಗೆ ಕಳೆದ 8 ತಿಂಗಳುಗಳಿಂದ ಸಂಬಳವಿಲ್ಲ. ದಯಮಾಡಿ ಇವರೆಲ್ಲರಿಗೂ ಬೇಗನೇ ಸಂಬಳವನ್ನು ನೀಡಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಒಬ್ಬ ಸರ್ಕಾರಿ ನೌಕರನಿಗೆ ಸುಮಾರು 8 ತಿಂಗಳುಗಳ ಕಾಲ ಸಂಬಳವಿಲ್ಲವೆಂದರೆ, ಆತ ಹೇಗೆ ಬದುಕುವುದಕ್ಕೆ ಸಾಧ್ಯವೆನ್ನುವುದನ್ನು ಸರ್ಕಾರ ಅರ್ಥ ಮಾಡಿಕೊಂಡು, ಕೂಡಲೇ ಸಂಬಳ ಬಿಡುಗಡೆಗೊಳಿಸುವುದಕ್ಕೆ ನಿರ್ದೇಶನವನ್ನು ನೀಡಬೇಕೆನ್ನುವುದು ನನ್ನ ಮನವಿಯಾಗಿದೆ.

**ಶ್ರೀ ಪಿ.ಆರ್.ರಮೇಶ್(ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ಇದೊಂದು ಕಾರ್ಯಾಧಾರಿತ ರಾಜ್ಯಪಾಲರ ಭಾಷಣವಾಗಿದೆ. ಏಪ್ರಿಲ್ 2019ರಿಂದ ಈಗಿನ ಮಾರ್ಚ್‌ವರೆವಿಗೂ ಕೊಟ್ಟಿರುವಂತಹ ಆಡಳಿತದ ಬಗ್ಗೆ ಘನತೆವೆತ್ತ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಉಲ್ಲೇಖ ಮಾಡಿದ್ದಾರೆ. ಬೆಂಗಳೂರು ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸರಿಯಿದೆಯೇ ಎನ್ನುವುದನ್ನು ನೋಡಬೇಕಾಗುತ್ತದೆ. ಯಾವುದೇ ಪಕ್ಷದ ಸರ್ಕಾರ ಅಧಿಕಾರದಲ್ಲಿ ಇರಲಿ, ಕಾನೂನು ಸುವ್ಯವಸ್ಥೆ ಸರಿಯಾಗಿದ್ದರೆ ಆ ಸರ್ಕಾರ ಒಳ್ಳೆಯ ಸರ್ಕಾರ ಎಂದು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇದರ ಜೊತೆಗೆ ಚೆಕ್‌ಗಳು ಬೌನ್ಸ್ ಆಗದಂತೆ ಸರ್ಕಾರ ನೋಡಿಕೊಳ್ಳಬೇಕಾಗುತ್ತದೆ. ಯಾವ ಯಾವ ಕಾರ್ಯಕ್ರಮಗಳಿಗೆ ಸರ್ಕಾರ ಹಣವನ್ನು ಹಂಚಿಕೆ ಮಾಡಿದೆ ಅದು ಸರಿಯಾಗಿ ಬಳಕೆಯಾದರೆ, ಸರ್ಕಾರ ಸರಿಯಾಗಿ ಕೆಲಸ ಮಾಡುತ್ತಿದೆಯೆಂದು ಅರ್ಥ. ಇವೆರಡು ಬಹಳ ಮುಖ್ಯವಾಗಿರುವ ಅಂಶಗಳಾಗಿವೆ. ಸರ್ಕಾರ ಜಾರಿಗೊಳಿಸುವಂತಹ ಕಾರ್ಯಕ್ರಮಗಳು ನಿರಂತರವಾಗಿರುತ್ತವೆ, ಅವುಗಳಿಗೆ ಹಣ ಒದಗಿಸಿಕೊಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಅದಕ್ಕೆ ಸರಿಯಾದ ರೀತಿಯಲ್ಲಿ ಆರ್ಥಿಕ ವ್ಯವಸ್ಥೆಯನ್ನು ಸಮತೋಲನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸನ್ಮಾನ್ಯ ಸಭಾಪತಿಯವರೇ, ನಾನು ಲ್ಯಾಂಡ್ ಮಾಫಿಯಾದ ಬಗ್ಗೆ ಉಲ್ಲೇಖ ಮಾಡಿದ್ದೆ, ನಿನ್ನೆ ಬೆಂಗಳೂರಿನ ಬೆಳ್ಳಂದೂರಿನ ಹತ್ತಿರ ಒಂದು ಪ್ರಕರಣ ನಡೆದಿದೆ. ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ನಾನು ಹೇಳುವ ಅಂಶಗಳನ್ನು ನೋಟ್ ಮಾಡಿಕೊಳ್ಳಬೇಕಾಗಿ ವಿನಂತಿಸುತ್ತೇನೆ. ಕೆ.ಐ.ಎ.ಡಿ.ಬಿ.ಯಿಂದ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಅದನ್ನು ಒಂದು ಆಸ್ಪತ್ರೆ ಕಟ್ಟಿಸಲು ಮಂಜೂರು ಮಾಡಬೇಕಾಗುತ್ತದೆ. ಕೆ.ಐ.ಎ.ಡಿ.ಬಿ.ಯವರು ಆ ಜಮೀನಿನ ಮಾಲೀಕತ್ವವನ್ನು ಪಡೆದುಕೊಳ್ಳುತ್ತಾರೆ. ತದನಂತರ ಒಬ್ಬ ಬಿಲ್ಡರ್‌ಗೆ ಅದನ್ನು ವರ್ಗಾಯಿಸುವುದಕ್ಕೆ ವ್ಯವಸ್ಥೆ ಮಾಡುತ್ತಾರೆ. ನಿನ್ನೆ ದಿನ ಆಂಧ್ರಪ್ರದೇಶದಿಂದ ಬಂದಂತಹ ಒಂದು ಸಾವಿರ ಜನರು ಮತ್ತು ಬೆಂಗಳೂರಿನಲ್ಲಿರುವ ಪೊಲೀಸರೆಲ್ಲ ಸೇರಿ ಮೂಗಿನ ಮೂಳೆ ಬಿರುಕು ಬಿಡುವ ರೀತಿಯಲ್ಲಿ ಆತನನ್ನು ಹೊಡೆದಿದ್ದಾರೆ. ಸ್ಥಳೀಯ ಪೊಲೀಸರು ಆತನ ಸಹಾಯಕ್ಕೆ ಬಂದಿಲ್ಲ. ದೃಶ್ಯ ಮಾಧ್ಯಮದವರು ಯಾರೂ ಅಲ್ಲಿಗೆ ಬಂದಿಲ್ಲ. ಈ ರೀತಿ ವ್ಯವಸ್ಥಿತವಾಗಿ ಬ್ಲಾಕ್ ಮಾಡಿದ್ದಾರೆ. ಇಲ್ಲಿ ಪ್ರಜಾಪ್ರಭುತ್ವ ಇದೆಯೇ? ಬೆಂಗಳೂರಿನಲ್ಲಿ ಏನು ನಡೆಯುತ್ತಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಕೆ.ಐ.ಎ.ಡಿ.ಬಿ.ಯವರು ಕಾನೂನುಬದ್ಧವಾಗಿ ಆ ಲ್ಯಾಂಡ್ ತೆಗೆದುಕೊಂಡು ಕೊಡಬೇಕಾಗುತ್ತದೆ. ಆ ಲ್ಯಾಂಡ್ ತೆಗೆದುಕೊಳ್ಳುತ್ತಿರುವುದು ಆಸ್ಪತ್ರೆ ಕಟ್ಟುವುದಕ್ಕೆ ಮತ್ತು ಆ ಬಿಲ್ಡರ್‌ಗೆ ಕಟ್ಟಡ ಕಟ್ಟುವುದಕ್ಕಾಗಿ ಕೊಡಲಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇಂತಹ ಪ್ರಕರಣಗಳು ಅವರ ಕಾಲದಲ್ಲಿ ಆಗದಂತೆ ನೋಡಿಕೊಳ್ಳಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಕಳೆದ ಬಾರಿಯ ಮೀಟಿಂಗ್‌ಗೆ ನಾನು ಹಾಜರಾಗಿ ತಿಗಳ ಸಮುದಾಯಕ್ಕೆ ಕೊಡಬೇಕಾದ ಸೌಲಭ್ಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಕಳೆದ ಒಂದು ವರ್ಷದಿಂದ ತಿಗಳ ಸಮುದಾಯಕ್ಕೆ ಯಾವುದೇ ಕಾರ್ಯಕ್ರಮಗಳನ್ನು ನೀಡಿಲ್ಲ, ಅಭಿವೃದ್ಧಿ ನಿಗಮವನ್ನು ರಚನೆ ಮಾಡಿಲ್ಲ. ದಯವಿಟ್ಟು ಇದನ್ನು ಮಾಡಿ ಎಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿದ್ದೆ. ಆದರೆ, ಅವರು ಮಂಡಿಸಿರುವ ಆಯವ್ಯಯದಲ್ಲಿ ಇದನ್ನು ನಮೂದಿಸದೇ ಬಹಳ ಅನ್ಯಾಯ ಮಾಡಿದ್ದಾರೆ. ಈಗ ನಾವು ನಿಂತಿರುವ ಜಾಗವೆಲ್ಲ ಹಿಂದೆ ತಿಗಳ ಸಮುದಾಯಕ್ಕೆ ಸೇರಿತ್ತು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(228) 9.3.2020 4.30 ಪಿಕೆ:ಎಂಡಿ

**ಶ್ರೀ ಪಿ.ಆರ್.ರಮೇಶ್(ಮುಂದುವರೆದಿದೆ)**

ಕಬ್ಬನ್‌ಪಾರ್ಕ್, ಲಾಲ್‌ಬಾಗ್ ಇತ್ಯಾದಿ ಜಾಗಗಳೆಲ್ಲಾ ತಿಗಳರ ಜನಾಂಗದ್ದಾಗಿದೆ. ಈ ಜನಾಂಗದವರು ತಮ್ಮ ಜಾಗಗಳನ್ನು ಕಳೆದುಕೊಂಡಿದ್ದಾರೆ; ದೇವಸ್ಥಾನಗಳನ್ನು ಕಳೆದುಕೊಂಡಿದ್ದಾರೆ. ಇಂತಹ ಒಂದು ಜನಾಂಗಕ್ಕೆ ತಾವು ಸರಿಯಾದ ರೀತಿಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳದೇ ಹೋದರೆ ಅವರು ಬಹಳ ದುಃಖ ಪಡುತ್ತಾರೆ. ದಯವಿಟ್ಟು ಇದನ್ನು ಸರಿಪಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಅರವಿಂದಕುಮಾರ್ ಅರಳಿ (ವಿಧಾನಸಭೆಯಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಉತ್ತರ ಕರ್ನಾಟಕ ಎಂದರೆ ಬಿಜಾಪುರ, ಬೆಳಗಾವಿ, ಕೊಪ್ಪಳ, ಬಳ್ಳಾರಿಯನ್ನಷ್ಟೇ ನೋಡುತ್ತಾರೆ. ಆದರೆ ರಾಜ್ಯಪಾಲರ ಭಾಷಣದಲ್ಲಾಗಲಿ, ಬಜೆಟ್ ಮಂಡನೆ ಮಾಡಿರುವುದರಲ್ಲಾಗಲಿ, ಬೀದರ್, ಗುಲ್ಬರ್ಗಾ, ಯಾದಗಿರಿ ಜಿಲ್ಲೆಗಳ ಬಗ್ಗೆ ಯಾವುದೇ ಚಕಾರ ಎತ್ತಿಲ್ಲ. ಯಾದಗಿರಿಯಲ್ಲಿ ನೆರೆ ಬಂದು ಬೆಳೆಗಳು ಹಾಳಾಗಿವೆ. ಅದರ ಬಗ್ಗೆಯೂ ಚಕಾರ ಎತ್ತಿಲ್ಲ. ಬೀದರ್ ಜಿಲ್ಲೆಯಲ್ಲಿ ಕಾರಂಜ ಯೋಜನೆ, ಚುಳುಕಿ ನಾಲಾ ಇದೆ. ಆದರೆ ಕುಡಿಯುವ ನೀರಿಗೆ ಬಹಳ ತೊಂದರೆ ಇದೆ. ಗೋದಾವರಿ ಬೇಸಿನ್‌ನಲ್ಲಿ ಅನೇಕ ಪ್ರಾಜೆಕ್ಟ್‌ಗಳನ್ನು ಮಾಡುವುದಿದೆ. ಆದರೆ ಅದರ ಬಗ್ಗೆ ಚಕಾರ ಎತ್ತಿಲ್ಲ. ಸಾಧ್ಯವಾದರೆ ಬಜೆಟ್‌ನಲ್ಲಿ ಈ ಯೋಜನೆಗಳನ್ನು ುಟಿಛಿಟಣಜಜ ಮಾಡಿಕೊಂಡು ಬೀದರ್ ಜಿಲ್ಲೆಗೆ ಹೆಚ್ಚಿನ ರೀತಿಯಲ್ಲಿ ಅನುಕೂಲ ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಮೂರು ವಿಚಾರಗಳಿಗೆ ಸಂಬಂಧಪಟ್ಟಂತೆ ಮಾತ್ರ ಮುಖ್ಯಮಂತ್ರಿಗಳಿಂದ ಉತ್ತರ ಬಯಸುತ್ತೇನೆ. ಇಡೀ ನಾಡಿನಾದ್ಯಂತ ಕನ್ನಡಿಗರಿಗೆ ಉದ್ಯೋಗ ಕೊಡಬೇಕು ಎಂದು ಡಾ॥ ಸರೋಜಿನಿ ಮಹಿಷಿ ವರದಿ ಬಗ್ಗೆ ದೊಡ್ಡ ಪ್ರತಿಕ್ರಿಯೆ ಬಂತು. ಈಗಾಗಲೇ ಮೂರು ದಶಕಗಳಾಗಿ ಹೋಗಿದೆ. ತಾವು ಆ ವರದಿಯನ್ನು ಈಗಲಾದರೂ ಅನುಷ್ಠಾನಕ್ಕೆ ತರುವ ದಿಸೆಯಲ್ಲಿ ಸ್ಪಷ್ಟವಾಗಿ ಉತ್ತರವನ್ನು ಕೊಡುತ್ತೀರಿ ಎಂದು ಕನ್ನಡಿಗರ ಪರವಾಗಿ ನಿರೀಕ್ಷೆ ಮಾಡುತ್ತೇನೆ.

ಮೈಸೂರು ಸಕ್ಕರೆ ಕಾರ್ಖಾನೆಯನ್ನು ಸರ್ಕಾರಿ ಸೌಮ್ಯದಲ್ಲೇ ಉಳಿಸಿಕೊಳ್ಳುತ್ತೇವೆ ಎಂದು ತಾವು ಈ ಸದನದಲ್ಲಿ ಮಾತು ಕೊಟ್ಟಿದ್ದೀರಿ. ಹಿಂದೆ ಬಜೆಟ್‌ನಲ್ಲಿ ರೂ. 100 ಕೋಟಿಗಳನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೀಸಲಾಗಿಟ್ಟಿದ್ದರು. ನೀವು ಪಾಂಡವಪುರ ಸಕ್ಕರೆ ಕಾರ್ಖಾನೆಯನ್ನು ಖಾಸಗೀಕರಣ ಮಾಡಿ ಚಿಂತೆ ಇಲ್ಲ; ಶ್ರೀರಾಮ ಸಕ್ಕರೆ ಕಾರ್ಖಾನೆಯನ್ನೂ ಲೀಜ್‌ಗೆ ಕೊಡಿ ಚಿಂತೆ ಇಲ್ಲ. ಆದರೆ, ಏಕೈಕ ಸರ್ಕಾರಿ ಸಕ್ಕರೆ ಕಾರ್ಖಾನೆಯಾದ ಮೈಶುಗರ್ ಕಾರ್ಖಾನೆಯನ್ನು ಉಳಿಸಿಕೊಳ್ಳುವಂತಹ ಪ್ರಯತ್ನ ಮಾಡಬೇಕು.

ಮತ್ತೆ, ಇಡೀ 300 ಶಾಸಕರಿಗೆ ಮೂರು ಕಂತುಗಳಲ್ಲಿ ಅಭಿವೃದ್ಧಿ ನಿಧಿಯನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತಲಾ ಒಂದೂವರೆ ಕೋಟಿಯ ಹಾಗೆ ಒಟ್ಟು ನಾಲ್ಕೂನೂರ ಐವತ್ತು ಕೋಟಿ ಹಣವನ್ನು ಬಿಡುಗಡೆ ಮಾಡಬೇಕಾಗಿದೆ. ಈ ತಿಂಗಳಲ್ಲಿ ಸದರಿ ಅನುದಾನವನ್ನು ಬಿಡುಗಡೆ ಮಾಡದೇ ಹೋದರೆ ಅದು ಲ್ಯಾಪ್ಸ್ ಆಗುತ್ತದೆ. 300 ಜನ ಶಾಸಕರು 2 ಕೋಟಿ ರೂ.ಗಳ ಕಾರ್ಯಕ್ರಮವನ್ನು ಕೊಟ್ಟಿದ್ದೇವೆ. ಆದರೆ ಇದುವರೆಗೂ ಬಿಡುಗಡೆ ಆಗಿರುವುದು ಕೇವಲ ರೂ. 50 ಲಕ್ಷ ಮಾತ್ರ. ತಲಾ ರೂ. 1.50 ಕೋಟಿ 300 ಜನ ಶಾಸಕರಿಗೆ ಬಿಡುಗಡೆಯಾಗಬೇಕು. ರೂ. 450 ಕೋಟಿ ಹಣ ಈ ತಿಂಗಳಲ್ಲೇ ಬಿಡುಗಡೆ ಆಗಬೇಕು, ಇಲ್ಲದೆ ಹೋದರೆ ಲ್ಯಾಪ್ಸ್ ಆಗುತದೆ. ದಯಮಾಡಿ ತಾವು ಎಂಎಲ್ಎ, ಎಂಎಲ್‌ಸಿ ಪ್ರದೇಶಾಭಿವೃದ್ಧಿ ಫಂಡ್‌ನ ಹಣ ಬಿಡುಗಡೆ ಮಾಡುತ್ತೇವೆ ಎಂದು ಘೋಷಣೆ ಮಾಡಬೇಕು.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಮ್ಮಿಶ್ರ ಸರ್ಕಾರ ಸಾಲ ಮನ್ನಾ ಮಾಡಿದ ಸಂದರ್ಭದಲ್ಲಿ ಬಹುತೇಕ ಹಣ ಸಹಕಾರಿ ಬ್ಯಾಂಕುಗಳಿಗೆ, ರೈತರ ಅಕೌಂಟ್‌ಗೆ ಪಾವತಿಯಾಗಿದೆ. ಹಿಂದಿನ ಸರ್ಕಾರ ಮಾಡಿದ ಸಾಲದ ಮನ್ನಾ ಈಗಲೂ ಕೂಡ ಮುಂದುವರೆಸಿಕೊಂಡು ಬರುತ್ತಿದ್ದೀರಿ. ಆದರೆ ಈಗಾಗಲೇ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಪಹಣಿಯಲ್ಲಿ ಹೆಸರು ಬದಲಾವಣೆಯಾಗಿರುತ್ತದೆ. ಉದಾಹರಣೆಗೆ ತಿಮ್ಮಪ್ಪ ಎನ್ನುವುದರ ಬದಲಾಗಿ ತಿಮ್ಮಯ್ಯ ಎಂದಾಗಿರುತ್ತದೆ. ಆಧಾರ್ ಕಾರ್ಡ್‌ನಲ್ಲಿ ನಮೂದಿಸಿರುವ ಹೆಸರಿನಲ್ಲಿರುವ ವ್ಯತ್ಯಾಸ ಮತ್ತು ರೇಷನ್ ಕಾರ್ಡುಗಳಲ್ಲಿ ನಮೂದು ಮಾಡುವ ಹೆಸರುಗಳಲ್ಲಿ ವ್ಯತ್ಯಾಸಗಳಾಗಿರುತ್ತವೆ. ಇಡೀ ರಾಜ್ಯಾದ್ಯಂತ ಈ ರೀತಿ ವ್ಯತ್ಯಾಸಗಳಾಗಿ ಸಮಸ್ಯೆ ಎದುರಿಸುತ್ತಿರುವ ರೈತರಿಗೆ ಇನ್ನೂ ಸಾಲ ಮನ್ನಾ ಸೌಲಭ್ಯ ಸಿಕ್ಕಿಲ್ಲ. ಇದರ ಬಗ್ಗೆ ಈಗಾಗಲೇ ಸಹಕಾರ ಸಂಸ್ಥೆಯ ಅಧಿಕಾರಿಗಳು ವೆರಿಫಿಕೇಷನ್ ಮುಗಿಸಿದ್ದಾರೆ. ಬೆಂಗಳೂರಿನ ಡಿಸಿಸಿ ಬ್ಯಾಂಕ್‌ನಲ್ಲಿ ಕೊಟ್ಟಿರುವಂತಹ ಸಾಲವನ್ನು ಕೋಲಾರ ಡಿಸಿಸಿ ಬ್ಯಾಂಕ್‌ನವರು ವೆರಿಫಿಕೇಷನ್ ಮಾಡಿದ್ದಾರೆ. ಕೋಲಾರ ಡಿಸಿಸಿ ಬ್ಯಾಂಕ್‌ನವರು ಕೊಟ್ಟಿರುವಂತಹ ಸಾಲದ ಸಂಬಂಧ ಬೆಂಗಳೂರು ಡಿಸಿಸಿ ಬ್ಯಾಂಕ್‌ನವರು ಹೋಗಿ ವೆರಿಫಿಕೇಷನ್ ಮಾಡಿದ್ದಾರೆ. ಇದರ ಬಗ್ಗೆ ಸ್ಪಷ್ಟ ನಿಲುವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳದೇ ಹೋದರೆ ರೈತರಿಗೆ ಬಹಳ ಕಷ್ಟವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಿ ಆದ್ಯತೆಯ ಮೇಲೆ ಮಾರ್ಚ್ 31ರ ಒಳಗೆ ಇದಕ್ಕೆ ಮುಕ್ತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀಮತಿ ಜಯಮ್ಮ (ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಒಂದು ಕಡೆ ಅತಿವೃಷ್ಟಿಯಾದರೆ ನಮ್ಮ ಚಿತ್ರದುರ್ಗದ ಕಡೆ ಅನಾವೃಷ್ಟಿಯಾಗಿದೆ. ಕುಡಿಯುವುದಕ್ಕೆ ನೀರಿಲ್ಲ; ದನ-ಕರುಗಳಿಗೆ ಕುಡಿಯಲು ನೀರಿಲ್ಲ. ಹಿಂದೆ ಸಿದ್ಧರಾಮಯ್ಯನವರ ಸರ್ಕಾರ ಇದ್ದಾಗ ವಿಶ್ವೇಶ್ವರಯ್ಯ ಜಲ ನಿಗಮ ಎಂದು ಮಾಡಿ ಅದಕ್ಕೆ ಪ್ರತ್ಯೇಕವಾಗಿ ಹಣವನ್ನು ಎತ್ತಿಟ್ಟಿದ್ದರು. ವಾಣಿವಿಲಾಸ ಸಾಗರದವರೆಗೆ ಈಗ ನೀರು ಬಂದಿದೆ. ಇನ್ನೂ ಅದರ ಕಾರ್ಯ ಪೂರ್ಣಗೊಂಡಿಲ್ಲ, ಕೆರೆಗಳಿಗೆ ನೀರು ತುಂಬಿಸಿದರೆ ಅಂತರ್ಜಲ ಹೆಚ್ಚಾಗುತ್ತದೆ. ರೈತರು ಎಲ್ಲಾ ಜನ ಸಾಮಾನ್ಯರಂತೆ ಜೀವನ ನಡೆಸಲು ಅನುಕೂಲವಾಗುತ್ತದೆ. ಸದರಿ ಕಾರ್ಯ ಪೂರ್ಣಗೊಳ್ಳಬೇಕು. ತೋಟಗಳು ಹಾಳಾಗಿವೆ. ಎಲೆ ತೋಟ, ಅಡಿಕೆ ತೋಟ, ತೆಂಗು, ಮಾವು, ಬೇವು ಏನೂ ಉಳಿದಿಲ್ಲ. ಅಲ್ಲಿನ ಜನ ಬೇರೆ ಕಡೆ ವಲಸೆ ಹೋಗುವ ಪರಿಸ್ಥಿತಿ ಇದೆ. ಆದ್ದರಿಂದ ಸದರಿ ಜಲ ನಿಗಮಕ್ಕೆ ಪ್ರತ್ಯೇಕವಾಗಿ ಹಣ ಎತ್ತಿಟ್ಟು ಆ ಕಾರ್ಯವನ್ನು ಪೂರ್ಣಗೊಳಿಸಿದರೆ ಅದಕ್ಕಿಂತ ಬೇರೆ ಪುಣ್ಯದ ಕೆಲಸ ಬೇರೊಂದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ರೂ. 150 ಕೋಟಿ ಶಾಸಕರ ಅನುದಾನ ಬಿಡುಗಡೆಯಾಗಿಲ್ಲ. 3 ಕಂತುಗಳು ಬಾಕಿ ಇವೆ. **(ಗೊಂದಲ)**

**ಶ್ರೀ ಬಸವರಾಜ್ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮೊನ್ನೆ ಮಾತನಾಡುವಾಗ, ಮಾನ್ಯ ಮುಖ್ಯಮಂತ್ರಿಗಳು ಬೀದರ್‌ಗೆ ಹೋಗಿ ಅಲ್ಲಿ 20 ಕ್ವಿಂಟಾಲ್ ತೊಗರಿ ಖರೀದಿ ಮಾಡುತ್ತೇವೆ ಎಂದು ಹೇಳಿ ಬಂದಿದ್ದಾರೆ ಎನ್ನುವ ಮಾತನ್ನು ಹೇಳಿದ್ದೆ. ತೊಗರಿಯನ್ನು ಖರೀದಿ ಮಾಡುತ್ತಾರೋ ಇಲ್ಲವೋ ಎನ್ನುವ ಕ್ಲ್ಯಾರಿಫಿಕೇಷನ್ ಬೇಕು.

ಹೈದರಾಬಾದ್-ಕರ್ನಾಟಕಕ್ಕೆ ರೂ. 1500 ಕೋಟಿ ಬಿಡುಗಡೆ ಮಾಡುತ್ತೇವೆ ಎಂದು ಘೋಷಣೆ ಮಾಡಿದ್ದಾರೆ. ಆದರೆ, ಆ ಬಜೆಟ್ ಹಣವನ್ನು ಖರ್ಚು ಮಾಡುವುದಕ್ಕೆ ಅಲ್ಲಿ establishment ಸರಿಯಾಗಿಲ್ಲ. Regional level ನಲ್ಲಿ Executive Engineer, Assistant

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Executive Engineer ಹಾಗೂ ಐದಾರು ಇಂಜಿನಿಯರ್‌ಗಳ separate establishment ಮಾಡಿ, ಕಾಮಗಾರಿಗಳನ್ನು ಅದೇ ವರ್ಷದಲ್ಲಿ ಪೂರ್ಣಗೊಳಿಸುವ ಕೆಲಸ ಮಾಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಎಂ.ಸಿ.ವೇಣುಗೋಪಾಲ್(ವಿಧಾನಸಭೆಯಿಂದ ಆಯ್ಕೆಯಾದವರು):–**ಮಾನ್ಯ ಸಭಾಪತಿಯವರೇ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನ ಮೇಲೆ ಮಾತನಾಡಿದ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಸರ್ವತೋಮುಖ ಅಭಿವೃದ್ಧಿ ಬಗ್ಗೆ ಹೇಳಿದ್ದಾರೆ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಬಜೆಟ್‌ನ ಮೇಲೆ ಮಾತನಾಡುತ್ತಿದ್ದಾರೆ. ರಾಜ್ಯಪಾಲರ ಭಾಷಣಕ್ಕೆ ಸೀಮಿತವಾಗಿ ಮಾತನಾಡಬೇಕು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವ ಪೂರ್ವದಲ್ಲಿ ನಾನು ಕೆಲವು ಮಾತುಗಳನ್ನು ಹೇಳಿದ್ದೆ. ಅವರು ಈ ರಾಜ್ಯದಲ್ಲಿ ಲೋಕಸಭೆ ಚುನಾವಣೆಯಲ್ಲಿ 25 ಸ್ಥಾನಗಳು ಬಂದಿವೆ ಎಂದು ಹೇಳಿದಾಗ, ನಾನು, 26 ಸ್ಥಾನಗಳು ಬಂದಿವೆ ಎಂದು ಹೇಳಿದೆ. ಏಕೆಂದರೆ supported by BJP party ಮಂಡ್ಯ ಕ್ಷೇತ್ರವನ್ನು ಗೆದ್ದಿದೆ. ಉತ್ತರ ಕರ್ನಾಟಕದಲ್ಲಿ sweep ಮಾಡಿ ಒಟ್ಟು 117 ಕೆಳಮನೆ ಸದಸ್ಯರು ಆಯ್ಕೆಯಾಗಿದ್ದಾರೆ. ನಿಮ್ಮ ಪಕ್ಷಕ್ಕೆ ಇಷ್ಟೆಲ್ಲಾ ಬೆಂಬಲ ಸಿಕ್ಕಿದೆ. ಉತ್ತರ ಕರ್ನಾಟಕದ ಪ್ರತಿಷ್ಠಿತ ಕೃಷ್ಣಾ ಮೇಲ್ದಂಡೆ ಯೋಜನೆಗೆ ರೂ. 25 ಸಾವಿರ ಕೋಟಿ ಪ್ರತಿವರ್ಷ ಇಟ್ಟು, 3 ವರ್ಷದಲ್ಲಿ ಪೂರ್ತಿ ಮಾಡುವಂತಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು ಎಂದು ಹೇಳಿದ್ದೆವು. ತಾವು ಮುಖ್ಯಮಂತ್ರಿಯಾಗಿ ಮೊದಲನೆ ಬಾರೀ ಬಂದಿದ್ದಾಗ, ತಮಗೆ ಅಭಿನಂದನೆ ಸಲ್ಲಿಸಿ, ಸಿದ್ಧವನಹಳ್ಳಿ ನಿಜಲಿಂಗಪ್ಪನವರು 4 ಸಲ ಮುಖ್ಯಮಂತ್ರಿಗಳಾಗಿದ್ದಂತೆ ತಾವು ಕೂಡ 4 ಸಲ ಮುಖ್ಯಮಂತ್ರಿಯಾಗಿ ಆ ದಾಖಲೆಯನ್ನು ಸರಿಗಟ್ಟಿದ್ದೀರಿ. ಆದರೆ ಕೃಷ್ಣಾ ಮೇಲ್ದಂಡೆ ಯೋಜನೆಗೆ ತಾವು ಯಾವುದೇ ದೃಷ್ಟಿಯಿಂದ... "beg, borrow or steal" ಎನ್ನುವ ಶಬ್ದ ಬಳಕೆ ಮಾಡಿದ್ದೆ. ನೀವು ನಿಮ್ಮ ಅವಧಿಯಲ್ಲಿ ಕೆಲಸ ಪೂರ್ತಿ ಮಾಡಬೇಕು ಎನ್ನುವ ಮಾತುಗಳನ್ನು ಹೇಳಿದ್ದೆ. ಈಗ ಆ ಮಾತುಗಳನ್ನು ಪುನರಾವರ್ತನೆ ಮಾಡುವುದಕ್ಕೆ ಹೋಗುವುದಿಲ್ಲ. ವರ್ಷಕ್ಕೆ ರೂ. 25 ಸಾವಿರ ಕೋಟಿ ಹಣವನ್ನು ಕೃಷ್ಣಾ ಮೇಲ್ದಂಡೆ ಯೋಜನೆಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಗಾದರೂ ಮಾಡಿ, ಎಲ್ಲಿಂದಾದರೂ ಹಣ ತಂದು ಕೊಡುತ್ತೇನೆ ಎಂದು ಹೇಳಿದ್ದಕ್ಕೆ ವಿಶೇಷವಾದ ಕೃತಜ್ಞತೆ ಸಲ್ಲಿಸುತ್ತೇನೆ.

**(229) 09–03–2020 4.40 ಡಿಎಸ್–ಎಂಡಿ**

**ಶ್ರೀ ಬಿ.ಎಸ್.ಯಡಿಯೂರಪ್ಪ:–** ನಾನು ಕೊಡುತ್ತೇನೆಂದು ಹೇಳಲಿಲ್ಲ. ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಆ ದಿಕ್ಕಿನಲ್ಲಿ ಕೇಂದ್ರದ ಮನವೊಲಿಸಿ ಎಲ್ಲಾ ರೀತಿಯ ಪ್ರಯತ್ನ ಮಾಡೋಣ ಎಂದು ಹೇಳಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು thanks ಹೇಳಿರುವ ಉದ್ದೇಶವೇನೆಂದರೆ, ಅವರು ಹಣ ಕೊಡಲಿ ಎಂದು. ಅವರು ಪ್ರಯತ್ನ ಮಾಡುತ್ತೇನೆಂದು ಹೇಳಿದ್ದಾರಲ್ಲಾ, I will try my best ಎಂದು ಹೇಳಿದ್ದೀರೆಂದು ನಾನು ಭಾವಿಸುತ್ತೇನೆ. ಆ ದಿಸೆಯಲ್ಲಿ ಅವರು ಕಾರ್ಯೋನ್ಮುಖವಾಗಲಿ. ಏಕೆಂದರೆ ಅದು ಬಹಳ ಮಹತ್ವವಿದೆ. ಉತ್ತರ ಕರ್ನಾಟಕದ ಜನ ಬಹಳ ಆಕ್ರೋಶರಾಗಿದ್ದಾರೆ, ಬಹಳ ನೋವಿನಲ್ಲಿದ್ದಾರೆ, ಬಹಳ ಕಷ್ಟದಲ್ಲಿದ್ದಾರೆ, ಬಹಳ ಶೋಚನಿಯವಾದ ಸ್ಥಿತಿಯಲ್ಲಿದ್ದಾರೆ. ಆ ಜಿಲ್ಲೆಗಳಿಗೆ ನಾವು ಬರಲಾರದ ಸ್ಥಿತಿ ನಿರ್ಮಾಣವಾಗಿದೆ. ಅದಕ್ಕೆ ನಾನು ಒತ್ತಾಯ ಮಾಡಿ ಹೇಳಿದ್ದೇನೆ. UKP (Upper Krishna Project) ಗೆ ಸಂಬಂಧಿಸಿದಂತೆ ಆಯುಕ್ತರು, ಮಹಾ ವ್ಯವಸ್ಥಾಪಕರು, ಉಪ ಮಹಾ ವ್ಯವಸ್ಥಾಪಕರು, ವಿಶೇಷ ಜಿಲ್ಲಾಧಿಕಾರಿಗಳು, 855 ಹುದ್ದೆಗಳು ಖಾಲಿ ಇವೆ. ಅದರಲ್ಲಿ 395 ಹುದ್ದೆಗಳು ಮಾತ್ರ ಭರ್ತಿಯಾಗಿವೆ. ಇನ್ನು 460 ಹುದ್ದೆಗಳು ಖಾಲಿ ಇವೆ. ಅಂದರೆ ಶೇಕಡ 58 ರಷ್ಟು ಹುದ್ದೆಗಳು ಖಾಲಿ ಇವೆ. ಈಗ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವವರು ಯಾರು? ಈ ಅಧಿಕಾರಿಗಳನ್ನು ತಕ್ಷಣವೇ forthwith ಭರ್ತಿ ಮಾಡಿ. ತಮ್ಮ ಮುಖಾಂತರ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ. ಇವತ್ತೇನು ಖಾಲಿ ಹುದ್ದೆಗಳಿವೆ ಆ ಹುದ್ದೆಗಳನ್ನು ಭರ್ತಿ ಮಾಡಿ. ಅದರ ಜೊತೆಗೆ ಇವತ್ತು ಮೇಲ್ಮನೆ ಸದಸ್ಯರಿಗೆ ವರ್ಷಕ್ಕೆ ಎರಡು ಕೋಟಿ ರೂಪಾಯಿ ಪ್ರದೇಶಾಭಿವೃದ್ಧಿ ನಿಧಿ ಇದೆ. 50 ಲಕ್ಷ ರೂಪಾಯಿ ಬಂದಿದೆ. ದಯಮಾಡಿ 150 ಲಕ್ಷ ರೂಪಾಯಿಗಳು ಪೆಂಡಿಂಗ್ ಏನಿದೆ ಅದನ್ನು ಕ್ಲಿಯರ್ ಮಾಡುವುದಕ್ಕೆ ಕ್ರಮ ಕೈಗೊಳ್ಳಿ. ಆರೂವರೆ ವರ್ಷ ನೀವು ಏನು ಮಾಡಿದ್ದೀರಿ ಎಂದು ಮಾನ್ಯ ಮುಖ್ಯಮಂತ್ರಿಗಳು ಕೇಳಿದರು. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ನಾವು ಒಂದು ಮತ್ತು ಎರಡನೇ ಹಂತಕ್ಕೆ ನಾವು ಕೆಲಸ ಮಾಡಿದ್ದೇವೆ. ಆದರೆ ಕೃಷ್ಣ ಮೇಲ್ದಂಡೆ ಯೋಜನೆ ಮೂರನೇ ಹಂತದಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

519.6 ರಿಂದ 524.256 ಅಡಿಯವರೆಗೆ ಎತ್ತರಿಸಿದ್ದೇವೆ. ಜುಲೈ 2019 ರಲ್ಲಿ ಅವರು ಅಧಿಕಾರಕ್ಕೆ ಬರುವಂತಹ ಪೂರ್ವದಲ್ಲಿ ನಾವು ಎಷ್ಟು ಖರ್ಚು ಮಾಡಿದ್ದೇವೆಂದರೆ 10,124 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಉಳಿದೆಲ್ಲಾ backlog ಅಂದರೆ ಹಿಂದೆ ಇದ್ದದ್ದು. ಒಂದನೇ ಹಂತ, ಎರಡನೇ ಹಂತದ ಜೊತೆಗೆ ಮೂರನೇ ಹಂತಕ್ಕೆ exclusively for 3rd stage 10,124 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ನಾವು ಬಹಳ ಖರ್ಚು ಮಾಡಿದ್ದೇವೆಂದು ಹೇಳುತ್ತಿಲ್ಲ. ಅವರು ಆರು ತಿಂಗಳಲ್ಲೇ ಎಲ್ಲಾ ಜಾದು ಮಾಡಿ ಎಂದು ನಾನು ಹೇಳುವುದಿಲ್ಲ. ಆರು ತಿಂಗಳ ಅವಧಿ ಕಡಿಮೆ ಎಂದು ನಾನು ಭಾವಿಸುತ್ತೇನೆ. ಆದರೆ ಆರು ತಿಂಗಳಲ್ಲಿ ನಿಧಾನವಾಗಿದ್ದಾರೆ. No doubt, we will give a long rope to you. ಮುಂದಿನ ದಿನಮಾನಗಳಲ್ಲಿ ಅತ್ಯಂತ ತೀವ್ರಗತಿಯಿಂದ ಇಡೀ ಕರ್ನಾಟಕ ರಾಜ್ಯದ ಎಲ್ಲಾ ದೃಷ್ಟಿಯಿಂದ ಅಭಿವೃದ್ಧಿಯಾಗುವುದಕ್ಕೆ ಎಲ್ಲಾ ಕ್ಷೇತ್ರಗಳಲ್ಲಿ ಏನು ವಿಫಲರಾಗಿದ್ದಾರೆ ಅದನ್ನು ಸರಿದೂಗಿಸುವಂತಹ ಕೆಲಸ ಅವರಿಂದ ಆಗಲಿ ಎಂದು ನಾನು ಮನವಿ ಮಾಡುತ್ತಿದ್ದೇನೆ.

**ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನಲ್ಲಿ ನಮ್ಮ ಹಿರಿಯ ಸದಸ್ಯರುಗಳೆಲ್ಲಾ ಬಹಳಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ಕಾರ್ಯರೂಪಕ್ಕೆ ತರುವಂತಹ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ನಮ್ಮ ಮಾನ್ಯ ಎಸ್.ಆರ್.ಪಾಟೀಲ್‌ರವರು ಏನು ಹೇಳಿದ್ದಾರೆ ಇದು ಎಲ್ಲರಿಗೂ ಸಂಬಂಧಪಟ್ಟ ವಿಷಯ. ಹಣಕಾಸಿನ ಇತಿಮಿತಿಯೊಳಗೆ ಮೂರು ವರ್ಷಗಳಲ್ಲಿ ಒಂದು ರೂಪಕ್ಕೆ ತರುವಂತಹ ಪ್ರಾಮಾಣಿಕ ಪ್ರಯತ್ನ ಎಲ್ಲರೂ ಒಟ್ಟಾಗಿ ಸೇರಿ ಮಾಡಬೇಕು. ನಾನು ಕೇಂದ್ರಕ್ಕೆ ಹೋಗಿ ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳನ್ನು, ಸಚಿವರನ್ನು ಭೇಟಿಯಾಗಿ ಹೆಚ್ಚು ಹಣವನ್ನು ಬಿಡುಗಡೆಗೊಳಿಸುವುದಕ್ಕೆ ಆದ್ಯತೆ ಕೊಡಬೇಕೆಂದು ಒತ್ತಾಯವನ್ನು ಮಾಡುವವನಿದ್ದೇನೆ. ಈ ಅಮೃತ ಮಹಲ್ ತಳಿಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಬೀದರ್ ಪಶು ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ಎಲ್ಲಾ ತಳಿಗಳ ಸಂತಾನ ಅಭಿವೃದ್ಧಿ ಬಗ್ಗೆ ಸಂಶೋಧನೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಅಲ್ಲಿ ಸುಮಾರು 52,000 ಎಕರೆ ಭೂಮಿ ಮಾತ್ರ ಉಳಿದಿದೆ, ಉಳಿದಿರುವ ಭೂಮಿಯಲ್ಲಾ ಕಬಳಿಸಿದ್ದಾರೆ, ಇದನ್ನಾದರೂ ಉಳಿಸಿಕೊಳ್ಳಬೇಕೆನ್ನುವ ಮಾತನ್ನು ಹೇಳಿದ್ದಾರೆ. ಅವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ತಕ್ಷಣ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಅಗತ್ಯವಿದ್ದರೆ ನಾನೇ ಸ್ವತಃ ಸ್ಥಳ ಪರಿಶೀಲನೆ ಮಾಡಿ ಇರುವಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭೂಮಿಯನ್ನಾದರೂ ಉಳಿಸಿಕೊಂಡು ಅದಕ್ಕೆ ಬೇಕಾದಂತಹ ಬಂದೋಬಸ್ತ್ ಮಾಡುವ ಕಡೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಮಹಿಳೆಯರೇ 90 ಭಾಗ ಹೈನುಗಾರಿಕೆಯಲ್ಲಿ ತೊಡಗಿರುತ್ತಾರೆ. ಅದಕ್ಕೆ ತೆರಿಗೆ ಹಾಕುತ್ತಿದ್ದಾರೆ. ಕೇಂದ್ರದಿಂದ ಅದಕ್ಕೇನಾದರೂ ಮಾಡಿ ತೆರಿಗೆ ಹಾಕದ ಹಾಗೆ ಗಮನಹರಿಸಬೇಕೆಂದು ಹೇಳಿದ್ದಾರೆ. ಆ ಕಡೆ ನಾನು ಗಮನವನ್ನು ಕೊಟ್ಟು ನನ್ನ ಪ್ರಯತ್ನವನ್ನು ಮಾಡುತ್ತೇನೆ. ಹೈದ್ರಾಬಾದ್-ಕರ್ನಾಟಕದಲ್ಲಿ ಶಿಕ್ಷಕರ ಹುದ್ದೆಗಳು ಖಾಲಿ ಇವೆ ಅದರ ಬಗ್ಗೆ ಗಮನ ಕೊಡಬೇಕೆಂದು ಹೇಳಿದ್ದಾರೆ. ಆ ಕಡೆ ಗಮನ ಕೊಡುತ್ತೇನೆ. ಬೆಂಗಳೂರು ನಗರದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಆ ಕಡೆ ವಿಶೇಷವಾದ ಗಮನ ಕೊಡಬೇಕೆಂದು ಹೇಳಿದ್ದಾರೆ. ಅದೇ ರೀತಿ traffic management ಬಗ್ಗೆಯೂ ಗಮನ ಕೊಡಬೇಕು, ಅದರ ಬಗ್ಗೆ ಎರಡು ಮಾತಿಲ್ಲ. ಅದರ ಬಗ್ಗೆ ಎಷ್ಟು ಮಾಡಿದರೂ ಕಡಿಮೆಯೇ ಆಗಿದೆ. ಬೆಂಗಳೂರು ಐಟಿ-ಬಿಟಿ ನಗರ ಇಡೀ ಜಗತ್ತಿನ ಎಲ್ಲಾ ಜನರು ಬರುವಂತಹ ಈ ಸ್ಥಳದಲ್ಲಿ ರಸ್ತೆಗಳಾಗಬೇಕು, traffic congestion ಕಡಿಮೆಯಾಗಬೇಕು, ಇದಕ್ಕೆ ಏನೇನು ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನೆಲ್ಲಾ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ತಾವೆಲ್ಲರೂ ನೋಡಿರಬಹುದು, ನನ್ನ ಬಜೆಟ್‌ನಲ್ಲಿ ಗರಿಷ್ಠ ಹಣವನ್ನು ನಾನು ಬೆಂಗಳೂರು ನಗರಕ್ಕೆ ಕೊಟ್ಟಿದ್ದೇನೆ. ಆ ಹಣ ಸದ್ವಿನಿಯೋಗವಾಗುವುದಕ್ಕೆ ಬೆಂಗಳೂರಿನ ಜನತೆ ಪ್ರಯತ್ನ ಮಾಡಿದರೆ ಎರಡು-ಮೂರು ವರ್ಷಗಳಲ್ಲಿ ಬೆಂಗಳೂರು ಸಮಗ್ರ ಅಭಿವೃದ್ಧಿಯಾಗುತ್ತದೆ ಎನ್ನುವ ವಿಶ್ವಾಸ ನನಗಿದೆ. ಆ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ.

ಇನ್ನು ಎಂ.ಎಲ್.ಎ., ಎಂ.ಎಲ್.ಸಿ.ಗಳ ಸ್ಥಳೀಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಈಗಾಗಲೇ PD (Personal Deposit Account) ಖಾತೆಯಲ್ಲಿ 700 ಕೋಟಿ ರೂಪಾಯಿ ಇದೆ. ಈ ಹಣ ಸದುಪಯೋಗವಾಗುತ್ತಿಲ್ಲ. ಎಂ.ಎಲ್.ಎ., ಎಂ.ಎಲ್.ಸಿ.ಗಳು ಆ ಹಣವನ್ನು ಖರ್ಚು ಮಾಡುತ್ತಿಲ್ಲ.

**(ಗೊಂದಲ)**

700 ಕೋಟಿ ರೂಪಾಯಿ PD Account ನಲ್ಲಿದೆ ಆ ಎಲ್ಲಾ ಹಣವನ್ನು ಎಂ.ಎಲ್.ಎ., ಎಂ.ಎಲ್.ಸಿ. ಗಳಿಗೆ ಏನು ಇನ್ನು ಕಂತು ಬಾಕಿ ಇದೆ ಅದನ್ನು ಸಂಪೂರ್ಣವಾಗಿ ಕೆಲಸ-ಕಾರ್ಯಗಳಿಗೆ ಉಪಯೋಗ ಮಾಡಿಕೊಳ್ಳಬಹುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಜಿಲ್ಲಾಧಿಕಾರಿಗಳು ಏನು ಹೇಳುತ್ತಿದ್ದಾರೆಂದರೆ, ಈಗಾಗಲೇ ಅದನ್ನು ಅಪ್ರೂವಲ್ ಮಾಡಿಬಿಟ್ಟಿದ್ದೇವೆ. ಬಿಲ್ ಬಂದಾಗ ಕೊಡುವುದಕ್ಕೆ ಹಣ ಇಟ್ಟಿದ್ದೇವೆ, ಆ ಹಣ ಕೊಡುವುದಕ್ಕಾಗುವುದಿಲ್ಲ, ಅಡಿಷನಲ್ ಆಗಿ ಬಂದರೆ ಮಾತ್ರ ಹಣ ಕೊಡುತ್ತೇವೆಂದು ಹೇಳಿದರು.

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಮಾನ್ಯ ಸಭಾಪತಿಯವರೇ, 700 ಕೋಟಿ ರೂಪಾಯಿ ಏನಾಗುತ್ತದೆಂದು ಮುಂದೆ ನೋಡೋಣ. ಎಂ.ಎಲ್.ಎ., ಎಂ.ಎಲ್.ಸಿ. ಗಳಿಗೆ ಏನು ಹಣ ಕೊಡಬೇಕಾಗಿದೆ ಅದನ್ನು ತಕ್ಷಣ ಬಿಡುಗಡೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಧನ್ಯವಾದಗಳು.

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆ ಎಲ್ಲಾ ವಿಷಯಗಳನ್ನು ನಾನು ಚರ್ಚೆಮಾಡುವುದಕ್ಕೆ ಹೋಗುವುದಿಲ್ಲ. ಚಿತ್ರದುರ್ಗದಲ್ಲಿ ಬರಗಾಲ ಇದೆ, ಅಲ್ಲಿ ಕೆರೆಕಟ್ಟೆಗಳಿಗೆ ನೀರು ತುಂಬಿಸಬೇಕೆನ್ನುವ ಮಾತನ್ನು ಹೇಳಿದ್ದಾರೆ. ಅದು ನಮ್ಮ ಆದ್ಯತೆಯಾಗಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಹಿಂದುಳಿದ ವರ್ಗದ ಅಭಿವೃದ್ಧಿಗೂ ನಾನು ವಿಶೇಷವಾದ ಗಮನ ಕೊಡುತ್ತೇನೆ. ಉತ್ತರ ಕರ್ನಾಟಕದ ಅಭಿವೃದ್ಧಿಗೂ ಗಮನ ಕೊಡುತ್ತೇನೆಂದು ನಾನು ಈ ಸಂದರ್ಭದಲ್ಲಿ ಭರವಸೆ ಕೊಡುತ್ತೇನೆ. ದಯಮಾಡಿ ಇದಕ್ಕೆಲ್ಲಾ ಮಾನ್ಯ ಸದಸ್ಯರುಗಳು ಸಹಕರಿಸಬೇಕು. ಬಹಳಷ್ಟು ವಿಷಯಗಳಿವೆ ಅವುಗಳಿಗೆಲ್ಲಾ ನಾನು ಉತ್ತರ ಕೊಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರೆಲ್ಲರೂ ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ ಆ ಸಲಹೆಗಳಿಗೆಲ್ಲಾ ನಾನು ಗಮನ ಕೊಡುತ್ತೇನೆ. ನಮಸ್ಕಾರ, ಧನ್ಯವಾದಗಳು.

**ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ನಿರ್ಣಯವನ್ನು ಮತಕ್ಕೆ ಹಾಕುವುದು**

**ಸಭಾಪತಿಯವರು:** ಪ್ರಶ್ನೆ ಏನೆಂದರೆ,

“ದಿನಾಂಕ:17.02.2020 ರಂದು ವಿಧಾನ ಮಂಡಲದ ಸದಸ್ಯರುಗಳನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಪರಿಷತ್ತಿನ ಸದಸ್ಯರುಗಳಾದ ನಾವು ಘನತೆವೆತ್ತ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ" ಎಂಬ ಪ್ರಸ್ತಾವನೆಯನ್ನು ಸದನದ ಮತಕ್ಕೆ ಹಾಕುತ್ತೇನೆ;

**ಪ್ರಸ್ತಾವವನ್ನು ಅಂಗೀಕರಿಸಲಾಯಿತು**

"ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳನ್ನು ಉದ್ದೇಶಿಸಿ ಮಾಡಿದ ಭಾಷಣಕ್ಕೆ ಸಮರ್ಪಿಸಿದ ವಂದನಾ ನಿರ್ಣಯವನ್ನು ಸದನವು ಅಂಗೀಕರಿಸಿತು ಹಾಗೂ ಅದಕ್ಕೆ ಸದನದ ಒಪ್ಪಿಗೆ ದೊರೆಯಿತು"

**ವಂದನಾ ನಿರ್ಣಯವನ್ನು ಘನತೆವೆತ್ತ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು**

**05. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ:589**
**(ಉತ್ತರ ಲಗತ್ತಿಸಲಾಗಿದೆ)**

**ಡಾ||ಜಯಮಾಲ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಒದಗಿಸಿದ್ದಾರೆ. ಮಾನ್ಯ ಸಚಿವರಿಗೆ ಈ ಶಿಕ್ಷಣ ವ್ಯವಸ್ಥೆಯ ಬಗ್ಗೆ ಅತ್ಯಂತ ಆಳವಾದ ಅನುಭವಗಳು ಇದೆ. ನಾನು ಮಕ್ಕಳ್ಳಲ್ಲಿರುವಂತಹ ಕೀಳರಿಮೆಯ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ. ಮಕ್ಕಳ್ಳಲ್ಲಿ ಇತ್ತೀಚಿನ ದಿನಗಳಲ್ಲಿ ಹಿಂಜರಿಕೆ ಮತ್ತು ಕೀಳರಿಮೆ ಇದೆ. ತಂದೆ-ತಾಯಿಗಳ ಸ್ಥಿತಿಗತಿಗಳ ಬಗ್ಗೆಯೂ ಕೀಳರಿಮೆ ಇದೆ. ಈಗ ತಂದೆ-ತಾಯಿಗಳಿಗೂ ಕೂಡ ಕೀಳರಿಮೆ ಇರುವುದನ್ನು ನಾವು ಕಾಣುತ್ತಿದ್ದೇವೆ. ಇದಕ್ಕಾಗಿ ಯಾವುದಾದರೂ ಅಧ್ಯಯನ ನಡೆಸಿದ್ದೀರೇ; ಅಧ್ಯಯನ ನಡೆಸಿದ್ದಲ್ಲಿ ಕಂಡುಕೊಂಡ ಕಾರಣಗಳು ಮತ್ತು ಪರಿಹಾರಗಳೇನು ಎಂದು ನಾನು ಪ್ರಶ್ನೆಯನ್ನು ಕೇಳಿದ್ದೆ. ಮತ್ತೊಂದು ಪ್ರಶ್ನೆಯನ್ನು ನಾನು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ. ಈಗಾಗಲೇ ಖಾಸಗಿ ಶಾಲೆಗಳು ಮತ್ತು ಸರ್ಕಾರಿ ಶಾಲೆಗಳಲ್ಲಿ ಕಲಿಯುವಂತಹ ಮಕ್ಕಳಲ್ಲಿ ಅಂತರವಿದೆ ಎಂದು ಮಾನ್ಯ ಸಚಿವರಿಗೂ ಕೂಡ ಗೊತ್ತಿದೆ. ಈ ಸಂದರ್ಭದಲ್ಲಿ ನಮ್ಮ ಭವಿಷ್ಯತ್ತಿನ ಯಾವುದಾದರೂ ಬಂಡವಾಳ ಎಂದು ಇದ್ದರೆ ಅದು ಶಿಕ್ಷಣ. ಈ ಶಿಕ್ಷಣಕ್ಕಾಗಿ ನಾನು ಮಾನ್ಯ ಸಚಿವರಿಗೆ ಕೇಳುವುದೇನೆಂದರೆ, ದೆಹಲಿಯಲ್ಲಿ ಮಹತ್ತರವಾದಂತಹ ಬದಲಾವಣೆಯನ್ನು ತಂದಿದೆ. ದೆಹಲಿ ಸರ್ಕಾರಿ ಶಾಲೆಗಳಲ್ಲಿ ಅನೇಕ ಕ್ರಾಂತಿಕಾರಕವಾದ ಬದಲಾವಣೆಗಳಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**230/9-3-2020/4-50/bkp-ak**

**ಡಾ॥ ಜಯಮಾಲ(ಮುಂದು)**

ಇವತ್ತು ಖಾಸಗಿ ಶಾಲೆಗಳನ್ನು ಬಿಟ್ಟು ಸರ್ಕಾರಿ ಶಾಲೆಗಳಲ್ಲಿ ಪ್ರವೇಶಾವಕಾಶ ಪಡೆಯುವಲ್ಲಿ ನೂಕುನುಗ್ಗಲು ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲಿನ ಸರ್ಕಾರಿ ಶಾಲೆಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಆ ಒಂದು ಸರ್ಕಾರಿ ಶಾಲೆ dignity ಯನ್ನು ಪಡೆದುಕೊಂಡಿದೆ. ಇಡೀ ಶಾಲೆಯ ambience ಹೇಗಿದೆಯೆಂದರೆ ಸರ್ಕಾರಿ ಶಾಲೆ ಎಂದರೆ ಬಡವರಿಗಾಗಿಯೇ ಎಂಬ ಭಾವನೆ ಹೊರಟು ಹೋಗಿದೆ. ಶಿಕ್ಷಣವನ್ನು ಎಲ್ಲರೂ ಬಹಳ ಘನತೆಯಿಂದ ಪಡೆದುಕೊಳ್ಳಬೇಕೆನ್ನುವ ನಿಟ್ಟಿನಲ್ಲಿ ಇಡೀ ವ್ಯವಸ್ಥೆ ಬದಲಾವಣೆಯಾಗಿರುವುದರಿಂದ ಕರ್ನಾಟಕದಲ್ಲಿಯೂ ಕೂಡ ದೆಹಲಿ ಮಾದರಿಯಲ್ಲಿ ಅಂದರೆ, ದೆಹಲಿಯಲ್ಲಿ ಸರ್ಕಾರಿ ಶಾಲೆಯನ್ನು ಯಾವ ರೀತಿಯಲ್ಲಿ ಉನ್ನತೀಕರಿಸಿದ್ದಾರೋ ಹಾಗೆಯೇ ಇಲ್ಲಿಯೂ ಸಹ ಮಕ್ಕಳಲ್ಲಿ ಸರ್ಕಾರಿ ಶಾಲೆ ಎನ್ನುವ ಕೀಳರಿಮೆಯು ಎನ್ನುವ ಮನೋಭಾವನೆಯನ್ನು ಹೋಗಲಾಡಿಸಲಿಕ್ಕೆ ಅದೇ ವ್ಯವಸ್ಥೆಯನ್ನು ಇಲ್ಲಿಯೂ ಅಳವಡಿಸಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಪ್ರಸ್ತುತ ಈ ಸದನದಲ್ಲಿಯೇ ಹಾಜರಿರುವ ಮಾನ್ಯ ಮುಖ್ಯಮಂತ್ರಿಯವರಲ್ಲಿ ಸಹ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಶಾಲೆಗಳನ್ನು ವಿಸ್ತರಣೆ ಮಾಡಬೇಕೆಂದರೆ ಇದಕ್ಕೆ ಹೆಚ್ಚಿನ ಅನುದಾನಗಳು ಬೇಕು. ದೆಹಲಿಯಲ್ಲಿ ಈ ಶಾಲೆಗಳನ್ನು ಉನ್ನತೀಕರಣಗೊಳಿಸಲಿಕ್ಕೆ, ಬದಲಾವಣೆ ತರಲಿಕ್ಕೆ, ಬಜೆಟ್‌ನಲ್ಲಿ ಹೆಚ್ಚಿನ ಹಣವನ್ನು ನೀಡಿದ್ದರು. ತಾವು ಸಹ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಈ ಕೆಲಸವನ್ನು ಮಾಡಬೇಕು, ಆದ್ಯತೆಯನ್ನು ಕೊಡುತ್ತಾರೆನ್ನುವ ನಂಬಿಕೆ ಇದೆ. ಆದ್ದರಿಂದ, ಈ ಒಂದು ಕೆಲಸವನ್ನು ಮಾನ್ಯ ಸಚಿವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಮಹತ್ವದ ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಸರ್ಕಾರಿ ಶಾಲೆ, ಖಾಸಗಿ ಶಾಲೆಗಳ ನಡುವಿನ ಅಂತರ ಇತ್ಯಾದಿಯಾಗಿ ಬಹಳಷ್ಟು ವಿಚಾರಗಳನ್ನು ಹೇಳಿದ್ದಾರೆ. ಜೊತೆಗೆ ದೆಹಲಿಯಲ್ಲಿನ ಸರ್ಕಾರಿ ಶಾಲೆಯನ್ನು ಒಂದು ಉದಾಹರಣೆಯಾಗಿ ನಮ್ಮ ಮುಂದೆ ಇಟ್ಟಿದ್ದಾರೆ. ನಾನು ತಮ್ಮ ಮೂಲಕ ಸದನಕ್ಕೆ ನಿಜಾಂಶವನ್ನು ಹೇಳಲಿಕ್ಕೆ ಬಯಸುತ್ತೇನೆ. ದೆಹಲಿಯಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ಬಂದಿದೆ. ಆದರೆ, ಒಂದು ವ್ಯತ್ಯಾಸವನ್ನು ನಾವು ನೋಡಬೇಕು. ದೆಹಲಿಯಲ್ಲಿ ಸರ್ಕಾರಿ ಮತ್ತು ಖಾಸಗಿ ಶಾಲೆಗಳು,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

NDMC (New Delhi Municipal Council), ಕೇಂದ್ರೀಯ ವಿದ್ಯಾಲಯ ಎಲ್ಲಾ ಸೇರಿ ಒಟ್ಟು 2784 ಶಾಲೆಗಳು. ನಮ್ಮಲ್ಲಿ ಕೇವಲ ಸರ್ಕಾರಿ ಶಾಲೆಗಳು ಇರುವುದು 50184.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಯಾವ ತರಗತಿಯ ಶಾಲೆಗಳು ಇವೆ?

**ಶ್ರೀ ಎಸ್. ಸುರೇಶ್ ಕುಮಾರ್:-** ಈ ಸಂಖ್ಯೆಯಲ್ಲಿ ಪ್ರೈಮರಿ, ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳು ಸೇರಿಕೊಳ್ಳುತ್ತವೆ. ದೆಹಲಿಯಲ್ಲಿ ಪ್ರೈವೇಟ್, ಕೇಂದ್ರೀಯ ವಿದ್ಯಾಲಯ, ಎನ್‌ಡಿಎಂಸಿ. ಎಲ್ಲಾ ಶಾಲೆಗಳು ಸೇರಿದಂತೆ ಒಟ್ಟು 82433 ಟೀಚರ್‌ಗಳು ಇದ್ದಾರೆ. ನಮ್ಮಲ್ಲಿ ಕೇವಲ 2,14,000 ಸರ್ಕಾರಿ ಶಿಕ್ಷಕರಿದ್ದಾರೆ. ಈ ಒಂದು ವ್ಯತ್ಯಾಸವನ್ನು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕು. ದೆಹಲಿಯ ಒಟ್ಟು 2784 ಶಾಲೆಗಳಲ್ಲಿ ಬದಲಾವಣೆ ಎಂದು ಮಾಡಿರುವ ಶಾಲೆ ಅಂದರೆ, ಅದು ಸರ್ವೋದಯ ಶಾಲೆ. ಈ ಸರ್ವೋದಯ ಶಾಲೆಗಳ ಸಂಖ್ಯೆ 16. ಮತ್ತೆ 440 ಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ನನಗೆ ತಮ್ಮೆಲ್ಲರ ಭಾವನೆ ಅರ್ಥವಾಗಿದೆ. ರಾಜ್ಯದಲ್ಲಿ ಎಷ್ಟು ಸರ್ಕಾರಿ ಶಾಲೆಗಳನ್ನು ಸಬಲೀಕರಣಗೊಳಿಸುತ್ತೇವೆ, ಅಷ್ಟರ ಮಟ್ಟಿಗೆ ಮಧ್ಯಮ ಮತ್ತು ಕೆಳ ಮಧ್ಯಮ ಕುಟುಂಬದ ಮಕ್ಕಳು ಉಳಿಯುತ್ತಾರೆ. ಇವತ್ತು ಸಾಧಾರಣ ಮಟ್ಟದ ವ್ಯಕ್ತಿಯೂ ಕೂಡ ಅಂದರೆ ಕೂಲಿ ಮಾಡುವ ವ್ಯಕ್ತಿಯೂ ಕೂಡ "ನನ್ನ ಮಗು ಒಳ್ಳೆಯ ಶಾಲೆಯಲ್ಲಿ ಓದಬೇಕೆಂದು ಹೇಳಿ, ಖಾಸಗಿ ಶಾಲೆಗೆ ಸೇರಿಸುತ್ತಾನೆ. ಅವನ ಆದಾಯದ 40% ರಷ್ಟನ್ನು ಇವತ್ತು ವಿದ್ಯಾಭ್ಯಾಸಕ್ಕೆ ಕೊಡುತ್ತಿದ್ದಾನೆ. ಹೀಗಾಗಿ, ಈ ವಿಚಾರದಲ್ಲಿ ನನಗೆ ಒಂದು ಆಸೆ ಇದೆ. ಇದು ಆಸೆಯೇ ವಿನಃ ಗುರಿಯಲ್ಲ, ಆ ದೃಷ್ಟಿಯಿಂದ ನಾವು ಪ್ರಯತ್ನ ಪಡುತ್ತಿದ್ದೇವೆ. ಇನ್ನು 3-4 ವರ್ಷಗಳಲ್ಲಿ ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಲಿಕ್ಕೆ ಪೋಷಕರು queue ನಿಲ್ಲಬೇಕು. ಆ ಒಂದು ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಆ ಒಂದು ಪ್ರಯತ್ನವನ್ನು ವಿವಿಧ ರೀತಿಯಲ್ಲಿ ಮಾಡುತ್ತಿದ್ದೇವೆ. ವಿವಿಧ ಕಾರ್ಯಕ್ರಮಗಳನ್ನು ಹಾಕಿಕೊಂಡು ಅವರ ಕಲಿಕಾ ಮಟ್ಟವನ್ನು ಹೆಚ್ಚು ಮಾಡುವಲ್ಲಿ ನಾವು ಪ್ರಯತ್ನ ಮಾಡುತ್ತಿದ್ದೇವೆ. ಮತ್ತೆ, ದೆಹಲಿಯಲ್ಲಿ 'Happiness Curriculum' ಎನ್ನುವುದು ಇದೆ. ಅಂದರೆ, ಮಕ್ಕಳು ಸಂತೋಷವಾಗಿರಬೇಕೆಂದು ಹೇಳಿ ಮಾಡಿದ್ದಾರೆ. ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿಯೂ ಕೂಡ ತಿಂಗಳಿನಲ್ಲಿ ಎರಡು ಬಾರಿ 'Bagless Day' ಎಂದು ಜಾರಿಗೆ ತಂದು ಸಂಭ್ರಮದ ಶನಿವಾರವನ್ನು ತಂದು ಮಕ್ಕಳು ಒಂದು ಸಂತೋಷದ ವಾತಾವರಣದಲ್ಲಿ ಕಾಲ ಕಳೆಯಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರ ಭಾವನೆ ಪೂರ್ಣವಾಗಿ ಅರ್ಥವಾಗಿದೆ. ಆ ದೃಷ್ಟಿಯಿಂದ ಸರ್ಕಾರ ಪೂರ್ಣವಾಗಿ ಕೆಲಸ ಮಾಡುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:–** ಮಾನ್ಯ ಸದಸ್ಯರುಗಳ ಗಮನಕ್ಕೆ ಒಂದು ವಿಚಾರವನ್ನು ತರಲಿಕ್ಕೆ ಬಯಸುತ್ತೇನೆ. ಇವತ್ತು ಪಟ್ಟಿ–5 ಮತ್ತು ಪಟ್ಟಿ–1ರಲ್ಲಿ ಒಟ್ಟು 30 ಪ್ರಶ್ನೆಗಳಿಗೆ ಉತ್ತರ ಇದೆ. ಯಾರಾದರೂ ಉಪ ಪ್ರಶ್ನೆಯನ್ನು ಕೇಳಿದರೆ ಒಂದು ಪಟ್ಟಿಯನ್ನು ಕೈಬಿಡಬೇಕಾಗುತ್ತದೆ. ಆದ್ದರಿಂದ, ಯಾರು ಪ್ರಶ್ನೆಯನ್ನು ಕೇಳಿರುತ್ತಾರೆ, ಅವರಿಗೆ ಮಾತ್ರ ಮಾತನಾಡಲು ಅವಕಾಶ ಮಾಡಿಕೊಡಲಾಗುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಸಮಯ ಏಳು–ಏಳುವರೆ ಗಂಟೆಯಾದರೂ ಪರವಾಗಿಲ್ಲ. ಸದಸ್ಯರುಗಳಿಗೆ ಮಾತನಾಡಲಿಕ್ಕೆ ದಯಮಾಡಿ ಅವಕಾಶ ಕೊಡಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರು:–** ಹಾಗಿದ್ದಲ್ಲಿ ಮಾತನಾಡಿ.

**ಡಾ॥ ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳು. ಮಾನ್ಯ ಸದಸ್ಯರಾದ ಡಾ॥ ಜಯಮಾಲ ರವರು ಬಹಳ ಉತ್ತಮವಾದ ಪ್ರಶ್ನೆಗಳನ್ನು ಕೇಳಿದ್ದಾರೆ. ಹಾಗೆಯೇ ಈ ವಿಚಾರದಲ್ಲಿ ನಮಗೆ ತುಂಬಾ ಚೆನ್ನಾಗಿ ಸ್ಪಂದಿಸುವಂತಹ ಸಚಿವರು ಇದ್ದು, ಮಾನ್ಯ ಸಚಿವರು ಏನು ಆಸೆಯನ್ನಿಟ್ಟುಕೊಂಡಿದ್ದಾರೆ, ಅದು ಸಾಧ್ಯವಾಗುತ್ತದೆ ಎಂದು ನಮಗೆ ಭರವಸೆ ಮೂಡಿದೆ. ಇತ್ತೀಚೆಗೆ ಹಿರಿಯ ಸದಸ್ಯರಾದ ಶ್ರೀಮಾನ್ ಕೆ.ಸಿ.ಕೊಂಡಯ್ಯನವರ ನೇತೃತ್ವದಲ್ಲಿ ನಮ್ಮ ಸಮಿತಿಯೊಂದಿಗೆ ಹೊರಗಡೆ ಪ್ರವಾಸ ಹೋಗಿದ್ದೆವು. ಹಾಗೆಯೇ ಹಿರಿಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ನೇತೃತ್ವದಲ್ಲಿನ ಒಂದು ಸರ್ಕಾರಿ ಶಾಲೆ ಹೇಗೆ ನಡೆಯುತ್ತಿದೆ ಎನ್ನುವುದನ್ನು ನೋಡಿದ ನಮಗೆಲ್ಲರಿಗೂ ಅವರು ಆದರ್ಶಪ್ರಾಯರಾಗಿರುತ್ತಾರೆ. ಆದಾದ ಮೇಲೆ ನಾವು ಕೂಡ 2–3 ಶಾಲೆಗಳನ್ನು ಅಳವಡಿಸಿಕೊಂಡು ಅಭಿವೃದ್ಧಿ ಮಾಡಬೇಕೆನ್ನುವ ಒಂದು ನಿಟ್ಟಿನಲ್ಲಿ ಪ್ರಯತ್ನ ಮಾಡಲಿಕ್ಕೆ ಪ್ರೇರಣೆಯಾಗಿದೆ. ಅದೇ ರೀತಿಯಲ್ಲಿ ನಮ್ಮ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಸಹ ಒಂದು ಆದರ್ಶ ಇದೆ. ಈ ಬಗ್ಗೆ ಇವತ್ತು ಆಂಗ್ಲ ಪತ್ರಿಕೆಗಳಲ್ಲಿ ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಸರ್ಕಾರಿ ಶಾಲೆಯಲ್ಲಿ ಮೊದಲನೆಯ ತರಗತಿ ಪ್ರವೇಶ ಪಡೆಯಲಿಕ್ಕೆ Waiting List ಇದೆ ಎನ್ನುವುದನ್ನು ನೋಡಿದ ನಮಗೆ ನಿಜವಾಗಿಯೂ ಸಹ ಬಹಳ ಸಂತೋಷವಾಯಿತು. ಮಾನ್ಯ ಸಚಿವರಾದ ಶ್ರೀ ಎಸ್.ಸುರೇಶ್ ಕುಮಾರ್ ರವರು ಏನು ಕನಸನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಣುತ್ತಿದ್ದಾರೆ. ಅದು ಯಶಸ್ವಿಯಾಗುತ್ತದೆ. ನಾವುಗಳು ಹಿಂದೆ ಸರ್ಕಾರಿ ಶಾಲೆಗಳಲ್ಲಿ ಓದುತ್ತಿದ್ದ ಸಂದರ್ಭದಲ್ಲಿ ಬಹಳ ಹೆಮ್ಮೆ ಪಡುತ್ತಿದ್ದೆವು. ಮುಂದಿನ ದಿನಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ಮಕ್ಕಳು ಓದಲಿಕ್ಕೆ ಬೇಕಾದಂತಹ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಮಕ್ಕಳಿಗೆ ತಾರತಮ್ಯ ಮಾಡದ ರೀತಿಯಲ್ಲಿ ಆಂಗ್ಲ ಭಾಷೆಯನ್ನು ಸಹ ಸೇರಿಸಬೇಕು. ಜಾಗತಿಕ ಮಟ್ಟದಲ್ಲಿ ಮಕ್ಕಳು, ಅದರಲ್ಲೂ ಗ್ರಾಮೀಣ ಮಟ್ಟದ ಮಕ್ಕಳು ಸ್ಪರ್ಧಿಸಬೇಕಾದರೆ ಆಂಗ್ಲ ವಿಷಯ ಬಹಳ ಪ್ರಮುಖವಾಗಿರುತ್ತದೆ. ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ದಕ್ಷ ಅಧಿಕಾರಿಯಾದಂತಹ ಶ್ರೀ ಉಮಾಶಂಕರ್‌ರವರು ಸೇರಿದಂತೆ ಇಡೀ ತಂಡ ಇಲ್ಲಿ ಕುಳಿತಿದೆ. ಇದಕ್ಕೆ ಕಾಲಾವಕಾಶವಿಲ್ಲವೆಂದು ನಾನು ವಿವರವಾಗಿ ಹೇಳಲಿಕ್ಕೆ ಹೋಗುತ್ತಿಲ್ಲ. ಸರ್ಕಾರಿ ಶಾಲೆಗಳು ಶ್ರೇಷ್ಠ ಶಾಲೆಗಳು ಎನ್ನುವ ಮಟ್ಟಿಗೆ ಬೆಳೆಯಲು ನಾವೆಲ್ಲರೂ ಪ್ರಯತ್ನ ಮಾಡಲಿಕ್ಕೆ ಇದೊಂದು ಸದವಕಾಶವೆಂದು ನಾನು ಭಾವಿಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಸನ್ಮಾನ್ಯ ಸಭಾಪತಿಯವರೇ, ನಾನು ನೇರವಾಗಿ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರನ್ನು ಕೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಸಚಿವರ ಈ ದಿಸೆಯಲ್ಲಿನ ಪ್ರಯತ್ನಕ್ಕೆ ನಮ್ಮೆಲ್ಲರ ಅಭಿನಂದನೆಗಳಿವೆ. ಸಚಿವರು ಈ ದಿಸೆಯಲ್ಲಿ ಜಯಶೀಲರಾಗಲಿ ಎಂದು ಕೋರಿಕೊಳ್ಳುತ್ತೇನೆ. ಕೇರಳ ರಾಜ್ಯದಲ್ಲಿ ತರಗತಿಗೊಬ್ಬರು ಶಿಕ್ಷಕರನ್ನಿಟ್ಟಿದ್ದಾರೆ. ನಮ್ಮಲ್ಲಿ 1 ರಿಂದ 5ನೇ ತರಗತಿಯವರೆಗೆ ಒಟ್ಟು 21 ಪುಸ್ತಕಗಳಿವೆ. ಕಡಿಮೆ ಮಕ್ಕಳು ಎಂದು ಹೇಳಿ ಒಬ್ಬರಿಬ್ಬರು ಶಿಕ್ಷಕರನ್ನು ಕೊಟ್ಟಿದ್ದಾರೆ. 21 ಪುಸ್ತಕಗಳನ್ನು ಬೋಧಿಸಲಿಕ್ಕೆ ಅವರಿಗೆ ಆಗುವುದಿಲ್ಲ. ಕನಿಷ್ಠ ಒಂದು ತರಗತಿಗೆ ಒಬ್ಬ ಶಿಕ್ಷಕರನ್ನು ಕೊಟ್ಟರೆ ಕನಿಷ್ಟ ನ್ಯಾಯ ಸಿಕ್ಕುತ್ತದೆ. The government should provide a teacher for each and every class. ಆ ಒಂದು ಕೆಲಸವನ್ನು ಮಾಡಿದರೆ ಸಾಕು.

**ಶ್ರೀ ಎಸ್. ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ॥ ಜಯಮಾಲಾರವರಿಗೆ ನಾನು ಹೇಳುವುದಿಷ್ಟೆ. ನಮ್ಮಲ್ಲಿಯೂ ಸಹ ಈ ದಿಸೆಯಲ್ಲಿ success stories ಇದೆ. ಮಾನ್ಯ ಸಭಾಪತಿಯವರಿಗೆ ಚೆನ್ನಾಗಿ ಗೊತ್ತಿರಬಹುದು. ಬಂಟ್ವಾಳದಲ್ಲಿ ದಡ್ಡಲಕಾಡು ಎನ್ನುವಲ್ಲಿ ಒಂದು ಶಾಲೆ ಇದೆ, 3 ವರ್ಷಗಳ ಹಿಂದೆ ಆ ಶಾಲೆಯಲ್ಲಿನ ಮಕ್ಕಳ ಸಂಖ್ಯೆ 30ಕ್ಕೆ ಇಳಿದುಬಿಟ್ಟಿತ್ತು. ಅಲ್ಲಿನ ಟ್ರಸ್ಟ್‌ನವರು ನಮ್ಮೂರಿನ ಶಾಲೆಗೆ ಗೌರವ ತರಬೇಕೆಂದು ನಿರ್ಧಾರ ಮಾಡಿದರು. ದುರ್ಗಾ ಪರಮೇಶ್ವರಿ ಎನ್ನುವ ಒಂದು ಟ್ರಸ್ಟ್ ಪ್ರಾರಂಭ ಮಾಡಿ, ಆ ಶಾಲೆಯನ್ನು ಈಗ SDMC (School Development and Monitoring Committee) ಯವರು ಬಹಳ ಅದ್ಭುತವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರಿವರ್ತನೆ ಮಾಡಿದ್ದಾರೆ. 3 ವರ್ಷಗಳಲ್ಲಿ ಆ ಶಾಲೆಯ ಮಕ್ಕಳ ಸಂಖ್ಯೆ 30 ರಿಂದ 630ಕ್ಕೆ ಏರಿದೆ. ಅವರುಗಳು ಈ ಬಗ್ಗೆ ಒಂದೇ ಒಂದು ಬೇಡಿಕೆಯನ್ನಿಟ್ಟು 9ನೇ ಮತ್ತು 10ನೇ ತರಗತಿಗಳಿಗೆ ಈ ಶಾಲೆಯನ್ನು ಉನ್ನತೀಕರಿಸಿ ಎಂದು ಕೇಳಿಕೊಂಡಿದ್ದಾರೆ. ಇವತ್ತು ನಾನು ಸ್ಥಳದಲ್ಲಿಯೇ 9ನೇ ಮತ್ತು 10ನೇ ತರಗತಿಗೆ ಅನುಮತಿಯನ್ನು ನೀಡಿ ಬಂದಿದ್ದೇನೆ. ಅದೇ ರೀತಿಯಲ್ಲಿ ಕಾಡುಶೆಟ್ಟಿಹಳ್ಳಿ ಎನ್ನುವಲ್ಲಿ ಒಂದು ಶಾಲೆ ಇದೆ. ಆ ಶಾಲೆಯಲ್ಲಿ ಮಕ್ಕಳ ಸಂಖ್ಯೆ 7ಕ್ಕೆ ಇಳಿದುಬಿಟ್ಟಿತ್ತು. ಆ ಶಾಲೆಯ SDMC ಯವರೆಲ್ಲರು ಪ್ರಯತ್ನಪಟ್ಟು ಕೆಲಸ ಮಾಡಿದ್ದರಿಂದ, ಒಂದೇ ವರ್ಷದಲ್ಲಿ ಮಕ್ಕಳ ಸಂಖ್ಯೆ 70ಕ್ಕೆ ಹೆಚ್ಚಾಗಿದೆ. ಇಂತಹ ಉದಾಹರಣೆಗಳು ಬಹಳಷ್ಟಿವೆ. ಆದ್ದರಿಂದ, ಮಾನ್ಯ ಸದಸ್ಯರು ಏನು ಭಾವನೆಗಳನ್ನು ವ್ಯಕ್ತ ಮಾಡಿದ್ದಾರೆ ಮತ್ತು ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ಪ್ರತಿ ತರಗತಿಗೆ ಒಬ್ಬ ಶಿಕ್ಷಕರನ್ನು ಕೊಡಬೇಕೆಂದು ಏನು ಕೇಳಿದ್ದಾರೆ, ಆ ದಿಸೆಯಲ್ಲಿ ನಾವುಗಳು ಸಂಪೂರ್ಣ ಪ್ರಯತ್ನಪಡುತ್ತೇವೆ ಮತ್ತು ಯಶಸ್ವಿ ಕೂಡ ಆಗುತ್ತೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ದಡ್ಡಲಕಾಡು ಎನ್ನುವಲ್ಲಿ ಒಂದೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಶಾಲಾ ಕಟ್ಟಡವನ್ನು ಕಟ್ಟಿದ್ದಾರಲ್ಲದೆ, ಅಲ್ಲಿನ ಶಿಕ್ಷಕರುಗಳಿಗೆ ಸಂಬಳವನ್ನು ಆ ಟ್ರಸ್ಟ್ ವತಿಯಿಂದಲೇ ನೀಡಲಾಗುತ್ತಿದೆ. ಆದ್ದರಿಂದ, ಈ ದಿಸೆಯಲ್ಲಿ ಸರ್ಕಾರ ಆಲೋಚನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**<u>ಪ್ರಶ್ನೆ ಸಂಖ್ಯೆ 524</u>**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿ ಇರತಕ್ಕಂತಹ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಮಂಜೂರು ಆದಂತಹ ಒಟ್ಟು 7600 ಹುದ್ದೆಗಳಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರ ಸಂಖ್ಯೆ 6248; ಖಾಲಿಯಿರುವ ಹುದ್ದೆಗಳು 1352 ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಖಾಲಿ ಇರತಕ್ಕಂತಹ 1352 ಕಾಲೇಜುಗಳಲ್ಲಿ 12,000 ಅತಿಥಿ ಉಪನ್ಯಾಸಕರುಗಳು ಕೆಲಸ ಮಾಡುತ್ತಿದ್ದಾರೆಂದು ಏನು ಹೇಳಿದ್ದಾರೆ, ಇದು ಎಲ್ಲೋ ಒಂದು ಕಡೆ ತಪ್ಪು ಮಾಹಿತಿ ಎಂದು ನಾನು ಭಾವಿಸಿಕೊಂಡಿದ್ದೇನೆ. 12,000 ಅತಿಥಿ ಉಪನ್ಯಾಸಕರುಗಳು ಕೆಲಸ ಮಾಡುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(231) 09.03.2020 05.00 ಎಸ್‌ವಿ-ಎಕೆ**

**ಶ್ರೀ ಮರಿತಿಬ್ಬೇಗೌಡ(ಮುಂದು):-** ಮಾನ್ಯ ಉಪಮುಖ್ಯಮಂತ್ರಿಯವರೇ, 12,000 ಮಂದಿ ಅತಿಥಿ ಉಪನ್ಯಾಸಕರು ಕೆಲಸ ಮಾಡುತ್ತಿದ್ದಾರೆ. ಇದು ತಪ್ಪು ಮಾಹಿತಿ ಇರಬಹುದು ಎಂದು ನಾನು ಭಾವಿಸಿದ್ದೇನೆ. 1352 ಖಾಲಿ ಹುದ್ದೆಗಳಿವೆ. ಹಾಗಾದರೆ ಇಲಾಖೆಯು ನೀಡಿರುವ ಮಾಹಿತಿಯ ಪ್ರಕಾರ ಇನ್ನೂ ಹೆಚ್ಚು ಹುದ್ದೆಗಳನ್ನು ಸೃಜಿಸಬೇಕು ಎಂದು ಅರ್ಥ. ದಿನಾಂಕ 10.02.2020ರಂದು 1242 ಹುದ್ದೆಗಳನ್ನು ಭರ್ತಿ ಮಾಡುವುದಕ್ಕಾಗಿ ಅಧಿಸೂಚನೆಯನ್ನು ಪ್ರಕಟಿಸಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಇದು ಬಹಳ ಸ್ವಾಗತಾರ್ಹವಾದುದು. ಅತಿಥಿ ಉಪನ್ಯಾಸಕರು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಅತಿಥಿ ಉಪನ್ಯಾಸಕರಿಲ್ಲ ಎಂದರೆ ಪದವಿ ಕಾಲೇಜುಗಳನ್ನು ಮುಚ್ಚಬೇಕಾಗುತ್ತದೆ. ಅತಿಥಿ ಉಪನ್ಯಾಸಕರಿಲ್ಲ ಎಂದರೆ ಪದವಿ ಕಾಲೇಜುಗಳ ತಿಥಿ ಎಂದು ನಮ್ಮ ಕಡೆ ಹೇಳಲಾಗುತ್ತದೆ. ಇಂದು ಅವರಿಂದಲೇ ಪರೀಕ್ಷೆ ಮುಂತಾದ ಕೆಲಸ-ಕಾರ್ಯಗಳು ಆಗುತ್ತಿವೆ. ಕಳೆದ 20 ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿರುವವರು ಯು.ಜಿ.ಸಿ. ಅರ್ಹತೆಯನ್ನೂ ಸಹ ಪಡೆದುಕೊಂಡಿದ್ದಾರೆ. ಆದರೆ ಅವರು ಒಳಗೆ ಬರಲಿಕ್ಕೆ ಆಗುತ್ತಿಲ್ಲ. 2007 ಮತ್ತು 2009ನೇ ಸಾಲಿನ ಕರ್ನಾಟಕ ಲೋಕಸೇವಾ ಆಯೋಗದ ಆಯ್ಕೆಯಲ್ಲಿ ಅರ್ಹತೆಯನ್ನು ಪಡೆದವರು ಬರಲಿಕ್ಕೆ ವಯೋಮಿತಿಯ ಸಡಿಲಿಕೆ ಮತ್ತು ಕೃಪಾಂಕಗಳನ್ನು ನೀಡಲಾಗಿದೆ. ಇದರಲ್ಲಿ ಬಹಳಷ್ಟು ಮಂದಿ ಅತಿಥಿ ಉಪನ್ಯಾಸಕರು ಒಳಗೆ ಬಂದಿದ್ದಾರೆ. ಯು.ಜಿ.ಸಿ. ಅರ್ಹತೆಯನ್ನು ಪಡೆದುಕೊಂಡಿರುವ ಅತಿಥಿ ಉಪನ್ಯಾಸಕರು ಬಹಳ ಸಂಕಷ್ಟದಲ್ಲಿದ್ದು, ಇಂದು ಸ್ವಾತಂತ್ರ್ಯ ಉದ್ಯಾನವನದಲ್ಲಿ ಧರಣಿಯನ್ನು ಪ್ರಾರಂಭ ಮಾಡಿದ್ದಾರೆ. ಇದು ತಮ್ಮ ಗಮನಕ್ಕೂ ಸಹ ಬಂದಿದೆ. ಸರ್ಕಾರ ಈಗ ಭರ್ತಿ ಮಾಡಲಿರುವ 1242 ಹುದ್ದೆಗಳಲ್ಲಿ ಕೃಪಾಂಕವನ್ನು ಕೊಡಬೇಕು ಮತ್ತು ವಯೋಮಿತಿಯನ್ನು ಸಡಿಲಿಕೆ ಮಾಡಬೇಕೆಂದು ಕೋರುತ್ತೇನೆ.

ಅತಿಥಿ ಉಪನ್ಯಾಸಕರಿಗೆ ಕಳೆದ ಸರ್ಕಾರದಲ್ಲಿ 5,000 ರೂಪಾಯಿಗಳನ್ನು ಹೆಚ್ಚು ಮಾಡಬೇಕೆಂಬ ತೀರ್ಮಾನವನ್ನು ತೆಗೆದುಕೊಂಡು ಆರ್ಥಿಕ ಇಲಾಖೆಗೆ ಹೋಗಿತ್ತು. ಇದುವರೆವಿಗೂ ಕೂಡ ಪರಿಷ್ಕರಣೆಯೂ ಆಗಿಲ್ಲ, ಹಣ ಬಿಡುಗಡೆಯೂ ಆಗಿಲ್ಲ. ಇವರತ್ತ ಸರ್ಕಾರ ದೃಷ್ಟಿಯನ್ನು ಬೀರಿದಾಗ ಮಾತ್ರ ಅಂದರೆ ವರ್ಷಕ್ಕೆ ಎರಡು ಬಾರಿ ಗೌರವಧನವನ್ನು ನೀಡಲಾಗುತ್ತದೆ. ಪ್ರತಿ ತಿಂಗಳು ಇವರಿಗೆ ಗೌರವಧನ ನೀಡಲಾಗುವುದಿಲ್ಲ. ಇವರು ಸಂಸಾರವನ್ನು ನಡೆಸುವುದೇ ಬಹಳ ದುಸ್ತರವಾಗಿದೆ. ಎಷ್ಟೋ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಂದಿ ಖಾಯಂ ಉಪನ್ಯಾಸಕರೆಂದು ಹೇಳಿ ಮದುವೆಯಾಗಿ, ಈಗ ಬಿಡುಗಡೆ ಪತ್ರಗಳು ಅವರ ಕೈಗೆ ಬರುತ್ತಿವೆ. ಉತ್ತಮವಾಗಿ ಕೆಲಸ ಮಾಡುತ್ತಿರುವ ಅತಿಥಿ ಉಪನ್ಯಾಸಕರ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಈಗ ಹುದ್ದೆಗಳನ್ನು ಭರ್ತಿ ಮಾಡಲು ಹೊರಡಿಸಲಾಗಿರುವಂತಹ ಅಧಿಸೂಚನೆಯಲ್ಲಿ ವಯೋಮಿತಿ ಸಡಿಲಿಕೆ ಮತ್ತು ಕನಿಷ್ಠ 10 ಅಂಕಗಳ ಕೃಪಾಂಕಗಳನ್ನು ನೀಡಿದರೆ ಬಹಳಷ್ಟು ಅನುಭವವಿರುವ ಸಾಕಷ್ಟು ಮಂದಿ ಇಲ್ಲಿ ಒಳಗೆ ಬರಲು ಅವಕಾಶವಾಗುತ್ತದೆ. ದಯಮಾಡಿ ಈ ಅಧಿಸೂಚನೆಯಲ್ಲಿ ಇದನ್ನು ಮಾಡಲೇಬೇಕೆಂದು ನಾನು ಒತ್ತಾಯಪೂರ್ವಕವಾಗಿ ವಿನಂತಿ ಮಾಡುತ್ತೇನೆ. ಮತ್ತೊಂದು ಉಪ ಪ್ರಶ್ನೆಯನ್ನು ನಂತರ ಕೇಳುತ್ತೇನೆ.

**ಡಾ:ಸಿ.ಎನ್.ಅಶ್ವತ್ಥನಾರಾಯಣ:-** ಮಾನ್ಯ ಸಭಾಪತಿಯವರೇ, ಈಗ ಕರಡು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಅದಕ್ಕೆ ಯಾವ ರೀತಿಯ ಆಕ್ಷೇಪಗಳು ಬರುತ್ತವೆ ಎಂಬುದನ್ನು ನೋಡಿ ಸೂಕ್ತವಾದ ನಿರ್ಧಾರವನ್ನು ತೆಗೆದುಕೊಳ್ಳಲಾಗುವುದು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಉಪ ಮುಖ್ಯಮಂತ್ರಿಯವರೇ, ಬಹಳ ಚುಟುಕಾಗಿ ಉತ್ತರವನ್ನು ನೀಡಿದಿರಿ. ಈ ತರಹದ ಉತ್ತರವನ್ನು ನಾನು ಕಳೆದ 20 ವರ್ಷಗಳಲ್ಲಿ ಯಾರಿಂದಲೂ ಕೇಳಿರಲಿಲ್ಲ. ಇದು ಭರವಸೆಯೇ? ಇದನ್ನು ನಾನು ನಂಬಬೇಕೇ ಎಂದು ದಯಮಾಡಿ ತಾವು ತಿಳಿಸಬೇಕು. ತಾವು ಮುಂದಿನ ದಿನಗಳಲ್ಲಿ ರಾಜ್ಯದ ಮುಖ್ಯಮಂತ್ರಿಯಾಗುವವರು. ನಮಗೆ ಬಹಳ ಸಂತೋಷ. ತಮ್ಮ ಬಗ್ಗೆ, ಮಾನ್ಯ ಸುರೇಶ್‌ಕುಮಾರ್ ಅವರ ಬಗ್ಗೆ ನಾವು ಅಪಾರವಾದಂತಹ ವಿಶ್ವಾಸವನ್ನು ಇರಿಸಿಕೊಂಡಿದ್ದೇವೆ. ತಮಗೆ ಖಾತೆಗಳು ಹಂಚಿಕೆಯಾದಾಗಲೇ ನಾವು ಸಂತೋಷ ಪಟ್ಟಿದ್ದೇವೆ. ದಯಮಾಡಿ ತಾವು ಕೃಪಾಂಕವನ್ನು ಕೊಡಲೇಬೇಕು ಮತ್ತು ವಯೋಮಿತಿ ಸಡಿಲಿಕೆಯನ್ನು ಮಾಡಲೇಬೇಕೆಂದು ನಾನು ವಿನಂತಿ ಮಾಡುತ್ತೇನೆ.

ನನ್ನ ಉಪ ಪ್ರಶ್ನೆ ಏನೆಂದರೆ ಈಗಾಗಲೇ ಸರ್ಕಾರಿ ಪದವಿ ಕಾಲೇಜುಗಳಲ್ಲಿ S.D.C ಮತ್ತು F.D.C ಆಗಿ ಕೆಲಸ ಮಾಡುತ್ತಿರುವವರಿಗೆ ಯು.ಜಿ.ಸಿ. ನಿಯಮಾವಳಿಗಳ ಪ್ರಕಾರ ಉಪನ್ಯಾಸಕರ ನೇಮಕಾತಿಯಲ್ಲಿ ಶೇ.5 ಮೀಸಲಾತಿಯನ್ನು ನೀಡಲಾಗಿದೆ. 2017ರಿಂದ ಉಪನ್ಯಾಸಕರ ನೇಮಕಾತಿಯಲ್ಲಿ ಬೋಧಕೇತರ ವರ್ಗದವರಿಗೆ ಶೇ.5 ಹುದ್ದೆಗಳನ್ನು ಮೀಸಲಿಡಲಾಗಿದೆ. ನಾವು ಅದನ್ನು ಸ್ವಾಗತಿಸುತ್ತೇವೆ, ವಿರೋಧಿಸುವುದಿಲ್ಲ. ಆದರೆ ಪದವಿಪೂರ್ವ ಕಾಲೇಜಿನಲ್ಲಿ ನಿರಂತರವಾಗಿ ಬೋಧನೆ ಮಾಡಿಕೊಂಡಿರುವವರು, ಪಿ.ಹೆಚ್.ಡಿ. ಮಾಡಿಕೊಂಡಿರುವವರು, ನೆಟ್ ಮತ್ತು ಸ್ಲೆಟ್ ಪರೀಕ್ಷೆಗಳಲ್ಲಿ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ತೀರ್ಣರಾಗಿರುವವರು ಬಹಳಷ್ಟು ಮಂದಿ ಇದ್ದಾರೆ. ಬೋಧಕೇತರ ವರ್ಗದವರಿಗೆ ಶೇ.5ರಷ್ಟು ಮೀಸಲಾತಿ ನೀಡಲಾಗುತ್ತದೆ. ಆದರೆ ಪದವಿಪೂರ್ವ ಕಾಲೇಜಿನಲ್ಲಿ ಬೋಧನೆ ಮಾಡುತ್ತಿರುವವರಿಗೆ ಇಲ್ಲಿ ಬರಲಿಕ್ಕೆ ಅವಕಾಶವಿರುವುದಿಲ್ಲ. ದಯಮಾಡಿ ಅವರಿಗೂ ಕನಿಷ್ಠ ಶೇ.5ರಷ್ಟು ನೇಮಕಾತಿಯಲ್ಲಿ ಮೀಸಲಿರಿಸಿ, ಅವರು ಒಳಗೆ ಬರಲು ಅವಕಾಶ ಮಾಡಿಕೊಡಬೇಕೆಂದು ಕೋರುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರು ಪ್ರಸ್ತಾಪಿಸಿದ ವಿಚಾರಕ್ಕೆ ಪೂರಕವಾಗಿ ಕೆಲವು ಅಂಶಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಪದವಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ 20-25 ವರ್ಷಗಳಿಂದ ಕೆಲಸ ಮಾಡುತ್ತಿರುವವರು ಅರ್ಹರಿದ್ದಾರೆ. ಅವರು ಪಿ.ಹೆಚ್.ಡಿ. ಮಾಡಿಕೊಂಡಿದ್ದಾರೆ. ಅವರು ನೆಟ್ ಮತ್ತು ಸ್ಲೆಟ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದಾರೆ. ಹಿಂದೆ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಪಾರ್ಟ್ ಟೈಂ ಶಿಕ್ಷಕರು/contract teachers ಖಾಯಮಾತಿಗೊಳ್ಳಲು ಅವರಿಗೆ weightage ಅನ್ನು ನೀಡಿದ್ದ ಉದಾಹರಣೆಗಳಿವೆ. ಆ ದಿಶೆಯಲ್ಲಿ ನಾನು ಸಹ ತಮ್ಮ ಮೂಲಕ ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುವುದೇನೆಂದರೆ ದಯವಿಟ್ಟು ಪದವಿ ಕಾಲೇಜುಗಳ ಉಪನ್ಯಾಸಕರ ನೇಮಕಾತಿಯಲ್ಲಿ weightage ಹಾಗೂ ವಯೋಮಿತಿ ಸಡಿಲಿಕೆಯನ್ನು ನೀಡಬೇಕು.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಬಹುಶಃ ಎಲ್ಲಾ ಶಾಸಕರ ಪರವಾಗಿ ಆ ಪ್ರಶ್ನೆಯನ್ನು ಎತ್ತಿದ್ದಾರೆ. ಇಷ್ಟೊಂದು ಬಹಿರಂಗವಾಗಿ ಸರ್ಕಾರದಿಂದ ಆಗುವ ಶೋಷಣೆ ಇನ್ನಾವುದೂ ಇಲ್ಲ. ಉನ್ನತ ಶಿಕ್ಷಣ, ಡಾಕ್ಟರೇಟ್, ನೆಟ್, ಸ್ಲೆಟ್ ಎಲ್ಲವನ್ನು ಇಟ್ಟುಕೊಂಡಿದ್ದಾರೆ. ಅವರಿಗೆ 12,000 ರೂಪಾಯಿಗಳ ಸಂಬಳ. ಅದು ಆರು ತಿಂಗಳಿಗೊಮ್ಮೆ. ಅವರಿಗೆ ಯಾವುದೇ ಸರ್ಕಾರಿ ರಜೆಗಳಿಲ್ಲ, ಯಾವುದೇ ಸರ್ಕಾರಿ ಸವಲತ್ತುಗಳಿಲ್ಲ. ಅವರ ಆರೋಗ್ಯ ಸರಿಯಿಲ್ಲವೆಂದು ರಜೆ ಹಾಕಿದರೆ ಅವರಿಗೆ ಸಂಬಳ ಕಡಿತಗೊಳಿಸಲಾಗುತ್ತದೆ. ಕೆಲವೊಮ್ಮೆ ವೈರುದ್ಧ್ಯದ ನಿಲುವನ್ನು ಸರ್ಕಾರ ಇಟ್ಟುಕೊಂಡಿರುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಬಡ ಗರ್ಭಿಣಿ ಮಹಿಳೆಯರಿದ್ದರೆ ಅವರಿಗೆ ಮೂರು ತಿಂಗಳುಗಳ ಕಾಲ ಪೌಷ್ಟಿಕಾಂಶಯುಕ್ತ ಆಹಾರವನ್ನು ನೀಡಲಾಗುತ್ತದೆ, ಅವರಿಗೆ ಖರ್ಚಿಗೆ ಹಣವನ್ನು ನೀಡಲಾಗುತ್ತದೆ. ಆದರೆ ಇಲ್ಲಿ ಉನ್ನತ ಶಿಕ್ಷಣವನ್ನು ಪಡೆದು ಉಪನ್ಯಾಸಕರಾದ ತಪ್ಪಿಗೆ ಸಂಬಳವನ್ನು ಕಡಿತ ಮಾಡಲಾಗುತ್ತದೆ. ಒಂದು ಕಡೆ ಮಹಿಳಾ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಬಲೀಕರಣದ ಹೆಸರಿನಲ್ಲಿ ಗರ್ಭಿಣಿಯರಿಗೆ ಸೌಲಭ್ಯವನ್ನು ಕೊಡುವುದು, ಇನ್ನೊಂದು ಕಡೆ ವಿದ್ಯಾವಂತರಿಗೆ ಶೋಷಣೆಯನ್ನು ಮಾಡುವಂತಹದ್ದು. ಪ್ರತಿ ವರ್ಷ ಅವರು ತಮ್ಮ ಕೆಲಸ ಮುಂದುವರೆಯುತ್ತದೆಯೋ ಇಲ್ಲವೋ ಎಂದು ತಮ್ಮ ಪ್ರಾಂಶುಪಾಲರ ಎದುರಿನಲ್ಲಿ, ಆಡಳಿತ ಮಂಡಳಿಯ ಎದುರಿನಲ್ಲಿ ಕೈಕಟ್ಟಿ ನಿಲ್ಲಬೇಕು. ರಾಜ್ಯದಲ್ಲಿರತಕ್ಕಂತಹ 416 ಕಾಲೇಜುಗಳಲ್ಲಿ ಶೇ.70ರಷ್ಟು ಜನ ಅತಿಥಿ ಉಪನ್ಯಾಸಕರು ಇದ್ದಾರೆ. ಅವರೇನಾದರೂ ಹೊರಗೆ ನಿಂತರೆ ಕಾಲೇಜುಗಳು ಮುಚ್ಚಿಹೋಗುತ್ತವೆ. ಈ ರೀತಿಯಾಗಿ ಸರ್ಕಾರವೇ ಶೋಷಣೆಗೆ ನಿಂತರೆ, ಅವರ ಅಸಹಾಯಕತೆಯನ್ನು ದುರುಪಯೋಗ ಪಡಿಸಿಕೊಂಡರೆ ಅದು ನಾಗರಿಕ ಸರ್ಕಾರಗಳಿಗೆ ತಕ್ಕದ್ದಲ್ಲ. ಇದು ನಿಮ್ಮ ಸರ್ಕಾರ ಇದ್ದಾಗ ಮಾತ್ರವಲ್ಲ, ಕಳೆದ 20-25 ವರ್ಷಗಳಿಂದಲೂ ಇದು ನಡೆದುಕೊಂಡು ಬಂದಿದೆ. ಆ ಕಾರಣಕ್ಕಾಗಿ ಮಾನ್ಯ ಮರಿತಿಬ್ಬೇಗೌಡರ ಪ್ರಶ್ನೆ ಬಹುಶಃ ನಮ್ಮ ಎಲ್ಲಾ ಶಾಸಕರ ಪ್ರಶ್ನೆಯಾಗಿದೆ. ಸರ್ಕಾರ ಎಲ್ಲಾ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸುವುದರ ಜೊತೆಯಲ್ಲಿ ಪ್ರತಿ ವರ್ಷ ಅವರು ಅಂಗಲಾಚುವ ರೀತಿಯಲ್ಲಿ ಮಾಡದೆ ಸೇವಾ ಭದ್ರತೆಯನ್ನು ಒದಗಿಸಬೇಕು. ಅವರಿಗೆ ಸರ್ಕಾರದ ಸವಲತ್ತುಗಳನ್ನು ಕೊಡಬೇಕೆಂದು ಒತ್ತಾಯವನ್ನು ಮಾಡುತ್ತೇನೆ. ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಅವರ ವೇತನವನ್ನು ರೂ.5000/-ಗಳಷ್ಟು ಹೆಚ್ಚು ಮಾಡುತ್ತೇನೆಂದು ಭರವಸೆಯನ್ನು ನೀಡಿದ್ದರು. ನಾನಾ ಕಾರಣಗಳಿಂದ ಅದು ಈಡೇರಲಿಲ್ಲ. ಕೂಡಲೇ ಅವರ ವೇತನವನ್ನು ಕೂಡ ಹೆಚ್ಚು ಮಾಡಬೇಕು. ಅತಿಥಿ ಉಪನ್ಯಾಸಕರು ನರೇಗಾದಲ್ಲಿ ಕೆಲಸ ಮಾಡುವ ಒಬ್ಬ ಸಾಮಾನ್ಯ ಕೂಲಿ ಕಾರ್ಮಿಕನಿಗಿಂತಲೂ ಕಡಿಮೆ ಸಂಬಳವನ್ನು ಪಡೆಯುತ್ತಿದ್ದಾರೆ. ಕನಿಷ್ಠ ವೇತನಕ್ಕಿಂತಲೂ ಕಡಿಮೆ ಸಂಬಳ ಪಡೆಯುತ್ತಿದ್ದಾರೆ. ಈ ಶೋಷಣೆಯ ಬಗ್ಗೆ ಮಾನ್ಯ ಮರಿತಿಬ್ಬೇಗೌಡರು ಪ್ರಶ್ನೆಯನ್ನು ಎತ್ತಿದ್ದಾರೆ. ಶಿಕ್ಷಣ ಸಚಿವರು ಇಬ್ಬರೂ ಇಲ್ಲಿ ಇರುವುದರಿಂದ, ಇಬ್ಬರೂ ಸಹ ಅವರ ಸಹಾಯಕ್ಕೆ ಬರಬೇಕೆಂದು ಪ್ರಾರ್ಥನೆಯನ್ನು ಮಾಡುತ್ತೇನೆ.

**(232) 5.10 9.3.2020 KG RN**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರಾಗಲೀ, ಆಯುಕ್ತರಾಗಲಿ ಒಬ್ಬರು ಸಹ ಸದನದಲ್ಲಿ ಕಾಣುತ್ತಿಲ್ಲ.

**ಡಾ॥ ಸಿ.ಎನ್.ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಅವರೆಲ್ಲರೂ ಮುಷ್ಕರದಲ್ಲಿರುವವರನ್ನು ಭೇಟಿ ಮಾಡುವುದಕ್ಕೆ ಹೋಗಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ಮಾನ್ಯ ಉನ್ನತ ಶಿಕ್ಷಣ ಸಚಿವರು ಉಪ ಮುಖ್ಯಮಂತ್ರಿಯಾಗಿದ್ದಾರೆ, ಎಲ್ಲರೂ ಹೇಳಿದಂತೆ ಉಪ ಮುಖ್ಯ ಮಂತ್ರಿಯವರು ಉತ್ತರ ಹೇಳಬಾರದು. ಅವರನ್ನು ಭೇಟಿ ಮಾಡುವುದಕ್ಕೆ ಹೋಗಿದ್ದಾರೆಂದರೆ, ವಿಧಾನ ಪರಿಷತ್ತಿಗಿಂತ ಬಹಳ ದೊಡ್ಡ ವಿಚಾರವೇ ಅದು. ಇಲ್ಲಿ ಪ್ರಶ್ನೋತ್ತರ ವೇಳೆ ನಡೆಯುತ್ತಿದೆ. ನಾವು ಉತ್ತರ ಕೇಳುತ್ತೇವೆ. ಹಾಗಾದರೆ, ಇವರನ್ನು ಖಾಯಂ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಲಿ. ನಾವು ಮುಂದೆ ಮಾತನಾಡುತ್ತೇವೆ.

**ಸಭಾಪತಿಯವರು:-** ಅರುಣ ಶಹಾಪುರರವರೇ ತಾವೀಗ ಮಾತನಾಡಿ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಅತಿಥಿ ಉಪನ್ಯಾಸಕರನ್ನು ಪದವಿ ಕಾಲೇಜುಗಳಿಗೆ ನೇಮಕ ಮಾಡುವಂತಹ ವಿಧಾನ ಯಾವ ಕಾಲದಲ್ಲಿ ಆರಂಭವಾಯಿತೆಂದು ನನಗೆ ಅರ್ಥವಾಗುತ್ತಿಲ್ಲ. ಯಾವತ್ತಾದರೂ ಅಪರೂಪಕ್ಕೆ ಮನೆಗೆ ಬರುವವರನ್ನು ಅತಿಥಿ ಎಂದು ಹೇಳುತ್ತೇವೆ. ಇಲ್ಲಿ ವಿಚಿತ್ರವೆಂದರೆ, 25 ವರ್ಷಗಳ ಕಾಲ ಪದವಿ ಕಾಲೇಜುಗಳಲ್ಲಿ ಇರುವಂತಹವರನ್ನು ಅತಿಥಿ ಉಪನ್ಯಾಸಕರು ಎಂದು ಕರೆಯುವುದೇ ದೊಡ್ಡ ತಪ್ಪು. ಖಾಯಂ ಅತಿಥಿ ಎಂದರೆ, ಆ ಮನೆಯ ಸದಸ್ಯನಾಗಿಬಿಡುತ್ತಾರೆ. ಅವರು ಖಾಯಂ ಅತಿಥಿಯಾಗಿರುವುದರಿಂದ ಅವರನ್ನು ಆ ಮನೆಯ ಖಾಯಂ ಸದಸ್ಯರನ್ನಾಗಿ ಮಾಡಬೇಕೆಂದು ವಿನಂತಿ ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಉತ್ತರ ಹೇಳಿ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಮರ್ಥರಿದ್ದಾರೆ. ಅವರು ಉತ್ತರ ಕೊಡುತ್ತಾರೆ. ತರಾತುರಿ ಬೇಡ. ಇದು ಬಹಳ ವರ್ಷಗಳ ಸಮಸ್ಯೆ ಇದೆ. ಆದರೆ, ನನ್ನದೊಂದು ವಿನಂತಿ ಇದೆ. ಇದರ ಜೊತೆಗೆ ತಾತ್ಕಾಲಿಕ ಸಮಸ್ಯೆ ಇದೆ. ಅವರಿಗೆ ಸಿಗುವಂತಹ ಗೌರವಧನ ಏನಿದೆ ಅದು ಹೆಚ್ಚಾಗಬೇಕೆಂದು, ಕಳೆದ ಮೂರ್‍ನಾಲ್ಕು ವರ್ಷಗಳಿಂದ ಎಲ್ಲಾ ಸರ್ಕಾರಗಳು ಮಾಡುತ್ತೇವೆಂದು ಹೇಳುತ್ತಾರೆ. ಆದರೆ, ಮಾಡುವುದಿಲ್ಲ. ಅದು ಬಹಳ ತೊಂದರೆಯಾಗಿದೆ. ಅದನ್ನು ಹೆಚ್ಚಳ ಮಾಡಬೇಕೆಂಬ ಕೋರಿಕೆಯನ್ನು ತಮ್ಮ ಮೂಲಕ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಸಮರ್ಥರಿದ್ದಾರೆ ಮತ್ತು ಅವರು ವಸ್ತುಸ್ಥಿತಿಯನ್ನು ಅರಿತವರಾಗಿದ್ದಾರೆ. ಅತಿಥಿ ಉಪನ್ಯಾಸಕರಿಂದ ಯಾವುದಾದರೂ ಕಾಲೇಜಿನಲ್ಲಿ ಫಲಿತಾಂಶದಲ್ಲಿ ವ್ಯತ್ಯಾಸವಾಗಿದ್ದರೆ, ದಯವಿಟ್ಟು ತಿಳಿಸಬೇಕು. ಬೇರೆ ಎಲ್ಲರಿಗಿಂತ ಬಹಳ ಸಮರ್ಪಕವಾಗಿ ಕೆಲಸ ಮಾಡುತ್ತಿದ್ದಾರೆ. ಅದರ ಜೊತೆಗೆ NET/SLET/PhD., ಮಾಡಿದಂತಹವರಿಗೆ ಕೊಡುವಂತಹ ವೇತನದ 25% ನಲ್ಲಿ ಅವರು ಕೆಲಸ ಮಾಡುತ್ತಿದ್ದಾರೆ. ಹಾಗಾಗಿ, ಸರ್ಕಾರಕ್ಕೆ 75% ರಷ್ಟು ಉಳಿಸುವುದರ ಜೊತೆಗೆ ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಂಪೂರ್ಣವಾಗಿ, ಸಮರ್ಪಕವಾಗಿ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ, ದಯವಿಟ್ಟು ಇದರಲ್ಲಿ ನಾವು ಯಾರೂ ಮೊಸಳೆ ಕಣ್ಣೀರು ಸುರಿಸುವುದು ಬೇಡ. ಅವರಿಗೆ fixed amount 30,000/–, 35,000/– ಗಳು ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಈ ಕಡೆಗೆ ಬಹಳಷ್ಟು ಜನರು ಬರುವವರು ಇದ್ದಾರೆ. ಅವರೆಲ್ಲ ಸಮಯಕ್ಕಾಗಿ ಕಾಯುತ್ತಿದ್ದಾರೆ. ಅವರಿಗೆ ಒಳ್ಳೆಯದಾಗಲಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, 51 ಆ ಕಡೆ. 49 ಈ ಕಡೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಕರೆದುಕೊಂಡು ಹೋಗುವುದಕ್ಕೆ ಅಧ್ಯಕ್ಷತೆ ವಹಿಸಿದವರು ಅವರೇ ಅಲ್ಲವೇ,

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ರೇವಣ್ಣವರು ಈಗ ನೆಮ್ಮದಿಯಾಗಿದ್ದಾರಾ ಅಥವಾ ಆಗ ನೆಮ್ಮದಿಯಾಗಿದ್ದರಾ ಎಂಬುದನ್ನು ಸುಳ್ಳು ಹೇಳದೆ ಹೇಳಲಿ?

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಅವರ ಪ್ರಶ್ನೆ ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ರೇವಣ್ಣನವರು ಸಮ್ಮಿಶ್ರ ಸರ್ಕಾರ ಇದ್ದಾಗ ನಾನು ಅವರ ಮುಖದಲ್ಲಿ ನಗುವನ್ನು ನೋಡಿರಲಿಲ್ಲ. ಈಗ ಅವರು ಬಹಳ ಖುಷಿಯಾಗಿ ಕಾಣುತ್ತಿದ್ದಾರೆ. ನಾನು ಸುಳ್ಳು ಹೇಳುವುದಿಲ್ಲ. ಅವರು ಬಹಳ ಖುಷಿಯಾಗಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ನಾನು ಯಾವಾಗಲೂ ಖುಷಿಯಾಗಿರುತ್ತೇನೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಈಗ ಬಹಳ ಜಾಸ್ತಿ ಖುಷಿಯಾಗಿದ್ದಾರೆ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಕರೆದುಕೊಂಡು ಹೋಗುವುದರಲ್ಲಿ ಬಹಳ ಪ್ರಮುಖ ಪಾತ್ರವಹಿಸಿದವರೆಂದು ಹೇಳಿದ್ದೇನೆ ಅಷ್ಟೇ. ಈಗ ಬರುತ್ತಾರೆ ಎಂದು ಹೇಳಿದ್ದರಲ್ಲಿ ಸ್ವಲ್ಪ ಮಾಹಿತಿ ಇದೆಯೇ ನೋಡೋಣ ಎಂದು ಕೇಳಿದೆ ಅಷ್ಟೇ.

**ಸಭಾಪತಿಯವರು:–** ಪಟ್ಟಣ್ಣನವರೇ, ಸಾಕು. ಪ್ರಶ್ನೇ ಕೇಳಿ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೊಸಬರಿದ್ದಾರೆ. ಅಲ್ಲದೇ, ಅವರಿಗೆ ಕೆಲಸ ಮಾಡಬೇಕೆಂಬ ಒಳ್ಳೆಯ ಇಚ್ಛಾಶಕ್ತಿ ಇದೆ. ಸುಮಾರು 15 ವರ್ಷಗಳಿಂದ ಮಾತನಾಡಿ, ಮಾತನಾಡಿ ನಮಗೆ ಸಾಕಾಗಿ ಬಿಟ್ಟಿದೆ. ಪ್ರತಿಯೊಬ್ಬರು ಬಂದಾಗಲೂ ಹೇಳುತ್ತಾರೆ, ನಂತರ ಯಾರು ಮಾಡದೇ ಹೊರಟುಹೋಗುತ್ತಾರೆ. ದಯವಿಟ್ಟು ಈಗ ಆ ತರಹ ಆಗುವುದು ಬೇಡ. ಇವತ್ತಿನ ದಿವಸ ಅತಿಥಿ ಉಪನ್ಯಾಸಕರು ಬಸ್‌ನಲ್ಲಿ ಪ್ರಯಾಣ ಮಾಡುವುದಕ್ಕೆ ಕಾಸಿಲ್ಲದೆ ಇದ್ದಾರೆ. ಏಕೆಂದರೆ, ಅವರಿಗೆ ಮೂರು ತಿಂಗಳಿಗೆ ಇಲ್ಲವೇ ಆರು ತಿಂಗಳಿಗೆ ಸಂಬಳ ಆಗುತ್ತಿದೆ. ಆಮೇಲೆ ಮಾನ್ಯ ಸದಸ್ಯರಾದ ಭೋಜೇಗೌಡರು 25% ಕೊಡುತ್ತಾರೆಂದು ಹೇಳಿದ್ದಾರೆ. ಈಗ regular teachers ಗಿಂತ ಇವರಿಗೆ 25% ಕೊಟ್ಟರೆ, ಅದೇ ಪುಣ್ಯ. ಇವರಿಗೆ ಈಗ ಕೇವಲ 12% ರಿಂದ 15% ಸಹ ಸಿಗುತ್ತಿಲ್ಲ. ಮಾನ್ಯ ಸಚಿವರು ವಿಶ್ವವಿದ್ಯಾನಿಲಯದಲ್ಲಿ Senate Member, Syndicate Member ಆಗಿ ಕೆಲಸ ಮಾಡಿದ್ದಾರೆ. ಹಾಗಾಗಿ, ಅವರಿಗೆ ಎಲ್ಲವೂ ಗೊತ್ತಿದೆ. ಅದಕ್ಕೆ ದಯವಿಟ್ಟು ಮಾನ್ಯ ಸಚಿವರು ಅತಿಥಿ ಉಪನ್ಯಾಸಕರು ಗೌರವಯುತವಾಗಿ ಬದುಕನ್ನು ಸಾಗಿಸುವುದಕ್ಕೆ ಮತ್ತು ಗೌರವಯುತವಾಗಿ ಇರುವುದಕ್ಕೆ ಅವರಿಗೆ ಈಗ ಏನು ಕೊಡುತ್ತಿದ್ದಾರೆ ಅದನ್ನು 1:2 ಅನುಪಾತದ ಮಟ್ಟದಲ್ಲಿ ದ್ವಿಗುಣಗೊಳಿಸಿ ಕೊಡಬೇಕು. ಅದನ್ನು ಮಾಡಿದರೆ ಮಾತ್ರ ಮಾನ್ಯ ಸಚಿವರು ಏನೇ ಉತ್ತರ ಕೊಟ್ಟರೂ ಸಹ ಸಾರ್ಥಕವಾಗುತ್ತದೆ. ಅದನ್ನು ಮಾಡದೇ ಮಾನ್ಯ ಸಚಿವರು ಏನೇ ಉತ್ತರ ಕೊಟ್ಟರೂ ಸಹ ಉಪಯೋಗ ಇಲ್ಲವೆಂದು ನನ್ನ ಭಾವನೆ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಈ ಪ್ರಶ್ನೆಯನ್ನು ಕೇಳಬಯಸುತ್ತೇನೆ. ವಿಶೇಷವಾಗಿ ಉಪ ಪ್ರಶ್ನೆಯಲ್ಲಿ ಬಂದಿರುವಂತಹ ವಿಚಾರವನ್ನು ಎತ್ತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡುತ್ತೇನೆ. ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. 1984–85 ರಲ್ಲಿ ತೆಗೆದುಕೊಂಡಿರುವಂತಹ contract teachers ರವರುಗಳನ್ನು 1991 ರಲ್ಲಿ under the absorption rules, regularize ಮಾಡಿದ್ದಾರೆ. 1996 ರಲ್ಲಿ ತೆಗೆದುಕೊಂಡಿರುವಂತಹ Part-time Lecturer ಗಳನ್ನು 2003 ರಲ್ಲಿ regularize ಮಾಡಿದ್ದಾರೆ. ಆಮೇಲೆ ಮೊರಾರ್ಜಿ ಶಿಕ್ಷಕರನ್ನು cut-off date ಕೊಟ್ಟು 2009, 2010 ಮತ್ತು 2011 ಈ ರೀತಿಯಾಗಿ ಮೂರು ಹಂತಗಳನ್ನು ಮಾಡಿ marks weightage ಕೊಟ್ಟು ಅವರನ್ನು regularize ಮಾಡಿದ್ದಾರೆ. ಹಾಗಾಗಿ, ಮಾನ್ಯ ಸಚಿವರಿಗೆ ನನ್ನ ಸಲಹೆ ಏನೆಂದರೆ, ಈ ಮೂರು ಆಧಾರಗಳನ್ನು ತೆಗೆದುಕೊಂಡು ಮತ್ತು ದೆಹಲಿಯ ಮುಖ್ಯ ಮಂತ್ರಿಗಳಾದ ಶ್ರೀ ಕೇಜ್ರಿವಾಲ್‌ರವರು ಸಹ ಖಾಯಂ ಮಾಡುವುದಕ್ಕೆ ಹೊರಟಿದ್ದಾರೆ. ಅದರ ಸ್ವಲ್ಪ ಮಾಹಿತಿಯನ್ನು ತರಿಸಿಕೊಂಡು ಇವರನ್ನು regularize ಮಾಡಬೇಕು ಎನ್ನುವಂತಹ ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ.

**ಡಾ||ಸಿ.ಎನ್.ಅಶ್ವತ್ಥ್ ನಾರಾಯಣ:–** ಮಾನ್ಯ ಸಭಾಪತಿಯವರೇ, ನಮ್ಮೆಲ್ಲ ಮಾನ್ಯ ಸದಸ್ಯರ ಕಾಳಜಿಯಂತೆ ನಮ್ಮ ಅತಿಥಿ ಉಪನ್ಯಾಸಕರು ಮತ್ತು ಅವರು ಎದುರಿಸುತ್ತಿರುವಂತಹ ಸಮಸ್ಯೆಗಳು ನಿಜಕ್ಕೂ ಎಲ್ಲರಿಗೂ ಬಹಳ ದುಃಖವಾಗುತ್ತದೆ ಮತ್ತು ಅಷ್ಟರ ಮಟ್ಟಿಗೆ ಇದು ಸರಿ ಅನಿಸುವುದಿಲ್ಲ. ಇವತ್ತು ಅವರಿಗೆ ಸ್ಪಷ್ಟವಾದಂತಹ ಭವಿಷ್ಯ, ವೃತ್ತಿಗೆ ಭದ್ರತೆ ಇಲ್ಲದ ಕಾರಣ ಬಹಳಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ನಮ್ಮ ಮಾನ್ಯ ಸದಸ್ಯರು ಹೇಳಿದಂತೆ, 12 ಸಾವಿರ ಜನ, 14 ಸಾವಿರ ಜನ ಮತ್ತು 15 ಸಾವಿರ ಜನ ಅತಿಥಿ ಉಪನ್ಯಾಸಕರು ಇದ್ದಾರೆ. ಈಗಿನ assessment ಪ್ರಕಾರ ನಮಗೆ 1,358 ಹುದ್ದೆಗಳು ಇವೆ ಈಗ ಅದರಲ್ಲಿ 1242 ಹುದ್ದೆಗಳಿಗೆ call for ಮಾಡಿದ್ದಾರೆ. ಇವತ್ತು ಎಲ್ಲರಿಂದಲ್ಲೂ ಹುದ್ದೆಗಳನ್ನು ಭರ್ತಿ ಮಾಡದೆ vacant ಆಗಿ ಇಟ್ಟುಕೊಂಡಿದ್ದೀರಾ ಬೇಗ ಭರ್ತಿ ಮಾಡಿ ಎಂಬ ಒತ್ತಾಯ ಇದೆ. ಹಾಗಾಗಿ, ನಾವು ಇವತ್ತು ಯಾವುದೇ ರೀತಿಯ ದುರುಪಯೋಗವಾಗದೆ purely merit ಮೇಲೆ ಅಭ್ಯರ್ಥಿಗಳು ಯಾರು ಆಯ್ಕೆ ಆಗುತ್ತಿದ್ದಾರೆ. ಇದೇ ಶಿಕ್ಷಕರು ಆಯ್ಕೆ ಆಗುತ್ತಾರೆ. ಬೇರೆ ಯಾರೂ ಆಗುವುದಿಲ್ಲ. ಹಾಗಾಗಿ, ಇವರಿಗೆ ಆಯ್ಕೆ ಆಗುವುದಕ್ಕೆ ಅವಕಾಶವನ್ನು ಬಹಳ ತ್ವರಿತವಾಗಿ call for ಮಾಡಿದ ತಕ್ಷಣ ಭರ್ತಿ ಮಾಡುವುದಕ್ಕೆ ನಾವು ಕ್ರಮವನ್ನು ವಹಿಸಿದ್ದೇವೆ. ಹಾಗಾಗಿ, ಬಹಳಷ್ಟು ಉಪಯೋಗವನ್ನು ಬೇಗ ಮಾಡಿಕೊಡುತ್ತೇವೆ. ಇನ್ನಿತರೆ ಸಲಹೆಗಳಿಗೆ ನಿಮ್ಮೆಲ್ಲರ ಸಭೆ ಕರೆದು ಸಲಹೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪಡೆದುಕೊಳ್ಳುವಂತಹದ್ದನ್ನು ಮಾಡುತ್ತೇವೆ. ಈಗ Draft Notification ಅನ್ನು ಕಾಲ್ ಮಾಡಿದ್ದೇವೆ. ನಿಮ್ಮೆಲ್ಲರ ಸಲಹೆ ಸೂಚನೆಗಳನ್ನು ಪಡೆಯುವಂಥದ್ದನ್ನು ಮಾಡುತ್ತೇವೆ.

**(233)09-03-2020(5-20)ಎಂವಿ-ಆರ್‌ಎನ್**

**ಡಾ॥ ಸಿ.ಎನ್.ಅಶ್ವತ್ಥ್ ನಾರಾಯಣ (ಮುಂದು):-**
ಮತ್ತೆ ವೇತನ ವಿಚಾರವನ್ನು ಸಹ ಗಮನ ಸೆಳೆದಿದ್ದಾರೆ. ಅದರ ಬಗ್ಗೆಯೂ ಸಹ ಸರ್ಕಾರ ಗಮನ ಹರಿಸುತ್ತಿದೆ. ಈಗ ಯಾವ ರೀತಿಯಲ್ಲಿ ಏನು ಮಾಡುವುದಕ್ಕೆ ಆಗುತ್ತದೆ ಎಂಬುದನ್ನು ನೋಡಿಕೊಂಡು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಖಾಯಂ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳಲಿ. ಏಕೆಂದರೆ, 2006ರಲ್ಲಿ ನಾನು ಸಚಿವನಾಗಿದ್ದಾಗ ಪಾರ್ಟ್‌ಟೈಮ್ ಇದ್ದಂತಹವರನ್ನು ಖಾಯಂ ಮಾಡಿದ್ದೇವೆ. ಅವುಗಳ ಆದೇಶ ಪ್ರತಿಯನ್ನು ಕೊಡುತ್ತೇನೆ. ಈಗ ಸರ್ಕಾರಕ್ಕೆ ಶೇಕಡಾ 75 ಮತ್ತು 80ರಷ್ಟು ಎನ್ನುವುದು ಪ್ರಶ್ನೆಯಲ್ಲ. ಈ ವಿಷಯವನ್ನು ಕ್ಯಾಬಿನೆಟ್‌ಗೆ ತೆಗೆದುಕೊಂಡು ಹೋಗಿ ಇವರನ್ನು ಖಾಯಂ ಮಾಡಬೇಕು. ಇಲ್ಲವೇ ಇವರಿಗೆ weightage ಕೊಟ್ಟು ಖಾಯಂಗೊಳಿಸಬೇಕು. ಈಗ ಸುಮಾರು 1242 ಹುದ್ದೆಗಳನ್ನು ತುಂಬುವುದಕ್ಕೆ ಹೊರಟಿದ್ದಾರೆ. ಆಗ ಎಷ್ಟು ಮಂದಿ ಬರುತ್ತಾರೋ ಗೊತ್ತಿಲ್ಲ. ಸುಮಾರು 20 ರಿಂದ 25 ವರ್ಷ ಸೇವೆ ಸಲ್ಲಿಸಿರುವವರಿಗೆ ವಯೋಮಿತಿ ಮೀರುತ್ತಿದೆ. ಅದಕ್ಕೆ ದಯಮಾಡಿ ಯಾವುದಾದರೂ ಒಂದು ನಿರ್ಧಾರವನ್ನು ಕೈಗೊಳ್ಳಲಿ. ಈ ಹಿಂದೆ ಸಚಿವರಾದ ಮಾನ್ಯ ಜಿ.ಟಿ.ದೇವೇಗೌಡರು ಉನ್ನತ ಶಿಕ್ಷಣ ಸಚಿವರಾಗಿದ್ದಾಗ ಒಂದು cutoff date ಮಾಡಿದರು. ಆ ದಿನಾಂಕದಿಂದ ಎಲ್ಲರನ್ನು ಖಾಯಂ ಮಾಡುವುದಕ್ಕೆಂದು ಎರಡು ಭಾಗ ಮಾಡಿದರು. ಅದನ್ನು ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳಿಂದ ತರಿಸಿಕೊಂಡು ನೋಡಲಿ. ಅದನ್ನು ನೋಡಿ ಮಾಡಿದರೆ ಸೂಕ್ತವಾಗುತ್ತದೆ. ಒಟ್ಟಿನಲ್ಲಿ ಖಾಯಂ ಮಾಡುವುದಕ್ಕೆ ಏನು ಕ್ರಮ ಕೈಗೊಳ್ಳುತ್ತಾರೋ ಅದು ಮುಖ್ಯವಾದುದು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ಹೊರಟ್ಟಿಯವರ ಪ್ರಶ್ನೆಗೆ ಉತ್ತರ ಬಂದಿಲ್ಲ. ನಾನು ಮತ್ತೊಂದು ಉಪ ಪ್ರಶ್ನೆಯನ್ನು ಕೇಳಿದ್ದೇನೆ. ಈಗ ಪದವಿ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವಂತಹ ಬೋಧಕೇತರ ಸಿಬ್ಬಂದಿ ಉಪನ್ಯಾಸಕರಾಗುವುದಕ್ಕೆ ಏನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶೇಕಡಾ 5ರಷ್ಟು ಮೀಸಲಾತಿಯನ್ನು ಕೊಟಿದ್ದಾರೋ, ಅದೇರೀತಿ ಪದವಿ ಪೂರ್ವ ಕಾಲೇಜುಗಳಲ್ಲಿ ಇರತಕ್ಕಂತಹವರಿಗೂ ಕೂಡ ಶೇಕಡಾ 5ರಷ್ಟು ಮೀಸಲಾತಿಯನ್ನು ಕೊಡಬೇಕು. ಅದಕ್ಕೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಬಂದಿಲ್ಲ. ಹಿಂದಿನ ಸರ್ಕಾರ 5,000/- ರೂಪಾಯಿಗಳ ಗೌರವಧನವನ್ನು ಹೆಚ್ಚು ಮಾಡುವುದಕ್ಕೆ ಆರ್ಥಿಕ ಇಲಾಖೆಗೆ ಕಡತವನ್ನು ಕಳುಹಿಸಿತ್ತು. ಅದರ ಬಗ್ಗೆಯೂ ಕೂಡ ನಿರ್ದಿಷ್ಟವಾಗಿ ಉತ್ತರವನ್ನು ಹೇಳಿಲ್ಲ. ಮತ್ತೆ ಇವರನ್ನು ಖಾಯಂ ಮಾಡುವುದರ ಬಗ್ಗೆ, ನಮ್ಮನ್ನು ಕರೆದು ಮಾತನಾಡುತ್ತೇವೆಂದು ಹೇಳಿದ್ದಾರೆ. ಸಚಿವರು ನಮ್ಮನ್ನು ಕರೆಯುತ್ತಾರೆ. ಅದು ಬಹಳ ಸಂತೋಷ, ನಾವು ಬರುತ್ತೇವೆ. ನಿರ್ದಿಷ್ಟವಾಗಿ ಸದನದಲ್ಲಿ ಗಟ್ಟಿಯಾಗಿ, ಈಗ ಅವರು ಉಪ ಮುಖ್ಯಮಂತ್ರಿಗಳು ಅವರ ಬಗ್ಗೆ ಅಪಾರವಾದ ಭರವಸೆ ಇದೆ. ಅವರ ಅವಧಿಯಲ್ಲಿ ಶಿಕ್ಷಣ ಇಲಾಖೆಯಲ್ಲಿ ಈ ರೀತಿಯ ಒಂದು ಮಹತ್ವದ ತೀರ್ಮಾನವಾಗಬೇಕು. ಶಿಕ್ಷಣ ಇಲಾಖೆಯ ಉನ್ನತ್ತಿಗೋಸ್ಕರ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಮತ್ತು ಉನ್ನತ ಶಿಕ್ಷಣ ಸಚಿವರು ಕಂಕಣಕಟ್ಟಿ ನಿಂತಿದ್ದಾರೆ. ನಾವು ಅವರ ಜೊತೆಗೆ ಇದ್ದೇವೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಉಪ ಮುಖ್ಯಮಂತ್ರಿಯಾದವರಿಗೆ ಶಿಕ್ಷಣ ಇಲಾಖೆ ಇದುವರೆಗೂ ಯಾರಿಗೂ ಹೋಗಿರಲಿಲ್ಲ. ಅದು ಈಗ ಮಾನ್ಯ ಉಪ ಮುಖ್ಯಮಂತ್ರಿಗಳಾದ ಡಾ॥ ಸಿ.ಎನ್. ಅಶ್ವತ್ಥ ನಾರಾಯಣರವರಿಗೆ ಬಂದಿರುವುದು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಹೌದು ಅವರು ಡಾಕ್ಟರ್. ಅವರೆಲ್ಲರೂ ಕೂಡ ನೇಮಕಾತಿಯಲ್ಲಿ ಬರಬಹುದು ಎಂದು ಹೇಳಿದ್ದಾರೆ. ಈಗ ಅತಿಥಿ ಉಪನ್ಯಾಸಕರ ಸಮಸ್ಯೆ ಏನು ಮತ್ತು ಇವರು ಇಲ್ಲಿಗೆ ಏಕೆ ಬರುತ್ತಿಲ್ಲವೆಂದರೆ, ಇವರೆಲ್ಲರೂ ಎಂ.ಎ. ಮತ್ತು ಎಂ.ಎಸ್ಸಿ ಮಾಡಿದಂತಹ ಸಂದರ್ಭದಲ್ಲಿ ಕಡಿಮೆ ಅಂಕಗಳನ್ನು ಕೊಡುತ್ತಿದ್ದರು. ಈಗ ಸೆಮಿಸ್ಟರ್ ಸ್ಕೀಮ್ ಬಂದ ಮೇಲೆ, ಬಹಳ ಹೆಚ್ಚಿನ ಪ್ರಮಾಣದಲ್ಲಿ ಅಂಕಗಳನ್ನು ಕೊಡುತ್ತಿದ್ದಾರೆ. ಆದುದರಿಂದ ಇವರುಗಳು ಯಾವುದೇ ರೀತಿಯ ಪರೀಕ್ಷೆ ಬರೆದರೂ ಕೂಡ ಇವರ ಆಯ್ಕೆ ಬಹಳ ಕಷ್ಟಕರವಾಗಿದೆ. ಆದುದರಿಂದ, ಈ ವರ್ಗದವರು ಬಹಳ ದೊಡ್ಡ ಶೋಷಣೆಗೆ ಒಳಗಾದವರು. ಇವರೆಲ್ಲರೂ ಇದನ್ನೇ ನಂಬಿಕೊಂಡು ಇಷ್ಟು ವರ್ಷ ಕೆಲಸ ಮಾಡಿದ್ದಾರೆ. ಇವರೆಲ್ಲರಿಗೂ ಸಹ ವಯೋಮಿತಿ ಮೀರಿದೆ. ಇವರುಗಳು ಎಲ್ಲೂ ಹೋಗುವುದಕ್ಕೆ ಆಗುವುದಿಲ್ಲ. ಆದುದರಿಂದ ಇವರು ಬಹಳ ಸಮಸ್ಯೆಯಲ್ಲಿದ್ದಾರೆ. ನೀವು ಬೇಕಾದರೆ ಖಾಯಂ ಉಪನ್ಯಾಸಕರನ್ನು ಕೇಳಿ ತಿಳಿದುಕೊಳ್ಳಿ. ಸ್ನೇಹಿತರಿಗೆ ನಾವೇ ಹೇಳಿ ಅತಿಥಿ ಉಪನ್ಯಾಸಕರಿಗೆ ಹೆಣ್ಣು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಿಸಿ, ಮದುವೆ ಮಾಡಿಸಿದ್ದೇವೆ. ಈಗ ಅದು ದೊಡ್ಡ ಸಮಸ್ಯೆಯಾಗಿದೆ. ಈಗ ದಯವಿಟ್ಟು ಅತಿಥಿ ಉಪನ್ಯಾಸಕರ ಖಾಯಮಾತಿಗೆ ಏನು ಕ್ರಮ ವಹಿಸುತ್ತಾರೆಂದು ಸ್ಪಷ್ಟವಾಗಿ ಹೇಳಲಿ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆಯವರಿಗೆ ಶೇಕಡಾ 5ರಷ್ಟು ಅವರ ಕಾಲದಲ್ಲಿ ಆಗಲಿ. ಅದು ಈ ನೋಟಿಫಿಕೇಶನ್‌ನಲ್ಲೇ ಬರಬೇಕು. ಈ ನೋಟಿಫಿಕೇಶನ್ ಬಿಟ್ಟು ಮುಂದೆ ಮಾಡುತ್ತೇವೆ ಎನ್ನುವುದು ಬೇಡ.

**ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಮಾನ್ಯ ಹೊರಟ್ಟಿ ಸಾಹೇಬರ ಕಾಲದಲ್ಲಿ ಅಂದರೆ 2006ರಲ್ಲಿ ಏನು ಒಂದು Regularization ಆಯಿತು, ಆ vacancy ಮತ್ತು number of teachers ಗೆ ಅದು match ಆಗುತ್ತಿತ್ತು. ಆದರೆ, ಇವತ್ತಿನ ದಿವಸ ಆ match ಆಗುವಂತಹ ಪ್ರಶ್ನೆಯೇ ಇಲ್ಲ. ಈಗ ನಾವು ಕರೆದಿರುವಂತಹ ಹುದ್ದೆಗಳ ಸಂಖ್ಯೆಗಳಿಗೂ ಮತ್ತು ಇರುವಂತಹ ಅತಿಥಿ ಉಪನ್ಯಾಸಕರಿಗಳಿಗೂ ಬಹಳ disproportionate ಆಗಿದೆ. ನಾವು ಅವರಿಗೆ ತೊಂದರೆ ಕೊಡಬೇಕು ಎಂದು ಇಲ್ಲ. ಆದರೆ, ಅವರ ಬಗ್ಗೆ ಕಾಳಜಿ ಇದೆ. ಅವರಿಗೆ ತೊಂದರೆ ಕೊಡಬೇಕು ಮತ್ತು ಅನಾನುಕೂಲಕೂಲತೆ ಮಾಡಬೇಕು ಎನ್ನುವುದೂ ಇಲ್ಲ. ಅವರಿಗೆ ಅನುಕೂಲತೆ ಮಾಡುವುದಕ್ಕೆ ಈ ನೇಮಕಾತಿಯನ್ನು ಬಹಳ ತ್ವರಿತವಾಗಿ ಮಾಡಬೇಕು ಎಂಬ ಉದ್ದೇಶವಿದೆ. ಯಾವ ರೀತಿಯ ಸಮಸ್ಯೆಗಳಿವೆ ಎಂದು ಈಗಾಗಲೇ ಅವರಿಗೆ ಗೊತ್ತಿದೆ. ಅದರ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಈಗ limitations ಮತ್ತು challenges ಏನಿದೆ ಎಂಬುದು ಅವರಿಗೆ ಗೊತ್ತಿದೆ. ಈಗ ವೇತನದ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳಿಗೆ ಅವರ ಬಗ್ಗೆ ಸಾಕಷ್ಟು ಕಾಳಜಿ ಮತ್ತು ಸಹಾನುಭೂತಿ ಇದೆ. ನಾವು ಉಪನ್ಯಾಸಕರ ವೇತನದ ವಿಚಾರವಾಗಿ ತ್ವರಿತವಾಗಿ ಸಹಾಯ ಮಾಡುವ ವಿಚಾರದಲ್ಲಿ ಸಮಸ್ಯೆಗಳನ್ನು ಬಗೆಹರಿಸುವಂತಹ ಕೆಲಸವನ್ನು ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 573**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈ ಉತ್ತರದಲ್ಲಿ ಇವತ್ತು ರಾಜ್ಯದಲ್ಲಿ ಅರಣ್ಯ ಪ್ರದೇಶಗಳು ಒಟ್ಟು ಎಷ್ಟು ಇದೆ ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳಿದ್ದೇನೆ. ಅದನ್ನು ಚದುರ ಕಿಲೋಮೀಟರ್‌ಗಳಲ್ಲಿ ನೋಡಿದಾಗ, 43,42,785 ಹೆಕ್ಟೇರ್ ವಿಸ್ತೀರ್ಣದ ಪ್ರದೇಶ ಇದೆ ಎಂದು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಮತ್ತೆ ಎರಡನೆ ಪ್ರಶ್ನೆಗೆ ನೀಡಿರುವ ಉತ್ತರದಲ್ಲಿ 30 ಜಿಲ್ಲೆಗಳಲ್ಲಿ ಅರಣ್ಯ ಪ್ರದೇಶ ಇದೆ ಎಂದು ಹೇಳಿದ್ದಾರೆ. ಅವರು ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯನ್ನು ಸಹ ಹೇಳಿದ್ದಾರೆ. ಆದರೆ ಉತ್ತರದಲ್ಲಿ ಅನುಬಂಧ–2 ಎಂದು ಕೊಟ್ಟಿದ್ದಾರೆ. ಎರಡನೆ ಪ್ರಶ್ನೆಗೆ ಕೇವಲ 23 ಜಿಲ್ಲೆಗಳನ್ನು ಮಾತ್ರ ನೀಡಿದ್ದಾರೆ. ಯಾವ್ಯಾವ ಜಿಲ್ಲೆಗಳಲ್ಲಿ ಅರಣ್ಯ ಪ್ರದೇಶವನ್ನು ಅತಿಕ್ರಮಣ ಮಾಡಿಕೊಂಡಿದ್ದಾರೆ ಎಂಬ ಮಾಹಿತಿಯನ್ನು ಸಹ ಒದಗಿಸಿದ್ದಾರೆ. ಅರಣ್ಯ ಪ್ರದೇಶವನ್ನು ಅತಿಕ್ರಮಣ ಮಾಡಿಕೊಂಡಿದ್ದಾರೆಂದು ಏನು ಮಾಹಿತಿಯನ್ನು ಕೊಟ್ಟಿದ್ದಾರೆ, ಇದು ಸುಮಾರು 82,650 ಹೆಕ್ಟೇರ್‌ಗಳು ಆಗಿರವಂಥದ್ದು ಎಂದು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಇವತ್ತಿನ ದಿವಸ ಇರುವ 30 ಜಿಲ್ಲೆಗಳಲ್ಲಿ ಕೇವಲ 23 ಜಿಲ್ಲೆಗಳಲ್ಲಿ ಮಾತ್ರ ಅತಿಕ್ರಮಣವಾಗಿದೆ ಎಂದು ಉತ್ತರ ನೀಡಿದ್ದಾರೆ. ಕೂರ್ಗ್‌ನಲ್ಲಿ ಅತಿಕ್ರಮಣ ಆಗಿರುವುದರಲ್ಲಿ ಏಕೆ ತೋರಿಸಿಲ್ಲ? ನನ್ನ ಹತ್ತಿರ ಇರುವಂತಹ ಮಾಹಿತಿಯ ಪ್ರಕಾರ, ಕೂರ್ಗ್‌ನಲ್ಲಿ 102 ಚದುರ ಕಿಲೋಮೀಟರ್‌ನಷ್ಟು ಅರಣ್ಯ ಪ್ರದೇಶ ಅತಿಕ್ರಮಣವಾಗಿದೆ. ಅದರ ಒಂದು ಮಾಹಿತಿ ಒತ್ತುವರಿ ಅರಣ್ಯ ಪ್ರದೇಶದ ಜಿಲ್ಲಾವಾರು ಮಾಹಿತಿಯಲ್ಲಿ ಇಲ್ಲ. ಬೆಂಗಳೂರು ಗ್ರಾಮಾಂತರದಲ್ಲಿ ಸುಮಾರು 136 ಚದುರ ಕಿಲೋಮೀಟರ್‌ನಷ್ಟು ಅರಣ್ಯ ಪ್ರದೇಶ ಒತ್ತುವರಿಯಾಗಿದೆ. ಆದರೆ, ಇಲ್ಲಿ ಅದರ ಬಗ್ಗೆ ಮಾಹಿತಿಯನ್ನು ಲಿಖಿತ ಉತ್ತರದಲ್ಲಿ ನೀಡಿಲ್ಲ. ಇದನ್ನು ಏಕೆ pick and choose ಮಾಡಿದ್ದಾರೆಯೇ ಅಥವಾ ಈ ಸಭೆಯನ್ನು take it for granted ಎನ್ನುವ ಹಾಗೆ ತೆಗೆದುಕೊಂಡಿದ್ದಾರೆಯೇ? ಸದಸ್ಯರು ಪ್ರಶ್ನೆ ಕೇಳುವುದು ಕಾಟಚಾರದ ಪ್ರಶ್ನೆಯಾಗಿದೆ ಎಂದು, ಉತ್ತರವನ್ನು ಕೊಡೋಣ ಎನ್ನುವಂತಹ ರೀತಿಯಲ್ಲಿ ಕೊಟ್ಟಿರುವಂತೆ ಇದೆ. ಇದನ್ನು ನಾನು ಖಂಡಿಸಬೇಕಾಗುತ್ತದೆ. ಇಲ್ಲಿ ನಮ್ಮ ಅರಣ್ಯ ಪ್ರದೇಶಗಳನ್ನು ಕಾಪಾಡುವಂಥದ್ದು ಇದೆ. ಆದರೆ. ಅಲ್ಲಿ ಮನೆಗಳನ್ನು ಕಟ್ಟಿದರೆ, ಅವುಗಳನ್ನು ಸಕ್ರಮ ಮಾಡುವುದಕ್ಕೆ ಅವಕಾಶವಿಲ್ಲವೆಂದು ಹೇಳಿದ್ದಾರೆ. ಆದರೆ, ಇವತ್ತು ಬೆಂಗಳೂರಿನಲ್ಲಿ ದೊಡ್ಡ–ದೊಡ್ಡ ಕಾಂಪ್ಲೆಕ್ಸ್, ಬಿಲ್ಡಿಂಗ್ಸ್ ಮತ್ತು ಮನೆಗಳನ್ನು ಕಟ್ಟಿದ್ದಾರೆ ಮತ್ತು ಬೇಕಾದಷ್ಟು ಅರಣ್ಯ ಒತ್ತುವರಿಯಾಗಿದೆ. ಇದಕ್ಕೆ ಮಾನ್ಯ ಸಚಿವರು ಏನು ಕ್ರಮ ಕೈಗೊಳ್ಳುತ್ತಾರೆ ಎಂಬುದಕ್ಕೆ ಎಲ್ಲೂ ಏನೂ ಉತ್ತರವಿಲ್ಲ. ದಯವಿಟ್ಟು ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ವಿನಂತಿ ಮಾಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆನಂದ್ ಸಿಂಗ್:–** ಮಾನ್ಯ ಸಭಾಪತಿಯವರೇ, ಕೂರ್ಗ್ ಬಗ್ಗೆ ಸರಿಯಾದ ಮಾಹಿತಿ ಕೊಟ್ಟಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಕೂರ್ಗ್ ಬಗ್ಗೆಯು ಒತ್ತುವರಿಯಾಗಿರುವಂತಹ ವಿವರಗಳನ್ನು ಅನುಬಂಧ–2ರಲ್ಲಿ ಉತ್ತರವನ್ನು ಬಹಳಷ್ಟು ವಿವರವಾಗಿ ಒದಗಿಸಿದ್ದೇವೆ. ಅಂದರೆ, 7158 ಎಕರೆಗಳು ಒತ್ತುವರಿಯಾದ ಅರಣ್ಯ ಪ್ರದೇಶದ ಜಿಲ್ಲಾವಾರು ವಿವರಗಳಲ್ಲಿ ನೀಡಿದ್ದೇವೆ. ಹಾಗಾಗಿ ಮನೆ ಕಟ್ಟುವಂತಹ ಮತ್ತು ಬೇರೆ–ಬೇರೆ ಅರಣ್ಯ ಭಾಗದಲ್ಲಿ ಇರತಕ್ಕಂಥ ಪ್ರದೇಶದಲ್ಲಿ ಮನೆಗಳನ್ನು ನಿರ್ಮಾಣ ಮಾಡಿಕೊಡುವುದಕ್ಕೆ ಏನು ಕ್ರಮ ಕೈಗೊಳ್ಳುತ್ತೀರೆಂದರೆ, ಈಗ ಅರಣ್ಯ ಪ್ರದೇಶದಲ್ಲಿ ಒತ್ತುವರಿ ಮಾಡಿ, ಮನೆಗಳನ್ನು ಕಟ್ಟುವುದಕ್ಕೆ ಅವಕಾಶವಿಲ್ಲ. ಆದರೆ, ಈಗಾಗಲೇ ಬಹಳಷ್ಟು ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿದ್ದಾರೆಂದು ಮಾನ್ಯ ಸದಸ್ಯರು ಸದನದ ಗಮನಕ್ಕೆ ತಂದಿದ್ದಾರೆ.

**(234) 09.03.2020 05.30 LL-VK**

**ಶ್ರೀ ಆನಂದಸಿಂಗ್(ಮುಂದು)**

ಈಗಾಗಲೇ ಬಹಳಷ್ಟು ದೊಡ್ಡ ದೊಡ್ಡ ಕಟ್ಟಡಗಳನ್ನು ಅರಣ್ಯ ಪ್ರದೇಶದಲ್ಲಿ ಕಟ್ಟಿದ್ದಾರೆಂದು ಮಾನ್ಯ ಸದಸ್ಯರು ಸದನದ ಗಮನಕ್ಕೆ ತಂದಿದ್ದಾರೆ. ಖಂಡಿತವಾಗಿಯೂ, ಈ ಬಗ್ಗೆ ಪರಿಶೀಲನೆ ಮಾಡಿ, ಒಂದು ವೇಳೆ ಮಾನ್ಯ ಸದಸ್ಯರು ಆ ಬಗ್ಗೆ ಮಾಹಿತಿ ಕೊಟ್ಟರೆ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಕರ್ನಾಟಕ ರಾಜ್ಯ ಒಟ್ಟಾರೆ 43,42,785 ಹೆಕ್ಟೇರ್ ವಿಸ್ತೀರ್ಣದ ಅರಣ್ಯ ಪ್ರದೇಶವನ್ನು ಹೊಂದಿರುತ್ತದೆಯೆಂದು ಬಹಳ ವಿವರವಾಗಿ ಉತ್ತರವನ್ನು ಒದಗಿಸಲಾಗಿದೆ. ಮಾನ್ಯ ಸದಸ್ಯರು 3 ಪ್ರಶ್ನೆಗಳನ್ನು ಕೇಳಿದ್ದಾರೆ. ಅವುಗಳಿಗೆ ಉತ್ತರ ನೀಡಲಾಗಿದೆ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ‘ಉತ್ತರ ಒದಗಿಸಲಾಗಿದೆ’ ಎಂದು ಉತ್ತರ ನೀಡಿದ್ದಾರೆ. ಅನುಬಂಧ–2 ಒತ್ತುವರಿಯಾದ ಅರಣ್ಯ ಪ್ರದೇಶದ ಜಿಲ್ಲಾವಾರು ವಿವರ 1, 2 ಮತ್ತು 3 ಎಂದು 23 ಜಿಲ್ಲೆಗಳ ಮಾಹಿತಿ ಇದೆ. ಕೂರ್ಗ್ ವಿಷಯ ಎಲ್ಲಿದೆ? ಆದರೆ, ಮಾನ್ಯ ಸದಸ್ಯರು ಕೂರ್ಗ್ ಇದೆಯೆಂದು ಹೇಳಿದ್ದಾರೆ.

**ಸಭಾಪತಿಯವರು:–** ಒಟ್ಟು 23 ಜಿಲ್ಲೆಗಳ ಮಾಹಿತಿ ಇರುತ್ತದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಆನಂದ್ ಸಿಂಗ್:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಯಾವ್ಯಾವ ಜಿಲ್ಲೆಗಳ ಮಾಹಿತಿ ಬಿಟ್ಟು ಹೋಗಿದೆಯೋ, ಖಂಡಿತವಾಗಿಯೂ ಆ ಮಾಹಿತಿ ಕೂಡ ಒದಗಿಸುತ್ತೇವೆ.

**ಸಭಾಪತಿಯವರು:–** ತಮ್ಮ ಉತ್ತರದಲ್ಲಿ ಒಂದು ಕಡೆ 30 ಜಿಲ್ಲೆಗಳು, ಮತ್ತೊಂದು ಕಡೆ 23 ಜಿಲ್ಲೆಗಳು ಎಂದು ಇದೆ. ಅನುಬಂಧ –1 ರಲ್ಲಿ 30 ಜಿಲ್ಲೆಗಳು ಎಂದು ಇದೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಕೂರ್ಗ್ ಬಗ್ಗೆ ಮಾಹಿತಿ ನೀಡಲಾಗಿದೆಯೆಂದು ಮಾನ್ಯ ಸಚಿವರು ಉತ್ತರ ನೀಡಿದ್ದಾರೆ. ಆದರೆ, ನಮಗೆ ನೀಡಿರುವಂತಹ ಉತ್ತರದಲ್ಲಿ ಅದರ ಬಗ್ಗೆ ಮಾಹಿತಿ ಇಲ್ಲ.

**(ಗೊಂದಲ)**

**ಶ್ರೀ ಆನಂದ್ ಸಿಂಗ್:–** ಮಾನ್ಯ ಸಭಾಪತಿಯವರೇ, ಉತ್ತರದಲ್ಲಿ ಯಾವ್ಯಾವ ಜಿಲ್ಲೆಗಳ ಮಾಹಿತಿ ಬಿಟ್ಟು ಹೋಗಿದೆ, ಅದರ ಮಾಹಿತಿಯನ್ನು ನಂತರ ಒದಗಿಸುತ್ತೇವೆ.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ರಮೇಶ್‌ರವರೆ ಒಂದು ನಿಮಿಷ, ...

**(ಗೊಂದಲ)**

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಇವರು ಈ ಸಭೆಯನ್ನು ಯಾವ ರೀತಿ ತೆಗೆದುಕೊಳ್ಳುತ್ತಿದ್ದಾರೆ?

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ...

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**(ಗೊಂದಲ)**

**ಶ್ರೀ ಆನಂದ್ ಸಿಂಗ್:-** ಮಾನ್ಯ ಸಭಾಪತಿಯವರೇ, ಮಾಹಿತಿ ಪ್ರಕಾರ ನಾವು ಉತ್ತರ ನೀಡುತ್ತಿದ್ದೇವೆ.

**(ಗೊಂದಲ)**

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಮಾಹಿತಿ ಗೊತ್ತಿರುವ ರೀತಿ ಉತ್ತರ ನೀಡುತ್ತಾರೆ. ಆದರೆ, ಅಧಿಕಾರಿಗಳು ಕೊಟ್ಟಿರುವಂತಹ...

**(ಗೊಂದಲ)**

**ಶ್ರೀ ಆರ್. ಧರ್ಮಸೇನ:-** ಮಾನ್ಯ ಸಭಾಪತಿಯವರೇ, ಈ ರೀತಿಯ ಉತ್ತರಗಳಿಂದಾಗಿ ಸರ್ಕಾರದಲ್ಲಿಯೇ ಸರಿಯಾದ ಮಾಹಿತಿ ಇಲ್ಲವೆಂಬ ಸಂದೇಹ ಬರುತ್ತಿದೆ.

**(ಗೊಂದಲ)**

**ಶ್ರೀ ಆನಂದ್ ಸಿಂಗ್:-** ಮಾನ್ಯ ಸಭಾಪತಿಯವರೇ, ಸರ್ಕಾರದಲ್ಲಿ ಮಾಹಿತಿ ಇದೆ. ಮಾಹಿತಿ ಕೊರತೆಯಿರುವುದಿಲ್ಲ.

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಸಭಾಪತಿಯವರೇ, ನಾವು ಉಪ ಪ್ರಶ್ನೆ ಕೇಳಬಾರದೇ?

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, Additional Principal Chief Conservator of Forest ರವರು ಈಗ ನಮಗೆ ಒಂದು ಮಾಹಿತಿ ಕಳುಹಿಸಿಕೊಟ್ಟಿದ್ದಾರೆ.

**(ಗೊಂದಲ)**

**ಶ್ರೀ ಸಿ.ಸಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಎಲ್ಲರೂ ಈ ರೀತಿ ಒಟ್ಟಾಗಿ ಪ್ರಶ್ನೆ ಕೇಳಿದರೆ ಹೇಗೆ?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಿ.ಸಿ. ಪಾಟೀಲರೇ, ಉಪ ಪ್ರಶ್ನೆ ಕೇಳುವುದಕ್ಕೆ ನಾನು ಮಾನ್ಯ ಸಭಾಪತಿಯವರ ಅನುಮತಿ ಕೇಳುತ್ತಿದ್ದೇನೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಎಸ್.ಎಲ್. ಭೋಜೇಗೌಡರವರೇ, ದಯಮಾಡಿ ಕುಳಿತುಕೊಳ್ಳಿ. ಪ್ರಶ್ನೆ ಕೇಳಿದವರು ಮೊದಲು ಮಾತನಾಡಲಿ.

**(ಗೊಂದಲ)**

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಈಗ ತಾನೇ ನನಗೆ ಮಾನ್ಯ ಸಚಿವರು ಓದಿರತಕ್ಕಂತಹ ಒಂದು ಪತ್ರದ ನಕಲನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರು ಈ ಪತ್ರವನ್ನು ನೋಡಿಕೊಂಡು ನಮಗೆ ಉತ್ತರ ಕೊಡುತ್ತಿದ್ದಾರೆಂದು ನಾನು ಭಾವಿಸುತ್ತೇನೆ. ಆದರೆ, ನಮಗೆ sign ಮಾಡಿ ಕೊಟ್ಟಿರುವಂತಹ ಉತ್ತರದಲ್ಲಿ ಖಂಡಿತವಾಗಿಯೂ ಕೂರ್ಗ್ ಬಗ್ಗೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಗ್ಗೆ ಮಾಹಿತಿ ಇರುವುದಿಲ್ಲ. ಆದರೆ, ಮಾನ್ಯ ಸಚಿವರ ಬಳಿ ಇರುವಂತಹ ಉತ್ತರದಲ್ಲಿ 30 ಜಿಲ್ಲೆಗಳ ಮಾಹಿತಿ ಇದೆ. ಎಲ್ಲಾ ಜಿಲ್ಲೆಗಳಲ್ಲಿಯೂ ಅರಣ್ಯ ಪ್ರದೇಶ ಒತ್ತುವರಿ ಆಗಿರುವ ಬಗ್ಗೆ ಮಾಹಿತಿ ಇದೆ. ಆದರೆ, ನಮಗೆ ಕೊಟ್ಟಿರುವಂತಹ ಉತ್ತರದಲ್ಲಿ; ಇದರ ಬಗ್ಗೆ ಹಕ್ಕುಚ್ಯುತಿ ಪ್ರಸ್ತಾವವನ್ನು ಮಂಡಿಸಲು ಅವಕಾಶ ನೀಡಬೇಕು. I request the Hon'ble Chairman to move this to the Privilege Committee.

**(ಗೊಂದಲ)**

**ಸಭಾಪತಿಯವರು:–** ಇದು intentionally ಆಗಿರುವುದಿಲ್ಲ ಬಿಡಿ.

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ...

**(ಗೊಂದಲ)**

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, I will come to the point...

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ...

**(ಗೊಂದಲ)**

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಅಧಿಕಾರಿಗಳು ಕೊಟ್ಟಂತಹ ಮಾಹಿತಿ ಇಟ್ಟುಕೊಂಡು ಮಾನ್ಯ ಸಚಿವರು ಗೊಂದಲ ಮಾಡಿಕೊಂಡಿದ್ದಾರೆಂದು ಕಾಣುತ್ತಿದೆ. ಅದನ್ನು ಸಚಿವರು ಸರಿಪಡಿಸಿಕೊಂಡು ಉತ್ತರ ನೀಡಲಿ.

**(ಗೊಂದಲ)**

**ಶ್ರೀ ಆನಂದ್ ಸಿಂಗ್:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಯಾವುದೇ ಗೊಂದಲ ಇರುವುದಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರ...

**(ಗೊಂದಲ)**

**ಶ್ರೀ ಆನಂದ್ ಸಿಂಗ್:-** ಮಾನ್ಯ ಸಭಾಪತಿಯವರೇ, ಎಲ್ಲಾ ಜಿಲ್ಲೆಗಳ ಬಗ್ಗೆ ಮಾಹಿತಿ ನೀಡಬೇಕು. ಆದರೆ, ಸಮಯದ ಕೊರತೆ ಇರುವುದರಿಂದ, ಉತ್ತರದಲ್ಲಿ ಯಾವ ಜಿಲ್ಲೆಯ ಮಾಹಿತಿ ಬಿಟ್ಟು ಹೋಗಿರುತ್ತದೆ, ಅದನ್ನು ಖಂಡಿತವಾಗಿಯೂ ನೀಡುತ್ತೇವೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ.

**ಸಭಾಪತಿಯವರು:-** ಶ್ರೀ ಟಿ.ಎ. ಶರವಣರವರೇ, ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಿ.ಸಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಯಾರೇ ಮಂತ್ರಿಗಳಾದರೂ ಸಹ ಅಧಿಕಾರಿಗಳಿಂದಲೇ ಉತ್ತರ ತರಿಸಿಕೊಡಬೇಕು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರ ಸಮರ್ಪಕವಾಗಿಲ್ಲದೇ ಇದ್ದರೆ, ಅದಕ್ಕೆ ಪೂರಕವಾದ ಉತ್ತರವನ್ನು ಒದಗಿಸುತ್ತೇವೆ.

**ಸಭಾಪತಿಯವರು:–** ಇದರಲ್ಲಿ ಏನಾಗಿದೆಯೆಂದರೆ, ಮಾನ್ಯ ಸದಸ್ಯರ ಪ್ರಶ್ನೆಗೆ ಒಂದು ಕಡೆ ಉತ್ತರದಲ್ಲಿ 30 ಜಿಲ್ಲೆಗಳ ಮಾಹಿತಿ ನೀಡಿದ್ದರೆ, ಮತ್ತೊಂದು ಕಡೆ 23 ಜಿಲ್ಲೆಗಳ ಮಾಹಿತಿ ಕೊಟ್ಟಿದ್ದಾರೆ. ಉಳಿದ 7 ಜಿಲ್ಲೆಗಳ ಮಾಹಿತಿ ಬಿಟ್ಟು ಹೋಗಿರುತ್ತದೆ. ಅದನ್ನು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. **(ಗೊಂದಲ)** ಆ ರೀತಿ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಅದು ಸದನದ ಸ್ವತ್ತು. ತಮಗೆ ಇಚ್ಛೆ ಬಂದ ಹಾಗೆ ಕೊಡುವುದಕ್ಕೆ ಅಥವಾ ಬಿಡುವುದಕ್ಕೆ ಆಗುವುದಿಲ್ಲ. ಎಲ್ಲರಿಗೂ ಉತ್ತರ ಕೊಡಬೇಕಲ್ಲವೇ?

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, 30 ಜಿಲ್ಲೆಗಳ ಮಾಹಿತಿ ಕೊಟ್ಟಿರುವುದು ಜಿಲ್ಲಾವಾರು ಅರಣ್ಯ ಪ್ರದೇಶದ ಬಗ್ಗೆ. ಆದರೆ, 23 ಜಿಲ್ಲೆಗಳ ಮಾಹಿತಿ ಕೊಟ್ಟಿರುವುದು ಒತ್ತುವರಿ ಆಗಿರುವ ಬಗ್ಗೆ. ಒತ್ತುವರಿ ಬಗ್ಗೆಯೇ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಒದಗಿಸಿರುವುದಾಗಿ ತಿಳಿಸಿರುವುದು ರೆಕಾರ್ಡ್‌ನಲ್ಲಿದೆ. ಅದು ತಪ್ಪಾಗಿ ರೆಕಾರ್ಡ್‌ಗೆ ಹೋಗುತ್ತದೆಯೆಂದು ನಾವು ಕೇಳುತ್ತಿದ್ದೇವೆ. ಅದಕ್ಕೆ ಸಚಿವರು ಉತ್ತರ ನೀಡಲಿ. ಕೂರ್ಗ್ ಜಿಲ್ಲೆಯ ಮಾಹಿತಿ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಆದರೆ, ಉತ್ತರದಲ್ಲಿ ಅದರ ಬಗ್ಗೆ ಮಾಹಿತಿ ಇರುವುದಿಲ್ಲ. ಅದಕ್ಕೆ ಮಾಹಿತಿ ನೀಡಬೇಕಲ್ಲವೇ? ಎಲ್ಲವೂ ರೆಕಾರ್ಡ್‌ಗೆ ಹೋಗುತ್ತದೆ ಅಲ್ಲವೇ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರೇ, **ತಮ್ಮ ಪ್ರಶ್ನೆಯನ್ನು ತಡೆಹಿಡಿಯೋಣ.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಏನು ಉತ್ತರ ನೀಡಿದ್ದೇವೆ, ಅದು ಸಮರ್ಪಕವಾಗಿಲ್ಲದೇ ಇದ್ದರೆ, ಅವರು ಕೇಳಿರುವಂತಹ ಪ್ರಶ್ನೆಗೆ ಮತ್ತಷ್ಟು ಉತ್ತರ ಒದಗಿಸುತ್ತೇವೆ.

**(ಗೊಂದಲ)**

**ಸಭಾಪತಿಯವರು:–** **ಆ ಪ್ರಶ್ನೆಯನ್ನು ತಡೆಹಿಡಿಯೋಣ.**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಒಂದು ಕಡೆ 30 ಜಿಲ್ಲೆಗಳ ಜಿಲ್ಲಾವಾರು ಅರಣ್ಯ ಪ್ರದೇಶ ಬಗ್ಗೆ ಮಾಹಿತಿ, ಮತ್ತೊಂದು ಕಡೆ 23 ಜಿಲ್ಲೆಗಳ ಜಿಲ್ಲಾವಾರು ಒತ್ತುವರಿ ಆಗಿರುವ ಬಗ್ಗೆ ಮಾಹಿತಿ ಇದೆ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ಅದು ನಮಗೆ ಅರ್ಥವಾಗಿದೆ. ಆದ್ದರೆ, ಮಾನ್ಯ ಸಿ.ಸಿ. ಪಾಟೀಲರಿಗೆ ನಮ್ಮ ಪ್ರಶ್ನೆ ಏತಕ್ಕೆ ಅರ್ಥವಾಗುತ್ತಿಲ್ಲ?

**(ಗೊಂದಲ)**

**ಸಭಾಪತಿಯವರು:–** **ಈ ಪ್ರಶ್ನೆಯನ್ನು ತಡೆಹಿಡಿಯಲಾಗಿರುತ್ತದೆ.** ಮುಂದಿನ ಪ್ರಶ್ನೆ ಶ್ರೀ ಧರ್ಮಸೇನರವರದ್ದು.

**ಪ್ರಶ್ನೆ ಸಂಖ್ಯೆ:587**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್. ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಜೊತೆಗೆ, ಅವರ ಉತ್ತರದಲ್ಲಿಯೇ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಆಟದ ಮೈದಾನಗಳಿರುವುದಿಲ್ಲವೆಂದು ಒಪ್ಪಿಕೊಂಡಿರುತ್ತಾರೆ. ರಾಜ್ಯದಲ್ಲಿ ಈ ಮೂರು ವರ್ಗಗಳಿಂದ ಸುಮಾರು 80 ಸಾವಿರ ಶಾಲೆಗಳ ಪೈಕಿ ಸುಮಾರು 25 ಸಾವಿರ ಶಾಲೆಗಳಲ್ಲಿ ಆಟದ ಮೈದಾನ ಇರುವುದಿಲ್ಲ. ಮಾನ್ಯ ಮಂತ್ರಿಗಳಲ್ಲಿ ನಾನು ಹೇಳುವುದೇನೆಂದರೆ, ಇದು ತಮ್ಮ ಸರ್ಕಾರದ ಅವಧಿಯಲ್ಲಿ ಆಗಿದೆಯೆಂದು ನಮ್ಮ objection ಇರುವುದಿಲ್ಲ. ದಯಮಾಡಿ, ಈ ವಿಷಯದ ಬಗ್ಗೆ ಎಷ್ಟು ದಿವಸಗಳಲ್ಲಿ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೀರಿ? ಏತಕ್ಕೆಂದರೆ, ಪ್ರೌಢ ಮತ್ತು ಪ್ರಾಥಮಿಕ ಶಾಲೆಗಳಲ್ಲಿ ಆಟದ ಮೈದಾನಗಳೇ ಬಹಳ ಮುಖ್ಯವಾಗಿರುತ್ತದೆ. ಮಕ್ಕಳು ಆಟ ಆಡದೇ ಇದ್ದರೆ, ಅವರ ಪರೀಕ್ಷೆಗಳಿಗೆ ಅಥವಾ ಅವರ ಬೆಳವಣಿಗೆಗೆ ಬಹಳ ತೊಂದರೆಯಾಗುತ್ತದೆ. ಅದಕ್ಕಾಗಿ ತಾವು ಒಂದು ಕಾಲಮಿತಿ ಇಟ್ಟು ದಯಮಾಡಿ ರಾಜ್ಯದ ಜನತೆಗೆ ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡುತ್ತೇನೆ.

**ಶ್ರೀ ಎಸ್. ರುದ್ರೇಗೌಡ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಕೆಲವು ಶಾಲೆಗಳು 1 ರಿಂದ 5 ನೇ ತರಗತಿಯವರೆಗೆ ನಡೆದು ಮುಂದಿನ ಅನುಮತಿಗಾಗಿ ಕಾಯುತ್ತಿವೆ. ಅಂತಹ ಕೆಲವು ಶಾಲೆಗಳಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಟದ ಮೈದಾನ ಇರುವುದಿಲ್ಲ. ಆದರೆ, ಆ ಶಾಲೆಗಳು ಮಕ್ಕಳಿಗೆ ಉಚಿತ ಶಿಕ್ಷಣ ಕೊಡುತ್ತಿರುತ್ತವೆ. ಇದರಿಂದಾಗಿ, ಉತ್ತರದಲ್ಲಿ ಕೊಟ್ಟಿರುವಂತೆ, ಆ ರೀತಿಯ ಶಾಲೆಗಳಿಗೆ ಒಂದು ವಿಶೇಷವಾದ ಅವಕಾಶ ಮಾಡಿಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಆರ್. ಧರ್ಮಸೇನ:-** ಮಾನ್ಯ ಸಭಾಪತಿಯವರೇ, ಈಗ ಬಹಳಷ್ಟು ಊರುಗಳು ನಗರೀಕರಣ ಆಗುತ್ತಿವೆ. ಕೆಲವು ಶಾಲೆಗಳಲ್ಲಿ ಲಿಫ್ಟ್‌ಗಳಿಲ್ಲದೇ 3ನೇ ಮಹಡಿ, 4ನೇ ಮಹಡಿ ಹಾಗೂ 5ನೇ ಮಹಡಿಗಳಲ್ಲಿ ತರಗತಿಗಳನ್ನು ನಡೆಸುತ್ತಿದ್ದಾರೆ. ಆಟದ ಮೈದಾನಕ್ಕಿಂತಲೂ ಇದು ಬಹಳ ಕಠಿಣವಾದಂತಹ ವಿಚಾರವಾಗಿರುತ್ತದೆ. ಆದುದರಿಂದ, ಮಾನ್ಯ ಸಚಿವರು, ದಯಮಾಡಿ ಈ ಎರಡು ವಿಚಾರಗಳ ಬಗ್ಗೆ ಕೂಡಲೇ ಕ್ರಮ ವಹಿಸಬೇಕೆಂದು ಕೋರುತ್ತೇನೆ.

**ಶ್ರೀ ಎಸ್. ಸುರೇಶ್‌ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಶಾಲೆಗಳಲ್ಲಿ ಆಟದ ಮೈದಾನ ಇರಬೇಕೆಂದು ಏನು ಪ್ರಶ್ನೆ ಕೇಳಿದ್ದಾರೆ, ಅದು ಬಹಳ ಅವಶ್ಯಕತೆಯಿದೆ. ವಿಶೇಷವಾಗಿ ಮಕ್ಕಳಿಗೆ ಆ ವಯಸ್ಸಿನಲ್ಲಿ ಅಥವಾ ಆ ಶಾಲಾ ಅವಧಿಯಲ್ಲಿ ಶಾರೀರಿಕವಾಗಿ ಆಟ ಆಡುವುದಕ್ಕೆ, ವ್ಯಾಯಾಮ ಮಾಡುವುದಕ್ಕೆ ಅವಕಾಶ ಕೊಡದೇ ಇದ್ದರೆ ಬಹಳ ಕಷ್ಟವಾಗುತ್ತದೆ. ಇದರ ಜೊತೆಗೆ, ಮಾನ್ಯ ಸದಸ್ಯರಾದ ಶ್ರೀ ಎಸ್. ರುದ್ರೇಗೌಡರವರು ಒಂದು ಪ್ರಶ್ನೆ ಮುಂದಿಟ್ಟಿದ್ದಾರೆ. ಅದೇನೆಂದರೆ, ಕೆಲವು ಶಾಲೆಗಳಲ್ಲಿ 1 ರಿಂದ 5ನೇ ತರಗತಿ ಈಗಾಗಲೇ ಇದೆ. 5ನೇ ತರಗತಿಯಿಂದ ಮುಂದುವರೆದ ತರಗತಿಗಳಿಗೆ ಅನುಮತಿ ನೀಡುವಾಗ ಹೊಸದಾಗಿ ಆಟದ ಮೈದಾನ ತರುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ನಮ್ಮಲ್ಲಿ ಸ್ವಾಭಾವಿಕವಾಗಿ ಬೆಳವಣಿಗೆಯಾದ (Natural Growth) ಶಾಲೆಗಳು ಎಂದು ಇದೆ. ಅಲ್ಲಿ ಅದಕ್ಕೆ ಯಾವ ರೀತಿ ನಾವು ವಿನಾಯಿತಿ, special consideration ಕೊಡಬಹುದು ಎಂದು ನೋಡುತ್ತೇವೆ. ಆದರೆ, ಮಾನ್ಯ ಸದಸ್ಯರಾದ ಶ್ರೀ ಆರ್. ಧರ್ಮಸೇನರವರು ಹೇಳಿದ ಪ್ರಶ್ನೆಗೆ, ಶಾಲೆಗಳಲ್ಲಿ ಆಟದ ಮೈದಾನವನ್ನು ಹೊಸದಾಗಿ ಸೃಷ್ಟಿ ಮಾಡುವುದಕ್ಕೆ ಆಗುವುದಿಲ್ಲ. ಆದರೆ, ಎಲ್ಲೆಲ್ಲಿ ಜಾಗ ಇದೆ, ಅಲ್ಲಿ ನಾವು MGNREGA (Mahatma Gandhi *National Rural Employment Guarantee Act*) ಯೋಜನೆ ಮೂಲಕ ಮೈದಾನ ಮಾಡುವುದಕ್ಕೆ ಆದೇಶ ಕೊಟ್ಟಿದ್ದೇವೆ. ಅದನ್ನು ಉಪಯೋಗ ಮಾಡಿಕೊಳ್ಳಿ ಎಂದು ಕೂಡ ಹೇಳಿದ್ದೇವೆ. ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುವುದೇನೆಂದರೆ, ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು NREGA ಯೋಜನೆಯನ್ನು ಉಪಯೋಗಿಸಿಕೊಂಡು ತಮ್ಮ ಜಿಲ್ಲೆಯ ಸುಮಾರು 2-3

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಾಲೆಗಳಲ್ಲಿ ಬಾಸ್ಕೆಟ್ ಬಾಲ್ ಕ್ರೀಡಾಂಗಣವನ್ನು ನಿರ್ಮಾಣ ಮಾಡಿದ್ದಾರೆ. ಅವರು ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಮೊದಲನೆಯ ಹಂತವಾಗಿ ಒಂದೊಂದು ತಾಲ್ಲೂಕಿಗೆ ಒಂದಾದರೂ ಕೂಡ ಒಳ್ಳೆಯ ಮೈದಾನವನ್ನು NREGA ಯೋಜನೆ ಮೂಲಕ ಮಾಡಬೇಕೆಂದು ಒಂದು ಸೂಚನೆ ಕೊಟ್ಟಿದ್ದೇವೆ. ಇನ್ನೂ ಹೆಚ್ಚು ಆಟದ ಮೈದಾನಗಳನ್ನು ನಮ್ಮ ಶಾಲೆಯ ಮಕ್ಕಳಿಗೆ ಕೊಡುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಆರ್. ಧರ್ಮಸೇನರವರು ಬಹಳ ಮಹತ್ವದ ವಿಷಯದ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಎಲ್ಲೆಲ್ಲಿ ಸರ್ಕಾರದ ಸ್ವಾಧೀನದಲ್ಲಿರುವ ಜಾಗ ಸಿಗುತ್ತದೆ, ಆ ಜಾಗವನ್ನು ಕಡ್ಡಾಯವಾಗಿ ಅಲ್ಲಿನ ಶಾಲೆಗಳಿಗೆ ಆಟದ ಮೈದಾನದ ಉದ್ದೇಶಕ್ಕಾಗಿ ಕೊಡುವುದಕ್ಕೆ ಆದ್ಯತೆ ಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಪ್ರಾರ್ಥನೆ ಮಾಡುತ್ತೇನೆ. ಸರ್ಕಾರಿ ಜಮೀನು ಒತ್ತುವರಿಯನ್ನು ತೆರವು ಮಾಡುವುದಕ್ಕೆ ಸರ್ಕಾರ ಈಗಾಗಲೇ ಕ್ರಮ ವಹಿಸಿದೆ. ಆದರೆ, ಸರ್ಕಾರಿ ಭೂಮಿಯನ್ನು ಹಂಚಿಕೆ ಮಾಡುವಾಗ ಸಾರ್ವಜನಿಕ ಹಿತಾಸಕ್ತಿಯಿಂದ ವಿಶೇಷವಾಗಿ ಮಕ್ಕಳಿಗೆ; ಕೆಲವು ಕಡೆ ಕೆರೆಗಳಲ್ಲಿ ನೀರು ಬರಿದಾದ ಖಾಲಿ ಜಾಗದಲ್ಲಿ ಅಥವಾ ಹೊಲಗಳಲ್ಲಿ ಮಕ್ಕಳು ಆಟ ಆಡುತ್ತಾರೆ. ಆದರೆ, ವಾರಕ್ಕೆ ಒಂದು ಬಾರಿ ಈ ರೀತಿ ಆಟವಾಡಿದರೆ ಅವರ ದೈಹಿಕ ಸಾಮರ್ಥ್ಯ ವೃದ್ಧಿಯಾಗುವುದಿಲ್ಲ. ಆದುದರಿಂದ, ಶಾಲೆಗಳಲ್ಲಿ ಆಟದ ಮೈದಾನ ಬಹಳ ಅವಶ್ಯಕವಾಗಿರುತ್ತದೆ. ದಯಮಾಡಿ, ಈ ವಿಷಯದ ಬಗ್ಗೆ ಆದ್ಯತೆ ನೀಡಬೇಕೆಂದು ಕೋರುತ್ತೇನೆ.

**(235)09.03.2020/5.40/ವೈಎಲ್–ವಿಕೆ**

**ಪ್ರಶ್ನೆ ಸಂಖ್ಯೆ: 537**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಯಲ್ಲಿ ಪ್ರತಿ ಸಲ ಕಾರ್ಯಕ್ರಮಗಳು ನಡೆದಾಗ; ಬಹಳ ದೊಡ್ಡ ಸಂಖ್ಯೆಯಲ್ಲಿ ಅನುದಾನಿತ ಶಿಕ್ಷಕರು ಮತ್ತು ಸರ್ಕಾರಿ ಶಿಕ್ಷಕರ ಮಧ್ಯೆ ಒಂದು ಕಂದಕ ಇದೆ. ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದು, regulation ಮಾಡುವುದು, ಕೆಲಸ ಮಾಡಿಸಿಕೊಳ್ಳುವುದೆಲ್ಲವನ್ನೂ ಸರ್ಕಾರವೇ ಮಾಡುತ್ತಿದ್ದು, ಸಂಬಳವನ್ನು ಸಹ ಸರ್ಕಾರವೇ ಭರಿಸುತ್ತದೆ. ಆದರೆ, ಸರ್ಕಾರಿ ಶಾಲಾ ಉಪನ್ಯಾಸಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಬೇರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀತಿ. ಅನುದಾನಿತ ಶಾಲಾ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಬೇರೆ ನೀತಿಯಾಗಿದೆ. ತಾರತಮ್ಯ ಇರಬೇಕು ನಿಜ. ಆದರೆ, ತಾರತಮ್ಯವನ್ನು ಶಿಕ್ಷಕರಲ್ಲಿಯೇ ಮಾಡಿದರೆ, ಶಿಕ್ಷಕರು ವಿದ್ಯಾರ್ಥಿಗಳಿಗೆ ಎಷ್ಟರ ಮಟ್ಟಿಗೆ ಪಾಠ ಹೇಳಿಕೊಡಬಹುದು ಎನ್ನುವುದು ಒಂದು ನೀತಿಯ ಪ್ರಶ್ನೆಯಾಗಿದೆ. ಪ್ರಾಥಮಿಕ ಹಂತದ ಶಿಕ್ಷಕರು ನಮಗೆ ಅನ್ಯಾಯವಾಗಿದೆ ಎಂದು ಹೇಳಿದಾಗ ವಿದ್ಯಾರ್ಥಿಗಳಿಗೆ ಏನು ನ್ಯಾಯವನ್ನು ಹೇಳಿಕೊಡುತ್ತಾರೆ. 'ಜ್ಯೋತಿ ಸಂಜೀವಿನಿ' ಆರೋಗ್ಯ ಯೋಜನೆಯು ಸರ್ಕಾರಿ ಶಾಲಾ ಶಿಕ್ಷಕರಿಗೆ ಇದೆ. ಆದರೆ, ಅನುದಾನಿತ ಶಿಕ್ಷಕರಿಗೆ ಇಲ್ಲ. ಇದಕ್ಕೆ ಕಾರಣವೇನೆಂಬುದನ್ನು ಕೇಳಿದಾಗ ಮಾನ್ಯ ಸಚಿವರು ನೀಡಿರತಕ್ಕಂಥ ಉತ್ತರವನ್ನು ನೋಡಿ ಆಶ್ಚರ್ಯವಾಯಿತು. ಉತ್ತರದಲ್ಲಿ ಏನೆಂದು ಇದೆ ಎಂದರೆ, 'ಅನುದಾನಿತ ಶಾಲಾ ಶಿಕ್ಷಕರು ವೈದ್ಯಕೀಯ ವೆಚ್ಚ ಮರುಪಾವತಿ ಸೌಲಭ್ಯಕ್ಕೂ ಅರ್ಹರಿರುವುದಿಲ್ಲ' ಎಂದು ತಿಳಿಸಲಾಗಿದ್ದು, ಜ್ಯೋತಿ ಸಂಜೀವಿನಿ ಕಾರ್ಯಕ್ರಮಕ್ಕೆ ಅರ್ಹರಿರುವುದಿಲ್ಲ ಎಂದು ಹೇಳುತ್ತಾರೆ. ಆದರೆ, ನಮ್ಮ ಲೆಕ್ಕದ ಪ್ರಕಾರ ಅವರನ್ನು ಸಹ ಅರೆ ಸರ್ಕಾರಿ ನೌಕರರು ಎಂದು ಪರಿಗಣಿಸಬೇಕೆಂಬುದು ನನ್ನ ಒತ್ತಾಯವಾಗಿದೆ. ಈಗ ರಾಜ್ಯದಲ್ಲಿ ಒಟ್ಟು 37,87,722 ವಿದ್ಯಾರ್ಥಿಗಳಿದ್ದಾರೆ. ಸರ್ಕಾರಿ ಶಾಲಾ ಶಿಕ್ಷಕರ ಸಂಖ್ಯೆ 1,60,663, ಅನುದಾನಿತ ಶಾಲಾ ಶಿಕ್ಷಕರುಗಳ ಸಂಖ್ಯೆ 10884, ವಿದ್ಯಾರ್ಥಿಗಳ ಸಂಖ್ಯೆ 8,36,520. ಅನುದಾನಿತ ಶಾಲಾ ಶಿಕ್ಷಕರುಗಳ ಸಂಖ್ಯೆ 10884 ಗಳಾಗಿದ್ದು, ಸರ್ಕಾರಿ ಶಿಕ್ಷಕರ ಸಂಖ್ಯೆ 1,60,663 ಇವೆ. Not even 15 per cent. ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಷೂ, ಸಾಕ್ಸ್ ವಿತರಿಸಲಾಗುತ್ತಿದೆ. ಆ ವಿದ್ಯಾರ್ಥಿಗಳನ್ನು ಊರೂರು ದರ್ಶನ ಮಾಡಲು ಪ್ರವಾಸಕ್ಕೆ ಕರೆದುಕೊಂಡು ಹೋಗಲಾಗುತ್ತದೆ. ಆದರೆ, ಅನುದಾನಿತ ಶಾಲೆಯವರು ಏನು ತಪ್ಪು ಮಾಡಿದ್ದಾರೆ. ಅದು ಸಹ ಕನ್ನಡ ಮಾಧ್ಯಮ.

ಪುಸ್ತಕ ಹಾಗೂ ಬಿಸಿ ಊಟದ ಸೌಲಭ್ಯವನ್ನು ಒದಗಿಸಲಾಗಿದೆ. ಆದರೆ, ಆ ವಿದ್ಯಾರ್ಥಿಗಳಿಗೆ ಷೂ, ಸಾಕ್ಸ್ ಸೌಲಭ್ಯ ಇಲ್ಲ. ಊರೂರು ಸುತ್ತುವ ದರ್ಶನವಾಗಲಿ, ಯಾವುದೇ ರೀತಿಯ ವ್ಯವಸ್ಥೆ ಅನುದಾನಿತ ಶಾಲಾ ಮಕ್ಕಳಿಗೆ ಇಲ್ಲ. ಇಷ್ಟು ತಾರತಮ್ಯವನ್ನು ನಾವೇ ಮಾಡುವುದಾದರೆ, ಬೇರೆಯವರಿಗೆ ಬುದ್ಧಿ ಹೇಳುವಂತಹ ಹಕ್ಕು ನಮಗೆ ಎಲ್ಲಿದೆ. ಇವೆಲ್ಲವೂ ಕನ್ನಡ ಮಾಧ್ಯಮದವರಿಗೆ ನೀಡಿ ಎಂದು ಹೇಳುತ್ತಿದ್ದೇನೆ ವಿನಃ ಬೇರೆ ಮಾಧ್ಯಮದವರಿಗೆ ನೀಡಿ ಎಂದು ಹೇಳುತ್ತಿಲ್ಲ. ಹಾಗಾಗಿ ಈ ಒಂದು ಸಮಸ್ಯೆಯನ್ನು ಪರಿಹರಿಸಬೇಕೆಂಬುದು ಒತ್ತಾಯವಾಗಿದೆ. ಅನೇಕ ಮನವಿಗಳನ್ನು ನೀಡಿದ್ದು, ಮಾನ್ಯ ಸಚಿವರು ಸಹ ಅನೇಕ ವಿಚಾರಗಳಲ್ಲಿ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. When

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

it comes to the Finance. ಈ ಆಡಳಿತ ಪಕ್ಷಕ್ಕೆ ಬಂದಾಗ, ಹಣಕಾಸಿನ ವಿಚಾರಕ್ಕೆ ಬಂದಾಗ ಯಾವುದೇ ಒಂದು ತೀರ್ಮಾನ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ ಎಂದು ಅನ್ನಿಸುತ್ತದೆ. ಆದರೂ ಸಹ ಇದು ಅತ್ಯಂತ ಮಹತ್ವವಾದ ವಿಚಾರವಾಗಿದ್ದು, ತಾರತಮ್ಯವನ್ನು ಹೋಗಲಾಡಿಸಬೇಕು ಮತ್ತು ಶಿಕ್ಷಕರಿಗೆ ಅಲ್ಲಿಯ, student teacher ratio. ಅಂದರೆ, ಸರ್ಕಾರಿ ಶಾಲಾ ಶಿಕ್ಷಕರಿಗೆ 30:1, ಅನುದಾನಿತ ಶಾಲಾ ಶಿಕ್ಷಕರಿಗೆ 40:1. Student teacher ratio ದಲ್ಲಿಯು ತಾರತಮ್ಯ ಇದ್ದು, ಸಮಾನತೆ ಬರಬೇಕು, ಒಟ್ಟಿಗೆ ಇರಬೇಕೆಂದರೆ ಮೊದಲು ತಾರತಮ್ಯವನ್ನು ಹೋಗಲಾಡಿಸಬೇಕು. ಪ್ರಾಥಮಿಕ ಹಂತದಲ್ಲಿಯೇ ಸರಿಪಡಿಸಬೇಕು. ಒಂದು ಸಲ ಮಾನ್ಯ ಸಚಿವರಿಂದ ಪುಸ್ತಕ ಬಂದಿತ್ತು. ಆ ಪುಸ್ತಕದಲ್ಲಿ ಹೇಳಿದ್ದರು ಶಾಲಾ ಕೊಠಡಿಗಳು, ಶಾಲಾ ಮೈದಾನವಾಗಿ ಪರಿವರ್ತನೆಯಾಗಲಿ ಎಂಬುದನ್ನು ಹೇಳಲಾಗಿತ್ತು. ಶಾಲಾ ಕೊಠಡಿಯೊಳಗೆ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಅತ್ಯಂತ ಒಳ್ಳೆಯ ಬಾಂಧವ್ಯ ಇರಬೇಕೆಂದು ಹೇಳಿದು, I appreciate that. ಅದನ್ನು ನಾವು ಶ್ಲಾಘಿಸುತ್ತೇನೆ. ಈ ರೀತಿಯ ತಾರತಮ್ಯವನ್ನು ಹೋಗಲಾಡಿಸಲು ಏನೂ ಮಾಡುತ್ತಾರೆ ಎಂಬುದರ ನಿರ್ದಿಷ್ಟವಾದ ಉತ್ತರವನ್ನು ಮಾನ್ಯ ಸಚಿವರಿಂದ ಬಯಸುತ್ತೇನೆ.

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಹಾಗೂ ವ್ಯಕ್ತಪಡಿಸಿರುವ ಭಾವನೆಗೆ ನನ್ನ ಸಹಮತ ಇದೆ. ಆದರೆ, ನಾವು ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಸಹ ನೋಡಬೇಕಾಗುತ್ತದೆ. ಈಗಾಗಲೇ ಮಾನ್ಯ ಸದಸ್ಯರಾದ ಡಾ|| ಜಯಮಾಲರವರು ಕೇಳಿದಂತೆ ಖಾಸಗಿ ಕಲಿಕಾ ಮಟ್ಟವನ್ನು ಜಾಸ್ತಿ ಮಾಡಬೇಕೆಂಬುದನ್ನು ಎಲ್ಲರೂ ಕಾಣುತ್ತಿದ್ದಾರೆ. ಅನುದಾನಿತ ಶಿಕ್ಷಕರಿಗೆ ವೇತನವನ್ನು ನೀಡಲಾಗುತ್ತಿದೆ. ಆ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿ ಊಟ ಮತ್ತು text books ವಿತರಿಸಲಾಗುತ್ತಿದೆ. ಅದರ ಜೊತೆಗೆ ಅನುದಾನಿತ ಶಾಲಾ ವಿದ್ಯಾರ್ಥಿಗಳ ಕಾಲಿಗೆ ಷೂ, ಸಾಕ್ಸ್ ಒದಗಿಸಬೇಕೆಂದು ಕೇಳುತ್ತಿರುವುದು ಸಹಜ. ಆ ಮಕ್ಕಳೇ ನನ್ನ ಹತ್ತಿರ ಅನೇಕ ಸಮಾರಂಭಗಳಲ್ಲಿ ನಾವೇನು ತಪ್ಪು ಮಾಡಿದ್ದೇವೆ, ನಮಗೂ ಸಹ ಷೂ ಒದಗಿಸಿ, ಪ್ರವಾಸಕ್ಕೆ ಕಳುಹಿಸಿ ಎಂದು ಕೇಳಿದ್ದಾರೆ. ಪ್ರವಾಸಕ್ಕೆ ಸಂಬಂಧಿಸಿದಂತೆ ಪ್ರವಾಸೋದ್ಯಮ ಇಲಾಖೆಯವರು ಆ ಕೆಲಸವನ್ನು ಮಾಡುವುದರಿಂದ ಅನುದಾನಿತ ಶಿಕ್ಷಣ ಸಂಸ್ಥೆಗಳ ಮಕ್ಕಳನ್ನು ಪ್ರವಾಸಕ್ಕೆ ಕಳುಹಿಸಿಕೊಡುವ ಬಗ್ಗೆ ಅವರ ಜೊತೆ ಅವಕಾಶ ಕಲ್ಪಿಸಿಕೊಡುವಂತೆ ಮಾತನಾಡುತ್ತೇವೆ. ಆದರೆ, ಜ್ಯೋತಿ ಸಂಜೀವಿನಿ ಬಗ್ಗೆ ಏನೂ ಹೇಳುತ್ತಿದ್ದಾರೆ, ಇವತ್ತಿನ ಮಟ್ಟಿಗೆ ಕಷ್ಟ ಸಾಧ್ಯವಾಗಿದೆ. ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೃಷ್ಠಿಯಿಂದ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಸಹ ದಿನಾಂಕ: 14-01-2020 ರಂದು ಅನೇಕರ ಜೊತೆ ಅವರ ನೇತೃತ್ವದಲ್ಲಿ ಸಭೆ ಮಾಡಿದ್ದರು. ಕೊನೆ ಪಕ್ಷ ಅನುದಾನಿತ ಶಿಕ್ಷಕರಿಗೆ ಹೊಸ ನೂತನ ಪಿಂಚಣಿ ವ್ಯವಸ್ಥೆ(ಎನ್.ಪಿ.ಎಸ್.) ಯನ್ನಾದರೂ ನೀಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬಹುದೆಂಬುದನ್ನು ಈಗಾಗಲೇ ಆರ್ಥಿಕ ಇಲಾಖೆಯಿಂದ ನೆರವು ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡುತ್ತಿದ್ದೇವೆ. ಆ ವಿಚಾರವಾಗಿ ಆರ್ಥಿಕ ಇಲಾಖೆಯವರ ಜೊತೆ ಚರ್ಚೆಯನ್ನು ಮಾಡಲಾಗುತ್ತಿದೆ. ಈ ಸಂದರ್ಭದಲ್ಲಿ 'ಜ್ಯೋತಿ ಸಂಜೀವಿನಿ' ಮತ್ತು ವಿದ್ಯಾರ್ಥಿಗಳಿಗೆ ಷೂ, ಸಾಕ್ಸ್ ಸೌಲಭ್ಯವನ್ನು ಒದಗಿಸುವುದು ಸರ್ಕಾರದ ಇತಿ ಮಿತಿಯಲ್ಲಿ ಕಷ್ಟದ ಪರಿಸ್ಥಿತಿಯಾಗಿದೆ. ಮುಂದಿನ ದಿನಗಳಲ್ಲಿ ನೋಡೋಣ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುತ್ತಿರುವುದು ನನಗೆ ಅರ್ಥವಾಗುತ್ತಿದೆ. ಆದರೆ, ಕೇವಲ ಇಲ್ಲಿ 10884 ಶಿಕ್ಷಕರಿದ್ದಾರೆ. ಆ ಶಿಕ್ಷಕರಿಗೆ ಆರೋಗ್ಯಕ್ಕಾಗಿ 'ಜ್ಯೋತಿ ಸಂಜೀವಿನಿ' ಯಲ್ಲಿ include ಮಾಡಿ. ಆರೋಗ್ಯಕ್ಕೆ ಮಾನ್ಯ ಸಚಿವರನ್ನೇ ಅವಲಂಭಿಸಬೇಕಲ್ಲವೇ?

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರ ಮಾತನ್ನು ಒಪ್ಪುತ್ತೇನೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಕೇವಲ 10884 ಶಿಕ್ಷಕರಿರುವಾಗ ಅವರನ್ನು ಸಹ 'ಜ್ಯೋತಿ ಸಂಜೀವಿನಿ' ಅಡಿ ಏತಕ್ಕೆ ಸೇರಿಸಿಕೊಳ್ಳಬಾರದು. ಇದರ ಬಗ್ಗೆ ಗಂಭೀರವಾಗಿ ಮಾನ್ಯ ಸಚಿವರು ಚಿಂತನೆ ಮಾಡಬೇಕು. 'ಜ್ಯೋತಿ ಸಂಜೀವಿನಿ' ಒದಗಿಸುತ್ತೇವೆ ಎಂದು ಇದೇ ಸದನದಲ್ಲಿ ಹಿಂದಿನ ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಮಾತು ನೀಡಿದ್ದಾರೆ. ದಯವಿಟ್ಟು ಮುಂದಿನ ದಿನಗಳಲ್ಲಾದರೂ ಇದನ್ನು ಜಾರಿಗೆ ತರಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದಲ್ಲಿರತಕ್ಕಂಥ ಪ್ರತಿಯೊಬ್ಬ ಜನ ಸಾಮಾನ್ಯರಿಗೂ ಕೂಡಾ ಸರ್ಕಾರ ಒಂದು ಆರೋಗ್ಯ ವಿಮಾ ಯೋಜನೆಯನ್ನು ನೀಡಿದೆ. ಆದರೆ, ಅನುದಾನಿತ ಶಾಲಾ-ಕಾಲೇಜುಗಳಲ್ಲಿ ಕೆಲಸ ಮಾಡತಕ್ಕಂಥ ನೌಕರರಿಗೆ ಆ ಸವಲತ್ತು ಇಲ್ಲ. ಇದು ತಮ್ಮ ಗಮನದಲ್ಲಿರಬೇಕು. ಏಕೆಂದರೆ, ಒಬ್ಬ ಅನುದಾನಿತ ಸಂಸ್ಥೆಯಲ್ಲಿರತಕ್ಕಂಥ ನೌಕರರ

ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮನೆಯಲ್ಲಿ ಯಾರಿಗಾದರೂ ಆಪರೇಷನ್, ಆರೋಗ್ಯ ಕೆಟ್ಟರೆ ಇಡೀ ಕುಟುಂಬವೇ ಸರ್ವನಾಶವಾಗುವಂಥ ಸಂದರ್ಭ ಬರುತ್ತದೆ. ಹಾಗಾಗಿ ನಾವು ಈ ಹಿಂದೆ ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ಪ್ರತಿ ತಿಂಗಳು ಅವರ ವೇತನದಲ್ಲಿ ಕಡಿತ ಮಾಡಿಯಾದರೂ ಸಹ ಸರ್ಕಾರಿ ನೌಕರರಿಗೆ ನೀಡತಕ್ಕಂಥ 'ಜ್ಯೋತಿ ಸಂಜೀವಿನಿ' ಯನ್ನು ಅದರ ಜೊತೆಗೆ tag ಮಾಡಿ ಎಂದು ಹೇಳಿದ್ದೇವು. ದಯಮಾಡಿ ಈ ವರ್ಗದ ಶಿಕ್ಷಕರಿಗೆ ಯಾವುದೇ ಆರೋಗ್ಯ ವಿಮಾ ಯೋಜನೆ ಇಲ್ಲದೇ ಬಹಳ ಸಂಕಷ್ಟದಲ್ಲಿದ್ದಾರೆ. ಆದ್ದರಿಂದ ದಯವಿಟ್ಟು 'ಜ್ಯೋತಿ ಸಂಜೀವಿನಿ' ವ್ಯಾಪ್ತಿಯಲ್ಲಿ ಬರುವುದಕ್ಕೆ ಮಾನ್ಯ ಸಚಿವರು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ನೀಡಿದ್ದಾರೆ. ಅದರ ಬಗ್ಗೆ ಅಧ್ಯಯನ ಮಾಡುತ್ತೇವೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಚಿವರೇ, ಈ ರೀತಿ ಉತ್ತರ ನೀಡಿದರೆ ಹೇಗೆ? ತಾವೆಲ್ಲರೂ ಬುದ್ಧಿ ಜೀವಿಗಳು, ಸಮರ್ಥರಾಗಿದ್ದೀರಿ. ಇಂತಹ ಒಂದು ಭೀಕರ ಸಮಸ್ಯೆಗೆ ದಯಮಾಡಿ 'ಜ್ಯೋತಿ ಸಂಜೀವಿನಿ' ವ್ಯಾಪ್ತಿಯಲ್ಲಿ ಬರುವುದಕ್ಕೆ ಎಷ್ಟು ದಿವಸಗಳೊಳಗೆ ಮಾಡಲಾಗುತ್ತದೆ ಎಂಬುದನ್ನಾದರೂ ಹೇಳಿ.

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಎಲ್ಲವೂ ಸಹ ಭೀಕರ ಸಮಸ್ಯೆಯಾಗಿದೆ. ಈ ಸಮಸ್ಯೆ ಈಗ ಪ್ರಾರಂಭವಾಗಿರುವುದಲ್ಲ. ಬಹಳ ವರ್ಷಗಳಿಂದ ಜ್ವಲಂತ ಸಮಸ್ಯೆಯಾಗಿದೆ. ಅದಕ್ಕೆ ಪರಿಹಾರ ಹುಡುಕಬೇಕಾಗಿದೆ. ಮಾನ್ಯ ಸದಸ್ಯರು ಸಲಹೆಯನ್ನು ನೀಡಿದ್ದು, ಆ ಸಲಹೆ ಯೋಚನೆಗೆ ಅರ್ಹವಿದ್ದು, ನಾವು ಅದರ ಬಗ್ಗೆ ನೋಡುತ್ತೇವೆ.

**ಪ್ರಶ್ನೆ ಸಂಖ್ಯೆ 530**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವಿಜಯಸಿಂಗ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸಚಿವರು ಜಿಲ್ಲಾದ್ಯಂತ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತಾಗಿ ಕಾನೂನು ಅರಿವು ಕಾರ್ಯಕ್ರಮಗಳು, ಬೀದಿ ನಾಟಕಗಳು, ಕರಪತ್ರ ಹಂಚುವಿಕೆ ಹಾಗೂ ಆಟೋ ಪ್ರಚಾರದ ಮೂಲಕ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಉತ್ತರವನ್ನು ನೀಡಿದ್ದಾರೆ. ಆದರೆ, ಬೀದರ್ ಜಿಲ್ಲೆಯಲ್ಲಿ ಬಹಳ ಬಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಟುಂಬದವರು ವಾಸವಾಗಿದ್ದು, ತಿನ್ನುವುದಕ್ಕೆ ಸರಿಯಾಗಿ ಊಟವೂ ಇಲ್ಲದಂತಾಗಿದೆ. ಅದಕ್ಕಾಗಿ ಪೋಷಕರು ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳುಹಿಸುವುದನ್ನು ಬಿಟ್ಟು, ಕಾರ್ಖಾನೆಗಳಿಗೆ, ಹೋಟೇಲ್‌ಗಳಿಗೆ ಗ್ಯಾರೇಜ್ ಕೆಲಸಕ್ಕಾಗಿ ಕಳುಹಿಸುತ್ತಿದ್ದಾರೆ. ಆದ್ದರಿಂದ ಮಾನ್ಯ ಸಚಿವರು ಇದನ್ನು ತಡೆಗಟ್ಟುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಹಾಗೆಯೇ ಮಾನ್ಯ ಸಚಿವರು ಎರಡನೆ ಪ್ರಶ್ನೆಗೆ ನೀಡಿರುವ ಉತ್ತರದಲ್ಲಿ ಕಲ್ಲು ಗಣಿಗಾರಿಕೆಯಲ್ಲಿ ಯಾವುದೇ ಬಾಲಕಾರ್ಮಿಕರು ಕೆಲಸ ಮಾಡುತ್ತಿರುವುದು ಕಂಡುಬಂದಿರುವುದಿಲ್ಲ ಎಂದು ತಿಳಿಸಿದ್ದಾರೆ. ಕೇವಲ ಬೀದರ್ ಜಿಲ್ಲೆಗೆ ಸಂಬಂಧಿಸಿರುವುದಿಲ್ಲ. ಇಡೀ ರಾಜ್ಯದಲ್ಲಿಯೂ ಎಲ್ಲಾ ಕಡೆಯಲ್ಲಿಯು ಕುಟುಂಬ ಸಮೇತ ಹೋಗಿ ಮಕ್ಕಳನ್ನು ಕೆಲಸಕ್ಕೆ ಕಳುಹಿಸಿಕೊಂಡು ವಾಸ ಮಾಡುವಂಥ ಸಮಸ್ಯೆ ಇದೆ. ಈ ಮಾತನ್ನು ಹೇಳಿದರೂ ಯಾರು ನಂಬುವುದಿಲ್ಲ. ಅದಕ್ಕಾಗಿ ಮಾನ್ಯ ಸಚಿವರು ಅವರ ಅಧಿಕಾರಿಗಳಿಗೆ ಹೇಳಿ ಬಾಲ ಕಾರ್ಮಿಕ ಪದ್ಧತಿಯು ನಿಲ್ಲುವಂತೆ ಮಾಡಬೇಕೆಂದು ಒತ್ತಾಯಿಸುತ್ತೇನೆ.

**ಶ್ರೀ ಅರಬೈಲು ಶಿವರಾಮ್ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, 1988ನೇ ಸಾಲಿನವರೆಗೂ ಕೇವಲ 10 ಜಿಲ್ಲೆಗಳಿಗೆ ಮಾತ್ರ ಕಾನೂನು ಲಾಭವಾಗಿತ್ತು. 2001ನೇ ಸಾಲಿನಿಂದ ಈ ಕಾನೂನನ್ನು ಇಡೀ ರಾಜ್ಯಗಳಿಗೂ ವಿಸ್ತರಣೆ ಮಾಡಲಾಗಿದೆ. ಬೀದರ್ ಜಿಲ್ಲೆಯಲ್ಲಿಯು ಕೂಡಾ ಅನೇಕ ತನಿಖೆ ಮಾಡಿ, ಈಗಾಗಲೇ ಬೀದರ್ ಜಿಲ್ಲೆಯಲ್ಲಿ 3 ವರ್ಷಗಳಲ್ಲಿ 810 ತಪಾಸಣೆ ಮಾಡಲಾಗಿದೆ. 51 ಪ್ರಕರಣಗಳನ್ನು ದಾಖಲಿಸಲಾಗಿದ್ದು, 37 ಮೊಕದ್ದಮೆಗಳನ್ನು ಹಾಕಿದ್ದು, ರೂ.40,000-00 ಗಳಷ್ಟು ದಂಡವನ್ನು ವಸೂಲಿ ಮಾಡಲಾಗಿದೆ. ಗಣಿಗಾರಿಕೆ ವಿಚಾರವನ್ನು ಪ್ರಸ್ತಾಪ ಮಾಡಿದಾಗ ನಮ್ಮ ಅಧಿಕಾರಿಗಳ ತಂಡ ಗಣಿಗಾರಿಕೆಗೆ ಸಂಬಂಧಿಸಿದಂತೆ ವರದಿಯನ್ನು ನೀಡಿದ್ದೆ. ವರದಿಯ ಪ್ರಕಾರ ಅಂತಹ ಯಾವುದೇ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಆದರೂ ಮಾನ್ಯ ಸದಸ್ಯರು ನಮ್ಮ ಗಮನವನ್ನು ಸೆಳೆದಿದ್ದು, ನಿಶ್ಚಿತವಾಗಿ ಪುನಃ ತನಿಖೆ ಮಾಡುತ್ತೇವೆ ಅಂತಹ ಪ್ರಕರಣಗಳು ಕಂಡು ಬಂದರೆ, ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(236) 09.03.2020 ಎಸ್.ಕೆ.:ಬಿಎನ್ಎಸ್ 6.30**

**ಪ್ರಶ್ನೆ ಸಂಖ್ಯೆ: 571**

**(ಉತ್ತರವನ್ನು ಲಗತ್ತಿಸಲಾಗಿದೆ.)**

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ:**-ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒದಗಿಸಿರುವ ಉತ್ತರದಲ್ಲಿ ವನ್ಯ ಪ್ರಾಣಿಗಳ ದಾಳಿಯಿಂದ ವ್ಯಕ್ತಿಯು ಮೃತ ಪಟ್ಟರೆ ರೂ.7,50,000/- ಗಳು ಹಾಗೂ ವನ್ಯ ಪ್ರಾಣಿಗಳ ದಾಳಿಯಿಂದ ಜಾನುವಾರುಗಳು ಮೃತಪಟ್ಟರೆ ರೂ.10,000 ಗಳನ್ನು ದಯಾತ್ಮಕ ಧನ ಪಾವತಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. 2018-19 ರಲ್ಲಿ ರಾಜ್ಯದಾದ್ಯಂತ ಮಾನವ ಪ್ರಾಣ ಹಾನಿಯಾದ ಸಂಖ್ಯೆ 21 ಎಂದು ಮಾಹಿತಿ ಕೊಟ್ಟಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ದಕ್ಷಿಣ ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನಲ್ಲಿ ಸುಮಾರು 47 ಕ್ಕೂ ಹೆಚ್ಚು ಜಾನುವಾರುಗಳು ಈಗಾಗಲೇ ಹುಲಿಯ ದಾಳಿಯಿಂದ ಮರಣ ಪಟ್ಟಿದೆ. ಇನ್ನೂ ಹೆಚ್ಚು ಮರಣ ಹೊಂದಿದ್ದಾವೆ. ನಾನು 47ಕ್ಕೆ ಮಾತ್ರ ಅಂಕಿ-ಅಂಶವನ್ನು ತಂದಿದ್ದೇನೆ. ಮಾನ್ಯ ಸಭಾಪತಿಯವರೇ, ಇವತ್ತು ಜೆರ್ಸಿ ಹಸುವಿಗೆ ಸುಮಾರು ರೂ.75,000/-ಗಳ ಬೆಲೆ ಇದೆ. ಆದರೆ ಸರ್ಕಾರ ಕೊಡುವ ಸುಮಾರು ರೂ.10,000/- ದಯಾತ್ಮಕ ಧನ ಯಾವುದಕ್ಕೂ ಸಾಕಾಗುವುದಿಲ್ಲ. ಈ ಹುಲಿಗಳ ದಾಳಿ ಯಾವ ರೀತಿಯಿದೆ ಎಂದರೆ, ಕೊಟ್ಟಿಗೆಗೆ ನುಗ್ಗಿ ಕರುಗಳನ್ನು ಹೊರಗೆ ಎಳೆದುಕೊಂಡು ಬಂದು ತಿನ್ನುವಂತಹ ವ್ಯವಸ್ಥೆ ದಕ್ಷಿಣ ಕೊಡಗು ಜಿಲ್ಲೆಯಲ್ಲಿ ನಿರಂತರವಾಗಿ ಆಗುತ್ತಿದೆ. ನಮ್ಮ ಭಾಗಗಳಲ್ಲಿ ಇದು ಜಾಸ್ತಿ ಇದೆ. ಇದರ ಜೊತೆಗೆ ಆನೆ ಹಾವಳಿಯಿಂದಾಗಿ, ಕಾರ್ಮಿಕ ಜನರು ಬೆಳಗ್ಗೆ ಎದ್ದು ಕೆಲಸಕ್ಕೆ ಹೋಗುವುದಕ್ಕೆ ತುಂಬಾ ಹೆದರುತ್ತಾರೆ. ಇದಕ್ಕೆ ಶಾಶ್ವತವಾದ ಪರಿಹಾರವನ್ನು ಕೊಡಬೇಕೆಂದು ಎಲ್ಲಾ ಸರ್ಕಾರವಿದ್ದಾಗ ನಾವು ಕೇಳಿಕೊಂಡಿದ್ದೇವೆ. ಆದರೆ ಅದು ಆಗಿಲ್ಲ. ನಾನು ಮಾನ್ಯ ಸಚಿವರಲ್ಲಿ ಹೇಳುವುದೇನೆಂದರೆ, ಕೊಡಗು ಜಿಲ್ಲೆ ಪುಟ್ಟ ಜಿಲ್ಲೆಯಾಗಿದ್ದು, ಇವತ್ತು ಅಲ್ಲಿನ ಜನರು ಬಹಳ ಸಂಕಷ್ಟದಲ್ಲಿ ಬದುಕುತ್ತಿದ್ದಾರೆ. ಆನೆ ಹಾವಳಿ ಒಂದು ಕಡೆಯಾದರೆ, ನರಿ, ಹುಲಿಗಳ ಹಾವಳಿ ಒಂದು ಕಡೆ, ಹಂದಿ ಕಾಟ ಒಂದು ಕಡೆ ಆಗಿದೆ. ನಾನು ಮನವಿ ಮಾಡುವುದೇನೆಂದರೆ, ಬಹುಶಃ ಮಾನ್ಯ ಸಚಿವರು ನಮ್ಮ ಜಿಲ್ಲೆಗೆ ಭೇಟಿ ನೀಡಿಲ್ಲ. ಮಾನ್ಯ ಸಚಿವರು ನೂತನವಾಗಿ ಈ ಇಲಾಖೆಗೆ ಬಂದಿದ್ದಾರೆ. ಈ ಹಿಂದೆ ಇದ್ದಂತಹ ಸಚಿವರಿಗೂ ನಮ್ಮ ಜಿಲ್ಲೆಗೆ ಭೇಟಿ ನೀಡಿ ಎಂದು ಹೇಳಿದ್ದೆ. ಆದರೆ ಅವರು ಬಂದಿಲ್ಲ. ಮಾನ್ಯ ಸಚಿವರಲ್ಲಿ ನನ್ನದೊಂದು ಮನವಿ ಏನೆಂದರೆ, ನಿಮ್ಮ ಇಲಾಖೆಯ ಅಧಿಕಾರಿಗಳು ಹೇಳುವ ಎಲ್ಲಾ ಮಾತುಗಳನ್ನು ನಂಬುವುದಕ್ಕೆ ಹೋಗಬೇಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಯವಿಟ್ಟು, ಒಂದು ದಿನದ ಮಟ್ಟಿಗೆ ಮಾನ್ಯ ಸಚಿವರು ಕೊಡಗಿನಲ್ಲಿದ್ದು, ಅನೇಕ ಸಂಘ-ಸಂಸ್ಥೆಗಳಿವೆ, ನೊಂದಂತಹ ತುಂಬಾ ಜನರಿದ್ದಾರೆ. ಒಂದು ದಿವಸದ ಮಟ್ಟಿಗೆ ಭೇಟಿ ನೀಡಿ. ಈ ಆನೆ ಹಾವಳಿಯನ್ನು ತಡೆಗಟ್ಟಲು ಸರ್ಕಾರ ಕ್ರಮ ಕೈಗೊಳ್ಳಬೇಕು. ನಮ್ಮ ಕೊಡಗಿನ ಜನರು ಚೆನ್ನಾಗಿ ಅರಿತುಕೊಂಡಿದ್ದಾರೆ. ಆದರೆ ಇಲಾಖಾಧಿಕಾರಿಗಳು ಅದನ್ನು ಕೇಳುವುದಿಲ್ಲ. ಆ ವಿಚಾರವಾಗಿ ಒಂದು ದಿನದ ಕಾರ್ಯಾಗಾರವನ್ನು ಸಹ ಏರ್ಪಾಡು ಮಾಡಬೇಕು. ಇನ್ನೊಂದು ಸ್ವಾರಸ್ಯಕರವಾದ ವಿಚಾರವನ್ನು ಸದನದಲ್ಲಿ ಹೇಳಬೇಕೋ ಅಥವಾ ಬೇಡವೋ ಎಂದು ನಾನು ವಿಚಾರ ಮಾಡುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಕಾಡು ಹಂದಿಗಳ ಕಾಟ ಜಾಸ್ತಿಯಿದೆ. ಕಾಡು ಹಂದಿಗಳು ಮನೆಯ ಹತ್ತಿರ ಬಂದು ಹೂವಿನ ಗಿಡಗಳನ್ನು ಬಿಡುವುದಿಲ್ಲ. ಆಮೇಲೆ ನಾವು ನೆಟ್ಟಂತಹ ಗೆಡ್ಡೆ-ಗೆಣಸುಗಳು ಯಾವುದನ್ನೂ ಬಿಡುವುದಿಲ್ಲ.

**ಶ್ರೀ ಆನಂದ್ ಸಿಂಗ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈಗಾಗಲೇ ಬಹಳಷ್ಟು ವಿಚಾರಗಳನ್ನು ಹೇಳಿದ್ದಾರೆ. ಈ ಹಿಂದೆ ವನ್ಯಪ್ರಾಣಿಗಳಿಂದ ಮೃತಪಟ್ಟ ವ್ಯಕ್ತಿಗಳ ಕುಟುಂಬಕ್ಕೆ ಸುಮಾರು ರೂ. 5,00,000/-ಗಳ ಪರಿಹಾರ ಧನವನ್ನು ಸರ್ಕಾರ ಕೊಡುತ್ತಿತ್ತು. ಈಗ ಅದನ್ನು ಸುಮಾರು ರೂ.7,50,000/- ದಯಾತ್ಮಕ ಧನದ ಜೊತೆಗೆ ಪ್ರತಿ ತಿಂಗಳು ರೂ.2,000/- ಗಳಂತೆ ಐದು ವರ್ಷಗಳವರೆಗೆ ಮಾಸಾಶನವನ್ನು ನೀಡಲು ಅನುಮೋದನೆ ನೀಡಲಾಗಿದೆ. ಕೊಡಗು ಜಿಲ್ಲೆಯಲ್ಲಿನ ಆನೆ ದಾಳಿ ಬಗ್ಗೆ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ಕೊಡಗು ಜಿಲ್ಲೆಯೇ ಅಲ್ಲ, ಕರ್ನಾಟಕದಲ್ಲಿ ಎಲ್ಲೆಲ್ಲಿ ಈ ಕಾಡು ಆನೆಗಳ ಹಾವಳಿಯಿದೆಯೋ, ಆ ಹಾವಳಿಗಳಿಗೆ ಯಾವ ರೀತಿ ತಡೆ ಹಿಡಿಯಬೇಕೆಂದು ಈಗಾಗಲೇ ಚರ್ಚೆ ಮಾಡಿ, railway barricades ಪ್ರಕಾರವೇ ಅದನ್ನು ಅನುಷ್ಠಾನಕ್ಕೆ ತರಬೇಕೆಂದು ಚರ್ಚೆ ಮಾಡಿದ್ದೇವೆ. ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆಂದರೆ, ಇಂತಹ ಸ್ಥಳಗಳಿಗೆ ಭೇಟಿ ನೀಡಿ, ಅಲ್ಲಿ ವೀಕ್ಷಣೆ ಮಾಡಿ, ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ನಾನು ಮಾನ್ಯ ಸಭಾಪತಿಯವರ ಮೂಲಕ ಮಾನ್ಯ ಸದಸ್ಯರಿಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಕೊಡಗು ಜಿಲ್ಲೆ ಮತ್ತು ಬೇರೆ ಬೇರೆ ಜಿಲ್ಲೆಗಳಿಗೆ ಭೇಟಿ ನೀಡಿ, ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳ ಬಯಸುತ್ತೇನೆ. ಮಾನ್ಯ ಸದಸ್ಯರು ಜಾನವಾರುಗಳ ಬಗ್ಗೆ ಹೇಳಿದ್ದಾರೆ. ನಾವು ಬೇರೆ ಬೇರೆ ರಾಜ್ಯಗಳಲ್ಲಿ ನೋಡಿದಾಗ, ಆ ಜಾನುವಾರುಗಳ ಬೆಲೆ ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದ್ದಾರೋ, ಖಂಡಿತವಾಗಲೂ ಆ ಜಾನುವಾರುಗಳಿಗೆ ಸುಮಾರು ಹತ್ತು ಸಾವಿರ ರೂಪಾಯಿಗಳು ಮತ್ತು ಕುರಿಗೆ ಸುಮಾರು ರೂ. 5,000/- ಗಳ ದಯಾತ್ಮಕ ಧನವನ್ನು ಕೊಡುತ್ತಿದ್ದೇವೆ. ನಮ್ಮ ರಾಜ್ಯವನ್ನು ಬೇರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯಕ್ಕೆ ಹೋಲಿಕೆ ಮಾಡಿದರೆ, ನಮ್ಮ ರಾಜ್ಯದಲ್ಲಿ ದಯಾತ್ಮಕ ಧನ ಕೊಡುತ್ತಿರುವುದು ಬಹಳ ಕಡಿಮೆ ಇದೆ. ಅದರ ಬಗ್ಗೆ ಚರ್ಚೆ ಮಾಡಿ, ಆದಷ್ಟು ಬೇಗ ಅದನ್ನು ಹೆಚ್ಚಿಗೆ ಮಾಡುವಂತಹ ಪ್ರಯತ್ನವನ್ನು ಪ್ರಮಾಣಿಕವಾಗಿ ಮಾಡುತ್ತೇನೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ:-**ಮಾನ್ಯ ಸಭಾಪತಿಯವರೇ, ಈ ಕಾಡು ಹಂದಿಗಳನ್ನು ವನ್ಯ ಪ್ರಾಣಿಗಳ ಜೊತೆಗೆ ಸೇರಿಸಿದ್ದಾರೆ. ಕಾಡು ಹಂದಿಗಳು ಬೋನಿಗೆ, ಬಲೆಗೆ ಬಿದ್ದು ಸತ್ತು ಹೋಗುತ್ತವೆ. ಅದು ಶೂಟ್ ಮಾಡುವುದಲ್ಲ, ಬಹುಶಃ ಕಾಡು ಹಂದಿಗಳು ಸತ್ತು ಹೋದರೆ, ಅರಣ್ಯ ಇಲಾಖೆಯ ಅಧಿಕಾರಿಗಳು ಏನು ಹೇಳುತ್ತಾರೆಂದರೆ, ನೀವು ಗುಂಡು ಹೊಡೆದಿದ್ದೀರಾ ಎಂದು ಅವರನ್ನು ನಿಲ್ಲಿಸಿಕೊಂಡು ಈ ತರಹ ಛಾಯಚಿತ್ರ ತೆಗೆದುಬಿಡುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರು ಛಾಯಚಿತ್ರವೊಂದನ್ನು ಸದನದಲ್ಲಿ ಪ್ರದರ್ಶಿಸಿದರು.)**

ಇದು ನಿಜಕ್ಕೂ ಕೊಡಗಿಗೆ ಮಾಡುವಂತಹ ಒಂದು ದೊಡ್ಡ ಅವಮಾನ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ರೀತಿ ಮಾಡಬಾರದು, ಅವರು ಏನೋ ದೊಡ್ಡ ಅಪರಾಧ ಮಾಡಿದ ಹಾಗೇ ಅಧಿಕಾರಿಗಳು ಸಮವಸ್ತ್ರ ಹಾಕಿಕೊಂಡು ಈ ತರಹ ಜನರನ್ನು ಕೂರಿಸಿಕೊಂಡು, ಛಾಯಚಿತ್ರ ತೆಗೆದುಬಿಟ್ಟರೆ ಇದು ಯಾವ ನ್ಯಾಯ? ಮತ್ತೆ ಮಾನ್ಯ ನ್ಯಾಯಾಲಯದಲ್ಲಿ ತೀರ್ಮಾನವಾಗಿ, ಮಾನ್ಯ ನ್ಯಾಯಾಲಯದಿಂದ ಅವರು ಬಿಡುಗಡೆಯಾಗುತ್ತಾರೆ. ಆದರೆ ಮೊದಲು ಸಿಕ್ಕಿದ ತಕ್ಷಣ ಈ ತರಹ ಛಾಯಚಿತ್ರ ತೆಗೆದು, ಕೊಡಗಿನ ಜನರಿಗೆ ಅವಮಾನ ಮಾಡುವುದನ್ನು ನಾನು ತೀವ್ರವಾಗಿ ಖಂಡಿಸುತ್ತಿದ್ದೇನೆ. ಈ ತರಹ ಮಾಡಬಾರದು. ಕಾಡು ಹಂದಿಯನ್ನು ಆಕಸ್ಮಿಕವಾಗಿ ಗುಂಡು ಹೊಡೆದರೆ, ಅರಣ್ಯ ಇಲಾಖೆಯವರನ್ನು ಕರೆದುಕೊಂಡು ಬಂದು ಅದನ್ನು ತೋರಿಸಿ, ಅದನ್ನು ಗುಂಡಿಗೆ ಹಾಕಬೇಕಂತೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಭೋಜೇಗೌಡರವರು ವಾರಕ್ಕೆ ಒಂದು ಸಾರಿ ಗುಂಡು ಹೊಡೆಯುತ್ತಾರೆ. ನಾನು ಅಲ್ಲಿಗೆ ಹೋಗಿದ್ದೆ.

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ:-** ಅವರನ್ನು ಏನೂ ಮಾಡುವುದಿಲ್ಲ ನೋಡಿ. ಅವರು ದೊಡ್ಡವರು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅರಣ್ಯ ಸಚಿವರನ್ನು ಕೇಳಿದ್ದಾರೆ. ಇದು ಬಹಳ ಮುಖ್ಯವಾಗಿರುವಂತಹ ವಿಚಾರ.

**ಸಭಾಪತಿಯವರು:–** ಮಾನ್ಯ ವೀಣಾ ಅಚ್ಚಯ್ಯನವರೇ ತಮ್ಮ ಪ್ರಶ್ನೆ ಕೇಳಿದ್ದಾಯಿತಾ?

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ:–**ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅದಕ್ಕೆ ಉತ್ತರವೇನಾದರೂ ಕೊಡಬೇಕಲ್ಲವೇ? ಆ ರೀತಿ ಮಾಡಬಾರದು ಎಂದು...

**ಶ್ರೀ ಆನಂದ್ ಸಿಂಗ್:–** ಮಾನ್ಯ ಸಭಾಪತಿಯವರೇ, ನಾನು ಖಂಡಿತವಾಗಿಯೂ ಅದನ್ನು ಪರಿಶೀಲನೆ ಮಾಡಿ, ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

**ಸಭಾಪತಿಯವರು:–** ಆಯಿತು. ಮಾನ್ಯ ಅರವಿಂದ ಕುಮಾರ ಅರಳಿಯವರು ಮಾತನಾಡಿ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಕಾಡು ಹಂದಿ ವಿಚಾರ ಬಹಳ ಗಂಭೀರವಾಗಿದೆ. ದಯವಿಟ್ಟು ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ. ಮಾನ್ಯ ಸದಸ್ಯರು ಒಳ್ಳೆಯ ಪ್ರಶ್ನೆಗಳನ್ನು ಕೇಳಿದ್ದಾರೆ.

**ಸಭಾಪತಿಯವರು:–** ಗಂಭೀರವಾದ ವಿಚಾರ ಏನು ಹೇಳಿ?

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಪ್ರಶ್ನೆ ಏನೆಂದರೆ, ಕಾಡು ಹಂದಿಯ ಸಂತತಿ ಬೇರೆ ಕಾಡು ಪ್ರಾಣಿಗಳ ಸಂತತಿಯ ಹಾಗೆ ಅಲ್ಲ. ಕಾಡು ಹಂದಿ ಒಂದು ಬಾರಿ ಇಪ್ಪತ್ತು ಮರಿಗಳನ್ನು ಹಾಕುತ್ತದೆ. ಕಾಡು ಹಂದಿ ಬಹಳ ಸಂತತಿಯಾಗಿದೆ. ಯಾವ ರೈತರೂ ಬದುಕುವುದಕ್ಕೆ ಆಗಲ್ಲ. ಹೊರ ದೇಶಗಳಲ್ಲಿ ಕಾನೂನು ಇದೆ. ಕಾಡು ಪ್ರಾಣಿಗಳು ಅದರಲ್ಲಿಯೂ ವಿಶೇಷವಾಗಿ ಜಿಂಕೆ, ಬೇರೆ ಬೇರೆ ಪ್ರಾಣಿಗಳ ಸಂತತಿ ಜಾಸ್ತಿಯಾದಾಗ, ಭೇಟೆಯಾಡುವುದಕ್ಕೆ ಪರವಾನಿಗೆಯನ್ನು ಕೊಡುತ್ತಾರೆ. ನಮ್ಮಲ್ಲಿಯೂ ಕೂಡ ಏನಾಗಿದೆ, ಇವತ್ತು ಮಾನ್ಯ ಸದಸ್ಯರು ಕೇಳಿರುವುದು ಸರಿಯಿದೆ. ಕಾಡು ಹಂದಿ, it comes under wild life. Wild life ಅನ್ನು ಎಲ್ಲದಕ್ಕೂ ಒಂದೇ ಮಾಡಬಾರದು. ಹುಲಿ, ಚಿರತೆ, ಆನೆಗೆ ಒಂದೇ ಮಾಡುತ್ತೀರಾ. ಕಾಡು ಹಂದಿಗೂ ಸಹ ಒಂದೇ ಮಾಡುತ್ತೀರಾ. ಹಾಗಾಗಿ, ಆ ಪರಿಸ್ಥಿತಿ ಬಂದಿರುವುದರಿಂದ ಜಾಮೀನು ಸಿಗುವುದಿಲ್ಲ. ಹಾಗಾಗಿ ಕಾಡು ಹಂದಿ wild life ನಿಂದ ಆಚೆ ಬರಬೇಕಾಗುತ್ತದೆ. ಈ ಕಾಡು ಹಂದಿ ಸಂತತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಾಸ್ತಿಯಾಗಿ ನಾಡಿನ ಎಲ್ಲಾ ಕಡೆಗಳಲ್ಲಿ ನುಗ್ಗುತ್ತಿವೆ. ಹಾಗಾಗಿ ರೈತರಿಗೂ ಮತ್ತು ಜನರಿಗೂ ಬಹಳ ತೊಂದರೆಯಾಗಿದೆ. ಈ ಹಿಂದೆ ಇದ್ದಂತಹ ಮಾನ್ಯ ಸಿದ್ದರಾಮಯ್ಯನವರ ಸರ್ಕಾರವಿದ್ದಾಗ ಆಗಿನ ಮಾನ್ಯ ಅರಣ್ಯ ಸಚಿವರು ಕಾಡು ಹಂದಿಗಳನ್ನು ಹೊಡೆಯುವುದಕ್ಕೆ ಏನಾದರೂ ಅವಕಾಶ ಮಾಡಿಕೊಡಿ. ವರ್ಷದಲ್ಲಿ ಯಾವುದಾದರೂ ಒಂದು ತಿಂಗಳು ಕೊಡಿ ಎಂದು ಕೇಳಿದ್ದರು.

**ಸಭಾಪತಿಯವರು:–** ಆಯಿತು.

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವತ್ತು ಪೂರಕವಾಗಿ ವನ್ಯ ಜೀವಿ ಮಂಡಳಿಯ ಸಭೆ ಸುಮಾರು ಎರಡೂವರೆ ಗಂಟೆಗೆ ಇತ್ತು. ಆ ಸಭೆಗೆ ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷರು, ಮಾನ್ಯ ಅರಣ್ಯ ಸಚಿವರು ಉಪಾಧ್ಯಕ್ಷರಿದ್ದಾರೆ. ಸೆಪ್ಟೆಂಬರ್ ತಿಂಗಳಲ್ಲಿ ವನ್ಯ ಜೀವಿಗಳಿಂದ ಮಾನವನು ಮೃತ ಪಟ್ಟಾಗ, ಐದು ಲಕ್ಷ ರೂಪಾಯಿಗಳಿಂದ ಹತ್ತು ಲಕ್ಷ ರೂಪಾಯಿಗಳವರೆಗೆ ಎಂದು ಪ್ರೊಸಿಡಿಂಗ್ಸ್‌ನಲ್ಲಿ ಆಗಿದೆ. ಇವತ್ತು ತಾವು ಭಾಗವಹಿಸಿದ್ದೀರಿ. ತಮ್ಮ ಹತ್ತಿರ ಹಾಗೂ ನನ್ನ ಹತ್ತಿರ ಆ ಪ್ರೊಸಿಡಿಂಗ್ಸ್ ಇದೆ. ಈಗ ಮಾನ್ಯ ಅರಣ್ಯ ಸಚಿವರು ಉತ್ತರ ಕೊಡಬೇಕಾದರೆ, ಐದು ಲಕ್ಷ ರೂಪಾಯಿಗಳಿಂದ ಏಳೂವರೆ ಲಕ್ಷ ರೂಪಾಯಿಗಳು ಎಂದು ಹೇಳಿದ್ದಾರೆ. ಪ್ರೊಸಿಡಿಂಗ್ಸ್‌ನಲ್ಲಿ ಐದು ಲಕ್ಷ ರೂಪಾಯಿಗಳಿಂದ ಹತ್ತು ಲಕ್ಷ ರೂಪಾಯಿಗಳವರೆಗೆ ಎಂದು ವನ್ಯಜೀವಿ ಮಂಡಳಿ ಮೀಟಿಂಗ್‌ನಲ್ಲಿ ಆಗಿದೆ. ಈ ರೀತಿಯ ಒಂದು ದ್ವಂದ್ವ ಉತ್ತರವನ್ನು ಅಧಿಕಾರಿಗಳು ಮಾನ್ಯ ಸಚಿವರಿಂದ ಏಕೆ ಹೇಳಿಸುತ್ತಾರೆ?

**ಶ್ರೀ ಆನಂದ್ ಸಿಂಗ್:–** ಮಾನ್ಯ ಸಭಾಪತಿಯವರೇ, ಕಳೆದ ಬಾರಿ ನಡೆದ ಸಭೆಯಲ್ಲಿ ನಾನು ಇರಲಿಲ್ಲ.

**(237)9.3.2020/6.00/ಎಂ.ಎಂ–ಬಿ.ಎನ್.ಎಸ್**

**ಶ್ರೀ ಆನಂದ್‌ಸಿಂಗ್ (ಮುಂದು):–**

ಖಂಡಿತವಾಗಲೂ ಆ ಮೀಟಿಂಗ್ ಪ್ರೊಸೀಡಿಂಗ್ಸ್‌ನಲ್ಲಿ ಇದೆ ಎಂದರೆ ಅದನ್ನು ಪರಿಶೀಲನೆ ಮಾಡಿ.

**(ಗೊಂದಲ)**

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಅಧಿಕಾರಿಗಳು ಮಾಹಿತಿ ತಪ್ಪು ಕೊಟ್ಟಿದ್ದಾರೆ. 05 ಲಕ್ಷ ಅಲ್ಲ 10 ಲಕ್ಷ ರೂಪಾಯಿಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆನಂದ್ ಸಿಂಗ್:-** ಮಾನ್ಯ ಸದಸ್ಯರೇ, ತಪ್ಪು ಮಾಹಿತಿ ಕೊಟ್ಟಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಏಕೆಂದರೆ, . . .

**ಶ್ರೀ ಎಸ್.ರವಿ:-** ಅಧಿಕಾರಿಗಳ ಮೇಲೆ ಹತೋಟಿ ಇಲ್ಲ.

**ಶ್ರೀ ಆನಂದ್ ಸಿಂಗ್:-** ಇದು ಬೇಜವಾಬ್ದಾರಿತನ ಅಲ್ಲ. ಖಂಡಿತವಾಗಿ ಆ ಪ್ರೊಸೀಡಿಂಗ್ಸ್;

**ಶ್ರೀ ಎಸ್. ರವಿ:-** ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

**ಶ್ರೀ ಹೆಚ್.ಎಂ. ರಮೇಶ್‌ಗೌಡ:-** ಹೌದು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ. ಅವರಿಗೆ ಇಷ್ಟ ಬಂದ ಹಾಗೆ ಉತ್ತರ ಕೊಟ್ಟು ಮನೆಗೆ ಹೋಗುವುದೇ?

**ಶ್ರೀ ಆನಂದ್ ಸಿಂಗ್:-** ಇಷ್ಟ ಬಂದ ಹಾಗೆ ಉತ್ತರ ಕೊಡುವುದಕ್ಕೆ ಬಂದಿಲ್ಲ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಿದ್ದೇನೆ. ಇಲ್ಲಿ ಯಾರೂ ಬೇಜವಾಬ್ದಾರಿತನದಿಂದ ಉತ್ತರ ಕೊಡುತ್ತಿಲ್ಲ. ಖಂಡಿತವಾಗಲೂ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಎಸ್. ರವಿ:-** ಮಾನ್ಯ ಸಚಿವರೇ, ಕುಣಿಗಲ್‌ನಲ್ಲಿ ಚಿರತೆ ದಾಳಿಗೆ ಮೃತ ಪಟ್ಟ ವ್ಯಕ್ತಿಯ ಕುಟುಂಬಕ್ಕೆ ಎಷ್ಟು ಲಕ್ಷ ಪರಿಹಾರವನ್ನು ಕೊಟ್ಟಿದ್ದಾರೆ? ಈಗ ಏಕಾಏಕಿ ಏಳುವರೆ ಲಕ್ಷ ಎಂದು ಸದನದಲ್ಲಿ ತಪ್ಪು ಮಾಹಿತಿ ಕೊಟ್ಟರೆ ಹೇಗೆ? ಅದು 10 ಲಕ್ಷ ಆಗಬೇಕು, ಅವರೇ ಪೇಮೆಂಟ್ ಮಾಡಿ ಬಂದಿದ್ದಾರೆ.

**ಶ್ರೀ ಆನಂದ್ ಸಿಂಗ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಮಾಹಿತಿಯ ಕೊರತೆ ಇರಬಹುದೇನೋ ಎಂಬುದು ನನ್ನ ಅಭಿಪ್ರಾಯ. ಏಕೆಂದರೆ, ಈಗ ಅವರು ಹೇಳಿದ ಪ್ರಕಾರ ಮೀಟಿಂಗ್‌ನಲ್ಲಿ ಪ್ರೊಸೀಡಿಂಗ್ಸ್ ಆಗಿದ್ದು 10 ಲಕ್ಷಕ್ಕೆ ಎಂದು ನಿಜವೇ. ಆದರೆ ಅದು ಆರ್ಥಿಕ ಇಲಾಖೆಗೆ ಹೋಗಿದೆ. ಇನ್ನೂ ಅನುಮೋದನೆಯಾಗಿ ಬಂದಿಲ್ಲ, ಬಂದ ತಕ್ಷಣವೇ ಕೊಡುತ್ತೇವೆ.

**ಪ್ರಶ್ನೆ ಸಂಖ್ಯೆ: 516**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ನಾನು ಐ.ಟಿ. ಪಾರ್ಕ್ ಸ್ಥಾಪನೆ ಬಗ್ಗೆ ಕೇಳಿದ್ದೆ. ಆದರೆ ಐ.ಟಿ. ಪಾರ್ಕ್ ಇಲ್ಲ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Incubation Center ಇದೆ ಅದನ್ನು ಉಪಯೋಗ ಮಾಡಿಕೊಳ್ಳುವಂತಹ ಧಾಟಿಯಲ್ಲಿ ಹೇಳಿದ್ದಾರೆ. ಆದರೆ ನಮ್ಮ ಬೀದರ್ ಜಿಲ್ಲೆ ತೆಲಂಗಾಣ ಮತ್ತು ಮಹಾರಾಷ್ಟ್ರದ ಗಡಿಯಲ್ಲಿ ಇರುವುದರಿಂದ ಹಾಗೂ ನಮ್ಮ ಜಿಲ್ಲೆಯಲ್ಲಿ ನಾಲ್ಕು ಇಂಜಿನಿಯರಿಂಗ್ ಕಾಲೇಜುಗಳಿವೆ. ಅದರಿಂದ ಪ್ರತಿ ವರ್ಷ ಕಂಪ್ಯೂಟರ್ ವಿಭಾಗದಿಂದ 100 ರಿಂದ 150 ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಿದ್ದಾರೆ. ಐ.ಟಿ. ಪಾರ್ಕ್ ಆದರೆ ಅನುಕೂಲವಾಗುತ್ತದೆ. ಏಕೆಂದರೆ ಸಮೀಪದಲ್ಲಿಯೇ ಹೈದರಾಬಾದ್ ಇದೆ, ಈ ಕಡೆ ಮಹಾರಾಷ್ಟ್ರದ ಪೂನಾ ಇದೆ. ಎಲ್ಲಾ ವಿದ್ಯಾರ್ಥಿಗಳು ಅಲ್ಲಿ ಓದಿ ಬೇರೆ ಕಡೆಗೆ ಕೆಲಸ ಮಾಡುವುದಕ್ಕೆ ಹೋಗುತ್ತಿದ್ದಾರೆ. ಆದ್ದರಿಂದ ಅಲ್ಲಿ ಐ.ಟಿ. ಪಾರ್ಕ್ ಸ್ಥಾಪನೆ ಮಾಡಬೇಕೆಂದು ಕೇಳುತ್ತಿದ್ದೇನೆ.

**ಡಾ॥ ಸಿ.ಎನ್ ಅಶ್ವತ್ ನಾರಾಯಣ:–** ಮಾನ್ಯ ಸಭಾಪತಿಯವರೇ, ನನ್ನ ಇಲಾಖೆಯಿಂದ 2017ರಲ್ಲಿ Joint Director, District Industries Centre, ಇವರಿಗೆ ಒಂದು ಪತ್ರವನ್ನು ಬರೆಯಲಾಗಿದೆ. ಯಾವರೀತಿ ಅಲ್ಲಿ ಐ.ಟಿ. ಪಾರ್ಕನ್ನು set up ಮಾಡುವುದಕ್ಕೆ feasibility and suitability ಬಗ್ಗೆ opinion ಅನ್ನು ಕೇಳಿದ್ದೆವು. ಅವರಿಂದ ಇದುವರೆಗೂ Feasibility Report ಅನ್ನು ಪಡೆದುಕೊಂಡಿಲ್ಲ. ಹಾಗಾಗಿ ಅಲ್ಲಿ ಸೂಕ್ತವಾಗಿದೆ ಎನ್ನುವ ವರದಿಯನ್ನು District Industries Officers ಯಾರೂ ಕೊಟ್ಟಿಲ್ಲ. ನಾವು 2017ರಲ್ಲಿಯೇ ಪತ್ರ ಬರೆದಿದ್ದೇವೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಐ.ಟಿ. ಸಚಿವರಾಗಿದ್ದಾಗ ಬೀದರ್‌ಗೆ ಐ.ಟಿ. ಪಾರ್ಕ್ ಮಂಜೂರು ಮಾಡಿದ್ದೆ. ಅದು ಬಜೆಟ್‌ನಲ್ಲಿ ಬಂದಿದೆ. ತಾವು ಸಚಿವರು ಅದನ್ನು ಹೇಗೆ ನೋಡಿಲ್ಲ?

**ಡಾ॥ ಸಿ.ಎನ್ ಅಶ್ವತ್ ನಾರಾಯಣ:–** ನೀವು ಕೊಟ್ಟಿರುವುದನ್ನು ಭಾಷಣದಲ್ಲಿ ಮಾತ್ರ ಹೇಳಿದ್ದೀರಿ.

**ಶ್ರೀ ಎಸ್.ಆರ್. ಪಾಟೀಲ್:–** ಅದು ಬಜೆಟ್‌ನಲ್ಲಿ ಬಂದಿದೆ ಭಾಷಣದಲ್ಲಿ ಅಲ್ಲ. It has been incorporated in the Budget itself. ಅದನ್ನು ಇವರು ಜಾರಿಗೊಳಿಸಬೇಕು. ಹಿಂದಿನ ಸರ್ಕಾರದ ಬಜೆಟ್‌ನಲ್ಲಿ ಬಂದರೆ, they have to implement it. ಅದಕ್ಕೆ ಏನು ಬೇಕೋ ಅದನ್ನು ಕೊಡಬೇಕು.

**ಡಾ॥ ಸಿ.ಎನ್ ಅಶ್ವತ್ ನಾರಾಯಣ:–** ಮಾನ್ಯ ಸಭಾಪತಿಯವರೇ, . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪಮುಖ್ಯಮಂತ್ರಿಯವರೇ, ಒಂದು ನಿಮಿಷ ಕೇಳಿ. ನಾನು ಬೀದರ್‌ಗೆ ಒಂದು ಸಲ ಭೇಟಿ ನೀಡಿದಾಗ ಬಾಗಲಕೋಟೆಗೆ, ವಿಜಯಪುರಕ್ಕೆ ಒಂದೊಂದು ಐ.ಟಿ. ಪಾರ್ಕ್ ಕೊಟ್ಟಾಗ ಬೀದರ್‌ಗೆ ಐ.ಟಿ. ಪಾರ್ಕ್ ಕೊಡಬೇಕೆಂದು ಜನಪ್ರತಿನಿಧಿಗಳ ಜೊತೆ ಮಾಧ್ಯಮದವರು ನನ್ನ ಬೆನ್ನು ಹತ್ತಿದರು. ಆಗ ನಾನು Planning Minister ಆಗಿದ್ದೆ. ಮುಖ್ಯಮಂತ್ರಿಯವರಿಗೆ ಹೇಳಿ ಬಜೆಟ್‌ನಲ್ಲಿ incorporate ಆಗಿದೆ. ಅದು ಯಾವ ಇಸವಿ ಎನ್ನುವುದು ನನಗೆ ನೆನಪಿಲ್ಲ ಬೇಕಾದರೆ ನಾನು ಅದರ ವಿವರಗಳನ್ನು ಕೊಡುತ್ತೇನೆ. It has been incorporated in the Budget itself. You have to provide money and start the I.T. Park. ಅದನ್ನು ನೀವು ವೆರಿಫೈ ಮಾಡಿ. My memory is very fine.

**ಡಾ|| ಸಿ.ಎನ್ ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್. ಪಾಟೀಲ್‌ರವರು ಐ.ಟಿ. ಬಿ.ಟಿ. ಸಚಿವರಾಗಿದ್ದರು. ಅವರ ಕಾಲದಲ್ಲಿ ಅಲ್ಲಿ New Age Incubation Network ಅನ್ನು ಕೊಟ್ಟಿದ್ದಾರೆ. ಅದು 2015-16ರಲ್ಲಿ ಮತ್ತು 2016-17ರಲ್ಲಿಯೂ ಬಜೆಟ್ ಭಾಷಣದಲ್ಲಿದೆ. ಯಾವುದೇ ರೀತಿಯಾದಂತಹ financial allocation ಆಗಿಲ್ಲ. ಇದಾದ ನಂತರ 2017ರಲ್ಲಿಯೂ Joint Director, District Industries Centre ಇವರಿಗೆ ಪತ್ರವನ್ನು ಬರೆಯಲಾಗಿದೆ. ಅಲ್ಲಿಂದ Feasibility Report ಸಹ ಬಂದಿಲ್ಲ. ಈಗ ಎಂಟು ಕೋಟಿ ವೆಚ್ಚದಲ್ಲಿ ಗುರುನಾನಕ್ ಕಾಲೇಜ್‌ನಲ್ಲಿ New Age Incubation Network ಅನ್ನು ಪ್ರಾರಂಭ ಮಾಡಿದ್ದೇವೆ. ಅಲ್ಲಿ Incubation and innovation centres ನಡೆಯುತ್ತಿದೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಬಜೆಟ್ ಭಾಷಣದಲ್ಲಿದೆ ಎಂದರೆ ನನಗೆ ಅರ್ಥವಾಗುತ್ತಿಲ್ಲ. ಏನಾದರೂ ಮಾಡಬೇಕಾದರೆ, ಅದನ್ನು ಬಜೆಟ್‌ನಲ್ಲಿ ಉಲ್ಲೇಖ ಮಾಡಿದರೆ ಅದು ಬಜೆಟೆಡ್ ವರ್ಕ್ ಆಗುತ್ತದೆ. ಅದಕ್ಕೆ ಹಣ ಕೊಡುವಂತಹ ವ್ಯವಸ್ಥೆಯನ್ನು ಈಗಿನ ಮಂತ್ರಿಗಳು ಮತ್ತು ಈಗಿನ ಸರ್ಕಾರ ಮಾಡಬೇಕು. It was very well mentioned in the Budget itself and I.T. Park was sanctioned. ಅದಕ್ಕೆ ಹಣದ ವ್ಯವಸ್ಥೆ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡಿಕೊಳ್ಳಬೇಕು ಮತ್ತೆ Feasibility Report ಅನ್ನು ಕೇಳಬಾರದು. ಈಗ ಬಜೆಟ್ ಹೇಗೆ ಪಾಸ್ ಆಗುತ್ತದೆ? ಕೆಳಮನೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಸರ್ವಾನುಮತದಿಂದ ಅಥವಾ ಮೆಜಾರಿಟಿಯಿಂದ ಪಾಸ್ ಆಗಿ, it will receive the assent of the Governor. ಅದಕ್ಕೆ ರಾಜ್ಯಪಾಲರು ಅಂಕಿತ ಹಾಕುತ್ತಾರೆ. ಆಗ ಅದು ಕಾನೂನಾಗುತ್ತದೆ. It will become an Act. ಅದು Money Bill ಆಗಿದೆ. Money Bill ನಲ್ಲಿ, ಬಜೆಟ್‌ನಲ್ಲಿಯೇ ಬಂದಿದೆ. ಹೊರಗಡೆ ಎಲ್ಲೋ ಹೋಗಿ ಭಾಷಣ ಮಾಡಿ ಐ.ಟಿ. ಪಾರ್ಕ್ ಕೊಟ್ಟಿದ್ದೇವೆ ಎಂದರೆ ಬೇರೆ. ಬಜೆಟ್‌ನಲ್ಲಿಯೇ ಅದನ್ನು incorporate ಮಾಡಲಾಗಿದೆ. ಬಜೆಟ್‌ನಲ್ಲಿ ಮಂಜೂರಾತಿ ಕೊಟ್ಟಿದೆ ಅದನ್ನು ಕಾರ್ಯಗತಗೊಳಿಸುವ ಜವಾಬ್ದಾರಿ ಮುಂದಿನ ಮಂತ್ರಿಗಳದ್ದಾಗಿದೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಬೀದರ್ ಜಿಲ್ಲೆಯಲ್ಲಿ Industries ಇಲ್ಲ. ಅಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳು ಅತಂತ್ರರಾಗಿದ್ದಾರೆ. ಅವರು ಪೂನಾಗೆ ಹೋಗಬೇಕು ಅಥವಾ ಹೈದರಾಬಾದ್‌ಗೆ ಹೋಗಬೇಕು. ಇಲ್ಲಿ ನಾಲ್ಕು ಕಾಲೇಜುಗಳಿದ್ದರೂ ಕೂಡ ಯಾವುದೂ ಉಪಯೋಗವಾಗುತ್ತಿಲ್ಲ. ಆದ್ದರಿಂದ ಅಲ್ಲಿಯೇ ಐ.ಟಿ. ಪಾರ್ಕ್ ಪ್ರಾರಂಭ ಮಾಡಿದರೆ ಒಳ್ಳೆಯದು. ಅಲ್ಲಿ Industries ಕೂಡ ಇಲ್ಲ, ಅವೆಲ್ಲಾ ಬಂದ್ ಆಗಿವೆ. ಆದ್ದರಿಂದ ಅಲ್ಲಿ ಐ.ಟಿ. ಪಾರ್ಕ್ ಪ್ರಾರಂಭ ಮಾಡುವುದು ಬಹಳ ಅವಶ್ಯಕತೆ ಇದೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಐ.ಟಿ. ಪಾರ್ಕನ್ನು ಪ್ರಾರಂಭ ಮಾಡುವುದಕ್ಕೆ ಒತ್ತಾಯ ಮಾಡಿ. I.T. Park was already sanctioned for Bidar. ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಇದ್ದಾಗಲೇ ಐ.ಟಿ. ಪಾರ್ಕ್ ಗೆ ಮಂಜೂರಾತಿ ಕೊಟ್ಟಿದೆ. ಭಾಷಣದಲ್ಲಿ ಅಲ್ಲ ಅದು ಬಜೆಟ್ ಬುಕ್‌ನಲ್ಲಿ ಇದೆ. ಭಾಷಣ ಎಂದರೆ ಊರ ಹೊರಗೆ ಎಲ್ಲೋ ಹನುಮಂತ ದೇವರ ಗುಡಿ ಮುಂದೆ ಅಥವಾ ಬಸವನ ದೇವರ ಗುಡಿ ಮುಂದೆ ಮಾಡಿರುವ ಭಾಷಣವಲ್ಲ. ಬೀದಿಯಲ್ಲಿ ಮಾಡಿದ ಭಾಷಣವಲ್ಲ. ಬಜೆಟ್ ಬುಕ್‌ನಲ್ಲಿಯೇ ಬಂದಿದೆ. ಬೀದರ್‌ಗೆ ಏಕೆಂದರೆ, ನಾನು ಅಲ್ಲಿಗೆ ಹೋದಾಗ ಕೇಳಿದರು, ನಮ್ಮ ಬೆಂಗಳೂರಿನಲ್ಲಿ ಐ.ಟಿ. ತಂತ್ರಜ್ಞಾನ ಹೇಗೆ ಹೆಚ್ಚು ಬೆಳವಣಿಗೆಯಾಗಿದೆ ಅದೇ ರೀತಿ, undivided Andhra State ಗೆ ಹೈದರಾಬಾದ್ Capital ಆಗಿತ್ತು. ಅಲ್ಲಿದೆ, ಇಲ್ಲಿ ಮಾಡಿದರೆ ನಮಗೆ ಅನುಕೂಲವಾಗುತ್ತದೆ ಎಂದು ಒತ್ತಾಯ ಮಾಡಿದಾಗ ನಾನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Planning Minister ಆಗಿದ್ದರಿಂದ, pre-Budget Meeting ನಲ್ಲಿ ಚರ್ಚೆ ಮಾಡಿ ಅದನ್ನು ಬಜೆಟ್‌ನಲ್ಲಿ incorporate ಮಾಡಿ ಮಂಜೂರಾತಿ ಕೊಡಿಸಿದ್ದೆವು. ಅದಕ್ಕೆ ಇವರು ಹಣದ ವ್ಯವಸ್ಥೆ ಮಾಡಬೇಕು ಮತ್ತು ಅದನ್ನು ಇಂಪ್ಲಿಮೆಂಟ್ ಮಾಡಬೇಕು.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಚಿವರೇ ಅದನ್ನು ಪ್ರಾರಂಭ ಮಾಡುವ ಬಗ್ಗೆ ತಿಳಿಸಿ.

**ಡಾ॥ ಸಿ.ಎನ್ ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, 2016-17ರ ಬಜೆಟ್ ಭಾಷಣದಲ್ಲಿ;

**ಶ್ರೀ ಎಸ್.ಆರ್. ಪಾಟೀಲ್:-** ಬಜೆಟ್‌ನಲ್ಲಿ ಬಂದಿದೆ.

**ಡಾ॥ ಸಿ.ಎನ್ ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, 2016-17ರ ಬಜೆಟ್ ಭಾಷಣದಲ್ಲಿ ಇದನ್ನು ಹೇಳಿದ್ದಾರೆ. 2017-18 ಆಯಿತು, 2018-19 ಆಯಿತು 2019-20 ಆಯಿತು ಇದುವರೆಗೂ ಯಾವತ್ತೂ ಇದು ಇರಲಿಲ್ಲ. 2017ರಲ್ಲಿಯೂ ಒಂದು ಪತ್ರವನ್ನು ನಮ್ಮ ಇಲಾಖೆಯಿಂದ ಅಲ್ಲಿನ Joint Director, District Industries Centre ಇವರಿಗೆ Feasibility Report ಬಗ್ಗೆ ಪತ್ರ ಬರೆಯಲಾಗುತ್ತದೆ. ಇದುವರೆಗೂ ಆ ಜಿಲ್ಲೆಯ Joint Director, District Industries Centre ರವರು Feasibility Report ಬಗ್ಗೆ response ಆಗಲಿ reply ಆಗಲಿ ಮಾಡಿಲ್ಲ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಚಿವರೇ, ಅಧಿಕಾರಿಗಳು ಪತ್ರಕ್ಕೆ ರಿಪ್ಲೈ ಮಾಡದಿದ್ದರೆ ಹೇಗೆ? 2016-17, 2017-18;

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಬಜೆಟ್‌ನಲ್ಲಿ ಬಂದಿರುವುದಕ್ಕೆ feasibility ಇದೆಯೋ ಇಲ್ಲವೋ ಎಂದು ಕೇಳುವುದಕ್ಕೆ; ಇವರು ಬಜೆಟ್ ಅನ್ನೇ ಡ್ರಾಪ್ ಮಾಡುತ್ತಾರೇನೋ ಎಂದಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, 2016–17, 2017–18 ಮತ್ತು 2018–19 ಅಂದರೆ ಎರಡೂವರೆ ವರ್ಷಗಳಾಯಿತು. ಆದರೆ ಇಲ್ಲಿಯವರೆಗೂ ಕೂಡ ಅಲ್ಲಿರುವಂತಹ ಅಧಿಕಾರಿಯು ಉತ್ತರ ಕೊಟ್ಟಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಇದು ಯಾರ ತಪ್ಪು?

**(238) 09–03–2020/ 06–10/ ಕೆಹೆಚ್–ಕೆಎಸ್**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):–**

ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ನಾನು ಮಾತನಾಡಿ ಮುಗಿಸಿದ ಮೇಲೆ ಅವರು ಮಾತನಾಡಲಿ. 2016–17ನೇ ಸಾಲಿನ ಆಯವ್ಯಯದಲ್ಲಿ ಈ ವಿಷಯ ಪ್ರಸ್ತಾಪವಾಯಿತು. 2013ನೇ ಸಾಲಿನಲ್ಲಿ ನಾನು ಮಂತ್ರಿಯಾಗಿದ್ದು, 2016ನೇ ಸಾಲಿನಲ್ಲಿ ನಾನು ಡ್ರಾಪ್ ಆದೆ. ಮುಂದೆ ಇದರ ಬಗ್ಗೆ ನಾನು ಫಾಲೋ–ಅಪ್ ಮಾಡುವುದಕ್ಕೆ ಆಗಲಿಲ್ಲ. ನನ್ನ ನಂತರ ಮತ್ತೊಬ್ಬರು ಐಟಿ ಹಾಗೂ ಬಿಟಿ ಸಚಿವರು ಬಂದಿದ್ದಾರೆ. ಮುಂದಿನ 2 ವರ್ಷಗಳ ಕಾಲ ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರದಲ್ಲಿ ಮತ್ತೊಬ್ಬರು ಐಟಿ ಹಾಗೂ ಬಿಟಿ ಸಚಿವರು ಇದ್ದರು. ತದನಂತರ ಐಟಿ ಹಾಗೂ ಬಿಟಿ ಗೆ ಸಂಬಂಧಪಟ್ಟ ಖಾತೆ ತಮಗೆ ಬಂದಿದೆ. ತಾವು ಬಜೆಟ್‌ನಲ್ಲಿ; Budget itself is the strength for the Ministry. ಹಿಂದಿನ ಸರ್ಕಾರ ಬಿಟ್ಟಿರುವ ಕೆಲಸಗಳನ್ನು ಮುಂದಿನ ಸರ್ಕಾರ ಬಿಡುವುದಕ್ಕೆ ಬರುವುದಿಲ್ಲ. It has to be continued. ಇದಕ್ಕೆ ಮಾನ್ಯ ಪ್ರಿಯಾಂಕಾ ಖರ್ಗೆಯವರು ಹಿಂದೆ ಸಚಿವರಾಗಿದ್ದರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರನ್ನು ಸಚಿವ ಸಂಪುಟದಿಂದ ಕೈಬಿಟ್ಟಿರುವುದೇ ಈ ಸಮಸ್ಯೆಗೆ ಕಾರಣವಾಗಿದೆ. ಅವರನ್ನು ಕೈಬಿಟ್ಟಿರಲಿಲ್ಲವೆಂದರೆ ಈ ರೀತಿಯ ಸಮಸ್ಯೆ ಆಗುತ್ತಿರಲಿಲ್ಲ. ಈಗ ಅದನ್ನು ಮಾನ್ಯ ಮಂತ್ರಿಗಳ ತಲೆಗೆ ತರುವಂತಹ ಕೆಲಸಗಳನ್ನು ಮಾಡುತ್ತಾರೆ.

**ಸಭಾಪತಿಯವರು:–** ಮಾನ್ಯ ಸಚಿವರು ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ ಎಂದಾದರೂ ಹೇಳಬೇಕಲ್ಲವೇ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಇದರ ಬಗ್ಗೆ ಹೇಳಿ. ಬಜೆಟ್‌ನಲ್ಲಿ ಇಲ್ಲದೆ ಇರುವುದನ್ನು; ಮತ್ತೆ ಬಜೆಟ್‌ಗೆ ಏನು sanctity ಇದೆ? ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು 2020-21ನೇ ಸಾಲಿನ ಬಜೆಟ್ ಅನ್ನು present ಮಾಡಿದ್ದಾರೆ. ಇದರ ಬಗ್ಗೆ ಬಜೆಟ್ ಭಾಷಣದಲ್ಲಿ ಇದೆ. ಇದಕ್ಕೆ ನನಗೆ ಸಂಬಂಧ ಇಲ್ಲವೆಂದರೆ ಹೇಗೆ? ಬಜೆಟ್‌ನ sanctity ಏನು? ಇದರ ಬಗ್ಗೆ ಏನಾದರೂ ಮಾಡುವುದಕ್ಕೆ ಆಗುತ್ತದೆಯೇ ಎಂಬುದನ್ನು ನೋಡಬೇಕು.

**ಸಭಾಪತಿಯವರು:-** ಮಾನ್ಯ ಸಚಿವರೇ, ಇದನ್ನು ಕೈ ಬಿಟ್ಟಿದ್ದೇವೆ ಎಂದಾದರೂ ಹೇಳಬೇಕು ಅಥವಾ ಪರಿಶೀಲನೆ ಮಾಡಬೇಕು ಎಂದಾದರೂ ಹೇಳಬೇಕು. ಇದರ ಬಗ್ಗೆ ಏನು ಉತ್ತರವನ್ನು ಹೇಳದೇ ಇದ್ದರೆ . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, the Hon'ble Minister has to speak out in this regard. ಇದರ ಬಗ್ಗೆ ಮಾನ್ಯ ಸಚಿವರಿಗೆ confusion ಆಗಿದೆ. Discuss with the Secretary of the Department in this regard. ತಮ್ಮ ಇಲಾಖೆಯಲ್ಲಿ ಒಳ್ಳೆಯ ಸಮರ್ಥ ಕಾರ್ಯದರ್ಶಿಯವರು ಇದ್ದಾರೆ. I am well aware of the caliber and ability of the Secretary of the Department. Let the Hon'ble Minister once discuss with the Secretary of the Department and give assurance on the floor of the House. It is mentioned and declared in the Budget.

**ಡಾ|| ಸಿ.ಎನ್ ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ 2015-16ನೇ ಸಾಲಿನ ಬಜೆಟ್‌ನಲ್ಲಿ ಮತ್ತು 2016-17ನೇ ಸಾಲಿನ ಬಜೆಟ್‌ನಲ್ಲಿ ಸಹ ಉಲ್ಲೇಖ ಮಾಡಿದ್ದಾರೆ. ಇದರ ಬಗ್ಗೆ ಅಲೋಕೇಷನ್ ಏನೂ ಇಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಬಜೆಟ್‌ನಲ್ಲಿ ಇದರ ಬಗ್ಗೆ ಉಲ್ಲೇಖ ಮಾಡಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ|| ಸಿ.ಎನ್ ಅಶ್ವಥ್ ನಾರಾಯಣ.:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೇ ಬಜೆಟ್‌ನಲ್ಲಿ ಇದರ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಇದುವರೆಗೂ ಮಾನ್ಯ ಸಚಿವರುಗಳು ಇದ್ದರು. ಗುಲ್ಬರ್ಗಾ ಜಿಲ್ಲೆಯಲ್ಲಿ ಐ.ಟಿ.ಪಾರ್ಕ್‌ಗಳನ್ನು ಮಾಡಿಕೊಂಡಿದ್ದಾರೆ. ಐ.ಟಿ.ಪಾರ್ಕ್‌ಗಳನ್ನು ಮಾಡುವಂತಹ ಪ್ರಯತ್ನಗಳು ಕೇವಲ ಭಾಷಣದಲ್ಲಿ ಹೇಳಿಕೊಂಡರೇ ಹೊರತು, feasibility report ನಲ್ಲಿ ಇದು feasible ಇಲ್ಲ ಎಂದು ಇದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಹತ್ತಿರ ಕೆಲಸ ಮಾಡುವುದು ಬಹಳ ಕಷ್ಟ ಇದೆ. ಬಜೆಟ್‌ನಲ್ಲಿ ಉಲ್ಲೇಖ ಮಾಡಿದ್ದಾರೆ. ಬಜೆಟ್ ಭಾಷಣದಲ್ಲಿ ಉಲ್ಲೇಖ ಆಗಿದೆ. ಮಾನ್ಯ ಸಚಿವರು ಉಪ ಮುಖ್ಯಮಂತ್ರಿಗಳಾಗಿದ್ದಾರೆ. ಅವರು ಈ ರೀತಿ ಹೇಳುವುದೇ?

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ತಾವು ಕೂಡ ಮಾನ್ಯ ಸಚಿವರು ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ ಎಂದು ಭರವಸೆ ಕೊಡಬೇಕೆಂದು ಈಗಾಗಲೇ ಹೇಳಿದ್ದೀರಿ. ಆದರೂ ಕೂಡ ತಾವು ಹೇಳಿದರೂ ಕೇಳುವುದಿಲ್ಲ. ಮತ್ತೆ ಯಾರೂ ಹೇಳಿದರೂ ಕೇಳಲಿಲ್ಲವೆಂದರೆ ಹೇಗೆ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಬಜೆಟ್ ಭಾಷಣದಲ್ಲಿ ಇದರ ಬಗ್ಗೆ ಪ್ರಸ್ತಾಪ ಆದ ಮೇಲೂ ಇದು ಇನ್ನೂ ಪ್ರಾರಂಭವಾಗಿಲ್ಲ. ಈಗ ದಾಖಲೆಗಳೆಲ್ಲಾ ಪರಿಶೀಲನೆಯಲ್ಲಿವೆ. ಮಾನ್ಯ ಸಚಿವರು ಇದರ ಮೇಲೆ ಮಾತನಾಡಬೇಕಾಗುತ್ತದೆ. ಮಾನ್ಯ ಸಚಿವರು ಈಗ ಇದರ ಬಗ್ಗೆ ಏನು ಹೇಳಿದ್ದಾರೆ?

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಹೆಚ್.ಎಂ.ರಮೇಶ್‌ಗೌಡರವರೇ, . . .

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಹೆಚ್.ಎಂ.ರಮೇಶ್‌ಗೌಡರವರೇ, ಒಂದು ನಿಮಿಷ. ಮಾನ್ಯ ಸಚಿವರು ಇದನ್ನು ಪ್ರಾರಂಭ ಮಾಡುತ್ತಾರೋ, ಇಲ್ಲವೋ ಎಂಬುದು ನನಗೆ ಗೊತ್ತಾಗಬೇಕು.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಎಸ್.ವ್ಹಿ.ಸಂಕನೂರರವರೇ, . . .

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದರ ಬಗ್ಗೆ 2020-21ನೇ ಸಾಲಿನ ಬಜೆಟ್ ಭಾಷಣದಲ್ಲಿ ಇದೆ ಎಂದು ಹೇಳಿದರೆ, ಇದರ ಬಗ್ಗೆ ಫೈನಲ್ ಆಗಿ ಏನು ಮಾಡುತ್ತಾರೆ ಎಂಬುದನ್ನು ಹೇಳಬೇಕಲ್ಲವೇ?

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಎಸ್.ಆರ್.ಪಾಟೀಲ್‌ರವರೇ, . . .

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದನ್ನು ಪ್ರಾರಂಭ ಮಾಡುತ್ತಾರೋ, ಇಲ್ಲವೋ ಎಂಬುದಕ್ಕೆ ಉತ್ತರವನ್ನು ಕೊಡಬೇಕು.

**ಡಾ॥ ಅಶ್ವಥ್ ನಾರಾಯಣ ಸಿ.ಎನ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಗುಲ್ಬರ್ಗಾ, ಶಿವಮೊಗ್ಗ, ಹುಬ್ಬಳ್ಳಿ, ಮೈಸೂರು ಮತ್ತು ಮಂಗಳೂರಿನಲ್ಲಿ ಆಗಿರುವಂತಹ ಐ.ಟಿ.ಪಾರ್ಕ್‌ಗಳು feasible ಆಗಿ ಯಶಸ್ವಿಯಾಗಿರುವುದಿಲ್ಲ. ಈಗ ಮಾಡಿರುವ ಐ.ಟಿ.ಪಾರ್ಕ್‌ಗಳು ಬಹಳ ಸಮಸ್ಯೆಗಳನ್ನು ಎದುರಿಸುತ್ತಿವೆ. ಬೀದರ್ ಜಿಲ್ಲೆಯಲ್ಲಿ ಐ.ಟಿ.ಪಾರ್ಕ್‌ಗಳು ಮತ್ತು ಇನ್ಕ್ಯೂಬೇಟರ್‌ಗಳನ್ನು ಸ್ಥಾಪಿಸುವ ಬಗ್ಗೆ ಕೇವಲ ಮಾತನಾಡುವುದಲ್ಲ, ಇವತ್ತು ಇರುವಂತಹ ಐ.ಟಿ.ಪಾರ್ಕ್‌ಗಳು ಬಹಳ ಯಶಸ್ವಿಯಾಗಿ ನಡೆಯುವುದೇ ಅಸಾಧ್ಯವಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, startup policy ಬಗ್ಗೆ ಅನುಭವ ಇದೆ.

**ಡಾ॥ ಅಶ್ವಥ್ ನಾರಾಯಣ ಸಿ.ಎನ್:-** ಮಾನ್ಯ ಸಭಾಪತಿಯವರೇ, ಅದಕ್ಕೆ ಇದು feasible ಇಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ ಒಂದು ನಿಮಿಷ ಕೇಳಿ. ಇದು plug and play ರೀತಿ ಇದೆ. IT park ವ್ಯವಸ್ಥೆಯನ್ನು ಮಾಡಿದರೆ ಹೊಸಬರು ಅಲ್ಲಿಗೆ ಬಂದು ಇದರ ಬಗ್ಗೆ ಅನುಭವ ತೆಗೆದುಕೊಂಡು ದೊಡ್ಡ ದೊಡ್ಡ IT industrialist ಆಗುವಂತಹ ಅವಕಾಶ ಇದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದನ್ನು ಪ್ರಾರಂಭ ಮಾಡುತ್ತಾರೋ, ಇಲ್ಲವೋ ಎಂಬುದಕ್ಕೆ ಉತ್ತರವನ್ನು ಕೊಡುವುದಕ್ಕೆ ಹೇಳಿ.

**ಸಭಾಪತಿಯವರು:-** ಈಗ ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಎಸ್.ಆರ್.ಪಾಟೀಲ್‌ರವರು ಮಾತನಾಡುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಐ.ಟಿ.ಇಲಾಖೆಗೆ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಬೀದರ್ ಜಿಲ್ಲೆಗೆ ಐಟಿ ಪಾರ್ಕ್ ಮತ್ತು ಇನ್ಕ್ಯೂಬೇಟರ್‌ಗಳನ್ನು ಸ್ಥಾಪಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಮನವೊಲಿಸಿ, ಇದರ ಬಗ್ಗೆ ಸುದೀರ್ಘ ಚರ್ಚೆಯಾದ ನಂತರ ಇದನ್ನು ಬಜೆಟ್‌ನಲ್ಲಿ ಅಳವಡಿಸಿದ್ದಾರೆ. ಮಾನ್ಯ ಸಚಿವರು ಇದಕ್ಕೆ ಬೇಕಾಗಿರುವಂತಹ ಹಣವನ್ನು ಒದಗಿಸಬೇಕು. ಇದಕ್ಕೆ ಹೆಚ್ಚು ಹಣದ ಅವಶ್ಯಕತೆ ಇರುವುದಿಲ್ಲ. ಇದಕ್ಕೆ ಬೇಕಾದಂತಹ ನಿವೇಶನವನ್ನು ಒದಗಿಸಿಕೊಟ್ಟು, ಒಂದು ಕಟ್ಟಡವನ್ನು ನಿರ್ಮಿಸಿ ಕೊಟ್ಟರೆ, ಐ.ಟಿ.ಪಾರ್ಕ್‌ಗಳು ಪ್ರಾರಂಭವಾಗುತ್ತವೆ. ಎಷ್ಟೋ ಮಂದಿ ಸುಮಾರು ಐದೂವರೆ ಲಕ್ಷ B.E. (Computer Science) ಮಾಡಿರುವಂತಹ ಪದವೀಧರರು ಇದ್ದಾರೆ. They are virtually in street. ತಾವು ಈ ರೀತಿ ಹೇಳಿದರೆ ನಾವು street ನಲ್ಲಿಯೇ ಇರಬೇಕಾಗುತ್ತದೆ.

**ಡಾ|| ಅಶ್ವಥ್ ನಾರಾಯಣ ಸಿ.ಎನ್:-** ಮಾನ್ಯ ಸಭಾಪತಿಯವರೇ, ಈಗ startup ಮಾಡುವುದಕ್ಕೆ ಅವಶ್ಯಕತೆ ಇರುವಂತಹ ಇನ್ಕ್ಯೂಬೇಟರ್ ಮತ್ತು startup ಗೆ ಬೇಕಾಗಿರುವುದನ್ನು ‘New Age Incubation Network’ ಎಂದು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕೊಟ್ಟಿದ್ದೇವೆ. ಐ.ಟಿ.ಪಾರ್ಕ್‌ಗಳು ಎನ್ನುವುದೇ ಬೇರೆ. ಮಾನ್ಯ ಪ್ರತಿಪಕ್ಷದ ನಾಯಕರು startup ಮತ್ತು ಇನ್ಕ್ಯೂಬೇಟರ್ ಬಗ್ಗೆ ಹೇಳುತ್ತಿದ್ದಾರೆ. ನಾವು ಕಾಲೇಜುಗಳಲ್ಲಿ ಇನ್ಕ್ಯೂಬೇಟರ್‌ಗಳನ್ನು startup ಮಾಡುವುದಕ್ಕೆ ಕೊಟ್ಟಿದ್ದೇವೆ. ಐ.ಟಿ.ಪಾರ್ಕ್‌ಗಳು . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ ಇದನ್ನು ಐ.ಟಿ.ಪಾರ್ಕ್‌ಗಳಿಗೆ ಕೊಡಬಾರದೆಂದು ಏನು ಇಲ್ಲ? The incubation centres can be started in the IT parks also. ನಾವು ಪ್ರಾರಂಭ ಮಾಡಿದ ಹಾಗೆ ಆಗುತ್ತದೆ. ನಾನು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಂತ್ರಿಯಾಗಿದ್ದಾಗ, I had started incubation centres in IT parks. ಇದನ್ನು ಮಾಡಬಾರದೆಂದು ಎಲ್ಲಿ ಇದೆ? ಖಾಸಗಿ ಕಾಲೇಜುಗಳಿಗೆ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಹೋಗಬೇಕೇ? ನಿಮ್ಮ ಸರ್ಕಾರ ಐ.ಟಿ.ಪಾರ್ಕ್‌ಗಳನ್ನು . . .

**ಡಾ॥ ಅಶ್ವಥ್ ನಾರಾಯಣ ಸಿ.ಎನ್:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾನು ಹೇಳುವುದನ್ನು ಮೊದಲು ಕೇಳಿಸಿಕೊಳ್ಳಬೇಕು. ಈಗಾಗಲೇ ಮಂಜೂರಾತಿಯಾಗಿರುವ ಐ.ಟಿ.ಪಾರ್ಕ್‌ಗಳಲ್ಲಿ ಇನ್ಕ್ಯೂಬೇಟರ್ ಸೆಂಟರ್‌ಗಳನ್ನು ಸ್ಥಾಪನೆ ಮಾಡಿ. ಯಾವುದೋ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಈ ಸೆಂಟರ್‌ಗಳನ್ನು ಪ್ರಾರಂಭ ಮಾಡುವುದರ ಬದಲು ಐ.ಟಿ.ಪಾರ್ಕ್‌ಗಳಲ್ಲಿ ಇನ್ಕ್ಯೂಬೇಟರ್ ಸೆಂಟರ್‌ಗಳನ್ನು ಪ್ರಾರಂಭ ಮಾಡಿ, ಇದನ್ನು ಹಂತ–ಹಂತವಾಗಿ ಅಭಿವೃದ್ಧಿಪಡಿಸಿ. ಇದರಲ್ಲಿ feasible ಇಲ್ಲ ಎಂದು ಹೇಳಬೇಡಿ. ಇಲ್ಲಿ ಸುಮಾರು ಐದೂವರೆ ಲಕ್ಷ ಜನ B.E. (Computer Science) ಮಾಡಿದಂತಹ ಪದವೀಧರರಾಗಿದ್ದಾರೆ. ನಾನು ಬ್ಯಾಂಕ್‌ಗೆ ಛೇರ್‌ಮನ್‌ನಾಗಿದ್ದು, ನಮ್ಮ ಬ್ಯಾಂಕಿನ ಕ್ಲರ್ಕ್ ಹುದ್ದೆಗೆ ಇವರುಗಳು ಅರ್ಜಿಯನ್ನು ಸಲ್ಲಿಸಿದ್ದಾರೆ. ಇವರು ನಂತರ ಮೆಡಿಕಲ್ ಕಾಲೇಜಿನ ಲ್ಯಾಬ್ ಅಸಿಸ್ಟೆಂಟ್‌ಗಳಾಗಿ ಕರ್ತವ್ಯ ನಿರ್ವಹಿಸಲು ಬರುತ್ತಿದ್ದಾರೆ. ಇವರು ಈ ರೀತಿ ಮಾಡಿದರೆ, ಆ ಪಧವೀದರರ ಪರಿಸ್ಥಿತಿ ಬಹಳ ಚಿಂತಾಜನಕವಾಗುತ್ತದೆ. ಎಳೆ ಸಿಕ್ಕರೆ ಹಚಡ ನುಂಗಬೇಕು. ಹಿಂದಿನ ಸರ್ಕಾರ ಐ.ಟಿ.ಪಾರ್ಕ್‌ಗಳನ್ನು ಮಂಜೂರಾತಿ ಮಾಡಿದೆ. ಅಲ್ಲಿ ಇನ್ಕ್ಯೂಬೇಟರ್ ಸೆಂಟರ್‌ಗಳನ್ನು ಪ್ರಾರಂಭ ಮಾಡುತ್ತೇವೆ ಎಂದು ಮಾನ್ಯ ಸಚಿವರು ಆಶ್ವಾಸನೆ ನೀಡಬೇಕು. B.E. graduates are virtually on street.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಬಿ.ಇ.ಕಂಪ್ಯೂಟರ್ ಸೈನ್ಸ್ ಮಾಡಿರುವಂತಹ ಪದವೀಧರರು . . .

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ B.E. (Computer Science), B.E. (Information Science), B.E. (Electronics and Communication) ಮಾಡಿದಂತಹ ಲಕ್ಷಾಂತರ ಜನ ಯುವಕರು ಬೆಂಗಳೂರಿನ ರಸ್ತೆಗಳಲ್ಲಿ ನಿಂತುಕೊಂಡು ಸುಮಾರು 3 ಸಾವಿರ ಹುದ್ದೆಗಳಿಗೆ ಅರ್ಜಿಯನ್ನು ಹಾಕುತ್ತಿದ್ದಾರೆ. ಇದರ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಚಿವರು ಏನಾದರೂ ವ್ಯವಸ್ಥೆ ಮಾಡಬೇಕು. ಬಜೆಟ್‌ನಲ್ಲಿ ಐ.ಟಿ.ಪಾರ್ಕ್‌ಗಳಿಗೆ ಮಂಜೂರಾತಿ ಆಗಿದ್ದು, ಇವರು ಐ.ಟಿ.ಮಂತ್ರಿಗಳಾಗಿ ಅಲ್ಲಿ ಇನ್ಕ್ಯೂಬೇಟರ್ ಸೆಂಟರ್‌ಗಳನ್ನು ಪ್ರಾರಂಭ ಮಾಡಬೇಕಲ್ಲವೇ?

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಇದರ ಬಗ್ಗೆ ಗಮನವನ್ನು ಹರಿಸಬೇಕು. ಇದನ್ನು ಪ್ರಾರಂಭ ಮಾಡುತ್ತೇವೆ, ಇಲ್ಲವೇ ಎಂಬುದನ್ನು ನಿಂತ ಕಾಲಿನಲ್ಲಿಯೇ ಹೇಳುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಮಾನ್ಯ ಸಚಿವರೇ ತಾವು ಪರಿಶೀಲನೆ ಮಾಡಬೇಕಾಗುತ್ತದೆ. ನಮ್ಮ ವಿರೋಧ ಪಕ್ಷದ ನಾಯಕರಾದ ಎಸ್.ಆರ್.ಪಾಟೀಲ್‌ರವರು ಒಂದು ವಿಚಾರವನ್ನು ಹೇಳಿದ್ದಾರೆ. ಅದರ ಬಗ್ಗೆ ತಾವು ಏನಾದರೂ ಹೇಳಬೇಕಲ್ಲವೇ? ಇದರ ಬಗ್ಗೆ ಪರಿಶೀಲನೆ ಮಾಡಿ, ಪ್ರಾರಂಭ ಮಾಡುವುದಕ್ಕೆ ಸಾಧ್ಯವಿದ್ದರೆ ಮಾಡಬಹುದು. ಇಲ್ಲದಿದ್ದರೆ . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದು ಆಗುವುದಿಲ್ಲವೆಂದು ಹೇಳಿದರೆ ಹೇಗೆ ಮತ್ತು ಇಷ್ಟು ಬೇಜವಾಬ್ದಾರಿ ಉತ್ತರವನ್ನು ನೀಡಿದರೆ ಹೇಗೆ? It is an irresponsible statement.

**ಡಾ॥ ಸಿ.ಎನ್ ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ನಾನು ಈ ರೀತಿ ವಿಚಾರಗಳ ಬಗ್ಗೆ ನೇರವಾಗಿ ಉತ್ತರವನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇನೆ ಎಂದರೆ; ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ ಎಂದು ನಾನು ಉತ್ತರವನ್ನು ಕೊಡಬಹುದಾಗಿತ್ತು. ಆದರೆ, ಮುಖ್ಯವಾಗಿ ಈಗಾಗಲೇ ಪ್ರಾರಂಭ ಮಾಡಿರುವಂತಹ ಐ.ಟಿ.ಪಾರ್ಕ್‌ಗಳು ಸಾಕಷ್ಟು ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸುತ್ತಿವೆ. ಸರ್ಕಾರದ ದುಡ್ಡಿನಲ್ಲಿ ಐ.ಟಿ.ಪಾರ್ಕ್‌ಗಳನ್ನು ಫೋಕಸ್ ಮಾಡಿ ಪ್ರಾರಂಭ ಮಾಡಬೇಕಾದರೆ, ಸುಮ್ಮನೆ exchequer money ಎಲ್ಲಾದರೂ invest ಮಾಡಬೇಕಾದರೆ, . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ದುಡ್ಡು ಇಲ್ಲದೆ ಇದ್ದರೆ ಇವರು ಹೇಗೆ ಇದನ್ನು ಸ್ಥಾಪನೆ ಮಾಡುತ್ತಾರೆ?

**ಡಾ॥ ಸಿ.ಎನ್ ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಇದಕ್ಕೆ ದುಡ್ಡು ಖರ್ಚಾಗುತ್ತದೆ. ಐ.ಟಿ. ಪಾರ್ಕ್ ಸ್ಥಾಪನೆಗೆ ಮೊದಲು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಪರಿಶೀಲನೆ ಮಾಡಲಾಗುವುದು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಮಾನ್ಯ ಸಚಿವರು ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎಂದು ಉತ್ತರವನ್ನು ನೀಡಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದರ ಬಗ್ಗೆ ಭರವಸೆ ಕೊಟ್ಟಿದ್ದಾರೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಇದರ ಬಗ್ಗೆ ಮಾನ್ಯ ಸಚಿವರು ಭರವಸೆಯನ್ನು ಕೊಟ್ಟಿರಬಹುದು. ಇದನ್ನು ಮಾಡುವುದಕ್ಕೆ ಅವಕಾಶ ಇದ್ದರೆ, ಅವರು ಇದನ್ನು ಪ್ರಾರಂಭ ಮಾಡುತ್ತಾರೆ.

**ಪ್ರಶ್ನೆ ಸಂಖ್ಯೆ: 569**

**(ಉತ್ತರವನ್ನು ಲಗತ್ತಿಲಾಗಿದೆ)**

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿರುವ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ 2006ರ ನಂತರ ನೇಮಕಗೊಂಡ ಸರ್ಕಾರಿ ನೌಕರರಿಗೆ ಯಾವ ರೀತಿಯಲ್ಲಿ ಎನ್.ಪಿ.ಎಸ್.ಯೋಜನೆಯನ್ನು ಜಾರಿಗೊಳಿಸಲಾಗಿದೆಯೋ, ಅದೇ ರೀತಿಯ ವ್ಯವಸ್ಥೆಯನ್ನು ಅನುದಾನಿತ ಶಿಕ್ಷಣ ಸಂಸ್ಥೆಯ ನೌಕರರಿಗೂ ಮಾಡಬೇಕೆಂಬ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ ಎಂದು ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳಿದ್ದೇನೆ. ಇದಕ್ಕೆ ಮಾನ್ಯ ಸಚಿವರು 'ಹೌದು' ಎನ್ನುವ ಬಹಳ ತೃಪ್ತಿಕರವಾದಂತಹ ಉತ್ತರವನ್ನು ಕೊಟ್ಟಿದ್ದಾರೆ.

ನನ್ನ ಮುಂದಿನ ಪ್ರಶ್ನೆ ಏನೆಂದರೆ, ಈ ಅನುದಾನಿತ ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳಿಗೆ ಎನ್.ಪಿ.ಎಸ್. ಯೋಜನೆಯನ್ನು ಜಾರಿಗೆ ತಂದರೆ ಸರ್ಕಾರದ ಮೇಲೆ ಎಷ್ಟು ಆರ್ಥಿಕ ಹೊರೆ ಬೀಳಲಿದೆ ಎಂಬ ಬಗ್ಗೆ ಮಾಹಿತಿಯನ್ನು ಸಂಗ್ರಹ ಮಾಡಲಾಗಿದೆಯೇ ಎಂಬ ಬಗ್ಗೆ ಮಾನ್ಯ ಸಚಿವರಿಗೆ ಪ್ರಶ್ನೆಯನ್ನು ಮಾಡಿದ್ದೇನೆ. ಮೊದಲನೇ ಪ್ರಶ್ನೆಗೆ ಮಾನ್ಯ ಸಚಿವರು ಇದರ ಬಗ್ಗೆ 'ಸರ್ಕಾರವು ಚಿಂತನೆ ನಡೆಸಿದೆ' ಎಂದು ಒಪ್ಪಿ 'ಹೌದು' ಎಂಬ ಉತ್ತರವನ್ನು ನೀಡಲಾಗಿದೆ. ಆದರೆ ಎರಡನೆಯ ಪ್ರಶ್ನೆಗೆ ಆರ್ಥಿಕ ಹೊರೆಯ ವಿವರಗಳನ್ನು ಸಂಗ್ರಹಿಸುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂಬ ಉತ್ತರವನ್ನು ನೀಡಿದ್ದಾರೆ. ಈ ಉತ್ತರದಿಂದ ನನಗೆ ಸ್ವಲ್ಪ ಬೇಜಾರು ಆಗಿದೆ. ಏಕೆಂದರೆ, ಇದರ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆ ಎಂದು 'ಹೌದು' ಎನ್ನುವ ಉತ್ತರವನ್ನು ನೀಡಿದಾಗ ಕನಿಷ್ಠಪಕ್ಷ ಸರ್ಕಾರ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್.ಪಿ.ಎಸ್. ಯೋಜನೆಯನ್ನು ಜಾರಿಗೆ ತಂದರೆ ಎಷ್ಟು ಆರ್ಥಿಕ ಹೊರೆ ಬೀಳುತ್ತದೆ ಎಂಬ ಬಗ್ಗೆ ಮಾಹಿತಿಯನ್ನು ಸಂಗ್ರಹ ಮಾಡಬಹುದಾಗಿತ್ತು. ಇದರ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸುವುದಿಲ್ಲವೆನ್ನುವ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ.

**(239) 09/03/2020/6:20/ಎಸ್‌ಪಿಆರ್/ಕೆಎಸ್**

**ಶ್ರೀ ಎಸ್.ವ್ಹಿ.ಸಂಕನೂರ(ಮುಂದು):-**

ಈ ಸಂದರ್ಭದಲ್ಲಿ ನಾನು ನಿಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, ಸಂವಿಧಾನದ ಅನುಚ್ಛೇದ–14 ಸಮಾನತೆಯನ್ನು ತಿಳಿಸುತ್ತದೆ ಅಂದರೆ ಎಲ್ಲರನ್ನೂ ಸಮಾನತೆಯ ದೃಷ್ಟಿಯಿಂದ ಕಾಣಬೇಕು. ಸರ್ಕಾರಿ ನೌಕರರನ್ನು ಯಾವ ರೀತಿ ಪರಿಗಣಿಸಲಾಗುತ್ತದೆಯೋ ಅದೇ ರೀತಿಯಾಗಿ ಅನುದಾನಿತ ನೌಕರರನ್ನೂ ಸಹ ಪರಿಗಣಿಸಬೇಕು ಹಾಗೂ ಅದೇ ರೀತಿಯಾದ ಸೌಲಭ್ಯಗಳನ್ನು ಒದಗಿಸಬೇಕೆಂದು ಸಂವಿಧಾನವು ಹೇಳುತ್ತದೆ. ಅದೇ ರೀತಿಯಾಗಿ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂದು ಸಂವಿಧಾನದ ಅನುಚ್ಛೇದ 39–ಡಿ ತಿಳಿಸುತ್ತದೆ. ಮುಂದುವರೆದು ಸರ್ಕಾರಿ ನೌಕರರನ್ನು ಒಂದು ರೀತಿಯಾಗಿ ಹಾಗೂ ಅನುದಾನಿತ ನೌಕರರನ್ನು ಮತ್ತೊಂದು ರೀತಿಯಾಗಿ ಪರಿಗಣಿಸಬಾರದೆಂಬುದಾಗಿ ತಿಳಿಸುತ್ತದೆ. ಇದಕ್ಕೆ ಪೂರಕವಾಗಿ ಬಹಳ ಮಹತ್ವದ ವಿಚಾರವೆಂದರೆ, ಭಾರತದ ಸರ್ವೋಚ್ಛ ನ್ಯಾಯಾಲಯವು ಹಲವಾರು ಬಾರಿ ತೀರ್ಪುಗಳನ್ನು ನೀಡಿದೆ. ಸರ್ಕಾರಿ ಶಿಕ್ಷಕರಿಗೆ ಯಾವ ವೇತನವನ್ನು ನೀಡಲಾಗುತ್ತದೆಯೋ ಅದೇ ವೇತನವನ್ನು ಅನುದಾನಿತ ಶಿಕ್ಷಕರಿಗೂ ಸಹ ನೀಡಬೇಕು. ಇದರಲ್ಲಿ ಯಾವುದೇ ರೀತಿಯಾದ ತಾರತಮ್ಯವನ್ನು ಮಾಡಬಾರದೆಂದು ತಿಳಿಸಿದೆ. ಈ ಎಲ್ಲಾ ವಿಚಾರಗಳ ಹಿನ್ನೆಲೆಯಲ್ಲಿ ಸರ್ಕಾರಿ ಹಾಗೂ ಅನುದಾನಿತ ಶಿಕ್ಷಕರುಗಳ ಮಧ್ಯೆ ತಾರತಮ್ಯ ಮಾಡಬಾರದು ಹಾಗೂ ಅನುದಾನಿತ ಶಿಕ್ಷಕರಿಗೆ ಮಲತಾಯಿ ಧೋರಣೆಯನ್ನು ತೋರಬಾರದು ಎಂದು ನಾನು ಕಳಕಳಿಯಿಂದ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಇದರ ಜೊತೆಗೆ ನಮ್ಮ ನೆರೆಯ ರಾಜ್ಯಗಳಾದ ಕೇರಳ, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಓಡಿಶಾಗಳಲ್ಲಿ ಅನುದಾನಿತ ಸಂಸ್ಥೆಯ ಶಿಕ್ಷಕರಿಗೂ ಸಹ ಇವತ್ತಿನ ದಿವಸ ಹೊಸ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿದ್ದಾರೆ. ಈ ಕಾರಣದಿಂದಾಗಿ ತಮ್ಮ ಮೂಲಕ ಸರ್ಕಾರಕ್ಕೆ ನನ್ನ ಕಳಕಳಿಯ ಪ್ರಾರ್ಥನೆ ಮತ್ತು ಒತ್ತಾಯಿಸುವುದೇನೆಂದರೆ, ದಯಮಾಡಿ ಅನುದಾನಿತ ಶಿಕ್ಷಕರಿಗೂ ಸಹ ಹೊಸ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಸ್ಪಷ್ಟವಾದ ಉತ್ತರವನ್ನು ನೀಡಲಾಗಿದೆ. ರಾಜ್ಯದ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ನೇಮಕಗೊಂಡ ಶಿಕ್ಷಕ ಹಾಗೂ ಉಪನ್ಯಾಸಕರುಗಳಿಗೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸುವುದಕ್ಕೆ ಚಿಂತನೆ ನಡೆಸಲಾಗಿದೆ; ಹಾಗೂ ಇದಕ್ಕೆ ಅವಕಾಶವಿದೆ. ಎನ್.ಪಿ.ಎಸ್.ನ್ನು ಕೊಡುವಾಗ ಅಲ್ಲಿ ನೌಕರ ಅಂದರೆ ಶಿಕ್ಷಕ ಹಾಗೂ ಉಪನ್ಯಾಸಕ ಹಾಗೂ ನಿಯೋಜಕ ಅಂದರೆ ಆಡಳಿತ ಮಂಡಳಿ ಎಂಬ ಎರಡು ಭಾಗಗಳಿವೆ. ಪಿಂಚಣಿ ಯೋಜನೆಗೆ ನೌಕರರು ಒಂದು ಭಾಗವನ್ನು ನೀಡಬೇಕು ಹಾಗೂ ಆಡಳಿತ ಮಂಡಳಿಯು ಮತ್ತೊಂದು ಭಾಗವನ್ನು ನೀಡಬೇಕು. Unfortunately, most of the managements, ಮತ್ತೊಂದು ಭಾಗವನ್ನು ಕೊಡುವುದಕ್ಕೆ ತಯಾರಿಲ್ಲ. ಈ ಕಾರಣಕ್ಕಾಗಿ ಅನುದಾನಿತ ಶಿಕ್ಷಕ ಹಾಗೂ ಉಪನ್ಯಾಸಕರುಗಳಿಗೆ ತೊಂದರೆಯಾಗುತ್ತಿದೆ. ಇದರಲ್ಲಿ ಸರ್ಕಾರದ ಯಾವುದೇ ಪಾತ್ರವಿಲ್ಲ. ಈ ಹಿಂದೆ ಶಿಕ್ಷಕರು ಎನ್.ಪಿ.ಎಸ್. ಬಗ್ಗೆ ಹೋರಾಟವನ್ನು ನಡೆಸಿದಾಗ ನಾನು ಹೋಗಿ, ಅವರೊಂದಿಗೆ ಚರ್ಚೆಯನ್ನು ಮಾಡಿದ್ದೇನೆ. ಆಡಳಿತ ಮಂಡಳಿಯವರು ಒಂದು ಭಾಗವನ್ನು ಕೊಡುವುದಿಲ್ಲವೆಂದು ತಿಳಿಸಿದಾಗ, ಅವರ ಮುಖಾಂತರವೇ ಹೇಗೆ ಕೊಡಿಸಬೇಕೆಂಬುದರ ಬಗ್ಗೆ ನಾವು ಯೋಚನೆ ಮಾಡಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಈ ಹಿಂದೆ 1985 ನೇ ಇಸ್ವಿಯಲ್ಲಿ ದಿವಂಗತ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ, ಶ್ರೀ ಮಂಜುನಾಥ್ ಎಂಬುವವರು ಶಿಕ್ಷಣ ಮಂತ್ರಿಗಳಾಗಿದ್ದರು. ಆಗಿನ ಸಂದರ್ಭದಲ್ಲಿ ಆಡಳಿತ ಮಂಡಳಿಯವರು ಶೇಕಡಾ 3 ರಷ್ಟರ ವಂತಿಗೆಯನ್ನು ನೀಡುತ್ತಿರಲಿಲ್ಲ. ಅಂದಿನಿಂದ ಎನ್.ಪಿ.ಎಸ್. ಯೋಜನೆಯು ಜಾರಿಗೊಳ್ಳುವವರೆಗೆ ಸರ್ಕಾರವೇ ಶೇಕಡಾ 3 ರಷ್ಟು ವಂತಿಗೆಯನ್ನು ನೀಡುತ್ತಾ ಬಂದಿದೆ. ಈ ಹಿಂದೆ ಶ್ರೀ ಸಿದ್ಧರಾಮಯ್ಯನವರ ನೇತೃತ್ವದ ಸರ್ಕಾರವು ಶೇಕಡಾ 10 ರಷ್ಟನ್ನು ಕೊಡುವುದಕ್ಕಾಗುವುದಿಲ್ಲವೆಂದು ತಿಳಿಸಲಾಗಿತ್ತು. ಈ ಹಿಂದೆ 1985 ನೇ ಇಸ್ವಿಯಿಂದ ಎನ್.ಪಿ.ಎಸ್. ಯೋಜನೆಯು ಜಾರಿಗೊಳ್ಳುವವರೆಗೂ ಸರ್ಕಾರವೇ ಶೇಕಡಾ 3 ರಷ್ಟು ಕೊಡುವ ಪದ್ಧತಿಯು ಜಾರಿಯಲ್ಲಿತ್ತು. ಮಾನ್ಯ ಸಚಿವರು ಹಿಂದಿನ ಕಡತಗಳನ್ನು ತೆಗೆದು ನೋಡಬಹುದು. ದಯಮಾಡಿ ಸರ್ಕಾರವು ಈ ವಿಚಾರದಲ್ಲಿ ಕನಿಷ್ಠ ಕ್ರಮಗಳನ್ನು ತೆಗೆದುಕೊಂಡರೆ, ಶಿಕ್ಷಕರಿಗೆ ಅನುಕೂಲವಾಗುತ್ತದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಹಳೆಯ ಪಿಂಚಣಿ ಯೋಜನೆಯಲ್ಲಿ ಸರ್ಕಾರಿ ನೌಕರರಿಗೆ ಯಾವ ರೀತಿಯಾಗಿ ಸರ್ಕಾರವು ಪಿಂಚಣಿಯನ್ನು ನೀಡುತ್ತಿತ್ತೋ, ಅದೇ ರೀತಿಯಾಗಿ ಅನುದಾನಿತ ಶಿಕ್ಷಕರಿಗೂ ಸಹ ಪಿಂಚಣಿಯನ್ನು ನೀಡುತ್ತಿತ್ತು. ಪೂರ್ಣ ಪ್ರಮಾಣದ ಪಿಂಚಣಿಯನ್ನು ಸರ್ಕಾರವು ನೀಡುತ್ತಿತ್ತು. ಆದರೆ ಈಗ ಭಾಗಶಃ ಅಂಶವನ್ನು ಆಡಳಿತ ಮಂಡಳಿಯವರು ನೀಡಬೇಕೆಂದರೆ, ಪಾಪ! ಅವರ ಹತ್ತಿರ ಹಣ ಎಲ್ಲಿದೆ? ನಾನು ಒಬ್ಬ ಶಿಕ್ಷಕನಾಗಿ, ಪ್ರಾಂಶುಪಾಲನಾಗಿ ಒಂದು ಸತ್ಯಾಂಶವನ್ನು ಹೇಳುತ್ತೇನೆ. ಕನ್ನಡ ಮಾಧ್ಯಮ ಶಾಲೆಗಳಲ್ಲಿ ಅಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರೇ ಮಕ್ಕಳ ಶುಲ್ಕವನ್ನು ಭರಿಸುತ್ತಾರೆ. ಅಂತಹ ಶಾಲೆಗಳ ಆಡಳಿತ ಮಂಡಳಿಯು ಪಿಂಚಣಿಗೆ ವಂತಿಗೆಯನ್ನು ನೀಡಬೇಕೆಂದು ಹೇಳಿದರೆ, ಅವರು ಎಲ್ಲಿಂದ ಮತ್ತು ಹೇಗೆ ನೀಡುತ್ತಾರೆ? ಈ ಮೊದಲು ಸರ್ಕಾರವು ಪಿಂಚಣಿಯನ್ನು ಹಿಡಿದು ವೇತನ ಪಾವತಿಸುತ್ತಿತ್ತು. ಆದರೆ, ಈಗ ಪಿಂಚಣಿಯನ್ನು ಸೇರಿಸಿ, ವೇತನವನ್ನು ನೀಡದಿರಲು ಕಾರಣವೇನು? ನೌಕರರ ಪಿಂಚಣಿಗೆ ಶಿಕ್ಷಕರಿಂದ ಅವರ ಪಾಲನ್ನು ವೇತನದಿಂದ ಪಡೆಯಿರಿ ಅದೇ ರೀತಿಯಾಗಿ ಸರ್ಕಾರವು ತನ್ನ ಪಾಲನ್ನೂ ಸಹ ನೀಡಬೇಕು. ಆಡಳಿತ ಮಂಡಳಿಯವರೇ ಪಿಂಚಣಿ ನೀಡಬೇಕೆಂದು ಹೇಳುವುದು ಎಲ್ಲಿಯಾದರೂ ಉಂಟೆ?

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಪ್ರಸ್ತುತ ವಿಚಾರದಲ್ಲಿ ಸರ್ಕಾರ ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸುವುದಕ್ಕೆ ಸಾಧ್ಯವಿಲ್ಲ. ಅನುದಾನಿತ ಶಾಲೆಗಳಿಗೆ ಸಂಬಳವನ್ನು ಯಾರು ಕೊಡುತ್ತಿದ್ದಾರೆ? ಸರ್ಕಾರವೋ ಅಥವಾ ಆಡಳಿತ ಮಂಡಳಿಯೋ? ಅನುದಾನಿತ ಶಾಲೆಗಳಿಗೆ ಸರ್ಕಾರವು ನೀಡುತ್ತಿದೆ. ಶಾಲೆ ನಡೆಸಲು ಬೇಕಾದ ಇನ್ನಿತರೆ ಪರಿಕರಗಳನ್ನು ಆಡಳಿತ ಮಂಡಳಿಯು ಉಪಯೋಗಿಸಿಕೊಳ್ಳುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಸಂಬಳವನ್ನು ಸರ್ಕಾರವು ನೀಡುತ್ತಿರುವಾಗ, ನೌಕರರ ಪಿಂಚಣಿ ಹಾಗೂ ಇನ್ನಿತರೆ ಆರ್ಥಿಕ ಸೌಲಭ್ಯಗಳನ್ನು ಸರ್ಕಾರವೇ ನೀಡಬೇಕಾಗುತ್ತದೆ. ನೌಕರರಿಗೆ ಯಾರು ಸಂಬಳ ಅಥವಾ ವೇತನವನ್ನು ಪಾವತಿಸುತ್ತಾರೋ, ಆ ಎಲ್ಲಾ circumstantial benefits ಗಳನ್ನು ಸರ್ಕಾರವೇ ನೀಡಬೇಕಾಗುತ್ತದೆ. ಈ ವಿಚಾರದಲ್ಲಿ ಸರ್ಕಾರವು ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಆಡಳಿತ ಮಂಡಳಿಗೆ ಆಯ್ಕೆ ನೀಡಿದ್ದೇ ತಪ್ಪು ಕ್ರಮವಾಗಿದೆ. ಎಲ್ಲಾ ನೌಕರರ ಸಂಬಳವನ್ನು ಸರ್ಕಾರವು ನೀಡಿ, ಅವರಿಗೆ ನೀಡಬೇಕಾದ ಪಿಂಚಣಿಯ ತೀರ್ಮಾನವನ್ನು ಆಡಳಿತ ಮಂಡಳಿಯವರಿಗೆ ನೀಡದರೆ, ಯಾವುದೋ ಒಂದು ಬಲವಾದ ಆಡಳಿತ ಮಂಡಳಿಗೆ ಅವತ್ತಿನ ದಿವಸ ಈ ಸರ್ಕಾರ ಮಣಿದಿರಬಹುದು; ಆದರೆ, ಸರ್ಕಾರವೇ ವೇತನ ಪಾವತಿಸುತ್ತಿರುವುದರಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರ್ಕಾರವೇ ಪಿಂಚಣಿಯನ್ನು ಪಾವತಿಸುವ ವ್ಯವಸ್ಥೆಯನ್ನು ಮಾಡಲೇಬೇಕೆನ್ನುವ ಆಗ್ರಹವನ್ನು ನಾನು ಮಾಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನೂತನ ಪಿಂಚಣಿ ಸೌಲಭ್ಯ ಜಾರಿಗೆ ಬಂದ ನಂತರ, ಆಡಳಿತ ಮಂಡಳಿಯವರು ಹಾಗೂ ನೌಕರರು ತಲಾ ಶೇಕಡಾ 10 ರಷ್ಟು ವಂತಿಗೆಯನ್ನು ನೀಡಬೇಕು ಎನ್ನುವ ಬಗ್ಗೆ ಸರ್ಕಾರವು ನಿಯಮಾವಳಿಗಳನ್ನು ಮಾಡಿದೆ. ನೂತನ ಪಿಂಚಣಿ ಸೌಲಭ್ಯ ಜಾರಿಗೆ ಬಂದ ನಂತರ, ಇದರ ವ್ಯಾಪ್ತಿಗೆ ಒಳಪಡುವ ಅನುದಾನಿತ ನೌಕರರು ಇಡೀ ರಾಜ್ಯದಲ್ಲಿ ಎಷ್ಟು ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ, ಆ ಪೈಕಿ ಒಬ್ಬನಿಗಾದರೂ ಸಹ ಆ ನೌಕರನ ವೇತನದಿಂದ ಪಿಂಚಣಿಯನ್ನು ಕಟಾಯಿಸಿ ಯಾವುದಾದರೂ ಖಾತೆಯಲ್ಲಿ ಜಮೆ ಮಾಡಿರುವ ಒಂದು ಉದಾಹರಣೆಯನ್ನು ಸರ್ಕಾರವು ನೀಡಬೇಕು. ಆಡಳಿತ ಮಂಡಳಿಯವರಿಂದಲೇ ನೌಕರರ ಪಿಂಚಣಿಗೆ ವಂತಿಕೆಯನ್ನು ಸರ್ಕಾರವು ಕೊಡಿಸಲಿ. ಒಬ್ಬ ನೌಕರನಿಗೆ ಸರ್ಕಾರವು ಪಿಂಚಣಿಯನ್ನು ಇದುವರೆವಿಗೆ ನೀಡಲಿಕ್ಕಾಗಲಿಲ್ಲ. ಈ ಹಿಂದೆ ಹಳೆಯ ಪಿಂಚಣಿ ಯೋಜನೆಯಲ್ಲಿ ಸರ್ಕಾರವು ಯಾವ ರೀತಿಯಾಗಿ ಅನುದಾನಿತ ಶಿಕ್ಷಕರಿಗೂ ಸಹ ಪಿಂಚಣಿಯನ್ನು ನೀಡುತ್ತಿತ್ತೋ, ದಯಮಾಡಿ, ಆ ವ್ಯವಸ್ಥೆಯನ್ನು ಪುನಃ ಜಾರಿಗೆ ತನ್ನಿ.

**ಶ್ರೀ ಎಸ್.ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಅನುದಾನಿತ ಶಿಕ್ಷಣ ಸಂಸ್ಥೆಗಳ ಶಿಕ್ಷಕರ ನೇಮಕಾತಿಯನ್ನು ಆಡಳಿತ ಮಂಡಳಿಯಿಂದಲೇ ಮಾಡಲಾಗುತ್ತದೆ, ಅಂದರೆ, ಸರ್ಕಾರ employer ಅಲ್ಲ. The Government is not the employer for the teachers of Aided Educational Institutions. ವಿರೋಧ ಪಕ್ಷದ ಸದಸ್ಯರಿಗೆ ನನಗಿಂತ ತುಂಬಾ ಹೆಚ್ಚು ಅನುಭವವಿರುವುದರಿಂದ ಅವರು ನನಗೆ ಸಹಾಯವನ್ನು ಮಾಡಬೇಕು. For the teachers of Aided Educational Institutions Management is the employer. ಎನ್.ಪಿ.ಎಸ್. ಯೋಜನೆಯಲ್ಲಿ ಪಿಂಚಣಿಯ ಒಂದು ಭಾಗವನ್ನು ನೌಕರ ಅಂದರೆ ಶಿಕ್ಷಕ ಹಾಗೂ ಮತ್ತೊಂದು ಭಾಗವನ್ನು ಆಡಳಿತ ಮಂಡಳಿಯವರು ಕೊಡಬೇಕು. ಸರ್ಕಾರಿ ನೌಕರರಿಗೆ ಸರ್ಕಾರವೇ employer ಆಗಿರುವುದರಿಂದ ಸರ್ಕಾರವು ನೌಕರರ ಪಿಂಚಣಿಗೆ ವಂತಿಕೆಯನ್ನು ನೀಡುತ್ತದೆ. ಇಂತಹ ಪರಿಸ್ಥಿತಿ ಇರುವುದರಿಂದ ಸಮಸ್ಯೆಯುಂಟಾಗಿದೆ. ಮಾನ್ಯ ಸದಸ್ಯರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಸ್ತಾಪಿಸಿದಂತೆ, ಆಡಳಿತ ಮಂಡಳಿಯವರು ನೌಕರರ ಪಿಂಚಣಿಗೆ ವಂತಿಕೆಯನ್ನು ನೀಡುತ್ತಿಲ್ಲ. ಮಾಜಿ ಶಿಕ್ಷಣ ಸಚಿವರಾಗಿ ಅನುಭವ ಹೊಂದಿರುವ, ಸರ್ಕಾರಕ್ಕೆ ಸಲಹೆ ನೀಡಿರುವ ಹಾಗೂ ಸರ್ಕಾರಕ್ಕೆ ಮಾರ್ಗದರ್ಶನ ಮಾಡುತ್ತಿರುವ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು 1985 ನೇ ಸಾಲಿನಿಂದ ಸರ್ಕಾರವೇ ನೌಕರರಿಗೆ ಶೇಕಡಾ 3.5 ರಷ್ಟು ವಂತಿಗೆಯನ್ನು ನೀಡುತ್ತಿದೆ ಎನ್ನುವ ಮಾಹಿತಿಯನ್ನು ನೀಡಿದ್ದಾರೆ. ಇದಕ್ಕೆ ಸಂಬಂಧಪಟ್ಟ ಕಡತವನ್ನು ತರಿಸಿ ನಾನು ಪರಿಶೀಲನೆ ಮಾಡುತ್ತೇನೆ. ಈ ವಿಚಾರದಲ್ಲಿ ಸರ್ಕಾರವು ಯಾವ ರೀತಿಯಾದ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೋ ಅಂತಹ ಕ್ರಮಗಳನ್ನು ತೆಗೆದು ಕೊಳ್ಳಲಾಗುವುದು. ಸದನದಲ್ಲಿ ಉಪಸ್ಥಿತರಿರುವ ಗಣಿ ಮತ್ತು ಭೂ ವಿಜ್ಞಾನ ಸಚಿವರು ಯಾವತ್ತಿಗೂ ಸಹ ಶಿಕ್ಷಣ ಸಚಿವರಾಗಬಾರದು ಎಂಬುದಾಗಿ ಹೇಳುತ್ತಾರೆ.

**ಶ್ರೀ ಸಿ.ಸಿ.ಪಾಟೀಲ (ಗಣಿ ಮತ್ತು ಭೂ ವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಶಿಕ್ಷಣ ಸಚಿವರಾದವರು ವಿಧಾನ ಪರಿಷತ್ತಿನ ಸದನಕ್ಕೆ ಬರಬಾರದು ಎಂಬುದಾಗಿ ನಾನು ಹೇಳಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ನಾನೊಂದು ಸಂಗತಿಯನ್ನು ಹೇಳಲಿಚ್ಛಿಸುತ್ತೇನೆ. ಈ ಹಿಂದೆ ಒಂದು ಬಾರಿ ದಿವಂಗತ ಬಂಗಾರಪ್ಪನವರು ಮತ್ತು ಶ್ರೀ ವೀರಪ್ಪ ಮೋಯ್ಲಿರವರು ಇಬ್ಬರೂ ಸಹ ಮುಖ್ಯಮಂತ್ರಿಗಳ ಹುದ್ದೆಯ ಆಕಾಂಕ್ಷಿಗಳಾಗಿದ್ದರು. ಆ ಸಂದರ್ಭದಲ್ಲಿ ಅಂತೂ ಬಂಗಾರಪ್ಪನವರು ಮುಖ್ಯಮಂತ್ರಿಗಳಾದರು. ಆಗ ಬಂಗಾರಪ್ಪನವರು ವೀರಪ್ಪ ಮೋಯ್ಲಿರವರನ್ನು ಶಿಕ್ಷಣ ಮಂತ್ರಿಗಳಾಗಿ ನೇಮಕ ಮಾಡಿದರು. ಆ ಸಂದರ್ಭದಲ್ಲಿ ವೀರಪ್ಪ ಮೋಯ್ಲಿರವರನ್ನು ಏಕೆ ಶಿಕ್ಷಣ ಮಂತ್ರಿಗಳಾಗಿ ನೇಮಕ ಮಾಡಿದ್ದಿರೆಂದು ನನಗೆ ತಿಳಿದಿದೆ, ಏಕೆಂದರೆ, ಅವರು ನಿಮ್ಮ ಹುದ್ದೆಯ ಆಕಾಂಕ್ಷಿಗಳಾಗಿದ್ದವರು, ಅವರ ಸತ್ವವನ್ನು ತಿಳಿಯಿರಿ ಎಂಬ ಮಾತನ್ನು ನಾನು ಹೇಳಿದೆ.

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ನಾನೂ ಸಹ ಒಂದು ಪ್ರಸಂಗವನ್ನು ಹೇಳಲಿಚ್ಛಿಸುತ್ತೇನೆ. ಈ ಹಿಂದೆ ಶ್ರೀ ತನ್ವೀರ್ ಸೇಠ್‌ನವರು ಶಿಕ್ಷಣ ಮಂತ್ರಿಗಳಾಗಿದ್ದಾಗ, ನನಗೆ ಕಿವಿ ಮಾತೊಂದನ್ನು ಹೇಳಿದ್ದರು. ಶ್ರೀ ತನ್ವೀರ್ ಸೇಠ್‌ನವರಿಗೆ ಏಟಾಗಿರುವುದರಿಂದ ಸ್ವಲ್ಪ ಮೆತ್ತಗೆ ಅವರು ಮಾತನಾಡುತ್ತಾರೆ. ಅವರು ನನ್ನನ್ನು ಕುರಿತು, "ಆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶ್ರೀರಾಮಚಂದ್ರನಿಗೆ 14 ವರ್ಷದ ವನವಾಸದ ಕಷ್ಟ; ಶಿಕ್ಷಣ ಸಚಿವರಿಗೆ ಈ 14 ವಿಧಾನ ಪರಿಷತ್ತಿನ ಸದಸ್ಯರ ಕಷ್ಟ" ಎಂಬುದಾಗಿ ಹೇಳಿದರು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಚಿವರೇ, ನಾವುಗಳೆಲ್ಲರೂ ನಿಮ್ಮ ಪರವಾಗಿದ್ದೇವೆ.

**ಶ್ರೀ ಎಸ್.ವ್ಹಿ.ಸಂಕನೂರು:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ನಿಮ್ಮ ಅವಧಿ ಮುಗಿದಿದೆ. ಈಗ ಮಾನ್ಯ ಹೆಚ್.ಎಂ.ರಮೇಶ್ ಗೌಡ ರವರು ಪ್ರಶ್ನೆಯನ್ನು ಕೇಳಿದ್ದಾರೆ.

**ಶ್ರೀ ಎಸ್.ವ್ಹಿ.ಸಂಕನೂರು:-** ಮಾನ್ಯ ಸಭಾಪತಿಯವರೇ, ಶಿಕ್ಷಣ ಸಚಿವರನ್ನು ವಿನಂತಿಸಿಕೊಳ್ಳುವುದೇನೆಂದರೆ, ಎನ್.ಪಿ.ಎಸ್. ಯೋಜನೆಯನ್ನು ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಜಾರಿಗೊಳಿಸಿದರೆ, ಸರ್ಕಾರಕ್ಕೆ ಎಷ್ಟು ಆರ್ಥಿಕ ಹೊರೆಯುಂಟಾಗುತ್ತದೆ ಎಂಬುದರ ಬಗ್ಗೆ ಲೆಕ್ಕವನ್ನು ನೀಡಿಲ್ಲ. ಈ ವಿಚಾರದಲ್ಲಿ ನನ್ನ ಕಳಕಳಿಯ ವಿನಂತಿ ಏನೆಂದರೆ, . . .

**ಸಭಾಪತಿಯವರು:-** ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ.

**ಶ್ರೀ ಎಸ್.ವ್ಹಿ.ಸಂಕನೂರು:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಸಚಿವರು ಲೆಕ್ಕವನ್ನು ಮಾಡಲಿ.

**ಪ್ರಶ್ನೆ ಸಂಖ್ಯೆ 540**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ):-** ಉತ್ತರವನ್ನು ಒದಗಿಸಲಾಗಿದೆ.

**ಶ್ರೀ ಹೆಚ್.ಎಂ.ರಮೇಶ ಗೌಡ:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಗೆ ಸರ್ಕಾರವು ಉತ್ತರವನ್ನು ನೀಡಿದೆ. ಆದರೆ, ಕ್ರಮ ಸಂಖ್ಯೆ (ಆ) ರಲ್ಲಿ ಕೇಳಿರುವ ಪ್ರಶ್ನೆಗೆ ಸರ್ಕಾರವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀಡಿರುವ ಉತ್ತರವು ತಾಳೆಯಾಗುವುದಿಲ್ಲ. ಸರ್ಕಾರವು ಯಾವ ರೀತಿಯಾದ ಕ್ರಮಗಳನ್ನು ತೆಗೆದುಕೊಂಡಿದೆ ಎಂಬ ಪ್ರಶ್ನೆಯನ್ನು ನಾನು ಕೇಳಿದ್ದೇನೆ.

**(240)/9-3-2020/6-30/ಎಲ್ಎಂ/ಜಿಆರ್**

**ಶ್ರೀ ಹೆಚ್.ಎಂ.ರಮೇಶ ಗೌಡ (ಮುಂದು):-**

ಮಾನ್ಯ ಸಭಾಪತಿಗಳೆ, ನನ್ನ ಎರಡನೆ ಪ್ರಶ್ನೆ, ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲ ಸೌಲಭ್ಯಗಳು ಲಭ್ಯವಿದೆಯೇ; ಹಾಗಿದ್ದಲ್ಲಿ ಜನರು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಕಾರಣವೇನು ಎನ್ನುವುದಕ್ಕೆ ಸರ್ಕಾರ ಕೊಟ್ಟಿರುವ ಉತ್ತರ ಈ ರೀತಿಯಾಗಿದೆ, ರಾಜ್ಯದಲ್ಲಿರುವ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರು, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು, ಶುಶ್ರೂಷಕರು, ಪ್ರಯೋಗ ಶಾಲಾ ತಂತ್ರಜ್ಞರು, ನೇತ್ರಾಧಿಕಾರಿಗಳು, ಕ್ಷ-ಕಿರಣ ತಂತ್ರಜ್ಞರು ಮುಂತಾದ ಸಿಬ್ಬಂದಿಗಳನ್ನು ಹಾಗೂ ರೋಗ ಪತ್ತೆಗೆ ಮತ್ತು ಚಿಕಿತ್ಸೆಗೆ ಬೇಕಾಗುವಂತಹ ಎಕ್ಸ್‌ರೇ, ಅಲ್ಟ್ರಾಸೌಂಡ್, ಪ್ರಯೋಗಶಾಲಾ ಉಪಕರಣಗಳು, ಡಯಾಲಿಸಿಸ್, ಐ.ಸಿ.ಯು., ಶಸ್ತ್ರಚಿಕಿತ್ಸಾ ಘಟಕ, ಐ.ಎನ್.ಸಿ.ಯು., ಮುಂತಾದ ಸೌಲಭ್ಯಗಳೊಂದಿಗೆ. .....

**ಸಭಾಪತಿಯವರು:-** ಉತ್ತರದಲ್ಲಿ ಇದೆ. ನೀವು ಪ್ರಶ್ನೆಯನ್ನು ಕೇಳಿ.

**ಶ್ರೀ ಹೆಚ್.ಎಂ.ರಮೇಶ ಗೌಡ:-** ಮಾನ್ಯ ಸಭಾಪತಿಗಳೆ, ನಾನು ಕೇಳಿರುವ ಪ್ರಶ್ನೆಗೂ ಮತ್ತು ಸರ್ಕಾರ ಕೊಟ್ಟಿರುವ ಉತ್ತರಕ್ಕೂ ಯಾವುದೇ ಸಂಬಂಧವಿಲ್ಲ. ಅದಕ್ಕಾಗಿ ನಾನು ಓದುತ್ತಿದ್ದೇನೆ. ತಪ್ಪು ಮಾಡಿದವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎನ್ನುವುದು ನನ್ನ ಪ್ರಶ್ನೆ. ನನ್ನ ಮೂರನೇ ಪ್ರಶ್ನೆ ಎಂದರೆ, ಸರ್ಕಾರಿ ಆಸ್ಪತ್ರೆಗಳು ಸಮಯಕ್ಕೆ ಸರಿಯಾಗಿ ಸಿಬ್ಬಂದಿಗಳು ಸಿಗುವುದಿಲ್ಲ ಎಂಬ ದೂರುಗಳಿಗೆ ಸರ್ಕಾರ ಕೈಗೊಂಡ ಶಿಸ್ತು ಕ್ರಮಗಳೇನು, ಎನ್ನುವುದಕ್ಕೆ, ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಬ್ಬಂದಿಗಳು ಸಮಯಕ್ಕೆ ಸರಿಯಾಗಿ ಬರುವ ಸಲುವಾಗಿ ಎಲ್ಲಾ ಆಸ್ಪತ್ರೆಗಳಲ್ಲಿ ಆಧಾರ್ ಆಧಾರಿತ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆ ಮಾಡಲಾಗಿದೆ. ಬಯೋಮೆಟ್ರಿಕ್ ಹಾಜರಾತಿ ಮೂಲಕ ಕರ್ತವ್ಯಕ್ಕೆ ಹಾಜರಾಗದ ಸಿಬ್ಬಂದಿಗಳ ವಿರುದ್ಧ ಸಂಬಂಧಪಟ್ಟ ನಿಯಂತ್ರಣಾಧಿಕಾರಿಗಳು ಕರ್ನಾಟಕ ನಾಗರೀಕ ಸೇವಾ( ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ಪ್ರಕಾರ ಶಿಸ್ತು ಕ್ರಮ ಜರುಗಿಸಲಾಗುತ್ತಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಇದುವರೆಗೆ ಯಾರ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ ಎನ್ನುವ ಉತ್ತರವನ್ನು ಕೊಟ್ಟಿರುವುದಿಲ್ಲ.

**ಸಭಾಪತಿಯವರು:–** ನಿಮಗೆ ಉತ್ತರ ಬಂದಿದೆ, ಅದನ್ನೇ ಓದುವುದಲ್ಲ. ಪ್ರಶ್ನೆಯನ್ನು ಕೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸದಸ್ಯರು ಪ್ರಶ್ನೆಯನ್ನು ಕೇಳಬೇಕು. ಸರ್ಕಾರದಿಂದ ಉತ್ತರವನ್ನು ಕೊಡುತ್ತೇವೆ.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಗಳೆ, ಉತ್ತರ ಸರಿ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಯಾವ ಉತ್ತರ ಸರಿ ಇಲ್ಲ ಎನ್ನುವುದನ್ನು ಹೇಳಿ.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಗಳೆ, ಯಾವುದೇ ಶಿಸ್ತು ಕ್ರಮವನ್ನು ತೆಗೆದುಕೊಂಡಿರುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):–** ಮಾನ್ಯ ಸಭಾಪತಿಗಳೆ, ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ಆಸ್ಪತ್ರೆಗಳೆಷ್ಟು ಹಾಗೂ ಸಿಬ್ಬಂದಿ ವರ್ಗದವರ ಒಟ್ಟು ಅಂದಾಜು ಎಷ್ಟು ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಅದಕ್ಕೆ ರಾಜ್ಯದಲ್ಲಿ ಒಟ್ಟು 2,749 ಸರ್ಕಾರಿ ಆಸ್ಪತ್ರೆಗಳಿವೆ, 39,706 ಸಿಬ್ಬಂದಿಗಳಿದ್ದಾರೆ, ಹೊರಗುತ್ತಿಗೆ ಸಿಬ್ಬಂದಿಗಳನ್ನು ಸೇರಿಸಿದರೆ 60,442 ಸಿಬ್ಬಂದಿಗಳಿದ್ದಾರೆ ಎಂದು ಅವರು ಪ್ರಶ್ನೆಗೆ ಉತ್ತರವನ್ನು ಕೊಡಲಾಗಿದೆ. ಮಾನ್ಯ ಸದಸ್ಯರ ಉಪಪ್ರಶ್ನೆಯಲ್ಲಿ ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲ ಸೌಲಭ್ಯಗಳು ಲಭ್ಯವಿದೆಯೇ, ಎಂದು ಕೇಳಿದ್ದಾರೆ. ಅದಕ್ಕೆ ಸರ್ಕಾರದಿಂದ ಹೌದು ಎನ್ನುವ ಉತ್ತರವನ್ನು ಕೊಡಲಾಗಿದೆ ಇದ್ದರೂ ಸಹಿತ ಜನರು ಖಾಸಗಿ ಆಸ್ಪತ್ರೆಗೆ ಏಕೆ ಹೋಗುತ್ತಾರೆ ಎಂದು ಕೇಳಿದ್ದಾರೆ, ಅದಕ್ಕೆ ಸರ್ಕಾರದಿಂದ ತಜ್ಞ ವೈದ್ಯರು, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ನಮ್ಮಲ್ಲಿ ಇದ್ದಾರೆ. ಶುಶ್ರೂಷಕರು ಇದ್ದಾರೆ. ಮೂಲಭೂತ ಸೌಕರ್ಯಗಳಾದ ಎಕ್ಸರೆ, ಅಲ್ಟ್ರಾಸೌಂಡ್, ಡಯಾಲಿಸಿಸ್ ಈ ಎಲ್ಲಾ ಸೌಲಭ್ಯಗಳಿವೆ.

**ಸಭಾಪತಿಯವರು:–** ಸದಸ್ಯರಿಗೆ ಓದಬೇಡಿ ಪ್ರಶ್ನೆಯನ್ನು ಕೇಳಿ ಎಂದು ಹೇಳಲಾಗಿದೆ. ಆದರೆ ಮಂತ್ರಿಗಳು ಉತ್ತರವನ್ನು ಓದುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಉತ್ತರ ಕೊಡಲು ಇದೆಲ್ಲವನ್ನು ಹೇಳುತ್ತಿದ್ದೇನೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಮರಿತಿಬ್ಬೇಗೌಡ:–** ಎಷ್ಟು ಸಿಬ್ಬಂದಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ ಎನ್ನುವುದನ್ನು ಹೇಳಿದರೆ ಸಾಕು.

**ಶ್ರೀ ಟಿ.ಎ. ಶರವಣ:–** ಆರೋಗ್ಯ ಸಚಿವರಿಗೆ ಎಲ್ಲಾ ಗೊತ್ತಿರುತ್ತದೆ. ಸಭಾನಾಯಕರು ಉತ್ತರ ಹೇಳುತ್ತಿರುವುದರಿಂದ ಅವರು ಉತ್ತರವನ್ನು ಓದುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಸರ್ಕಾರಿ ಆಸ್ಪತ್ರೆಗಳಲ್ಲಿ ಸಮಯಕ್ಕೆ ಸರಿಯಾಗಿ ಸಿಬ್ಬಂದಿಗಳು ಸಿಗುವುದಿಲ್ಲ ಎಂಬ ದೂರುಗಳಿಗೆ ಸರ್ಕಾರ ಕೈಗೊಂಡ ಶಿಸ್ತು ಕ್ರಮಗಳೇನು; ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಸಿಬ್ಬಂದಿಗಳು ಸರಿಯಾದ ಸಮಯಕ್ಕೆ ಆಸ್ಪತ್ರೆಗಳಿಗೆ ಬರಬೇಕು ಎಂದು ಎಲ್ಲಾ ಆಸ್ಪತ್ರೆಗಳಲ್ಲಿ ಆಧಾರ್ ಆಧಾರಿತ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯನ್ನು ಮಾಡಲಾಗಿದೆ. ಈ ಮೂಲಕ ಕರ್ತವ್ಯಕ್ಕೆ ಹಾಜರಾಗದ ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ. ಗುರುತರವಾದ ವಿಚಾರದಲ್ಲಿ ಯಾವುದಾದರೂ ಆಸ್ಪತ್ರೆಯಲ್ಲಿ ಸಿಬ್ಬಂದಿಗಳು, ವೈದ್ಯಾಧಿಕಾರಿಗಳು ಸಕಾಲದಲ್ಲಿ ಬಂದಿರುವುದಿಲ್ಲ ಎಂದು ತಮಗೆ ಕಂಡು ಬಂದರೆ ಅದನ್ನು ನಮಗೆ ತಿಳಿಸಿದರೆ ಅಂತಹ ಸಿಬ್ಬಂದಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರದು.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಗಳೆ, ನನ್ನ ಪ್ರಶ್ನೆ ಇನ್ನು ಪೂರ್ತಿಯಾಗಿರುವುದಿಲ್ಲ. ಇದು ಮುಗಿದ ಮೇಲೆ ಬೇರೆಯವರಿಗೆ ಅವಕಾಶವನ್ನು ಕೊಡಿ. ನನ್ನ ನಾಲ್ಕನೆ ಪ್ರಶ್ನೆ, ಅನೇಕ ಅಸ್ಪತ್ರೆಗಳಲ್ಲಿ ಲಸಿಕೆಗಳನ್ನು ತಪ್ಪಾಗಿ ನೀಡುವುದರಿಂದ ಜನರು ಮರಣ ಹೊಂದುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಬೇಜವಾಬ್ದಾರಿಯಾಗಿ ನಡೆದುಕೊಳ್ಳದಂತೆ ಸರ್ಕಾರದಿಂದ ಯಾವ ರೀತಿಯ ಸೂಚನೆಗಳನ್ನು ಆಸ್ಪತ್ರೆ ಸಿಬ್ಬಂದಿಗಳಿಗೆ ನೀಡಲಾಗಿದೆ ಎನ್ನುವ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ನಾಲ್ಕು ಹಂತದಲ್ಲಿ ಲಸಿಕೆಗಳನ್ನು ನೀಡಲಾಗುತ್ತಿದೆ. ಪೋಲಿಯೋ, ಕಾಮಾಲೆಗೆ, ನಿಮೋನಿಯಾಗೆ ಸೇರಿದಂತೆ ನಾಲ್ಕು ರೀತಿಯ ಲಸಿಕೆಗಳನ್ನು ನೀಡಲಾಗುತ್ತಿದೆ. ಕೊಡುತ್ತಿರುವ ಲಸಿಕೆಗಳ ವಿಚಾರದಲ್ಲಿ ಪೂರ್ಣಪ್ರಮಾಣದ ತರಬೇತಿಯನ್ನು ಕೊಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ಲಸಿಕೆ ಕೊಟ್ಟ ಕಾರಣದಿಂದ ಮೃತರಾಗಿದ್ದಾರೆ ಎನ್ನುವ ಯಾವುದೇ ದೂರು ಬಂದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಗಳೆ, ತಪ್ಪಾಗಿ ಉತ್ತರ ನೀಡಬಾರದು. ಆಸ್ಪತ್ರೆಗಳಲ್ಲಿ ಲಸಿಕೆಗಳನ್ನು ತಪ್ಪಾಗಿ ನೀಡುವುದರಿಂದ ಜನರು ತೊಂದರೆಗೆ ಒಳಗಾಗುತ್ತಿದ್ದಾರೆ. ಉದಾಹರಣೆಗೆ ಮಿಂಟೋ ಕಣ್ಣಾಸ್ಪತ್ರೆಯಲ್ಲಿ ನಿಮ್ಮ ವೈದ್ಯಾಧಿಕಾರಿಗಳ ಬೇಜಾಬ್ದಾರಿತನದಿಂದ 4–5 ಜನರು ಕಣ್ಣು ಕಳೆದುಕೊಂಡಿದ್ದಾರೆ. ಅದರ ಬಗ್ಗೆ ಉತ್ತರದಲ್ಲಿ ಏನು ಪ್ರಸ್ತಾಪ ಮಾಡಿರುವುದಿಲ್ಲ. ನಿಮ್ಮ ಅಧಿಕಾರಿಗಳು ಸಚಿವರ ದಿಕ್ಕನ್ನು ತಪ್ಪಿಸಿ ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ಅಂತಹ ಅಧಿಕಾರಿಗಳ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಮಿಂಟೋ ಆಸ್ಪತ್ರೆಯಲ್ಲಿ ಕಣ್ಣಿನ ಚಿಕಿತ್ಸೆ ಮಾಡುವಾಗ ಕೆಲವು ಜನರ ಕಣ್ಣುಗಳಿಗೆ ಅನ್ಯಾಯವಾಗಿದ್ದ ಸಮಯದಲ್ಲಿ ಇರುವ ಅಧಿಕಾರಿಗಳು ನಮ್ಮವರು ಆಗಿರಲಿಲ್ಲ, ನಿಮ್ಮ ಅಧಿಕಾರಿಗಳೇ ಆಗಿದ್ದರು. ಇದು ಆಗಿ ತುಂಬ ದಿವಸಗಳಾಗಿವೆ. ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಇದರ ಬಗ್ಗೆ ಮಾತನಾಡಿದೆ.

**ಶ್ರೀ ಟಿ.ಎ. ಶರವಣ:–** ಅದಕ್ಕಾಗಿಯೇ ನಾವು ಇಲ್ಲಿ ಕುಳಿತಿದ್ದೇವೆ, ತಾವು ಅಲ್ಲಿ ಕುಳಿತ್ತಿದ್ದೀರಿ. ಆ ಮಾತನ್ನು ವಾಪಸ್ ತೆಗೆದುಕೊಳ್ಳಿ. ಈಗಲಾದರೂ ಕ್ರಮ ತೆಗೆದುಕೊಳ್ಳಿ. ಇನ್ನು ಸ್ವಲ್ಪ ದಿನಗಳಲ್ಲಿ ಅಲ್ಲಿಗೆ ಮತ್ತೆ ಬರುತ್ತೇವೆ.

**ಡಾ: ತೇಜಸ್ವಿನಿ ಗೌಡ:–** ಪ್ರಶ್ನೆಯನ್ನು ಕೇಳಿ ರಮೇಶ್‌ರವರೆ.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಗಳೆ, ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಿಂಟೋ ಆಸ್ಪತ್ರೆಯಲ್ಲಿ ಕೊಟ್ಟಿರುವುದು ಲಸಿಕೆಯಲ್ಲ, ನೇತ್ರ ಚಿಕಿತ್ಸೆಗೆ ಸಂಬಂಧಪಟ್ಟಿರುವುದು.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ.?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಹಿಂದಿನ ಸರ್ಕಾರ ಇದ್ದಾಗ ನಾನು ವಿರೋಧ ಪಕ್ಷದ ನಾಯಕನಾಗಿದ್ದೆ. ಆಗ ನಾನು ಮಿಂಟೋ ಆಸ್ಪತ್ರೆಗೆ ಭೇಟಿ ನೀಡಿ ಎಲ್ಲವನ್ನು ತಿಳಿದುಕೊಂಡಿದ್ದೇನೆ. ಅಲ್ಲಿ ಸುಮಾರು 30 ಜನರು ಕಣ್ಣು ಕಳೆದುಕೊಂಡು ಕುರುಡರಾಗಿದ್ದಾರೆ. ಅವರಿಗೆ ಪರಿಹಾರ ಕೊಡಬೇಕು ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ ಹಿನ್ನೆಲೆಯಲ್ಲಿ, ಹಿಂದಿನ ಸರ್ಕಾರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಬಂಧಪಟ್ಟ ವೈದ್ಯರ ತನಿಖೆ ಮಾಡಲು ಆದೇಶ ಮಾಡಿತ್ತು. ಮುಂದೆ ಏನು ಕ್ರಮವಾಗಿದೆ ಎನ್ನುವುದನ್ನು ವರದಿ ತರಿಸಿಕೊಂಡು ಹೇಳುತ್ತೇನೆ. ಲಸಿಕೆ ವಿಚಾರ ಬೇರೆ, ಮಿಂಟೋ ಆಸ್ಪತ್ರೆಯಲ್ಲಿ ನಡೆದಿರುವ ಘಟನೆ ಬೇರೆ. ಮಿಂಟೋ ಆಸ್ಪತ್ರೆಯಲ್ಲಿ ನೇತ್ರಚಿಕಿತ್ಸೆಗೆ ಸಂಬಂದಪಟ್ಟಿದ್ದು.

**ಶ್ರೀ ಹೆಚ್.ಎಂ.ರಮೇಶ ಗೌಡ:-** ಇದು ಲಸಿಕೆಯೇ ಅಲ್ಲವೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಅದು ನೇತ್ರ ಚಿಕಿತ್ಸೆ. ಲಸಿಕೆ ಅಲ್ಲ.

**ಡಾ:ತೇಜಸ್ವಿನಿ ಗೌಡ:-** ಅದು ಲಸಿಕೆಯಲ್ಲ, ನೇತ್ರಕ್ಕೆ ಹಾಕುವ ಹನಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ಸದಸ್ಯರು ಪ್ರಶ್ನೆಯನ್ನು ಕೇಳಿದ ಮೇಲೆ ಅದಕ್ಕೆ ಪೂರಕವಾದ ಪ್ರಶ್ನೆಯನ್ನು ಕೇಳಬೇಕು. ಮೂಲ ಪ್ರಶ್ನೆಗೆ ಪೂರಕವಾದ ಪ್ರಶ್ನೆಯನ್ನು ಕೇಳಿದ್ದರೆ ಉತ್ತರಗಳು ಸಿದ್ದವಾಗುತ್ತವೆ. ಈಗ ನೀವು ಕೇಳುತ್ತಿರುವುದು ಮಿಂಟೋ ಆಸ್ಪತ್ರೆಯಲ್ಲಿ ರೋಗಿಗಳು ದೃಷ್ಟಿಹೀನರಾಗುವಂತೆ ಮಾಡಿದವರ  ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎನ್ನುವುದು ಬೇರೆ ವಿಚಾರ. ಹಿಂದಿನ ಸರ್ಕಾರವಿರಲಿ, ಯಾವುದೇ ಸರ್ಕಾರವಿಲ್ಲಿ ಎಲ್ಲಾ ಸರ್ಕಾರವು ಒಂದೇ. ಇನ್ನೇನಾದರೂ ಮಾಹಿತಿ ಬೇಕಾದರೆ ತರಿಸಿ ಕೊಡಲಾಗುತ್ತದೆ.

**ಶ್ರೀ ಹೆಚ್.ಎಂ.ರಮೇಶ ಗೌಡ:-** ಮಾನ್ಯ ಸಭಾಪತಿಗಳೆ, ನನ್ನ ಕೊನೆ ಪ್ರಶ್ನೆ, ಜಿಲ್ಲಾ ಆರೋಗ್ಯಾಧಿಕಾರಿಗಳು ಪ್ರತಿ ವಾರಕ್ಕೊಮ್ಮೆ ಒಂದು ಅಥವಾ ಎರಡು ದಿನ ತಮ್ಮ ಜಿಲ್ಲಾ ವ್ಯಾಪ್ತಿಯ ಆಸ್ಪತ್ರೆಗಳಲ್ಲಿನ ಕುಂದು ಕೊರತೆಗಳಿಗೆ ಮೀಸಲಿರಿಸುತ್ತಿದ್ದಾರೆಯೇ; ಹಾಗಿದ್ದಲ್ಲಿ, ಸರ್ಕಾರಿ ಆಸ್ಪತ್ರೆಗಳ ಬಗ್ಗೆ ಜನರ ಆಸಡ್ಡೆ ಯಾಕೆ; ಸರ್ಕಾರಿ ಆಸ್ಪತ್ರೆಗಳಿಗೆ ಮೂಲ ಸೌಕರ್ಯಗಳ ಜೊತೆಗೆ, ಮುಂದುವರೆದ ಚಿಕಿತ್ಸೆಯನ್ನು ನೀಡುವ ಯೋಜನೆಗಳನ್ನು ತರಲು ಸರ್ಕಾರಕ್ಕೆ ಇರುವ ಸಮಸ್ಯೆ ಏನು ಎನ್ನುವುದಕ್ಕೆ ಉತ್ತರದಲ್ಲಿ....

**ಸಭಾಪತಿಯವರು:-** ಸರ್ಕಾರ ಕೊಟ್ಟಿರುವ ಉತ್ತರದಲ್ಲಿ ಇದೆ. ಅದನ್ನು ಓದಬೇಡಿ.

**ಶ್ರೀ ಹೆಚ್.ಎಂ.ರಮೇಶ ಗೌಡ:-** ಮಾನ್ಯ ಸಭಾಪತಿಗಳೆ, ನಾನು ಕೇಳಿರುವ ಪ್ರಶ್ನೆಯೇ ಬೇರೆ, ಸರ್ಕಾರ ಕೊಟ್ಟಿರುವ ಉತ್ತರವೇ ಬೇರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಅವರು ಕೇಳಿರುವುದಕ್ಕೆ ಸರಿಯಾಗಿಯೇ ಉತ್ತರವನ್ನು ಕೊಡಲಾಗಿದೆ. ಜಿಲ್ಲಾ ಆರೋಗ್ಯಾಧಿಕಾರಿಗಳು ಪ್ರತಿ ವಾರಕ್ಕೊಮ್ಮೆ ಒಂದು ಅಥವಾ ಎರಡು ದಿನ ತಮ್ಮ ಜಿಲ್ಲಾ ವ್ಯಾಪ್ತಿಯ ಆಸ್ಪತ್ರೆಗಳಲ್ಲಿನ ಕುಂದು ಕೊರತೆಗಳಿಗೆ ಮೀಸಲಿರಿಸುತ್ತಿದ್ದಾರೆಯೇ; ಸ್ಥಳ ಪರಿಶೀಲನೆ ಮಾಡುತ್ತಾರೆಯೇ ಎಂದು ಕೇಳಿದ್ದಾರೆ. ಸಾಮಾನ್ಯವಾಗಿ ಜಿಲ್ಲಾಮಟ್ಟದ ಆರೋಗ್ಯಾಧಿಕಾರಿಗಳು, ಡಿ.ಎಚ್.ಓ., ಗಳು ತಾಲ್ಲೂಕಾ ಆಸ್ಪತ್ರೆಗಳಿಗೆ, ಸಮುದಾಯ ಆಸ್ಪತ್ರೆಗಳಿಗೆ ಭೇಟಿ ಕೊಟ್ಟು ಪರಿಶೀಲನೆ ಮಾಡಬೇಕು ಎನ್ನುವ ನಿಯಮವಿದೆ. ಈ ರೀತಿ ಈಗಾಗಲೇ ಮಾಡಿಕೊಂಡು ಹೋಗುತ್ತಿದ್ದಾರೆ. ಈ ರೀತಿ ನಡೆಯುತ್ತಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದರೆ ಲಿಖಿತವಾಗಿ ದೂರು ಕೊಡಿ, ಇಲ್ಲ ಇಲ್ಲಿಯೇ ಹೇಳಿ ಅಥವಾ ಸೂಚನೆ ಕೊಟ್ಟರೆ ಅದರ ಬಗ್ಗೆ ಸಮರ್ಪಕವಾದ ತನಿಖೆ ನಡೆಸಬೇಕೆಂದು ತಿಳಿಸುತ್ತೇವೆ.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಗಳೆ, ನನ್ನ ಪ್ರಶ್ನೆಯೇ ಬೇರೆ, ಮಾನ್ಯ ಮಂತ್ರಿಗಳು ಹೇಳುತ್ತಿರುವ ಉತ್ತರವೇ ಬೇರೆ, ನನ್ನ ಪ್ರಶ್ನೆಗೂ ಸರ್ಕಾರ ಕೊಟ್ಟಿರುವ ಉತ್ತರಕ್ಕೂ ಸಂಬಂಧವೆ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸರಿಯಾಗಿಯೇ ಉತ್ತರ ಕೊಡಲಾಗಿದೆ.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಗಳೆ ಉತ್ತರವನ್ನು ಓದಿ ಹೇಳಲಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಿಗೆ ಸರ್ಕಾರ ಕೊಟ್ಟಿರುವ ಉತ್ತರದಿಂದ ಸಮಾಧಾನವಾಗದಿದ್ದರೆ, ಸದರಿ ವಿಷಯದ ಬಗ್ಗೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶವನ್ನು ಮಾಡಿಕೊಡಿ. ಚರ್ಚೆ ಮಾಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಸರ್ಕಾರದ ಉತ್ತರದಿಂದ ಮಾನ್ಯ ಸದಸ್ಯರಿಗೆ ಸಮಾಧಾನವಾಗದಿದ್ದರೆ ಚುಕ್ಕೆ ಗುರುತಿನ ಪ್ರಶ್ನೆಗೆ ತಕ್ಕಂತೆ ಅರ್ಧಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಿ. ವಿಸ್ತೃತವಾದ ಚರ್ಚೆ ಮಾಡೋಣ.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಗಳೆ, ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಸಿಗುವುದಿಲ್ಲ ಎಂದು ನನಗೆ ಗೊತ್ತು. ದಯಮಾಡಿ ನನ್ನ ಪ್ರಶ್ನೆಗೆ ಉತ್ತರ ಕೊಡಬೇಕು. ಆಯುಷ್ಮಾನ್..

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಇದಕ್ಕೆ ಕೊನೆ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಪ್ರಶ್ನೆಯನ್ನು ಮುಕ್ತಾಯಗೊಳಿಸಿದ್ದಾರೆ. ಅರ್ಧ ಗಂಟೆ ಚರ್ಚೆಯಲ್ಲಿ ಮಾತನಾಡೋಣ.

**ಪ್ರಶ್ನೆ ಸಂಖ್ಯೆ: 558**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ನಾನು ಮಾನ್ಯ ಉಪಮುಖ್ಯಮಂತ್ರಿಗಳಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ, ಸದನದಲ್ಲಿ ಉತ್ತರವನ್ನು ಕೊಡುವಾಗ ನೋಡಿ ಕೊಡಬೇಕು. ಉತ್ತರ ಕರ್ನಾಟಕದ ಕಡೆಗೆ ನೇಮಕಾತಿ ಬಗ್ಗೆ, ನಿಯೋಜನೆಗೊಳಿಸುವ, ವಲಸೆ ಹೋಗಲು ಕಾರಣಗಳು ಏನು ಎಂದು ಕೇಳಿದ್ದೇನೆ. ಅದಕ್ಕೆ ಸರ್ಕಾರ ಏನೂ ಕಾರಣವನ್ನು ಹೇಳಿರುವುದಿಲ್ಲ. ಸರ್ಕಾರದ ಉತ್ತರದಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ 137 ಬೋಧಕರು ಹಾಗೂ 08 ಬೋಧಕೇತರರನ್ನು 19-1-2019ರಲ್ಲಿ ನಿಯೋಜನೆ ಮಾಡಲಾಗಿರುತ್ತದೆ. ನಿಯೋಜೆಗೊಳಿಸಲು ಕಾರಣಗಳೇನು ಎನ್ನುವುದನ್ನು ಹೇಳಿರುವುದಿಲ್ಲ. ನನ್ನ ಮುಂದಿನ ಪ್ರಶ್ನೆ, ಈ ನಿಯೋಜನೆ ಮಾಡಿದ್ದರಿಂದ ಉತ್ತರ ಕರ್ನಾಟಕದ ಮಕ್ಕಳಿಗೆ ಶಿಕ್ಷಕರಿಲ್ಲದೆ ಅವರು ಶಿಕ್ಷಣದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವುದಕ್ಕೆ ಸರ್ಕಾರ ತನ್ನ ಉತ್ತರದಲ್ಲಿ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳುವ ಮೂಲಕ ನಿರ್ವಹಿಸುತ್ತಿದ್ದು, ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ತೊಂದರೆಯಾಗದಂತೆ ಕ್ರಮವಹಿಸಲಾಗುತ್ತದೆ ಎಂದು ಹೇಳಿದೆ. ಇರುವ ಶಿಕ್ಷಕರನ್ನು ನಿಯೋಜನೆ ಮಾಡಿ ಈ ರೀತಿ ಮಾಡುವುದು ಸರಿಯೇ? ಮುಂದೆ, ಉತ್ತರ ಕರ್ನಾಟಕದಲ್ಲಿ ನೇಮಕಾತಿಯಾಗಿ ಮೈಸೂರು, ಬೆಂಗಳೂರಿಗೆ ನಿಯೋಜನೆ ಮಾಡುವುದು ಅನ್ಯಾಯುವಲ್ಲವೆ; 100ಕ್ಕೆ 90ರಷ್ಟು ಮೈಸೂರು, ಬೆಂಗಳೂರಿಗೆ ನಿಯೋಜನೆ ಮಾಡಿ ಉತ್ತರ ಕರ್ನಾಟಕದ ಮಕ್ಕಳಿಗೆ ಆಗುತ್ತಿರುವ ಈ ತಾರತಮ್ಯವನ್ನು ಹೋಗಲಾಡಿಸಲು ಸಾಧ್ಯವೆ; ಎನ್ನುವುದಕ್ಕೆ ‘ಇಲ್ಲ’ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಎಲ್ಲಾ ದಿನ ಪತ್ರಿಕೆಗಳಲ್ಲಿ ಈ ವಿಚಾರ ಬಂದಿದೆ. “ ಉತ್ತರದಿಂದ ಬೋಧಕರ ವಲಸೆ” ವಿಜಯ ಕರ್ನಾಟಕದಲ್ಲಿ ಬಂದಿದೆ. “ಪ್ರಾಧ್ಯಾಪಕರ ಪ್ರತಿಭಾ ಪಲಾಯನ” ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ “ ಅಧ್ಯಾಪಕರ ಕಾನೂನು ಬಾಹಿರ ನಿಯೋಜನೆ”. ಇವತ್ತಿನ ವಿಜಯವಾಣಿ ಪತ್ರಿಕೆಯಲ್ಲಿ “ಕೆಲಸವಿಲ್ಲದೆ ಸಂಬಳ ಬಾಚುವ ಪ್ರಾಧ್ಯಾಪಕರು” ಎಂದು ಬಂದಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

241/09-03-2020/06-40/ಬಿಎಸ್‌ಡಿ-ಜಿಆರ್

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದು):**

ಶಿಕ್ಷಕರ ಮೇಲೆ ಯಾವ ರೀತಿ ದಂಥೆ ಮಾಡುತ್ತಾರೆ ಎನ್ನುವ ರೀತಿಯಲ್ಲಿ ಆಗಿದೆ ಎನ್ನುವುದನ್ನು ನೋಡಬೇಕು. 'ಉತ್ತರ ಕರ್ನಾಟಕದಲ್ಲಿ ಪಾಠ ಮಾಡಲು ಖಾಯಂ ಪ್ರಾಧ್ಯಾಪಕರು ಇಲ್ಲ. ಕೆಲವೆಡೆ ಅತಿಥಿ ಉಪನ್ಯಾಸಕರು ಸಿಗುತ್ತಿಲ್ಲ. 2017ರಲ್ಲಿ ಸಿ ವಲಯದಡಿ ನೇಮಕಗೊಂಡವರ ಪೈಕಿ 650-700 ಮಂದಿ ಮೈತ್ರಿ ಸರ್ಕಾರದಲ್ಲಿ 3-4 ತಿಂಗಳಲ್ಲೇ ಕಲ್ಯಾಣ ಕರ್ನಾಟಕದಿಂದ ನಿಯೋಜನೆ ನೆಪದಲ್ಲಿ ಕಾಲ್ಕಿತ್ತಿದ್ದಾರೆ' ಎಂದು ಪ್ರಕಟವಾಗಿದೆ. ಇದರ ಬಗ್ಗೆ ವಿಚಾರ ಮಾಡಬೇಕು. Appointment ಮಾಡುವಾಗ ಅಲ್ಲಿ vacancy ಇದ್ದವು. ಇವರೆಲ್ಲರೂ ಅಲ್ಲಿ ಹೋಗಿ appoint ಆದರು. Appointment ಆದ ನಂತರ ಅಲ್ಲಿ ಅವರ ಬಾಯಿಗೆ ಮಣ್ಣು ಹಾಕಿದರು. ಅಲ್ಲಿನ ಯಾರೋ appoint ಆಗುವುದನ್ನು ತಪ್ಪಿಸಿದರು. ಈಗ ನಿಯೋಜನೆ ಮಾಡಿದ್ದಾರೆ. ಬಂಕಾಪುರ, ಗಜೇಂದ್ರಗಢ, ಮುಧೋಳ, ಯಲ್ಲಾಪುರ, ಕೊಪ್ಪಳ, ಬಳ್ಳಾರಿಗಳಲ್ಲಿ ಟೀಚರ್ಸ್ ಇಲ್ಲ. ಅವರನ್ನು ಇಲ್ಲಿ ನಿಯೋಜನೆ ಮಾಡಿದ್ದಾರೆ. ಯಾವ ಕಾರಣಕ್ಕಾಗಿ 137 ಜನರನ್ನು ನಿಯೋಜನೆ ಮಾಡಲಾಗಿದೆ? ಇದಕ್ಕೆ ಕಾರಣ ಬೇಕಲ್ಲವೇ? ನನಗೆ ಹೇಳುವುದಕ್ಕೆ ನಾಚಿಕೆ ಬರುತ್ತಿದೆ. ಪ್ರತಿಯೊಬ್ಬರೂ 2-3 ಲಕ್ಷಗಳಿಗೆ ಹರಾಜು ಹಾಕಿಕೊಂಡು ಹೋಗಿದ್ದಾರೆ. ನಾನು ಇವರಿಗೆ ಹೇಳುತ್ತಿಲ್ಲ. ಹಿಂದಿನವರು ಮಾಡಿದ್ದಾರೆ. ನಾನು ಅದನ್ನು ಹೇಳುತ್ತೇನೆ. ಈ ರೀತಿ ಮಾಡಿದರೆ ಹೇಗೆ? ಇವತ್ತು examination ಇದೆ. ಆಂಗ್ಲ ಪ್ರಾಧ್ಯಾಪಕರು ಇಲ್ಲ. Examination ನಲ್ಲಿ ವಿದ್ಯಾರ್ಥಿಗಳು ಏನು ಮಾಡಬೇಕು? ನಮ್ಮ ಊರಿನಲ್ಲಿರುವ ಮಹಿಳಾ ಕಾಲೇಜಿನಲ್ಲಿ ಒಬ್ಬರೂ permanent ಇಲ್ಲ. ಎಲ್ಲರೂ Guest Lecturers ಆಗಿದ್ದಾರೆ. ಒಂದು ವರ್ಷದಿಂದ Principal ಸಹ ಇಲ್ಲ. ಇದು ಮಹಿಳಾ ಕಾಲೇಜು. ಈ ರೀತಿ ಉತ್ತರ ಕರ್ನಾಟಕದಲ್ಲಿ 137 ಜನರನ್ನು ವರ್ಗಾವಣೆ ಮಾಡಲು administrative problem ಏನಿತ್ತು? ಕರ್ನಾಟಕದಾದ್ಯಂತ ಎಲ್ಲಾ leading paper ಗಳಲ್ಲಿ ಪ್ರಕಟವಾಗಿದೆ. ಈ ರೀತಿ ಉತ್ತರವನ್ನು ಜವಾಬ್ದಾರಿ ಸ್ಥಾನದಲ್ಲಿರುವ ಉಪ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಪತ್ರಿಕೆಗಳಲ್ಲಿ ಎಷ್ಟೆಲ್ಲಾ ಕೆಟ್ಟದಾಗಿ ಬಂದಿದೆ ಎಂಬುದನ್ನು ನಾನು ಸದನದಲ್ಲಿ ಓದಬಾರದು. ಪ್ರಾಧ್ಯಾಪಕರ ಮೇಲೆ ಬಂದಿದೆ. ಇನ್ನೊಂದು ವಿಷಯವೆಂದರೆ, ' ಬೆಂಗಳೂರಿನಲ್ಲಿ 21 ಸರ್ಕಾರಿ ಪದವಿ ಕಾಲೇಜುಗಳಿದ್ದು, 33 ಪ್ರಾಧ್ಯಾಪಕರಿಗೆ ಒಂದೇ ಒಂದು ಗಂಟೆ ಕೆಲಸವಿಲ್ಲ. 39 ಪ್ರಾಧ್ಯಾಪಕರಿಗೆ ವಾರಕ್ಕೆ 16 ಗಂಟೆಗಿಂತಲೂ ಕಡಿಮೆ ಕಾರ್ಯಭಾರವಿದೆ. ಅಲ್ಲದೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯದಲ್ಲಿ 500–600 ಪ್ರಾಧ್ಯಾಪಕರಿಗೆ U.G.C., ನಿರ್ದಿಷ್ಟಪಡಿಸಿದಷ್ಟು ಗಂಟೆ ಬೋಧನೆಗೆ ಅವಕಾಶವಿಲ್ಲ' ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ರೀತಿ ಸರ್ಕಾರವನ್ನು ನಡೆಸಿದರೆ ಹೇಗೆ? ಉತ್ತರ ಕರ್ನಾಟಕಕ್ಕೆ ಈ ರೀತಿ ಅನ್ಯಾಯ ಮಾಡಿದರೆ ಹೇಗೆ? ಈ ಭಾಗದವರನ್ನು ಈ ಕಡೆ ಆ ಭಾಗದವರನ್ನು ಆ ಕಡೆ ನೇಮಕಾತಿ ಮಾಡಬೇಕು. ಇದು ಸರಿಯಾದುದ್ದಲ್ಲ.

**ಶ್ರೀ ಅರುಣ ಶಹಾಪುರ:–** ಮನ್ಯ ಸಭಾಪತಿಯವರೇ, ಬಹಳ ತಪ್ಪಾಗಿ ಈ ಕೆಲಸ ಆಗಿದೆ. ಇದು "ಒದ್ದವರ ಚೆಂಡು" ಎನ್ನುವಂತೆ ಆಗಿದೆ. ಅಂದರೆ ಯಾರು ಚೆಂಡನ್ನು ಒದೆಯುತ್ತಾರೋ, ಅವರದ್ದೇ ಚೆಂಡು ಎನ್ನುವಂತೆ ಆಗಿದೆ. ಇಡೀ ಉತ್ತರ ಕರ್ನಾಟಕದ ಕಾಲೇಜುಗಳಲ್ಲಿ ಯಾರು ದುಡ್ಡು ಕೊಡುತ್ತಾರೋ, ಅವರನ್ನು ಈ ಕಡೆ ಹಾಕುವ ಕೆಲಸ ಆದರೆ ಜನ ಪ್ರತಿನಿಧಿಗಳಾಗಿ ನಾವೇನು ಉತ್ತರವನ್ನು ಹೇಳಬೇಕು. ನಾನು ಮಾನ್ಯ ಸದಸ್ಯರನ್ನು ಅಭಿನಂದಿಸುತ್ತೇನೆ. ಯುವಕರು ಉನ್ನತ ಶಿಕ್ಷಣ ಇಲಾಖೆಯನ್ನು ಪಡೆದುಕೊಂಡಿರುವ ಸಂದರ್ಭದಲ್ಲಿ ವಿಶೇಷ ನಿರೀಕ್ಷೆ ನಮಗೆ ಇದೆ. ನಿಜವಾಗಿ ಇದರಲ್ಲಿ ಭ್ರಷ್ಟಾಚಾರ ಆಗಿದೆ. ಹಿಂದಿನ ಸಂದರ್ಭದಲ್ಲಿಯೂ ಪತ್ರಿಕೆಗಳಲ್ಲಿ ಬಂತು. ನಮಗೆ ಸ್ಪಂದನೆ ಸಿಕ್ಕಿಲ್ಲ, ಆದ್ದರಿಂದ ಮಾನ್ಯ ಸಚಿವರ ಹಂತದಲ್ಲಿ ಒಂದು ತನಿಖೆ ನಡೆಯಬೇಕು. ಹುದ್ದೆ ಸಮೇತ ಮತ್ತೊಂದು ಕಾಲೇಜಿಗೆ ಹಾಕಿಸಿಕೊಂಡು ಬಂದಿದ್ದಾರೆ. ಎಲ್ಲಿ sanction ಆಗಿದೆಯೋ, ಎಲ್ಲಿ ಕೆಲಸ ಮಾಡುತ್ತಾರೋ ಎನ್ನುವಂತೆ ಆಗಿದೆ. Collegiate Education ಪೂರ್ತಿ ಸಮಸ್ಯೆ ಎನ್ನುವಂತೆ ಆಗಿದೆ. ಮಾನ್ಯ ಸಚಿವರ ಅವಧಿಯಲ್ಲಾದರೂ ಣಡಿಜಚಿಣಟಟಿಜ ಆಗಬೇಕು ಎನ್ನುವ ಕಳಕಳಿಯನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದು, ದಯಮಾಡಿ ಕ್ರಮ ಕೈಗೊಂಡು ಸರಿಮಾಡುವ ಕೆಲಸ ಮಾಡಬೇಕು.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ವರ್ಗಾವಣೆ ಅಥವಾ ನಿಯೋಜನೆ minimum requirement ಏನಿದೆ? ಎರಡನೆಯದಾಗಿ before the declaration of probationary period ಮುನ್ನ ನಿಯೋಜನೆ ಅಥವಾ ವರ್ಗಾವಣೆಗೆ ಅವಕಾಶವಿದೆಯೇ?

**ಡಾ॥ ಸಿ.ಎನ್.ಅಶ್ವಥನಾರಾಯಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು 137 ಸಹಾಯಕ ಪ್ರಾಧ್ಯಾಪಕರ ನಿಯೋಜನೆ ಮತ್ತು ವರ್ಗಾವಣೆ ವಿಷಯ ಎತ್ತಿದ್ದು, ಈ 137 ರಲ್ಲಿ ಉತ್ತರ ಕರ್ನಾಟಕದಿಂದ 36 ಜನ ಮಾತ್ರ ಇದ್ದಾರೆ. ಇವರಿಗೆ probationary period declare

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗುವ ಮುಂಚೆ ಪತಿ-ಪತ್ನಿ ಪ್ರಕರಣದಲ್ಲಿ ನಿಯೋಜನೆ ಕೊಟ್ಟಿದ್ದಾರೆ. ಇದರಲ್ಲಿ 36 ಜನ ಮಾತ್ರ ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕಕ್ಕೆ ಬಂದಿದ್ದಾರೆ. ಇದರ ಬಗ್ಗೆ ಗಮನಹರಿಸಿ ಸೂಕ್ತ ಕ್ರಮ ಜರುಗಿಸುವ ಕೆಲಸ ಮಾಡುತ್ತೇನೆ. ಇದರಲ್ಲಿ 5 ಜನರ ಆದೇಶವನ್ನು ರದ್ದು ಮಾಡಲಾಗಿದೆ. ಅಲ್ಲಿ ಅವಶ್ಯಕವಿರುವ ಪ್ರಾಧ್ಯಾಪಕರನ್ನು ಪೂರೈಸುವುದಕ್ಕೆ ಕ್ರಮ ವಹಿಸುತ್ತೇವೆ. ಮುಂದಿನ ದಿನಗಳಲ್ಲಿ ಇಂತಹ ಪರಿಸ್ಥಿತಿ ಆಗಬಾರದೆಂದು ಹೊಸ ಕಾನೂನಿನ ತಿದ್ದುಪಡಿ ತರುವ ಕೆಲಸ ಮಾಡುತ್ತಿದ್ದು, ಈ ಅಧಿವೇಶನದಲ್ಲಿಯೇ ತರುತ್ತಿದ್ದೇವೆ. Counseling Act (Karnataka State Civil Services (Regulation of transfer of staff of Department of Collegiate Education) Act, 2012) ಗೆ ತಿದ್ದುಪಡಿ ತರುತ್ತಿದ್ದೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ counseling ಪದ್ಧತಿ ಇದೆ. ಅವರು ನೀಡಿರುವ ಲಿಸ್ಟ್‌ನಲ್ಲಿ ಇಲ್ಲಿಂದ 8 ಜನ ಉತ್ತರ ಕರ್ನಾಟಕಕ್ಕೆ ಹೋಗಿದ್ದಾರೆ. 137 ಜನರಲ್ಲಿ 44 ಜನರು ಮೈಸೂರಿಗೆ, 30 ಜನ ಬೆಂಗಳೂರಿಗೆ, 27 ಜನ ತುಮಕೂರಿಗೆ, 11 ಜನ ಮಂಡ್ಯಕ್ಕೆ, 8 ಜನ ರಾಮನಗರಕ್ಕೆ ಮತ್ತು ಕೋಲಾರ ಹಾಗೂ ಹಾಸನ ಜಿಲ್ಲೆಗಳಿಗೆ ತಲಾ 6 ಜನ ನಿಯೋಜನೆಗೊಂಡಿದ್ದಾರೆ. ಅವರು ಕೊಟ್ಟ ಅಂಕಿ ಅಂಶಗಳನ್ನು ಹೇಳುತ್ತಿದ್ದೇನೆ. ಹೀಗಾದರೆ ಅವರ administration ಏನಾಗಿದೆ? ನಾವು ಆಗೆಲ್ಲಾ ಹೇಳಿದೆವು. ಈಗ ಪರೀಕ್ಷೆ ಬಂದಿದ್ದು, ಅಲ್ಲಿ ಯಾರೂ ಇಲ್ಲ. ನಾನು ಎರಡು ದಿನಗಳ ಹಿಂದೆ ಬಂಕಾಪುರಕ್ಕೆ ಹೋಗಿದ್ದು, ಅಲ್ಲಿ teachers ಇಲ್ಲ. ಯಲ್ಲಾಪುರದಲ್ಲಿ teachers ಇಲ್ಲ. ಮಕ್ಕಳು ಏನು ಮಾಡಬೇಕು ಎಂಬುದನ್ನು ಹೇಳಿ. ಅಲ್ಲಿನವರು appointment ಆಗುವಂತಿಲ್ಲ. Vacancy ಖಾಲಿಯಾಗಬೇಕು. ಮತ್ತೆ ಇಲ್ಲಿನವರೇ appointment ಆಗುವುದು ಮತ್ತೆ ಅಲ್ಲಿಗೆ ಬರುವುದು. ಈ ರೀತಿ ಆದರೆ ಪರಿಸ್ಥಿತಿ ಏನಾಗಬೇಕು? ಮಾನ್ಯ ಸಭಾಪತಿಯವರೇ, ತಪ್ಪ ಮಾಹಿತಿ ಕೊಡುವುದನ್ನು ನಾನು tolerate ಮಾಡುವುದಕ್ಕೆ ಆಗುವುದಿಲ್ಲ. ಅವರ ಕೊಟ್ಟ ಉತ್ತರವನ್ನೇ ಓದುತ್ತಿದ್ದೇನೆ. ಇವತ್ತಿನ ಪತ್ರಿಕೆಯಲ್ಲಿ " ಕೆಲಸವೇ ಇಲ್ಲದೆ ಸಂಬಳ ಬಾಚುವ ಪ್ರಾಧ್ಯಾಪಕರು', ಪಾಠಕ್ಕೊಂದು ಸಂಬಳಕ್ಕಿನ್ನೊಂದು, ರಾಜಕೀಯ ಒತ್ತಡ, ಉತ್ತರ ಕರ್ನಾಟಕದಲ್ಲಿ ಪ್ರಾಧ್ಯಾಪಕರೇ ಇಲ್ಲ' ಈ ರೀತಿ ಬಂದರೆ ಜನರು ಏನು ಹೇಳುತ್ತಾರೆ. ಮಕ್ಕಳಿಗೆ ಅನ್ಯಾಯವಾಗುವುದಿಲ್ಲವೇ? ಮಾನ್ಯ ಎಸ್.ಆರ್. ಪಾಟೀಲರ ಬೀಳಗಿಯ College ನಲ್ಲಿ teacher

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲ. ನನ್ನ ಊರಿನಲ್ಲಿರುವ ಮಹಿಳಾ ಕಾಲೇಜಿನಲ್ಲಿ Principal ಸಹಿತ Guest Lecturer ಇದ್ದಾರೆ. ಈ ಅನ್ಯಾಯ ಏಕೆ? ಪ್ರತಿ ಹಂತದಲ್ಲಿ ಉತ್ತರ ಕರ್ನಾಟಕ್ಕೆ ಅನ್ಯಾಯ. ಈ ಕಾರಣಗಳಿಂದ ಉತ್ತರ ಕರ್ನಾಟಕವನ್ನು ಪ್ರತ್ಯೇಕ ರಾಜ್ಯ ಮಾಡುವಂತೆ ಎಷ್ಟೋ ಸಾರಿ ಹೇಳಿದ್ದೇನೆ. ಅನ್ಯಾಯಕ್ಕೊಂದು limit ಇರಬೇಕಲ್ಲವೇ? 137 ಜನರನ್ನು ನಿಯೋಜನೆ ಹೇಗೆ ಮಾಡುತ್ತಾರೆ. ಈ ಕಡೆ ಇದ್ದಾಗ ಇಂತಹ ಪ್ರಶ್ನೆಗಳನ್ನು ಅವರೂ ಕೇಳಿದ್ದಾರೆ. ಈಗ ಸರಿಮಾಡಬೇಕಲ್ಲವೇ? ಆ ಮಕ್ಕಳಿಗೆ ಏನು ಮಾಡುತ್ತಾರೆ? 137 ಜನರನ್ನು deputation ಮಾಡುವಂತಹ ಅವಶ್ಯಕತೆ ಸರ್ಕಾರಕ್ಕೆ ಏನಿತ್ತು? ಅವರ ಗಮನಕ್ಕೆ ಬಂದ ನಂತರ ಸರ್ಕಾರವು ಸರಿಪಡಿಸಬೇಕಲ್ಲವೇ? ವಿನಾಕಾರಣ ಶಿಕ್ಷಕರ ಮೇಲೆ ಕೆಟ್ಟದಾಗಿ ಪತ್ರಿಕೆಗಳಲ್ಲಿ ಬರೆಯುತ್ತಿದ್ದಾರೆ. ಇಡೀ ಶಿಕ್ಷಕರ community ಗೆ ನೋವಾಗುತ್ತಿದೆ. ಆ ಮಕ್ಕಳು ಯಾವ ಅನ್ಯಾಯ ಮಾಡಿದ್ದಾರೆ? ರಾಯಚೂರು, ಗುಲ್ಬರ್ಗ, ಬಳ್ಳಾರಿ, ಯಾದಗಿರಿ, ಹುಬ್ಬಳ್ಳಿ, ಧಾರವಾಡ, ಗದಗ ಮಕ್ಕಳು ಏನು ಅನ್ಯಾಯ ಮಾಡಿದ್ದಾರೆ. ಗಜೇಂದ್ರಗಢದಲ್ಲಿ ಒಬ್ಬ teacher ಸಹ ಇಲ್ಲ. ಎಲ್ಲರೂ ಇಲ್ಲಿಗೆ ಬಂದು ಕುಳಿತಿದ್ದಾರೆ. ಪತಿ-ಪತ್ನಿ ಎಲ್ಲವನ್ನೂ ಬಿಡಿ. Probationary period declare ಆಗುವ ತನಕ ಏನೂ ಮಾಡುವುದಕ್ಕೆ ಆಗುವುದಿಲ್ಲ. ಒಂದು ಸಾರಿ ಒಬ್ಬರನ್ನು ವರ್ಗ ಮಾಡುವ ಬಗ್ಗೆ ಮಾನ್ಯ ಹೆಚ್.ಡಿ. ಕುಮಾರ ಸ್ವಾಮಿಯವರು ಮುಖ್ಯಮಂತ್ರಿಯವರಾಗಿ ಆದೇಶ ಮಾಡಿದ್ದರು. ಮಾನ್ಯ ವಿಜಯಭಾಸ್ಕರ್‌ರವರು ಶಿಕ್ಷಣ ಕಾರ್ಯದರ್ಶಿಯಾಗಿದ್ದರು. ಆಗ ಅವರು ' ನಿಯಮದಲ್ಲಿ ಅವಕಾಶವಿಲ್ಲ, ವರ್ಗ ಮಾಡುವುದಕ್ಕೆ ಆಗುವುದಿಲ್ಲ' ಎಂದು ಬರೆದರು. ನಾನು approve ಮಾಡಿದೆನು. 137 ಜನರನ್ನು ಆಡಳಿತಾತ್ಮಕ ದೃಷ್ಟಿಯಿಂದ ವರ್ಗಾವಣೆ ಮಾಡುವುದನ್ನು ಎಲ್ಲಿಯೂ ನೋಡಲಿಲ್ಲ. I.A.S., K.A.S., ಅಧಿಕಾರಿಗಳನ್ನು ಅವಶ್ಯಕತೆಯಿದ್ದರೆ ವರ್ಗಾವಣೆ ಮಾಡುವುದನ್ನು ನೋಡಿದ್ದೇನೆ. ಆದರೆ 137 ಶಿಕ್ಷಕರನ್ನು ನಿಯೋಜನೆ ಮಾಡಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಈಗ ಮಾನ್ಯ ಮಂತ್ರಿಗಳು ಏನು ಮಾಡುತ್ತಾರೆ ಎಂಬುದನ್ನು ತಿಳಿಸಬೇಕು.

**ಶ್ರೀ ಕೆ.ಟಿ. ಶ್ರೀಕಂಠೇಗೌಡಃ-** ಮಾನ್ಯ ಸಭಾಪತಿಯವರೆ, ಒಂದು clarification. ಹಿರಿಯ ನಾಯಕರಾದ ಮಾನ್ಯ ಹೊರಟ್ಟಿಯವರು ಹೇಳಿದಂತೆ ಕೇವಲ ಉತ್ತರ ಕರ್ನಾಟಕದ ಭಾಗಗಳಲ್ಲಿ ಮಾತ್ರವಲ್ಲದೇ ಇಡೀ ರಾಜ್ಯದಲ್ಲಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಯಂ ಉಪನ್ಯಾಸಕರ ಹಾಗೂ ಸಹಾಯಕ ಪ್ರಾಧ್ಯಾಪಕರ ಕೊರತೆ ಇದೆ. ಉತ್ತರ ಕರ್ನಾಟಕದ ಭಾಗದಲ್ಲಿ ಮಾತ್ರ ಇಲ್ಲ. ಆದರೆ 2017ರಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

deputation ಕೊಟ್ಟಿರುವುದರಲ್ಲಿ 2017ರ batch ನಲ್ಲಿ counseling ನಲ್ಲಿ husband-wife ಪ್ರಕರಣದಂತೆ ಕೊಟ್ಟಿಲ್ಲ. ಪತಿ–ಪತ್ನಿ ಪ್ರಕರಣಕ್ಕೆ ಅವಕಾಶ ಕೊಟ್ಟಿರಲಿಲ್ಲ.

**(242)/09.03.2020/6.50/ಹೆಚ್‌ವಿ–ಎಂಡಿ**

**ಶ್ರೀ ಎಸ್.ಆರ್‌ಪಾಟೀಲ್(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯವರು ಹೇಳಿದಂತೆ ನಮ್ಮ ತಂದೆಯವರ ನೆನಪಿನಲ್ಲಿ ಬೀಳಗಿಯಲ್ಲಿ ರುದ್ರಗೌಡ ಪಾಟೀಲ್ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯವನ್ನು ಸ್ಥಾಪಿಸಲಾಯಿತು. ಇದಕ್ಕಾಗಿ ಕೋಟ್ಯಾಂತರ ರೂಪಾಯಿಗಳಷ್ಟು ಬೆಲೆಬಾಳುವ ಜಮೀನನ್ನು ನಾನು ಕೊಡುಗೆಯಾಗಿ ನೀಡಿದ್ದೇನೆ. ಇದು ಉತ್ತರ ಕರ್ನಾಟಕದಲ್ಲಿಯೇ ಮೊದಲನೆಯ ಪ್ರಥಮ ದರ್ಜೆ ಕಾಲೇಜಾಗಿದೆ. ಅಲ್ಲಿ ಖಾಸಗಿಯಾಗಿ ನಮ್ಮ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭ ಮಾಡಲಿಲ್ಲ. ಬದಲಿಗೆ ಸರ್ಕಾರಿ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರಕ್ಕೆ ಬೆಲೆಬಾಳುವ ಜಮೀನನ್ನು ಕೊಡುವುದರ ಜೊತೆಗೆ ಏನೇನು ಸಹಾಯ ಮಾಡಬಹುದು ಅವೆಲ್ಲವನ್ನೂ ಮಾಡಿದ್ದೇವೆ. ಈ ಕಾಲೇಜಿನಲ್ಲಿ ಪ್ರಾಂಶುಪಾಲರ ಜೊತೆಗೆ ಒಂದು ಪ್ರಾಧ್ಯಾಪಕರ ಹುದ್ದೆ ಮಾತ್ರ ಖಾಯಂ ಹುದ್ದೆಯಾಗಿದೆ. ಉಳಿದವರೆಲ್ಲ ಅತಿಥಿ ಉಪನ್ಯಾಸಕರಾಗಿದ್ದಾರೆ. ಸರ್ಕಾರ ನಮ್ಮನ್ನು ಯಾವ ರೀತಿಯಲ್ಲಿ ನಡೆಸಿಕೊಳ್ಳುತ್ತಿದೆ ಎನ್ನುವುದು ಇದನ್ನು ನೋಡಿದರೆ ಗೊತ್ತಾಗುತ್ತದೆ. ನಾನು ಬೆಳಿಗ್ಗೆಯಿಂದ ಇದೇ ವಿಚಾರವನ್ನು ಮಾತನಾಡುತ್ತಿದ್ದೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದಲ್ಲಿ ಕೇವಲ ಐದೇ ಐದು ಜನ ಖಾಯಂ ಪ್ರಾಂಶುಪಾಲರಿದ್ದಾರೆ. ಬೇರೆ ಎಲ್ಲಿಯೂ ಪ್ರಾಂಶುಪಾಲರುಗಳ ಹುದ್ದೆಯನ್ನು ಸರ್ಕಾರ ಭರ್ತಿ ಮಾಡಿಲ್ಲ.

**ಶ್ರೀ ಎಸ್.ಆರ್‌ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಕಾಲೇಜಿನಲ್ಲಿ ಪ್ರಾಂಶುಪಾಲರ ಜೊತೆಗೆ ಒಂದು ಪ್ರಾಧ್ಯಾಪಕರ ಹುದ್ದೆ ಮಾತ್ರ ಖಾಯಂ ಹುದ್ದೆಯಾಗಿದೆ. ಉಳಿದವರೆಲ್ಲ ಅತಿಥಿ ಉಪನ್ಯಾಸಕರಾಗಿದ್ದಾರೆ. ಈ ರೀತಿ ಸರ್ಕಾರ ನಿರ್ಲಕ್ಷ್ಯವನ್ನು ತೋರಿಸಿದರೆ, ಇವರು ಉನ್ನತ ಶಿಕ್ಷಣ ಖಾತೆಯನ್ನು ಯಾವ ರೀತಿ ನಿರ್ವಹಿಸುತ್ತಾರೆನ್ನುವುದು ನನ್ನ ಪ್ರಶ್ನೆಯಾಗಿದೆ. ಕೂಡಲೇ ಅಲ್ಲಿಗೆ ಖಾಯಂ ಅಧ್ಯಾಪಕರನ್ನು ನೀಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ಸಿ.ಎನ್ ಅಶ್ವತ್ಥನಾರಾಯಣ:–** ಸನ್ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಮಧ್ಯ ಕರ್ನಾಟಕ ಮತ್ತು ಕರಾವಳಿ ಪ್ರದೇಶ ಎಂದು ನಮ್ಮ ರಾಜ್ಯವನ್ನು ಹೆಚ್ಚುಹೆಚ್ಚು ಭಾಗಗಳನ್ನಾಗಿ ವಿಂಗಡಿಸುವುದು ಬೇಡವೆನ್ನುವುದು ನನ್ನ ಅಭಿಪ್ರಾಯವಾಗಿದೆ. ನಾವು ಜವಾಬ್ದಾರಿಯುತ ಸ್ಥಾನದಲ್ಲಿ ಕುಳಿತು, ನಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಆದ್ದರಿಂದ ಯಾರಿಗೂ ತಾರತಮ್ಯ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅಂತಹ ಮನಸ್ಥಿತಿಯನ್ನು ಅವರುಗಳು ಇಟ್ಟುಕೊಳ್ಳಬಾರದು. ಎಲ್ಲರಿಗೂ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಬೇಕೆನ್ನುವ ಏಕೈಕ ಉದ್ದೇಶದಿಂದ ನಾವು ಕಾರ್ಯನಿರ್ವಹಿಸುತ್ತಿದ್ದೇವೆ. ಸಮಸ್ಯೆಗಳು ಇಲ್ಲವೆಂದು ನಾನು ಹೇಳುವುದಿಲ್ಲ. ಈ ಸಮಸ್ಯೆಗಳನ್ನು ವ್ಯಾಪಕವಾಗಿ, ಹಂತಹಂತವಾಗಿ, ಸಂಪೂರ್ಣವಾಗಿ ಒಂದು ಕಾಲಮಿತಿಯೊಳಗೆ ಬಗೆಹರಿಸುವಂತಹ ಪ್ರಯತ್ನವನ್ನು ನಾವು ಮಾಡುತ್ತೇವೆ.

ಸನ್ಮಾನ್ಯ ಸಭಾಪತಿಯವರೇ, ಹಿಂದೆ ಇದ್ದಂತಹ ಕೌನ್ಸಿಲಿಂಗ್ ಆಕ್ಟ್ ಅಷ್ಟೊಂದು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದಕ್ಕೆ ಸಾಧ್ಯವಾಗಲಿಲ್ಲ. ಇದರಿಂದಾಗಿ ಬಹಳಷ್ಟು ಸಮಸ್ಯೆಗಳು ಉದ್ಭವವಾಗುತ್ತಿತ್ತು. ಕೆಲವರು ತಮಗೆ ಬೇಕಾದ ಕಡೆಗೆ ಅಥವಾ ವರ್ಕ್‌ಲೋಡ್ ಇಲ್ಲದೇ ಇರುವ ಕಡೆಗೆ ನಿಯೋಜನೆ ಮೇರೆಗೆ ಹೋಗುತ್ತಿದ್ದರು. ಇಂತಹ ಹಲವಾರು ದುರ್ಬಳಕೆಯಾಗಿರುವ ಪ್ರಕರಣಗಳು ಇವೆ, ಇಲ್ಲವೆಂದು ನಾನು ಹೇಳುವುದಿಲ್ಲ. ಇವೆಲ್ಲವುಗಳನ್ನು ಸರಿಪಡಿಸುವುದಕ್ಕೆ ಈಗ ಬಹಳಷ್ಟು ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಈ ಆಕ್ಟ್‌ಗೆ ತಿದ್ದುಪಡಿ ತರುವಂತಹ ಕಾರ್ಯವನ್ನು ಕೈಗೆತ್ತಿಗೊಂಡಿದ್ದೇವೆ. ರಾಜ್ಯದ ಎಲ್ಲ ಭಾಗಗಳನ್ನು ನಾವು ಸಮಾನ ರೀತಿಯಲ್ಲಿ ಕಾಣುತ್ತೇವೆ. ಯಾವುದೇ ತಾರತಮ್ಯವನ್ನು ಮಾಡುವುದಿಲ್ಲ. ಅಂತಹ ಭಾವನೆ ನಮ್ಮಲ್ಲಿ ಬರುವುದೇ ಇಲ್ಲ. ನಾವು ಕನ್ನಡಿಗರು, ಕರುನಾಡಿನಲ್ಲಿ ಇರುವವರು ಎನ್ನುವ ಭಾವನೆಯಲ್ಲಿ ಕೆಲಸ ಮಾಡುತ್ತಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಬೆಳಕು ಚೆಲ್ಲಿರುವ ವಿಚಾರದ ಬಗ್ಗೆ ಹೇಳುವುದಾದರೆ, ಯಾವ ಭಾಗದಲ್ಲಿ ಶಿಕ್ಷಕರ ಕೊರತೆಯಿದೆ ಆ ಭಾಗಕ್ಕೆ ಹೊಸದಾಗಿ ಶಿಕ್ಷಕರನ್ನು ನೇಮಕ ಮಾಡಲಾಗುತ್ತಿದೆ ಮತ್ತು ಕೌನ್ಸಿಲಿಂಗ್ ಆಕ್ಟ್‌ಗೆ ತಿದ್ದುಪಡಿಯನ್ನು ತರಲಾಗುತ್ತಿದೆ. ಈಗ ಇರುವಂತಹ ವ್ಯವಸ್ಥೆಯನ್ನು ಯಾವ ರೀತಿಯಲ್ಲಿ ಪುನರ್‌ರಚನೆಗೊಳಿಸಬಹುದಾಗಿದೆ ಎನ್ನುವುದರ ಬಗ್ಗೆ ಚಿಂತನೆ ನಡೆಸುತ್ತಿದ್ದೇವೆ. ಮುಂದಿನ ಎರಡು ತಿಂಗಳುಗಳಲ್ಲಿ ಪರೀಕ್ಷೆಗಳು ಇರುವುದರಿಂದ ಯಾವ ಕ್ರಮವನ್ನು ತೆಗೆದುಕೊಳ್ಳಬಹುದು ಎನ್ನುವುದರ ಬಗ್ಗೆ ಚಿಂತಿಸಲಾಗುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ಮುಂದಿನ ಶೈಕ್ಷಣಿಕ ವರ್ಷಕ್ಕೆ ಅವರು ಏನಾದರೂ ಕ್ರಮ ತೆಗೆದುಕೊಳ್ಳಲಿ ಅದಕ್ಕೆ ನಮ್ಮ ತಕರಾರಿಲ್ಲ. ಆದರೆ, ಮುಂದಿನ ಎರಡು ತಿಂಗಳುಗಳಲ್ಲಿ ಪರೀಕ್ಷೆ ಬರುತ್ತಿದೆ. ಪ್ರಾಧ್ಯಾಪಕರಿಲ್ಲದೆ ಪರೀಕ್ಷೆಗೆ ಅಲ್ಲಿನ ವಿದ್ಯಾರ್ಥಿಗಳು ಯಾವ ರೀತಿಯಲ್ಲಿ ತಯಾರಾಗಬೇಕು, ಯಾವ ರೀತಿಯಲ್ಲಿ ಪರೀಕ್ಷೆ ಬರೆಯಬೇಕು ಎನ್ನುವುದು ನನ್ನ ಪ್ರಶ್ನೆಯಾಗಿದೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಈ ಹಿಂದೆ ಒಂದು ಪತ್ರವನ್ನು ಬರೆದಿದ್ದೆ. ಅದರ ಬಗ್ಗೆ ಯಾವುದೇ ಕ್ರಮವನ್ನು ಸರ್ಕಾರ ತೆಗೆದುಕೊಂಡಿಲ್ಲ. ಉದಯವಾಣಿ ದಿನಪತ್ರಿಕೆಯಲ್ಲಿ 'ಬಸವರಾಜ ಹೊರಟ್ಟಿಯವರ ಪತ್ರಕ್ಕೆ ಕವಡೆ ಕಾಸಿನಷ್ಟು ಬೆಲೆಯಿಲ್ಲ' ಎನ್ನುವ ವರದಿ ಪ್ರಕಟವಾಗಿದೆ. ಅವರು ಉಪ ಮುಖ್ಯಮಂತ್ರಿಗಳಾಗಿರುವವರು, ಒಂದು ಜವಾಬ್ದಾರಿಯುತ ಸ್ಥಾನದಲ್ಲಿರುವವರು, ಅಲ್ಲಿ ಬೋಧಕರಿಲ್ಲ, ಅಲ್ಲಿನ ಮಕ್ಕಳಿಗೆ ಅನ್ಯಾಯವಾದರೆ, ನಿಮಗೆ ಅನ್ಯಾಯವಾದಂತೆ ಅಲ್ಲವೇ? ನಾಳೆ ಅವರುಗಳು ಪರೀಕ್ಷೆಯಲ್ಲಿ ಅನುತ್ತೀರ್ಣರಾದರೆ ಅದಕ್ಕೆ ಯಾರು ಜವಾಬ್ದಾರರು? ಅಲ್ಲಿ ಅತಿಥಿ ಉಪನ್ಯಾಸಕರಿಲ್ಲ, ಅತಿಥಿ ಉಪನ್ಯಾಸಕರು ಅಲ್ಲಿಗೆ ಬರುವುದೇ ಇಲ್ಲ. ಯಾರಿಗೂ ಹಾಜರಾತಿ ಸಿಗುತ್ತಿಲ್ಲ. ಈ ಮಕ್ಕಳ ಪರಿಸ್ಥಿತಿ ಏನಾಗಬೇಕು? ಈ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಳ್ಳದೆ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕಾಗುತ್ತದೆ. ಮಾನ್ಯ ಎಸ್.ಆರ್.ಪಾಟೀಲ್‌ರವರು ತಂದೆಯ ಹೆಸರಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭ ಮಾಡಲಾಗಿದೆ. ಅದಕ್ಕೆ ಅವರು ತಮ್ಮ ಸ್ವಂತ ಜಮೀನನ್ನು ಕೊಟ್ಟಿದ್ದಾರೆ. ನಾನು ಸಹ ಸರ್ಕಾರಿ ಶಾಲೆಯನ್ನು ಪ್ರಾರಂಭ ಮಾಡುವುದಕ್ಕೆ 7 ಎಕರೆ ಜಮೀನನ್ನು ಕೊಟ್ಟಿದ್ದೇನೆ. ನಮ್ಮ ಭಾಗದಲ್ಲಿ ಒಂದು ಎಕರೆ ಜಮೀನು ಒಂದು ಕೋಟಿ ಹತ್ತು ಲಕ್ಷ ರೂಪಾಯಿ ಬೆಲೆಬಾಳುತ್ತದೆ. ಹೀಗಿದ್ದರೂ ನಾನು 7 ಎಕರೆ ಜಮೀನನ್ನು ಕೊಟ್ಟಿದ್ದೇನೆ. ನಮ್ಮಲ್ಲಿ ಸರ್ಕಾರಿ ಕಾಲೇಜಿದೆ. ಅಲ್ಲಿ ಪ್ರಾಂಶುಪಾಲರು ಸಹ ಅತಿಥಿ ಉಪನ್ಯಾಸಕರಾಗಿದ್ದಾರೆ. ಈ ರೀತಿ ಆದರೆ, ಕಾಲೇಜುಗಳು ಯಾವ ರೀತಿಯಲ್ಲಿ ನಡೆಯಬೇಕೆನ್ನುವುದನ್ನು ಅವರೇ ಹೇಳಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಈಗ ನಿಯೋಜನೆ ಮೇರೆಗೆ ಹೋಗಿರುವವರನ್ನು ಮೊದಲು ಅವರು ಎಲ್ಲಿಲ್ಲಿ ಕಾರ್ಯನಿರ್ವಹಿಸುತ್ತಿದ್ದರೋ ಆ ಸ್ಥಳಕ್ಕೆ ಪುನಃ ವಾಪಸ್ಸು ಕಳುಹಿಸಿಕೊಡಲಿ, ಎರಡು ತಿಂಗಳು ಮುಗಿದ ಮೇಲೆ ಸರ್ಕಾರ ಏನೇನು ಕಾನೂನು ಮಾಡುತ್ತದೆಯೋ ಅದರ ಆಧಾರದ ಮೇಲೆ ಕ್ರಮವನ್ನು ತೆಗೆದುಕೊಳ್ಳಲಿ. ಈ ನಿಯೋಜನೆಗಳನ್ನು ಕಾನೂನು ಬಾಹಿರವಾಗಿ ಮಾಡಲಾಗಿದೆ. ಯಾವ ಅಧಿಕಾರಿಗಳು ಈ ಕೆಲಸವನ್ನು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ತಮಗೆ ಇಷ್ಟ ಬಂದಂತೆ ಕೆಲಸ ಮಾಡುವ ಅಧಿಕಾರಿಗಳನ್ನು ಸರ್ಕಾರ ಸುಮ್ಮನೆ ಬಿಡಬಾರದು. ಈಗ ನಿಯೋಜನೆಯ ಮೇಲೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೋಗಿರುವವರನ್ನು ವಾಪಸ್ಸು ಕರೆಯಿಸಿಕೊಂಡು, ಯಾವ ಅಧಿಕಾರಿಗಳು ಈ ಕೆಲಸವನ್ನು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಾನು ಇದನ್ನು ಇಲ್ಲಿಗೇ ಬಿಡುವುದಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳು ಮಾತಿಗೆ ಸಿಗುವುದೇ ಇಲ್ಲ. ನುಣುಚಿಕೊಳ್ಳುತ್ತಾರೆ. ಯಾವ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ ಎನ್ನುವುದನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಲೇಬೇಕಾಗುತ್ತದೆ.

**ಶ್ರೀ ಅರುಣ ಶಹಾಪುರ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರು ನಮ್ಮ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಆ ಕಾಲೇಜುಗಳ ಪರಿಸ್ಥಿತಿ ಗಂಭೀರವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ತೀವ್ರ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

**ಶ್ರೀ ಶರಣಪ್ಪ ಮಟ್ಟೂರ:–** ಸನ್ಮಾನ್ಯ ಸಭಾಪತಿಯವರೇ, 'ಉಂಡು ಹೋದ, ಕೊಂಡು ಹೋದ' ಎನ್ನುವ ಗಾದೆ ಮಾತಿನಂತೆ ನಮ್ಮ ಭಾಗದಲ್ಲಿದ್ದ ಹುದ್ದೆಗಳ ಅವಕಾಶಗಳನ್ನು ಅವರು ತೆಗೆದುಕೊಂಡಿದ್ದಾರೆ. ಆದರೆ, ಈಗ ನಿಯೋಜನೆಯ ಮೇರೆಗೆ ಇಲ್ಲಿಗೇ ಬಂದಿದ್ದಾರೆ.

**ಡಾ॥ ಸಿ.ಎನ್.ಅಶ್ವತ್ಥನಾರಾಯಣ:–** ಸನ್ಮಾನ್ಯ ಸಭಾಪತಿಯವರೇ, ರಾಜ್ಯದ ಯಾವುದೇ ಭಾಗದಲ್ಲಿ ಯಾವುದೇ ಸಮಸ್ಯೆಗಳಿದ್ದರೂ ಅದನ್ನು ಸರಿಪಡಿಸುವುದಕ್ಕೆ ನಾವು ಕ್ರಮ ಕೈಗೊಳ್ಳುತ್ತೇವೆ. ಅದರ ಬಗ್ಗೆ ಯಾವುದೇ ಅನುಮಾನಗಳು ಬೇಡ. ಸಮಾನವಾಗಿ ಹಂಚಿಕೆಯಾಗುವುದಕ್ಕೆ ಅವರೆಲ್ಲರ ಸಹಕಾರ ಬೇಕಾಗಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಮುಂದಿನ ಎರಡು ತಿಂಗಳುಗಳಲ್ಲಿ ಪರೀಕ್ಷೆ ಬರುತ್ತಿದೆ. ಆದರೆ, ಅಲ್ಲಿ ಅಧ್ಯಾಪಕರಿಲ್ಲ. ಆ ಮಕ್ಕಳ ಪರಿಸ್ಥಿತಿ ಏನಾಗಬೇಕು? ಬೀಳಗಿ ತಾಲ್ಲೂಕು ನನ್ನ ತಾಲ್ಲೂಕಿನಲ್ಲಿರುವ ಕಾಲೇಜಿಗೆ ಗ್ರಾಮಾಂತರ ಪ್ರದೇಶದ ಬಡ ಮಕ್ಕಳು ಬರುತ್ತಾರೆ. ನಾನು ಪ್ರಸ್ತಾಪ ಮಾಡಿರುವ ಕಾಲೇಜಿನಲ್ಲಿ 13 ಜನ ಮಕ್ಕಳು ಓದುತ್ತಿದ್ದಾರೆ. ಅಧ್ಯಾಪಕರೇ ಇಲ್ಲದಿದ್ದರೆ ಆ ಮಕ್ಕಳು ಏನು ಮಾಡಬೇಕು? ಆದ್ದರಿಂದ ಸರ್ಕಾರ ಆ ವಿಚಾರದಲ್ಲಿ ಯಾವ ಕ್ರಮ ತೆಗೆದುಕೊಳ್ಳುತ್ತದೆನ್ನುವುದನ್ನು ಹೇಳಬೇಕಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಬೀಳಗಿ ತಾಲ್ಲೂಕಿನ 65 ತಾಲ್ಲೂಕುಗಳಲ್ಲಿ 13 ತಾಲ್ಲೂಕುಗಳು ಮಾತ್ರ ಉಳಿದಿವೆ. ಉಳಿದ ಎಲ್ಲ ತಾಲ್ಲೂಕುಗಳು ಆಲಮಟ್ಟಿ ಜಲಾಶಯದಲ್ಲಿ ಮುಳುಗಿ ಹೋಗಿವೆ. ಎಲ್ಲರೂ ನಿರಾಶ್ರಿತರಾಗಿದ್ದಾರೆ. ಮನೆ–ಮಠ, ಆಸ್ತಿ–ಪಾಸ್ತಿ ಎಲ್ಲವನ್ನೂ ಕಳೆದುಕೊಂಡು ತಲೆಯ ಮೇಲೆ ಮಸಿ ಕುಡಿಕೆಯನ್ನು ಹೊತ್ತುಕೊಂಡು ಬೀದಿಗೆ ಬಂದಿದ್ದಾರೆ. ಆಸ್ತಿ–ಪಾಸ್ತಿ ಹೋದರೆ ಹೋಗಲಿ ಮಕ್ಕಳು ವಿದ್ಯೆಯನ್ನಾದರೂ ಕಲಿಯಲಿ ಎಂದು ಈ ಕಾಲೇಜಿಗೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಳುಹಿಸಿಕೊಟ್ಟರೆ, ಇಲ್ಲಿ ಗೆಸ್ಟ್ ಲೆಕ್ಚರರ್‌ಗಳಿದ್ದಾರೆ. ಖಾಯಂ ಪ್ರಾಂಶುಪಾಲರು ಮತ್ತು ಅಧ್ಯಾಪಕರು ಇಲ್ಲ. ನಮ್ಮ ಭಾಗ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಿಲ್ಲವೆಂದು, ನಮ್ಮ ಮಕ್ಕಳಿಗೆ ಶಿಕ್ಷಣ ದೊರೆಯಬೇಕೆನ್ನುವ ಉದ್ದೇಶದಿಂದ ಕಷ್ಟಪಟ್ಟು ಸಾಲ ಮಾಡಿ ಜಮೀನು ಖರೀದಿ ಮಾಡಿ ಸರ್ಕಾರಕ್ಕೆ ಜಮೀನು ನೀಡಿದ್ದೇವೆ.

**ಶ್ರೀ ಅರುಣ ಶಹಾಪುರಃ–** ಸನ್ಮಾನ್ಯ ಸಭಾಪತಿಯವರೇ, ಯಾರೋ ತಪ್ಪು ಮಾಡಿ ಅವ್ಯವಹಾರ ಎಸಗಿರುವುದನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ತಮ್ಮ ಮೈಮೇಲೆ ಎಳೆದುಕೊಳ್ಳುವುದು ಬೇಡ. 'ಹಾಲಿನದು ಹಾಲಿಗೆ, ನೀರಿನದು ನೀರಿಗೆ' ಎನ್ನುವ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ಅಕ್ರಮವಾಗಿ ಮಾಡಿರುವ ನಿಯೋಜನೆಗಳನ್ನು ಸರಿಪಡಿಸಬೇಕಾಗಿದೆ. ಕಾನೂನು ಬಾಹಿರವಾಗಿ ಮಾಡಿರುವ ಆದೇಶಗಳನ್ನು ರದ್ದುಪಡಿಸಬೇಕಾಗಿದೆ. ನಿಯೋಜನೆಯ ಮೇಲೆ ಹೋಗಿರುವವರನ್ನು ವಾಪಸ್ಸು ಕರೆಯಿಸಿಕೊಳ್ಳಬೇಕಾಗಿದೆ.

**ಡಾ॥ ಸಿ.ಎನ್.ಅಶ್ವತ್ಥನಾರಾಯಣಃ–** ಸನ್ಮಾನ್ಯ ಸಭಾಪತಿಯವರೇ, ಆ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಅನಾನುಕೂಲತೆಗಳಾಗದಂತೆ ಅವರಿಗೆ ಅವಶ್ಯವಿರುವ ತರಬೇತಿ ಕೊಡಿಸುವುದಕ್ಕೆ ನಾವು ಸೂಕ್ತವಾದ ಕ್ರಮವನ್ನು ವಹಿಸುತ್ತೇವೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಶಿಕ್ಷಕರ ನೇಮಕಾತಿ, ಹಂಚಿಕೆ, ವರ್ಗಾವಣೆ, ನಿಯೋಜನೆ ಇವುಗಳಲ್ಲಿ ಯಾವುದೇ ಸಮಸ್ಯೆಯುಂಟಾಗದೇ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ. ಅದನ್ನು ಅವರು ಕಾದು ನೋಡಬೇಕಾಗಿದೆ. ಇದಕ್ಕಾಗಿ ಅವರುಗಳ ಸಲಹೆ ಸಹಕಾರಗಳ ಅವಶ್ಯಕತೆಯಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ–** ಸನ್ಮಾನ್ಯ ಸಭಾಪತಿಯವರೇ, ಇವರ ಮಾತು ಕೇಳಿದರೆ, 'ಗಿಡದ ಮ್ಯಾಲಿನ ಮಂಗ್ಯಾ ಕೂಡ ಕೈ ಬಿಡುತ್ತದೆ' ನಾನು ಹೇಳುತ್ತಿರುವುದು ಅವರಿಗೆ ಅರ್ಥವಾಗುತ್ತಿಲ್ಲ. ಈಗ ಸಧ್ಯಕ್ಕೆ ಆ ಮಕ್ಕಳಿಗೆ ಯಾವ ವ್ಯವಸ್ಥೆ ಮಾಡಲಾಗುತ್ತದೆ ಎನ್ನುವ ಅಂಶವನ್ನು ಬಿಟ್ಟು ಎಲ್ಲ ವಿಚಾರಗಳನ್ನು ಅವರು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳಾದ ಅಶ್ವತ್ಥನಾರಾಯಣ್‌ರವರು ತಮ್ಮ ಮೈಗೆ ಎಣ್ಣೆ ಹಚ್ಚಿಕೊಂಡಿದ್ದಾರೆ. ಯಾರ ಹಿಡಿತಕ್ಕೂ ಸಿಗದೇ ನುಣುಚಿಕೊಳ್ಳುತ್ತಿದ್ದಾರೆ. ಅವರು ನಿಜವಾಗಿಯೂ ಬುದ್ಧಿವಂತರು. ನಮ್ಮಂತೆ ಹಳ್ಳಿಯಲ್ಲಿ ಹುಟ್ಟಿ ಹಳ್ಳಿಯಲ್ಲಿ ಬೆಳೆದು ಬಂದವರಲ್ಲ. ಬಡತನ, ನಿರಕ್ಷರತೆ ಇವುಗಳ ಮಧ್ಯೆ ಬೆಳೆದು ಬಂದವರು ನಾವು. ನಮಗೆಲ್ಲ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಡತನ ನಮ್ಮ ಬೆನ್ನು ಹತ್ತಿದೆ. ಇವರು ಬೆಳ್ಳಿ ಚಮಚವನ್ನು ತಮ್ಮ ಬಾಯಲ್ಲಿ ಇರಿಸಿಕೊಂಡು ಮೆಟ್ರೋ ಪಾಲಿಟನ್ ಸಿಟಿಯಲ್ಲಿ ಹುಟ್ಟಿ ಬೆಳೆದವರು.

**(243) 9.3.2020 7.00 ಪಿಕೆ:ಎಂಡಿ**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಚಿವರೇ ನೀವು ಸಂಭಾವಿತರೋ ಇಲ್ಲವೋ ಗೊತ್ತಾಗುತ್ತಿಲ್ಲ. ಗೊತ್ತಿದ್ದೂ ಹೀಗೆ ಮಾಡುತ್ತೀರೋ ಅದೂ ಕೂಡ ನನಗೆ ತಿಳಿಯುತ್ತಿಲ್ಲ. ಆ ಮಕ್ಕಳ ಭವಿಷ್ಯವನ್ನು ಹಾಳು ಮಾಡುವ ಕೆಲಸ ಆಗಬಾರದು.

**ಡಾ: ಸಿ.ಎನ್. ಅಶ್ವತ್‌ನಾರಾಯಣ:-** ಆ ಮಕ್ಕಳಿಗೆ ಪಾಠ ಕಲಿಸಲು, ಶಿಕ್ಷಣ ನೀಡಲು ಶಿಕ್ಷಕರನ್ನು ಕೊಡುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ನಿಯೋಜನೆ ಮೇಲೆ ಹೋಗಿರುವ ಶಿಕ್ಷಕರನ್ನು ವಾಪಸ್ಸು ಕರೆಸಿ.

**ಡಾ: ಸಿ.ಎನ್. ಅಶ್ವತ್‌ನಾರಾಯಣ:-** ಈ ನಿಟ್ಟಿನಲ್ಲಿ ಏನು ಮಾಡಬೇಕೆಂದು ನೋಡಿ ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಒಂದು ವಾರದ ಒಳಗೆ ನಮಗೆ ಉತ್ತರ ಬೇಕು. ಆ ಮಕ್ಕಳಿಗೆ ಅನ್ಯಾಯವಾಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಇಲ್ಲದೇ ಇದ್ದರೆ ಸದನದ ಮುಖಾಂತರ ಬೇರೆ ರೀತಿಯಲ್ಲಿಯೇ ಮುಂದುವರೆಯಬೇಕಾಗುತ್ತದೆ. ಆ ಮಕ್ಕಳ ಭವಿಷ್ಯವನ್ನು ಸರ್ಕಾರವೇ ಹಾಳು ಮಾಡುವಂತಹ ಕೆಲಸ ಮಾಡಬಾರದು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, Deputation ಎಂದು ಹೋದಾಗ ಅಲ್ಲಿ ತಚಿಟಿಭಿಚಿಟಿಭಿಥಿ ಇರುವುದಿಲ್ಲ. ಅಲ್ಲಿ ಸಂಬಳ ತೆಗೆದುಕೊಳ್ಳುತ್ತಾರೆ; ಇಲ್ಲಿ ಕೆಲಸ ಮಾಡುತ್ತಾರೆ. ಹೀಗಿರುವಾಗ ಹೇಗೆ ಉಪನ್ಯಾಸಕರನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ? ನೀವು ಅವರನ್ನು ಹಿಂದಕ್ಕೆ ಕರೆಸಿಕೊಂಡು deputation cancel ಮಾಡಬೇಕು. ಇದರಲ್ಲಿ ಮಕ್ಕಳ ಭವಿಷ್ಯ ಅಡಗಿದೆ. ಬದಲಿ ವ್ಯವಸ್ಥೆ ಮಾಡುವುದಕ್ಕೆ ಆಗುವುದಿಲ್ಲ. ದಾಖಲೆಗಳ ಪ್ರಕಾರ ಅವರು ಅಲ್ಲಿನ ಎಂಪ್ಲಾಯಿಗಳಾಗಿದ್ದು ಅಲ್ಲಿಂದಲೇ ಸಂಬಳ ತೆಗೆದುಕೊಳ್ಳುತ್ತಾರೆ ಮತ್ತು ಇಲ್ಲಿ ಬಂದು ಕೆಲಸ ಮಾಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾರ್ಯಾರದೋ ಮರ್ಜಿ ಇಟ್ಟುಕೊಂಡು, ನಮ್ಮಂಥ ಎಂಎಲ್‌ಸಿ, ಎಂಎಲ್‌ಎ ಗಳ ಪ್ರಭಾವದಿಂದ ನೇಮಕಾತಿ ಒಂದು ಕಡೆ, ಕೆಲಸ ಮಾಡುವುದು ಇನ್ನೊಂದು ಕಡೆ ಮಾಡುವುದು ಸರಿಯಲ್ಲ. ವಿದ್ಯಾರ್ಥಿಗಳ ಭವಿಷ್ಯ ಬಹಳ ದೊಡ್ಡದು. ಅದಕ್ಕೋಸ್ಕರ deputation cancel ಮಾಡಿ ಅಥವಾ ಅವರನ್ನು ಪೂರ್ತಿ ವರ್ಗಾವಣೆ ಮಾಡಿ, ಸದರಿ ಜಾಗಕ್ಕೆ ಬೇರೆಯವರನ್ನು ಹಾಕಿ. ಅಧಿಕಾರಿಗಳು ಬೇಜವಾಬ್ದಾರಿಯಿಂದ ನೂರಾರು ಸಂಖ್ಯೆಯಲ್ಲಿ deputation ಎಂದು ವರ್ಗಾವಣೆ ಮಾಡಿದ್ದಾರೆ. ಆ ಅಧಿಕಾರಿಗಳಿಗೆ ಹೇಳುವವರು ಕೇಳುವವರು ಯಾರೂ ಇಲ್ಲವೇ? ಮಕ್ಕಳ ಭವಿಷ್ಯದ ಜೊತೆ ಇವರೇನು ಮಸ್ಕೇರಿ ಮಾಡುತ್ತಿದ್ದಾರೆಯೇ? ಹುಡುಗಾಟ ಮಾಡುತ್ತಿದ್ದಾರೆಯೇ? Genuine ಆದಂಥ ಒಂದು transfer ಕೇಳಿದರೆ ಅದಕ್ಕೆ ನೂರು ಕಥೆಗಳನ್ನು ಹೇಳುತ್ತಾರೆ. ಆದರೆ ಈಗ 197 ಜನರಿಗೆ ಹೇಗೆ deputation ಕೊಟ್ಟರು? ಹಾಕಿದ್ದಾರೋ ಅವರ ಮೇಲೆ ಕ್ರಮ ಕೈಗೊಳ್ಳಬೇಕು. Deputation cancel ಮಾಡಬೇಕು ಇಲ್ಲವೇ ಪೂರ್ತಿ ಣಡಿಚಿಟಿಜಿಜಡಿ ಮಾಡಿ ಉದ್ದೇಶಿತ ಜಾಗಕ್ಕೆ ಹೊಸದಾಗಿ ಬೇರೆಯವರನ್ನು ವರ್ಗಾವಣೆ ಮಾಡಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, Deputation ಎಂದರೆ ನಿಯೋಜನೆ. ಮಕ್ಕಳ ಅನುಕೂಲದ ಸಲುವಾಗಿ ಶಿಕ್ಷಕರನ್ನು ನಿಯೋಜನೆ ಮಾಡುತ್ತಾರೆ. ಶಿಕ್ಷಕರ ಅನುಕೂಲದ ಸಲುವಾಗಿ ನಿಯೋಜನೆ ಆಗುವಂಥದ್ದು ಆಗಬಾರದು. ಎಲ್ಲಿ ಮಕ್ಕಳಿಗೆ ವಿದ್ಯೆ ಸಿಗುವುದಿಲ್ಲವೋ ಅಲ್ಲಿ ಶಿಕ್ಷಕರನ್ನು ನಿಯೋಜನೆಗೊಳಿಸಬೇಕು. ಆದರೆ ಇಲ್ಲಿ ಶಿಕ್ಷಕರ ಅನುಕೂಲದ ಸಲುವಾಗಿ ನಿಯೋಜನೆ ಮಾಡಿದ್ದಾರೆ. Deputation will not be in the interest of the children; it will be in the interest of teachers. This is very bad.

**ಶ್ರೀ ಆಯನೂರು ಮಂಜುನಾಥ್:-** ಇದು 197 ಶಿಕ್ಷಕರ ಪ್ರಶ್ನೆಯಲ್ಲ. ಅಲ್ಲಿನ ಸಾವಿರಾರು ಜನ ವಿದ್ಯಾರ್ಥಿಗಳ ಪ್ರಶ್ನೆ. 197 ಜನರಿಗೋಸ್ಕರ ಸಾವಿರರು ವಿದ್ಯಾರ್ಥಿಗಳ ಭವಿಷ್ಯವನ್ನು ಬಲಿ ಕೊಡುವುದಕ್ಕಾಗುವುದಿಲ್ಲ. ನಮ್ಮ ಮಕ್ಕಳಿಗೆ ಹೀಗಾಗಿದ್ದರೆ ನಾವು ಸುಮ್ಮನೆ ಇರುತ್ತಿದ್ದೇವೆಯೇ? Deputation ರದ್ದು ಮಾಡಬೇಕು ಇಲ್ಲವೇ ಬೇರೆ ಶಿಕ್ಷಕರನ್ನು ಅಲ್ಲಿಗೆ ವರ್ಗಾವಣೆ ಮಾಡಬೇಕು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** deputation ಗೆಂದು ಯಾರು ದುಡ್ಡು ಕೊಟಿದ್ದರೋ ಆ ದುಡ್ಡನ್ನು ಅವರವರಿಗೆ ವಾಪಸ್ಸು ಕೊಟ್ಟು ಅವರ deputation ನ್ನು ರದ್ದು ಮಾಡಿಬಿಡಿ.

**ಶ್ರೀ ಎಸ್.ಆರ್.ಪಾಟೀಲ್:-** ದುಡ್ಡು ಯಾರು ತೆಗೆದುಕೊಂಡಿದ್ದಾರೆ? ದುಡ್ಡಿನ ಬಗ್ಗೆ ಮಾನ್ಯ ಸದಸ್ಯರು ಏನೋ ಹೇಳುತ್ತಿದ್ದಾರೆ ಕೇಳಿ.

**ಡಾ: ಸಿ.ಎನ್. ಅಶ್ವತ್‌ನಾರಾಯಣ:-** ಅದನ್ನು ಅವರು ಅವರ ಛಿಂಟಟಜಚಿರ್ಣಾಜ ಹತ್ತಿರ ಕೇಳಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಈಗ ಅವರು ನಮ್ಮ ಕಡೆ ಇಲ್ಲ, ನಿಮ್ಮ ಕಡೆ ಇದ್ದಾರೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೆ, ಅವರ deputation cancel ಮಾಡಿ ಮೂಲ ಪೋಸ್ಟಿಂಗ್ ಎಲ್ಲಿದೆಯೋ ಅಲ್ಲಿಗೆ ಅವರನ್ನು ಕಳುಹಿಸಿ ಕೊಡಿ. ಒಂದೇ ಆರ್ಡರ್ ಹೊರಡಿಸಿ ಈ ಕೆಲಸ ಮಾಡಬಹುದು. ಹಿಂದೆ ಯಾರೋ ಈ ಕೃತ್ಯಗಳನ್ನು ಮಾಡಿದ್ದು ಈಗ ನಮ್ಮ ಸಚಿವರ ತಲೆಯ ಮೇಲೆ ಬಂದು ಕುಳಿತಿದೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಕಳೆದ ಎರಡು ಗಂಟೆಗಳಿಂದ ಇಷ್ಟೊಂದು ಗಂಭೀರವಾದಂತಹ ಪ್ರಶ್ನೆ-ಉತ್ತರಗಳ ಚರ್ಚೆ ನಡೆಯುತ್ತಿದ್ದರೂ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಕಾಣೆಯಾಗಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಅವರು ಬೇಜವಾಬ್ದಾರರು.

**ಶ್ರೀ ಮರಿತಿಬ್ಬೇಗೌಡ:-** ಇಷ್ಟೊಂದು ಬೇಜವಾಬ್ದಾರಿಯಿಂದ ಇರಬಾರದು. ಇದನ್ನು ಸಹಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಉಪಮುಖ್ಯಮಂತ್ರಿಗಳೇ, ನಿಮ್ಮ ಇಲಾಖೆಯ ಕಾರ್ಯದರ್ಶಿಯವರು ಬೇಜವಾಬ್ದಾರರಾಗಬಾರದು. ಸದನ ನಡೆಯುತ್ತಿರುವಾಗ ಸದನದಲ್ಲಿರುವುದು ಬಿಟ್ಟು, ಇದಕ್ಕಿಂತ ಮುಖ್ಯವಾದ ಕೆಲಸ ಬೇರೆ ಯಾವುದಿರುತ್ತದೆ? ಮಾನ್ಯ ಸಭಾಪತಿಯವರೇ, ಇದನ್ನು ಸಹಿಸಿಕೊಳ್ಳುವುದಕ್ಕೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗುವದಿಲ್ಲ. ಅವರ ಮೇಲೆ ಕ್ರಮ ಆಗಬೇಕು. ಅವರು ಚಳುವಳಿ ನಡೆಯುತ್ತಿರುವ ಜಾಗಕ್ಕೆ ಹೋಗಿದ್ದಾರೆ ಎಂದು ಹೇಳಿದಿರಿ. 2 ಗಂಟೆಗಳಿಂದ ಅಲ್ಲೇ ಇದ್ದಾರೆಯೇ? ಫ್ರೀಡಂ ಪಾರ್ಕ್ ಎಷ್ಟು ದೂರ ಇದೆ? ಇವತ್ತು ಶಿಕ್ಷಣ ಇಲಾಖೆಯ ಬಗ್ಗೆ ಚರ್ಚೆ ನಡೆಯುತ್ತಿದೆ; ಉನ್ನತ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ಪ್ರಶ್ನೆಗಳಿವೆ ಎಂದು ಅವರಿಗೆ ಗೊತ್ತಾಗಬೇಕು ಅಲ್ಲವೇ? ಗೊತ್ತಿಲ್ಲ ಎಂದು ಹೇಳುವುದಕ್ಕೆ ಅವರೇನು ಹೊಸದಾಗಿ ಐಎಎಸ್ ಮಾಡಿಕೊಂಡಿದ್ದಾರೆಯೇ? ಹಿರಿಯ ಅಧಿಕಾರಿಗಳಾಗಿದ್ದು ಹೀಗೆ ಮಾಡಬಹುದೇ? ಮಾನ್ಯ ಸಭಾಪತಿಯವರೇ, ಇದರ ಮೇಲೆ ಕ್ರಮ ಆಗಬೇಕು.

**ಡಾ: ಸಿ.ಎನ್. ಅಶ್ವತ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ಈಗ academic year 2 ತಿಂಗಳು ಇರುವುದರಿಂದ, ಪಾಠ ಹೇಳಿಕೊಡುವುದಕ್ಕೆ ಸಮಸ್ಯೆ ಇರುವ ಕಾಲೇಜುಗಳಲ್ಲಿ Guest Lecturers ಗಳನ್ನು ನೇಮಕ ಮಾಡುವ ವ್ಯವಸ್ಥೆ ಮಾಡಲಾಗುತ್ತದೆ. ಈ academic year ಆದಮೇಲೆ ಇಂತಹ ಯಾವುದೇ ರೀತಿಯ ಸಮಸ್ಯೆ ಬರದ ಹಾಗೆ ಕ್ರಮ ವಹಿಸಲಾಗುತ್ತದೆ.

**ಪ್ರಶ್ನೆ ಸಂಖ್ಯೆ: 533**

**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ನಾನು ಶಾಸಕನಾಗಿ 10 ವರ್ಷವಾಯಿತು. ಮೊದಲನೆಯ ಪ್ರಶ್ನೆ ಕೇಳಿದ ಸಂದರ್ಭದಲ್ಲಿ ಬಹಳ ಪಾಸಿಟಿವ್ ಆಗಿ ಶಿಕ್ಷಣ ಸಚಿವರು ಉತ್ತರ ಕೊಟ್ಟಿದ್ದಾರೆ. ನಾನು ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗಾಗಲೇ ಧಾರವಾಡದ ಕಮಿಷನರ್‌ರವರು ಈ ಹುದ್ದೆ ಭರ್ತಿ ಮಾಡುವುದಕ್ಕೆ ಸ್ಪಷ್ಟನೆ ಕೋರಿದ್ದಾರೆ ಎಂದು ಹೇಳಿದ್ದೀರಿ; ತಾವು ಅದಕ್ಕೆ ಸ್ಪಷ್ಟನೆ ಕೊಡುತ್ತೇವೆ ಎಂದು ತಿಳಿಸಿದ್ದೀರಿ. ಹುದ್ದೆ ಭರ್ತಿ ಮಾಡಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡುತ್ತೇವೆ ಎಂದು ಈಗ ಹೇಳಿದರೆ ನಾನು ತಮಗೆ ಅಭಿನಂದನೆ ಸಲ್ಲಿಸುತ್ತೇನೆ.

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಅತಿ ಶೀಘ್ರದಲ್ಲೇ ಆ ಹುದ್ದೆಯನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಅರುಣ ಶಹಾಪುರ:–** ನಾನು ಮಾನ್ಯ ಶಿಕ್ಷಣ ಸಚಿವರಿಗೆ ಅಭಿನಂದನೆ ಸಲ್ಲಿಸುತ್ತಿದ್ದೇನೆ. ಮಾನ್ಯ ಸಚಿವರ ಉತ್ತರದಿಂದ ನನಗೆ ಒಂದು ಹಂಡೆ ಹಾಲು ಕುಡಿದಷ್ಟು ಸಂತೋಷವಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಪ್ರಶ್ನೆ ಸಂಖ್ಯೆ : 688**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಜಯಮ್ಮ:–** ಮಾನ್ಯ ಸಭಾಪತಿಯವರೇ, ನಾನು, ಗೊಲ್ಲ ಜನಾಂಗದ ಅಭಿವೃದ್ಧಿ ನಿಗಮ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ಎಂದು ಕೇಳಿದ್ದೆ. ಅದಕ್ಕೆ, ಹಿಂದುಳಿದ ವರ್ಗಗಳ ಅಲೆಮಾರಿ/ಅರೆ ಅಲೆಮಾರಿ ಜನಾಂಗದ 46 ಜಾತಿಗಳ ಪೈಕಿ ಗೊಲ್ಲ ಸಮುದಾಯವು ಸೇರಿದ್ದು, ಈ 46 ಜಾತಿಗಳ ಅಭಿವೃದ್ಧಿಗಾಗಿ ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮವನ್ನು ದಿನಾಂಕ 27.2.2020ರಂದು ಕಂಪನಿ ಕಾಯ್ದೆ 2013ರನ್ವಯ ನೋಂದಾಯಿಸಿ ಸ್ಥಾಪಿಸಲಾಗಿರುತ್ತದೆ ಎಂದು ಹೇಳಿದ್ದಾರೆ. ದೃಶ್ಯ ಮಾಧ್ಯಮಗಳಲ್ಲಿ ಈ ನಿಗಮಕ್ಕೆ ರೂ. 78 ಕೋಟಿ ಅನುದಾನ ಕೊಟ್ಟಿದ್ದಾರೆ ಎನ್ನುವ ವಿಚಾರ ಬಂತು. ಇದು ಬಜೆಟ್‌ನಲ್ಲೂ ಇದೆ. ರೂ. 10 ಕೋಟಿ ಅನುದಾನವನ್ನು ಪ್ರತ್ಯೇಕವಾಗಿ ಗೊಲ್ಲ ಸಮುದಾಯಕ್ಕೆ ಕೊಟ್ಟಿದ್ದಾರೆಯೇ? ಅಥವಾ ಅಲೆಮಾರಿ/ಅರೆ ಅಲೆಮಾರಿ ಜನಾಂಗದ 46 ಜಾತಿಗಳ ಸಮುದಾಯದಕ್ಕೆ ಕೊಟ್ಟಿರುವ ಮೊತ್ತದಲ್ಲೇ ಇದನ್ನು ಸೇರಿಸಿದ್ದಾರೆಯೇ ದಯವಿಟ್ಟು ತಿಳಿಸಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಗೊಲ್ಲ ಜನಾಂಗದ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲಾಗಿದೆಯೇ ಎಂದು ಕೇಳಿರುವ ಪ್ರಶ್ನೆಗೆ ಇಲ್ಲ ಎಂದು ಉತ್ತರ ಕೊಡಲಾಗಿದೆ. ಅಲೆಮಾರಿ/ಅರೆ ಅಲೆಮಾರಿ ಜನಾಂಗದ 46 ಜಾತಿಗಳ ಪೈಕಿ ಗೊಲ್ಲ ಸಮುದಾಯವೂ ಸೇರಿರುತ್ತದೆ. ಆ ಕಾರಣಕ್ಕೋಸ್ಕರ ಕಂಪನಿ ಕಾಯ್ದೆ 2013ರನ್ವಯ ನೋಂದಾಯಿಸಿ, ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮದಲ್ಲಿ ಇದನ್ನು ಅಳವಡಿಸಿಕೊಳ್ಳಲಾಗಿದೆ. ಅಲೆಮಾರಿ ಜನಾಂಗಕ್ಕೆ ಸಿಗಬೇಕಾದ ಎಲ್ಲಾ ಸವಲತ್ತುಗಳನ್ನು ಈ ಗೊಲ್ಲ ಜನಾಂಗಕ್ಕೂ ನೀಡಲಾಗುತ್ತಿದೆ. ಮಾನ್ಯ ಸದಸ್ಯರು, ರಾಜ್ಯದಲ್ಲಿ ಇರುವ ಗೊಲ್ಲ ಜನಾಂಗದ ಜನಸಂಖ್ಯೆ ಎಷ್ಟು ಎಂದು ಕೇಳಿದ್ದಾರೆ. ಈಗಿರುವ ಅಂಕಿಅಂಶಗಳು ಪ್ರಕಾರ 5,29,222 ಮಂದಿ ಇದ್ದಾರೆ. ಇದು 1984ರ ಅಂಕಿಅಂಶ ಮತ್ತು ಶ್ರೀ ವೆಂಕಟಸ್ವಾಮಿ ಆಯೋಗದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರದಿಯಾಗಿದೆ. ಆ ನಂತರ ಸಮೀಕ್ಷೆಯಾಗಿಲ್ಲ. ಅವರಿಗೆ ಏನೇನು ಸವಲತ್ತು ಸಿಗುತ್ತದೆ ಎಂದರೆ, ಅಲೆಮಾರಿ/ಅರೆ ಅಲೆಮಾರಿ ಜನಾಂಗಕ್ಕೆ ಸಿಗಬಹುದಾದಂಥ 6 ಯೋಜನೆಗಳಲ್ಲಿ, ಭೂಖರೀದಿ, ಸಾಂಪ್ರದಾಯಿಕ ವೃತ್ತಿಗೆ ನೆರವು, ಗಂಗಾ ಕಲ್ಯಾಣ ಯೋಜನೆ, ಅರಿವು ಶಿಕ್ಷಣ ಯೋಜನೆ, ಕಿರು ಸಾಲ ಮತ್ತು ಸ್ವಯಂ ಉದ್ಯೋಗ ಇವೆಲ್ಲವನ್ನೂ ನೀಡಲಾಗಿದೆ.

**(244) 9-3-2020 7.10 ಡಿಎಸ್-ಎಕೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು):-**

2019-2020ನೇ ಸಾಲಿನಲ್ಲಿ ಅಲೆಮಾರಿ/ಅರೆ ಅಲೆಮಾರಿ ಸಮುದಾಯಕ್ಕೆ ಅಂದರೆ ಗೊಲ್ಲ ಸಮುದಾಯಕ್ಕೆ ಸೇರಿದ 1231 ಜನರಿಗೆ 11.35 ಕೋಟಿ ರೂಪಾಯಿಗಳ ಆರ್ಥಿಕ ನೆರವು ನೀಡಲಾಗಿದೆ ಎಂದು ಉಲ್ಲೇಖ ಮಾಡಲಾಗಿದೆ. 2020-2021ನೇ ಸಾಲಿನ ಆಯವ್ಯಯದಲ್ಲಿ ಗೊಲ್ಲ ಸಮುದಾಯದ ಅಭಿವೃದ್ಧಿಗೋಸ್ಕರ 10 ಕೋಟಿ ರೂಪಾಯಿಗಳನ್ನು ಮೀಸಲಿರಿಸಲಾಗಿದೆ ಎಂದು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ತರಬಯಸುತ್ತೇನೆ.

**ಶ್ರೀಮತಿ ಜಯಮ್ಮ:-** ಮಾನ್ಯ ಸಭಾಪತಿಯವರೇ, ಗೊಲ್ಲ ಸಮುದಾಯದಿಂದ ಶಿಕ್ಷಕರ ಕ್ಷೇತ್ರ, ಪದವೀಧರ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿರುವಂಥವರು ಇದ್ದಾರೆ. ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ನಾನು ಒಬ್ಬಳೇ ಆಯ್ಕೆಯಾಗಿ ಬಂದಿದ್ದೇನೆ. ಸ್ವಾತಂತ್ರ್ಯ ಬಂದಾಗಿನಿಂದಲೂ ಯಾರೂ ಗೊಲ್ಲ ಜನಾಂಗದ ಮಹಿಳೆ ಎಂ.ಎಲ್.ಸಿ.ಯಾಗಿರಲಿಲ್ಲ. ಹಿಂದುಳಿದ ವರ್ಗದ ಮಹಿಳೆಯನ್ನು ಸನ್ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಎಂ.ಎಲ್.ಸಿ.ಯಾಗಿ ಮಾಡಿದರು. ಬೇರೆ ಬೇರೆ ಸಾಕಷ್ಟು ಜನರು ಎಂ.ಎಲ್.ಎ., ಎಂ.ಎಲ್.ಸಿ.ಗಳಿದ್ದಾರೆ ಅವರು ಪ್ರಶ್ನೆ ಕೇಳುತ್ತಾರೆ. ಆದರೆ ನಾನು ಇಲ್ಲಿ ಒಬ್ಬಳೇ ಇರುವುದರಿಂದ ಬೆಳಕು ಚೆಲ್ಲಬೇಕಾಗಿದೆ. ನನ್ನ ಪರವಾಗಿ ಇಡೀ ಸದನವೇ ಇರಬೇಕಾಗುತ್ತದೆ. ಏಕೆಂದರೆ, ಬೇರೆ ಬೇರೆ ಸಮುದಾಯಗಳಿಗೆ ನಿಗಮಗಳನ್ನು ಮಾಡಿದ್ದಾರೆ, ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ಗೊಲ್ಲ ಸಮುದಾಯಕ್ಕೂ ಒಂದು ನಿಗಮವನ್ನು ಮಾಡಬೇಕು. ಅವರ ಹತ್ತಿರ ಮತ ಕೇಳುವುದಕ್ಕೆ ಮಾತ್ರ ಎಂ.ಎಲ್.ಎ., ಎಂ.ಎಲ್.ಸಿ.ಗಳು ಹೋಗುತ್ತಾರೆ. ಆದರೆ ಗೊಲ್ಲರ ಹಟ್ಟಿಗಳಿಗೆ ಹೋಗುವುದಕ್ಕೆ ರಸ್ತೆಗಳಿಲ್ಲ, ಚರಂಡಿಗಳಿಲ್ಲ, ಮೂಲಭೂತ ಸೌಕರ್ಯಗಳಿಲ್ಲ. ಈಗ ಇಟ್ಟಿರುವ ಹಣದಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಹೇಗಾಗುತ್ತದೆ? ಈಗ ಇಟ್ಟಿರುವ ಹಣ ಸಾಕಾಗುವುದಿಲ್ಲ. ನೂರು ಕೋಟಿ ಹಣವನ್ನಾದರೂ ನಮ್ಮ ಗೊಲ್ಲ ಸಮುದಾಯಕ್ಕೆ ಮೀಸಲಾಗಿಟ್ಟರೆ ಮಾತ್ರ ಗೊಲ್ಲರ ಹಟ್ಟಿಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗುತ್ತದೆ. ಗೊಲ್ಲರ ಹಟ್ಟಿಗಳ ಬಗ್ಗೆ ಎಲ್ಲರೂ ಮೂಢನಂಬಿಕೆ ಎಂದು ಹೇಳುತ್ತಾರೆ. ಆದರೆ, ಕೇವಲ ಬಾಯಲ್ಲಿ ಮಾತ್ರ ಹೇಳುತ್ತಾರೆ. ನಾನು ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ನೂರು ಕೋಟಿ ರೂಪಾಯಿಗಳ ಅನುದಾನ ಗೊಲ್ಲ ಸಮುದಾಯಗೋಸ್ಕರ ಮೀಸಲಿಡಬೇಕಾಗುತ್ತದೆ. ಗೊಲ್ಲ ಸಮುದಾಯಕ್ಕೆ ಗಂಗಾ ಕಲ್ಯಾಣ, ಶಿಕ್ಷಣ, ಶೌಚಾಲಯ, ಮನೆಗಳು, ರಸ್ತೆಗಳು ಬೇಕು. ಗೊಲ್ಲರ ಹಟ್ಟಿಗಳಿಗೆ ಹೋಗುವುದಕ್ಕೆ ರಸ್ತೆ ಕೂಡ ಇಲ್ಲ. ಚುನಾವಣೆ ಬಂದಾಗ ಮಾತ್ರ ಎಷ್ಟು ಮತಗಳಿವೆ ಎಂದು ಪಟ್ಟಿ ಇಟ್ಟುಕೊಂಡು ಎಲ್ಲರೂ ಹೋಗುತ್ತಾರೆ. ಆದರೆ ಗೊಲ್ಲರ ಹಟ್ಟಿಗಳನ್ನು ಗಮನಿಸುವವರು ಯಾರು? ನಾನು ಐದು ವರ್ಷಗಳಿಂದಲೂ ಕೇಳುತ್ತಿದ್ದೇನೆ, ಈ ಸರ್ಕಾರವಾದರೂ ಗೊಲ್ಲರ ಅಭಿವೃದ್ಧಿ ನಿಗಮವನ್ನು ಮಾಡಿದರೆ ಗೊಲ್ಲರ ಹಟ್ಟಿ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಬಯಸುತ್ತಿದ್ದೇನೆ. ಮಾನ್ಯ ಸಿದ್ದರಾಮಯ್ಯನವರು ನನ್ನನ್ನು ಎಂ.ಎಲ್.ಸಿ. ಮಾಡಿದರು. ಮಾನ್ಯ ದೇವರಾಜ ಅರಸುರವರ ಕಾಲದಲ್ಲಿ ಉಳುವವನೇ ಭೂಮಿ ಒಡೆಯ ಎಂದು ಹೇಳಿದರು. ಅದೇ ರೀತಿ ವಾಸಿಸುವವನೇ ಮನೆಯ ಒಡೆಯ ಎಂದು ಮಾನ್ಯ ಸಿದ್ದರಾಮಯ್ಯನವರ ಸರ್ಕಾರದಲ್ಲಿ ರಾಷ್ಟ್ರಪತಿ ಅಂಕಿತ ಕೂಡ ಆಗಿದೆ. ಆದರೆ, ಗೊಲ್ಲರ ಹಟ್ಟಿಗಳು ಕಂದಾಯ ಗ್ರಾಮಗಳಾಗುವುದಕ್ಕೆ ಇವತ್ತಿಗೂ ಕೂಡ ಸರ್ವೆ ಆಗಿಲ್ಲ. ಅದರ ಬಗ್ಗೆಯೂ ಕೂಡ ಸರ್ಕಾರ ಶಿಫಾರಸ್ಸು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡುತ್ತಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಶ್ರೀಮತಿ ಜಯಮ್ಮರವರು ಬಹಳ ಮುಖ್ಯವಾದ ಪ್ರಶ್ನೆಯನ್ನು ಕೇಳಿದ್ದಾರೆ. ಸರ್ಕಾರ ಇದರ ಬಗ್ಗೆ ಗಮನಹರಿಸಬೇಕಾಗಿದೆ. ಉತ್ತರದಲ್ಲಿ ಕೊಟ್ಟಿರುವಂತಹ ಅಂಕಿಅಂಶಗಳು ತೃಪ್ತಿದಾಯಕವಾಗಿಲ್ಲ ಎಂದು ನಾನು ವೈಯಕ್ತಿಕವಾಗಿ ಹೇಳಬಯಸುತ್ತಿದ್ದೇನೆ. ಅದನ್ನು ಮಾನ್ಯ ಸಚಿವರು ಪರಿಶೀಲಿಸಬಹುದು. ತುಮಕೂರು, ಚಿತ್ರದುರ್ಗ ಮತ್ತು ಚಿಕ್ಕಮಗಳೂರಿನಲ್ಲಿ ನನಗೆ ವೈಯಕ್ತಿಕವಾಗಿ ಗೊತ್ತಿರುವ ಪ್ರಕಾರ ತುಮಕೂರಿನಲ್ಲೇ ಒಂದೂವರೆ ಲಕ್ಷ ಮತದಾರರು ಇದ್ದಾರೆ. ಚಿತ್ರದುರ್ಗದ Parliamentary segment ನಲ್ಲಿ ಸುಮಾರು ಒಂದೂವರೆ ಲಕ್ಷ ಮತದಾರರು ಇದ್ದಾರೆ. ಒಂದು ಲಕ್ಷ ಜನಸಂಖ್ಯೆ ಇದ್ದಾರೆ ಎಂದು ಉತ್ತರದಲ್ಲಿ ಹೇಳುತ್ತಿದ್ದಾರೆ. ವಿಶೇಷವಾಗಿ ಗೊಲ್ಲ ಜನಾಂಗ ಕೃಷ್ಣನ ವಂಶಸ್ಥರು. ಇವರು ವಾಸ ಮಾಡತಕ್ಕಂಥದ್ದು ಗುಡ್ಡಗಾಡು ಪ್ರದೇಶದಲ್ಲಿ. ಅವರು ಏಕೆ ಗುಡ್ಡಗಾಡು ಪ್ರದೇಶದಲ್ಲಿ ಹಟ್ಟಿಯನ್ನು ಮಾಡಿದ್ದಾರೆಂದರೆ, ಅವರ ಕುಲಕಸುಬು ಕುರಿ ಸಾಕಾಣಿಕೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ||ವೈ.ಎ.ನಾರಾಯಣಸ್ವಾಮಿ:-** ಅವರ ಕುಲಕಸುಬು ಗೋವು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅದು ಹೋಗಾಯಿತು. ಗೊಲ್ಲರಿಗೆ ಮುಖ್ಯವಾಗಿ ಇರತಕ್ಕಂಥದ್ದು ಕುರಿ ಸಾಕಾಣಿಕೆ. ಆಡು ಮತ್ತು ಮೇಕೆ. ಅವರು ಗುಡ್ಡಗಾಡು ಪ್ರದೇಶದಲ್ಲಿ ಏಕೆ ಮನೆ ಮಾಡುತ್ತಾರೆಂದರೆ ಅಲ್ಲೆ ದೊಡ್ಡದಾಗಿ ದೊಡ್ಡಿ ಮಾಡಿ ಅಲ್ಲೇ ವಾಸವಾಗಿರುತ್ತಾರೆ. ಕುರಿಗಳು ಮೇವನ್ನು ಮೇಯುವುದಕ್ಕೆ ಅನುಕೂಲವಾಗಲಿ ಎಂದು ಗುಡ್ಡಗಾಡು ಪ್ರದೇಶದಲ್ಲಿ ಮನೆ ಮಾಡಿಕೊಂಡಿರುತ್ತಾರೆ. ಆ ಗುಡ್ಡದಲ್ಲಿ ವಾಸ ಇರತಕ್ಕಂಥದ್ದು ಅರಣ್ಯ ಪ್ರದೇಶ ಇರಬಹುದು, ಕಂದಾಯ ಜಾಗದಲ್ಲಿ ಅವರು ಮನೆ ಕಟ್ಟಿಕೊಂಡಿದ್ದರು. ಹಾಗಾಗಿ ಇನ್ನು ಕೂಡ ಆ ಜಾಗವನ್ನು ಕಂದಾಯ ಇಲಾಖೆಯವರು ಶೇಕಡ 50 ರಷ್ಟು ಗುರುತು ಮಾಡಿಲ್ಲ. ಇದರ ಬಗ್ಗೆ ಕೂಡ ಕಾಳಜಿ ವಹಿಸಬೇಕು. ಮೊನ್ನೆ ನಾನು ಸದನದಲ್ಲಿ ಚರ್ಚೆ ಮಾಡಿದ್ದೇನೆ. ಹೆಣ್ಣುಮಕ್ಕಳು ಋತುಮತಿಯಾದಂತಹ ಸಂದರ್ಭದಲ್ಲಿ ಆ ಹೆಣ್ಣುಮಕ್ಕಳನ್ನು ಊರಿಂದ ಹೊರಗಡೆ ಇಡುತ್ತಾರೆ. ಊರಿಂದ ಹೊರಗಡೆ ಇವತ್ತಿಗೂ ಕೂಡ ಗುಡಿಸಲು ಹಾಕಿ ಹಸಿರು ಸೊಪ್ಪು ಹಾಕಿ ಅವರನ್ನು ಅದರಲ್ಲಿಟ್ಟು ದಿನಗಳು ಮುಗಿದ ಮೇಲೆ ವಾಪಸ್ ಕರೆದುಕೊಳ್ಳುತ್ತಾರೆ. ಇಂತಹ ಪದ್ಧತಿಯನ್ನು ಅವರು ಪಾಲನೆ ಮಾಡುತ್ತಿದ್ದಾರೆ. ಅವರಿಗೆ ಕೃಷ್ಣ ಕುಟೀರ ಎಂದು ಮಾಡಿಕೊಡುತ್ತೇವೆಂದು ಹೇಳಿದರು. ಆದರೆ ಅವರಿಗೆ ಇವತ್ತಿನವರೆವಿಗೂ ಅದು ಆಗಲಿಲ್ಲ. ದಯಮಾಡಿ ಇದರ ಬಗ್ಗೆ ಸರ್ಕಾರ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಶ್ರೀಮತಿ ಜಯಮ್ಮರವರು ಕೇಳಿದ ಪ್ರಶ್ನೆಗೆ ಸಮರ್ಪಕವಾಗಿ ಉತ್ತರ ಕೊಡಲಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಭೋಜೇಗೌಡರು ಪೂರಕವಾದ ಪ್ರಶ್ನೆಗಳನ್ನು ಕೇಳಿದ್ದಾರೆ. ಅವರು ಕೃಷ್ಣನ ವಂಶಸ್ಥರು ಅದಕ್ಕಾಗಿ ಅವರಿಗೆ ವಿಶೇಷವಾದ ನೆರವನ್ನು ಕೊಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಮುಂದಿನ ದಿವಸಗಳಲ್ಲಿ ಅದನ್ನು ಯಥಾವತ್ತಾಗಿ ಗಮನಿಸಲಾಗುವುದು.

**ಶ್ರೀಮತಿ ಜಯಮ್ಮ:-** ಮಾನ್ಯ ಸಭಾಪತಿಯವರೇ, ಕೇವಲ ಉತ್ತರ ಕೊಟ್ಟ ತಕ್ಷಣ ಸಂತೋಷಪಡುವುದಲ್ಲ. ನಿಜವಾಗಿಯೂ ನಿಗಮ ಆಗಲೇಬೇಕು. ಇಲ್ಲದಿದ್ದರೆ ನಾನು ವಿಧಾನಸೌಧದ ಮುಂದೆ ಧರಣಿ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಶ್ರೀಮತಿ ಜಯಮ್ಮನವರ ಉಲ್ಲೇಖದಂತೆ ಗೊಲ್ಲ ಜನಾಂಗದ ಬಗ್ಗೆ ವಿಶೇಷವಾದ ಗೌರವವಿದೆ. ಅತ್ಯಂತ ಕಾಳಜಿಯಿಂದ ಅವರ ಸಮಸ್ಯೆಗಳನ್ನು ಪರಿಹಾರ ಮಾಡಲಾಗುವುದು.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 9ನೇ ಮಾರ್ಚ್ 2020, ಸಮೂಹ–1ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 100 ಪ್ರಶ್ನೆಗಳ ಪೈಕಿ 77 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:–** ಮಂಡಿಸಲಾಯಿತು.

**6.<u>ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು</u>**

**ಅ) ರಾಜ್ಯದ ನದಿಗಳ ಪಾತ್ರದ ಸ್ಥಳಗಳಲ್ಲಿ ಗಣಿಗಾರಿಕೆ ನಡೆಯುತ್ತಿರುವ ಬಗ್ಗೆ.**

– – –

**ಡಾ॥ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನದಿಗಳ ಪಾತ್ರದಲ್ಲಿ ಅವ್ಯಾಹತವಾಗಿ ಮರಳು ಗಣಿಗಾರಿಕೆ ನಡೆಯುತ್ತಿದ್ದು, ನದಿಗಳ ಪಾತ್ರಕ್ಕೆ ಧಕ್ಕೆ ಆಗುತ್ತಿದೆ ಎಂದು ದಿನಾಂಕ:09.03.2020ರ ಪ್ರಜಾವಾಣಿ ದಿನಪತ್ರಿಕೆಯಲ್ಲಿ ವರದಿಯಾಗಿದೆ. ಈ ಕುರಿತು ಸದನದ ಗಮನ ಸೆಳೆಯಬಯಸುತ್ತಿದ್ದೇನೆ.

ಜಲಕ್ಷಾಮ, ಪ್ರವಾಹದಿಂದ ಕಂಗೆಟ್ಟಿರುವ ರಾಜ್ಯಕ್ಕೆ ನದಿ ಪಾತ್ರದ ಗಣಿಗಾರಿಕೆ ಆತಂಕವಾಗಿ ಕಾಡಿದೆ. ಪರಿಸರ ತಜ್ಞರು, ವಿಜ್ಞಾನಿಗಳ ಎಚ್ಚರಿಕೆ ನಡುವೆಯೂ ನದಿಗಳ ವ್ಯವಸ್ಥೆಗೆ ಧಕ್ಕೆ ಬರುವ ರೀತಿ ಗಣಿಗಾರಿಕೆ ನಡೆಯುತ್ತಿದೆ. ನದಿ ಪಾತ್ರದಿಂದ ಅಧಿಕ ಪ್ರಮಾಣದಲ್ಲಿ ಮರಳು ತೆಗೆಯುತ್ತಿರುವುದರಿಂದ ನದಿಗಳ ಅಸ್ತಿತ್ವಕ್ಕೆ ಸಂಚಕಾರ ಉಂಟಾಗುತ್ತಿದೆ. ಅಷ್ಟೆ ಅಲ್ಲದೇ ಬೇಸಿಗೆಯಲ್ಲಿ ನದಿಗಳಲ್ಲಿ ನೀರು ಇಂಗಿ ಹೋದರೆ ಮಳೆಗಾಲದಲ್ಲಿ ಪ್ರವಾಹದಿಂದ ನದಿಗಳು ದಿಕ್ಕು ಬದಲಿಸುವ ಬೆಳವಣಿಗೆ ಬಹಳ ಆಂತಕಕಾರಿಯಾಗಿದೆ. ಅಳಿದುಳಿದ ಮರಳನ್ನು ಬರಿದಾಗಿಸಿದರೆ ಭವಿಷ್ಯದಲ್ಲಿ ನದಿಗಳು ಒಣಗಿ ಹೋಗುತ್ತವೆ. ಆದ್ದರಿಂದ ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುರಿತು ಸರ್ಕಾರ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಒತ್ತಾಯಿಸುತ್ತಿದ್ದೇನೆ.

**ಶ್ರೀ ಸಿ.ಸಿ.ಪಾಟೀಲ (ಗಣಿ ಮತ್ತು ಭೂವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ. ಮಾನ್ಯ ಸದಸ್ಯರಾದ ವೈ.ಎ.ನಾರಾಯಣಸ್ವಾಮಿಯವರು ಶೂನ್ಯ ವೇಳೆಯಲ್ಲಿ ಮಹತ್ವವಾದಂತಹ ವಿಚಾರವನ್ನು ಮಂಡಿಸಿದ್ದಾರೆ.

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

ಇದನ್ನು ನಾವು ನಿಯಮ ಬದ್ಧತೆಯಾಗಿ ಮೈನಿಂಗ್ ಮಾಡದಿದ್ದರೆ, ಮರಳನ್ನು ಅಲ್ಲಿಂದ ತೆಗೆಯದಿದ್ದರೆ ನದಿಗಳ ಪಾತ್ರ ಬದಲಿಯಾಗುವಂತಹ ಸಂಭವ ಹೆಚ್ಚಾಗಿರುತ್ತದೆ. ಮಾನ್ಯ ನಾರಾಯಣಸ್ವಾಮಿಯವರ ಕಳಕಳಿಯನ್ನು ನಾನು ಗಮನಿಸಿದ್ದೇನೆ. ಇವತ್ತು ಪ್ರಜಾವಾಣಿ ದಿನಪತ್ರಿಕೆಯಲ್ಲಿ ಬಂದಿದೆ. ಯಾವುದೇ ರೀತಿಯ ನದಿ ಪಾತ್ರದಲ್ಲಿ ಕಾನೂನು ಮೀರಿ ನದಿ ಪಾತ್ರಕ್ಕೆ ತೊಂದರೆಯಾಗದಂತೆ ಪ್ರವಾಹ ಮತ್ತು ಬರಗಾಲದಲ್ಲಿ ಅದಕ್ಕೆ ಅಡತಡೆಯಾಗದ ರೀತಿಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

**ಡಾ||ವೈ.ಎ.ನಾರಾಯಣಸ್ವಾಮಿ:-** ಅಕ್ರಮ ಮರಳುಗಾರಿಕೆಯನ್ನು ಸರ್ಕಾರ ತಡೆಯಬೇಕೆಂಬುದು ಇದರ ಉದ್ದೇಶವಾಗಿದೆ.

**ಶ್ರೀ ಸಿ.ಸಿ.ಪಾಟೀಲ:-** ಮಾನ್ಯ ಸಭಾಪತಿಯವರೇ, ಅಕ್ರಮ ಮರಳುಗಾರಿಕೆಯನ್ನು ತಡೆಗಟ್ಟುವುದಕ್ಕೆ ಈಗಾಗಲೇ ಸರ್ಕಾರ ಸಾಕಷ್ಟು ಚಿಂತನೆಯನ್ನು ಮಾಡಿದೆ. ಇನ್ನು ಕೆಲವೇ ದಿವಸಗಳಲ್ಲಿ ಹೊಸ ಮರಳು ನೀತಿ ಪ್ರಕಟ ಮಾಡುತ್ತಿದ್ದೇವೆ. ಸುಲಭ ರೀತಿಯಲ್ಲಿ ಸರಳವಾಗಿ ಸಾಮಾನ್ಯ ಜನರಿಗೆ ಮರಳು ಕೊಡುವಂತಹ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತದೆ.

**(245) 9-3-2020 ಬಿಕೆಪಿ- ಎಕೆ 7-20**

**ಆ) "ಕಸದ ಹೊರೆಯ ಹಿಂದೆ" ಪ್ರತಿಕಾ ವರದಿ ಬಗ್ಗೆ.**

**- - -**

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯು ಪಕ್ಕದ ರಾಜ್ಯ ಕೇರಳದೊಂದಿಗೆ ತನ್ನ ಗಡಿಭಾಗವನ್ನು ಹೊಂದಿದ್ದು ನಮ್ಮ ಜಿಲ್ಲೆಯು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಸಿರಿನಿಂದ ಕೂಡಿದ ಮತ್ತು ಸ್ವಚ್ಛ ಕೊಡಗು ಎಂಬ ಪರಿಕಲ್ಪನೆಯನ್ನು ಹೊಂದಿದೆ ಮತ್ತು ಇದು ಜಿಲ್ಲೆಯ ಜನರಿಗೆ ಅರಿವಿದೆ.

ಆದರೂ ಸಹ ಜಿಲ್ಲೆಯ ವಿವಿಧ ಕಡೆಗಳಲ್ಲಿ ರಾಶಿ ರಾಶಿ ಕಸಗಳು ಪದೇ ಪದೇ ಕಾಣಸಿಗುವ ಪ್ರಕರಣಗಳು ಮುಂದುವರೆಯುತ್ತಿವೆ. ರಸ್ತೆಗಳ ಬದಿಗಳಲ್ಲಿ, ನಿರ್ಜನ ಪ್ರದೇಶಗಳಲ್ಲಿ ಅರಣ್ಯ ಪ್ರದೇಶ ಮತ್ತು ಕಾಫಿ ತೋಟಗಳ ಆಸುಪಾಸಿನಲ್ಲಿ ಈ ಕಸದ ರಾಶಿ ವಾಕರಿಕೆ ಮೂಡಿಸುತ್ತದೆ. ಈ ಕಸದ ರಾಶಿಗಳನ್ನು ಗಮನಿಸಿದಾಗ ಜಿಲ್ಲೆಯಲ್ಲಿ ಬಳಸದಿರುವ ನಿರುಪಯುಕ್ತ ವಸ್ತುಗಳು, ವೈದ್ಯಕೀಯ ತ್ಯಾಜ್ಯಗಳು ಕಂಡು ಬರುತ್ತವೆ. ಇದು ಅನುಮಾನಕ್ಕೆ ಎಡೆಮಾಡುತ್ತಿವೆ. ಕಸ ವಿಲೇವಾರಿ ಘಟಕಗಳಲ್ಲಿ ವಿಲೇ ಮಾಡಲು ಸಾಧ್ಯವಾಗದಂತಹ ಕಸಗಳು ಕೊಡಗು ಜಿಲ್ಲೆಯಲ್ಲಿ ಮಾತ್ರವಲ್ಲ ರಾಜ್ಯದ ಇತರೆ ಕಡೆಗಳಲ್ಲೂ ದಂಧೆಯ ಮಾದರಿಯಲ್ಲಿ ಈ ಕಸವನ್ನು ಸುರಿಸಲಾಗುತ್ತಿದೆ ಎಂಬ ಆಘಾತಕಾರಿ ವಿಚಾರಗಳು ಕೇಳಿ ಬರುತ್ತಿವೆ. ಮುಖ್ಯವಾಗಿ ಕೇರಳದ ಮೂಲಕ ಕೊಡಗು ಮಾರ್ಗವಾಗಿ ನಮ್ಮ ರಾಜ್ಯದತ್ತ ಕಸಗಳನ್ನು ನಿರಂತರವಾಗಿ ಭಾರಿ ಗಾತ್ರದ ಲಾರಿಗಳು, ಕಂಟೈನರ್‌ಗಳು, ಪಿಕ್‌ಅಪ್‌ಗಳ ಮೂಲಕ ತಂದು ಸುರಿಯಲಾಗುತ್ತಿದೆ. ಇದರಲ್ಲಿ ಬರಿ ಕೇರಳ ರಾಜ್ಯದ ಕಸವಲ್ಲದೆ ವಿದೇಶದಿಂದಲೂ ಈ ರೀತಿಯ ಅನುಪಯುಕ್ತ ಕಸಗಳನ್ನು ಭಾರತದ ಕರಾವಳಿಯಲ್ಲಿ ತಂದು ಎಸೆಯಲಾಗುತ್ತಿದೆ ಎಂಬ ಅಂಶವು ಕೇಳಿ ಬರುತ್ತಿದೆ. ಇದಕ್ಕೆ ವಿದೇಶಗಳಿಗೆ ಸರಕುಗಳನ್ನು ಕಳುಹಿಸುವ ಹಡಗುಗಳು ಖಾಲಿ ಬರುವ ಸಂದರ್ಭದಲ್ಲಿ ಇವುಗಳನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ಹೇಳಲಾಗುತ್ತಿದೆ.

ಅದೇ ರೀತಿಯಲ್ಲಿ ಕೇರಳಕ್ಕೆ ಸರಕು ಸರಂಜಾಮುಗಳನ್ನು ಸಾಗಿಸುವ ವಾಹನಗಳು ಹಿಂತಿರುಗಿ ಖಾಲಿ ಬರುವ ಸಂದರ್ಭಗಳಲ್ಲಿ ಚಾಲಕರು ಮತ್ತು ಕ್ಲೀನರ್‌ಗಳಿಗೆ ಹಣದ ಆಮಿಷವನ್ನು ಒಡ್ಡುವ ಮೂಲಕ ಆ ವಾಹನಗಳಿಗೆ ಕಸವನ್ನು ತುಂಬಿ ಸಾಧ್ಯವಾಗುವ ಕಡೆಗಳಲ್ಲಿ ಸುರಿದು ಹೋಗುವಂತೆ ಸೂಚಿಸಲಾಗುತ್ತಿದೆ. ಈ ಅಕ್ರಮ ಕಸ ವಿಲೇವಾರಿಯನ್ನು ಯಾರು ನಿಯಂತ್ರಿಸಬೇಕು ಎಂಬುದು ಮುಖ್ಯ ಪ್ರಶ್ನೆಯಾಗಿದೆ. ಕೊಡಗಿನ ಗಡಿ ಪ್ರದೇಶಗಳಲ್ಲಿ ಸೂಕ್ತ ತಪಾಸಣಾ ಗೇಟ್‌ಗಳೇ ಇಲ್ಲ. ಅರಣ್ಯ ಇಲಾಖೆಯ ಗೇಟ್‌ಗಳಿದ್ದರೂ ಅವರು ಅರಣ್ಯ ಉತ್ಪನ್ನಗಳಿದ್ದರೆ ಮಾತ್ರ ನಿಗಾವಹಿಸುವರೇ ವಿನಃ ಈ ರೀತಿಯ ಕಸದ ಬಗ್ಗೆ ಅವರಿಗೆ ಹೆಚ್ಚಿನ ಅರಿವು ಇರುವುದಿಲ್ಲ. ಆದಕಾರಣ ಸರ್ಕಾರವು ಈ ಕಸವನ್ನು ತಂದು ಸುರಿಯುವವರ ದಂಧೆಯನ್ನು ತಡೆಗಟ್ಟಲು ಆರೋಗ್ಯ ಇಲಾಖೆ, ಪೊಲೀಸ್ ಇಲಾಖೆ, ಸಾರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಗಳನ್ನು ಒಳಗೊಂಡ ಅಧಿಕಾರಿಗಳ ತಂಡವನ್ನು ಮಾಡಿ ಸೂಕ್ತ ಕಾನೂನು ರೀತಿಯ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಶೂನ್ಯವೇಳೆಯಲ್ಲಿ ನಾನು ಸರ್ಕಾರವನ್ನು ಆಗ್ರಹಿಸುತ್ತೇನೆ.

**ಶ್ರೀ ಕೆ.ಸಿ.ನಾರಾಯಣಗೌಡ(ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಪರಿಶೀಲಿಸಿ, ಉತ್ತರವನ್ನು ಕೊಡುತ್ತೇನೆ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಾಹನಗಳು ಬರುವಾಗ ಗೇಟ್‌ಗಳಲ್ಲಿ ತಪಾಸಣೆ ಮಾಡುವಲ್ಲಿ ಒಂದು ಸಬ್ ಪೊಲೀಸ್ ಠಾಣೆಯಾಗಬೇಕೆಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಇ) ರಾಜ್ಯದಲ್ಲಿ ರೈತರಿಗೆ ದಿನಕ್ಕೆ 7 ಗಂಟೆಗಳ 3 ಫೇಸ್ ನಿರಂತರ ವಿದ್ಯುತ್ ಪೂರೈಕೆ ಹಾಗೂ ಗ್ರಾಮೀಣ ಭಾಗದಲ್ಲಿ ರಾತ್ರಿ ವೇಳೆ ವಿದ್ಯುತ್ ಕಡಿತವಾಗದಂತೆ ವಿದ್ಯುತ್ ಪೂರೈಸುವ ಬಗ್ಗೆ.**

– – –

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರರ ಕ್ಷೇತ್ರ):-** ರಾಜ್ಯದಲ್ಲಿ ಬೇಸಿಗೆ ಆರಂಭವಾಗುತ್ತಿದ್ದು, ರಾಜ್ಯದ ಕೃಷಿ ಕ್ಷೇತ್ರ ಹಾಗೂ ಗ್ರಾಮೀಣ ಭಾಗಕ್ಕೆ ವಿದ್ಯುತ್‌ನ ಸಂಕಷ್ಟ ಎದುರಾಗುತ್ತಿದೆ. ಇದರಿಂದ ರೈತರು ಹಾಗೂ ಗ್ರಾಮೀಣ ಭಾಗದ ಜನರು ಕಂಗಾಲಾಗಿದ್ದಾರೆ. ದಿನೇ ದಿನೇ ಕೊಳವೆಬಾವಿ ಆಧಾರಿತ ಕೃಷಿ ಪ್ರದೇಶ ವಿಸ್ತರಣೆಯಾಗುತ್ತಿದ್ದು, ಇದರಿಂದ ವಿದ್ಯುತ್ ಬಳಕೆಯ ಪ್ರಮಾಣ ಏರುತ್ತಿದೆ ಹಾಗೂ ಗ್ರಾಮೀಣ ಭಾಗದಲ್ಲಿ ಇತ್ತೀಚೆಗೆ ರಾತ್ರಿ ವೇಳೆ ಚಿರತೆಯ ಹಾವಳಿ ಹೆಚ್ಚಾಗುತ್ತಿದೆ. ಇದರಿಂದ ಗ್ರಾಮೀಣ ಭಾಗದ ಜನರಲ್ಲಿ ಆತಂಕ ಹೆಚ್ಚಾಗುತ್ತಿದ್ದು, ಇತ್ತೀಚೆಗೆ ಮದ್ದೂರು ತಾಲ್ಲೂಕಿನ ಹುರುಗಳವಾಡಿ ಗ್ರಾಮದಲ್ಲಿ ಚಿರತೆಯು ಸಾಕು ಪ್ರಾಣಿಯನ್ನು ಹೊತ್ತುಕೊಂಡು ಹೋಗುವ ಘಟನೆ ಸಹ ದಾಖಲಾಗಿದೆ. ಆದ್ದರಿಂದ, ರಾತ್ರಿ ವೇಳೆ ಗ್ರಾಮೀಣ ಭಾಗದಲ್ಲಿ ವಿದ್ಯುತ್ ಕಡಿತ ಮಾಡುತ್ತಿರುವುದು ಜನರ ಸಂಕಷ್ಟಕ್ಕೆ ಕಾರಣವಾಗಿದೆ.

ರಾಜ್ಯದಲ್ಲಿ ಜಲಾಶಯಗಳು ತುಂಬಿ ವಿದ್ಯುತ್‌ಗೆ ಬರ ಇಲ್ಲದಿದ್ದರೂ ಓಬಿರಾಯನ ಕಾಲದಲ್ಲಿ ಹಾಕಿರುವ ಸರಬರಾಜು ಮಾರ್ಗಗಳು ಮೇಲ್ದರ್ಜೆಗೇರದ ಕಾರಣ 7 ಗಂಟೆ 3 ಫೇಸ್ ವಿದ್ಯುತ್ ಪೂರೈಕೆ ಆಗದೆ ಕೃಷಿಗೆ ವಿದ್ಯುತ್ ಕೊರತೆ ಉಂಟಾಗಿದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ 4 ಗಂಟೆ ಕೂಡ ವಿದ್ಯುತ್ ಸಿಗುತ್ತಿಲ್ಲ. ಈಗ ಪೂರೈಕೆಯಾಗುತ್ತಿರುವ 4 ಗಂಟೆ ವಿದ್ಯುತ್ ಕೂಡ ನಿರಂತರವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೂರೈಕೆಯಾಗುತ್ತಿಲ್ಲ. ಗಂಟೆಗೊಮ್ಮೆ ವಿದ್ಯುತ್ ನಿಲುಗಡೆಯಾಗುವುದರಿಂದ ರೈತರು ಒಂದು ದಿನವಾದರೂ ಒಂದು ಎಕರೆ ಭೂಮಿಗೆ ನೀರುಣಿಸಲು ಆಗುತ್ತಿಲ್ಲ. ಹಾಗಾಗಿ, ಭತ್ತ, ಕಬ್ಬು, ತರಕಾರಿ ತೆಂಗು ಅಡಿಕೆ ಮುಂತಾದ ಬೆಳೆಗಳಿಗೆ ನೀರಿಲ್ಲದೆ ಬೆಳೆಗಳು ಒಣಗುತ್ತಿವೆ. ಈ ಸಮಸ್ಯೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಇದ್ದು, ಪ್ರಮುಖವಾಗಿ ಮಂಡ್ಯ, ಹಾಸನ, ಚಾಮರಾಜನಗರ, ದಾವಣಗೆರೆ, ಮೈಸೂರು ಜಿಲ್ಲೆಗಳಲ್ಲಿ ಇರುತ್ತದೆ.

ಆದ್ದರಿಂದ, ಈ ಬಗ್ಗೆ ಸರ್ಕಾರ ಗಮನಹರಿಸಿ ರೈತರಿಗೆ ದಿನಕ್ಕೆ ಕನಿಷ್ಠ 7 ಗಂಟೆಗಳ 3 ಫೇಸ್ ನಿರಂತರ ವಿದ್ಯುತ್ ಪೂರೈಕೆ ಮಾಡಬೇಕು ಹಾಗೂ ಗ್ರಾಮೀಣ ಭಾಗದಲ್ಲಿ ರಾತ್ರಿ ವೇಳೆ ವಿದ್ಯುತ್ ಕಡಿತವಾಗದಂತೆ ವಿದ್ಯುತ್ ಪೂರೈಸಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವಂತಹ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಹೇಳಿಕೆ ಲಗತ್ತಿಸಲಾಗಿದೆ)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ದಿನಾಂಕ 20 ಅಥವಾ 21ನೇ ತಾರೀಖು ಅರಣ್ಯ ಇಲಾಖೆಗೆ ಸಂಬಂಧಿಸಿದಂತೆ ವಿಷಯವನ್ನು ಪ್ರಸ್ತಾಪಿಸಿದ್ದಕ್ಕೆ ಇವತ್ತಿನವರೆಗೂ ಉತ್ತರವಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಇವತ್ತಿನ ಮೂರು ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡಲಾಗಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಇವತ್ತಿಗೆ ಸಂಬಂಧಪಟ್ಟಂತೆ ಕೊಟ್ಟ ಪ್ರಶ್ನೆ ಅಲ್ಲ. ಹಿಂದೆ ವಿಷಯವನ್ನು ಪ್ರಸ್ತಾಪಿಸಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಪ್ರಸ್ತಾಪ ಮಾಡಿರುವ ವಿಷಯದ ಬಗ್ಗೆ ತುಂಬಾ ವಿಶ್ಲೇಷಣೆ ಮಾಡಿ ಉತ್ತರ ಕೊಡಬೇಕಾಗಿರುವುದರಿಂದ ನಾಳೆ ಅಥವಾ ನಾಡಿದ್ದು ಉತ್ತರವನ್ನು ಒದಗಿಸಿಕೊಡುತ್ತೇವೆ.

**ಸಭಾಪತಿಯವರು:–** ಈಗ ಸದನವನ್ನು ನಾಳೆ ಬೆಳಿಗ್ಗೆ 11–00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 7 ಗಂಟೆ 25 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 10ನೇ ಮಾರ್ಚ್ ಮಾಹೆ 2020 ರ ಮಂಗಳವಾರದಂದು ಬೆಳಿಗ್ಗೆ 11–00 ಗಂಟೆಗೆ ಸೇರಲು ನಿಶ್ಚಯಿಸಿತು)**

~~~~~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~~~